

# ರಂಗ ಸಂಘಟಕರು

# ರಂಗ ಸಂಘಟಕರು – 1

ಪ್ರಧಾನ ಸಂಪಾದಕರು : ಸಿ. ಜಿ. ಕೃಷ್ಣಸ್ವಾಮಿ

ಸಂಪಾದಕರು : ಕೆ. ವಿ. ನಾಗರಾಜಮೂರ್ತಿ
ಬಿ. ಟಿ. ಮುನಿರಾಜಯ್ಯ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ
ಜೆ. ಸಿ. ರಸ್ತೆ, ಬೆಂಗಳೂರು - 560 002.

**RANG SANGATAKARU** : The collection of theatre organisers achievements. Edited by Sri. K. V. Nagaraja Murthy. Published by Sri. B. T. Munirajaiah, Registrar, Karnataka Nataka Academy, Bangalore. Printed at Siddeshwara Printers, Bangalore - 53.

| | | |
|---|---|---|
| Chief Editor | : | Sri C. G. Krishnaswamy |
| Editors | : | Dr. Siddalinga Pattanashetty<br>K. V. Nagaraja Murthy<br>T. Raghu, Hooli Shekar |
| First Impression | : | 2001 |
| Pages | : | |
| Cover Design | : | Krishna, Raichur |
| © | | Karnataka Nataka Academy |
| Price | : | **Rs. 40/-** |

| | | |
|---|---|---|
| ಮುಖ್ಯ ಸಂಪಾದಕರು | : | ಶ್ರೀ ಸಿ. ಜಿ. ಕೃಷ್ಣಸ್ವಾಮಿ |
| ಪ್ರಕಟಣಾ ಸಮಿತಿ | : | ಡಾ|| ಸಿದ್ಧಲಿಂಗ ಪಟ್ಟಣಶೆಟ್ಟಿ<br>ಕೆ. ವಿ. ನಾಗರಾಜಮೂರ್ತಿ<br>ಟಿ. ರಘು<br>ಹೂಲಿಶೇಖರ್ |
| ಪ್ರಥಮ ಮುದ್ರಣ | : | **2001** |
| ಪುಟಗಳು | : | ಕೃಷ್ಣ, ರಾಯಚೂರು. |
| ಮುಖಪುಟ ಚಿತ್ರಣ | : | |
| ಪ್ರಕಾಶಕರು | : | ಬಿ. ಟಿ. ಮುನಿರಾಜಯ್ಯ ರಿಜಿಸ್ಟ್ರಾರ್<br>ಕರ್ನಾಟಕ ನಾಟಕ ಅಕಾಡೆಮಿ<br>ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ,<br>ಬೆಂಗಳೂರು - 560 002. |
| ಮುದ್ರಣ | : | ಸಿದ್ದೇಶ್ವರ ಪ್ರಿಂಟರ್ಸ್, 171, ಅರಳೇಪೇಟೆ,<br>ಮುಖ್ಯರಸ್ತೆ, ಬೆಂಗಳೂರು - 560 053. |
| ಬೆಲೆ | : | ರೂ. **40/-** |

# ಮುನ್ನುಡಿ

ನಾಟಕ ಪ್ರಯೋಗದಲ್ಲಿ ಸಂಘಟನಕಾರ ಬಹಳ ಪ್ರಮುಖ ಪಾತ್ರವಹಿಸುತ್ತಾನೆ. ಈ ಸಂಘಟನೆಕಾರ ತನ್ನ ಕಾರ್ಯದಲ್ಲಿ ಎಷ್ಟು ಸಮರ್ಥನು ಅನ್ನುವುದರ ಮೇಲೆ ನಾಟಕದ ಯಶಸ್ಸು, ನಾಟಕದ ಗುಣಮಟ್ಟ ಅವಲಂಭಿಸಿರುತ್ತದೆ. ಪ್ರಯೋಗಕ್ಕೆ ಇಂತಹ ನಾಟಕ ಅನ್ನುವುದನ್ನು, ನಾಟಕ ತಂಡ ಗೊತ್ತುಮಾಡಿದ ಮೇಲೆ, ಸಂಘಟನೆಕಾರ ಕ್ರಿಯಾಶೀಲನಾಗುತ್ತಾನೆ. ತಾಲೀಮು ಕೊಠಡಿ ಗೊತ್ತುಪಡಿಸುವುದು, ವಿವಿಧ ಪಾತ್ರಗಳ ಆಯ್ಕೆಯ ಸಲುವಾಗಿ ನಟರನ್ನು ಕೂಡಿಸುವುದು, ಥಿಯೇಟರ್ ಗೊತ್ತುಪಡಿಸಿ ಪ್ರಚಾರ ಕೊಟ್ಟು, ವಿವಿಧ ತಂತ್ರಜ್ಞರನ್ನು ಕಲೆ ಹಾಕಿ, ಸಿದ್ಧಗೊಂಡ ನಾಟಕ ರಂಗವೇರಿ, ಅದರ ಯಶಸ್ಸೀ ಮುಕ್ತಾಯ ಆಗುವವರೆವಿಗೂ ಎಲ್ಲ ಸಂದರ್ಭದಲ್ಲಿಯೂ ಸಂಘಟನೆಕಾರ ಮಹತ್ತರ ಪಾತ್ರವಹಿಸಿರುತ್ತಾನೆ. ರಂಗದ ಮೇಲೆ ಮೆರೆಯುವ ಎಲ್ಲ ಪಾತ್ರಗಳಿಗಿಂತ ಸಂಘಟಕನ ಪಾತ್ರ ಹಿರಿದಾದದ್ದು. ಇನ್ನು ಹಣಕಾಸು ಹೊಂದಿಸುವ, ಟಿಕೇಟ್ ಮಾರಾಟದ ವ್ಯವಸ್ಥೆಯ ಜವಾಬ್ದಾರಿಯೂ ಸಂಘಟಕನದೇ. ಪಾಶ್ಚಾತ್ಯ ನಾಟಕ ರಂಗದಲ್ಲಿ ಸಂಘಟನೆಕಾರನನ್ನು "ಪ್ರೊಡ್ಯೂಸರ್" ಅಂತ ಕರೀತಾರೆ. ಗಿರೀಶ್ ಕಾರ್ನಾಡರ "ತುಘಲಕ್" ಅನ್ನು ಮೊದಲಿಗೆ ಬೆಂಗಳೂರಿನ ರಂಗದ ಮೇಲೆ ಪ್ರಯೋಗಿಸುವ ಸಂದರ್ಭದಲ್ಲಿ ಅದರ ನಿರ್ದೇಶಕರಾದ ಪ್ರೊ. ಬಿ. ಚಂದ್ರಶೇಖರರು ನನಗೆ ಆ ಪ್ರೊಡ್ಯೂಸರ್ ಪಟ್ಟ ಕಟ್ಟಿದರು. ನಾನು ಗಾಭರಿಗೊಂಡೆ. "ಸರ್ ನನ್ನಲ್ಲಿ ಇಡೀ ನಾಟಕ ಪ್ರಯೋಗಕ್ಕೆ ಬೇಕಾದ ಹಣ ಹಾಕಲು ದುಡ್ಡಿಲ್ಲಿದೆ. ಬೇರೆಯವರನ್ನು ನೋಡಬೇಕು" ಅಂದ್ರೆ, "ನಾಟಕದ ಪ್ರೊಡ್ಯೂಸರ್ ಅಂದ್ರೆ ನಮ್ಮ ಸಿನಿಮಾ ಪ್ರಡ್ಯೂಸರ್ ತರ ಅಲ್ಲ" ನಾಗೇಶು ನಾಟಕ ಪ್ರಯೋಗದ ಎಲ್ಲ ವಿವಿಧ ಘಟ್ಟಗಳ ನಿರ್ವಹಣೆ, ಸಮಗ್ರೀಕರಣ ಮಾಡೋನು, ಒಂದು ತರದಲ್ಲಿ ನಾಟಕ ಪ್ರಯೋಗಕ್ಕೆ ಸಂಬಂಧಿಸಿದ ಎಲ್ಲರನ್ನೂ, ಎಲ್ಲವನ್ನೂ ಕೂಡಿಸಿ ನಾಟಕಕ್ಕೆ ಒಂದು ತಂಡ ಕಟ್ಟಿಕೊಡೋನು. ನಾಟಕ ಸಿದ್ಧ ಮಾಡೋನು. ಪ್ರೊಡ್ಯೂಸರ್ ಅಂದ್ರೆ" ಅಂದ್ರು. ಅಂತೂ ಅವರು ಏನೋ ಅಂದ್ರೋ ನಾನು ಏನು ಮಾಡಿದೆನೋ, ಅಂತೂ ಈ ಪ್ರೊಡ್ಯೂಸರ್ ಪದದ ಬಗೆಗಿದ್ದ ಕನ್‌ಫ್ಯೂಶನ್‌ನಲ್ಲಿ ಪ್ರೋಗ್ರಾಂ ಫೋಲ್ಡರ್‌ನಲ್ಲಿ ನಾನು ಕಾಣಿಸಿಕೊಳ್ಳದೇ ಕಾರ್ನಾಡರ "ತುಘಲಕ್" ಅನ್ನು ರಂಗಕ್ಕೇರಿಸಿ ಆಯ್ತು. ಅದೂ ಅಭೂತಪೂರ್ವ ಯಶಸ್ಸನ್ನು ಪಡೆಯಿತು. ಆಧುನಿಕ ಕನ್ನಡ ರಂಗಭೂಮಿಯಲ್ಲಿ ಸ್ಪಷ್ಟ ಹೆಜ್ಜೆ ಗುರುತನ್ನು ಮೂಡಿಸಿತು. ಪ್ರೊ|| ಬಿ.ಸಿ. ಅವರು ಹೇಳುತ್ತಿದ್ದ ಪ್ರೊಡ್ಯೂಸರ್ ಇಂದು ಸಂಘಟನೆಕಾರನಾಗಿ ನಾಟಕ ಪ್ರಯೋಗದಲ್ಲಿ ತನ್ನ ಪಾತ್ರವನ್ನು ಗುರುತಿಸಿಕೊಂಡಿದ್ದಾನೆ. ತುಘಲಕ್ ಪ್ರಯೋಗಕ್ಕೂ ಮೊದಲು ನಾನು ಕಂಡ ಅಂತಹ ಪ್ರಮುಖ ರಂಗ ಸಂಘಟಕರೆಂದರೆ ಅಂದಿನ ಕಲಾಜ್ಯೋತಿಯ ಪಿ.ವಿ. ವೇಣುಗೋಪಾಲರೆಡ್ಡಿ ಹಾಗೂ ಬೆಂಗಳೂರಿನ ಇನ್ನೊಂದು ಭಾಗದಲ್ಲಿದ್ದ ರವಿ ಕಲಾವಿದರ ಜಿ.ಎಸ್. ರಾಮರಾವ್, ಮುಂದೆ ಪಿ. ಲಂಕೇಶ್‌ರವರು ಪ್ರತಿಮಾ ರಂಗದ ಪ್ರಯೋಗಗಳಲ್ಲಿ ನಿರ್ವಹಿಸುತ್ತಿದ್ದ ಕೆಲಸ ಕಾರ್ಯಗಳನ್ನು ಗಮನಿಸಿದಾಗ, ಅದರಲ್ಲಿಯೂ "ಬಯಲು ರಂಗಭೂಮಿ" (ಈಡಿಪಸ್, ಸಂಕ್ರಾಂತಿ, ಜೋಕುಮಾರಸ್ವಾಮಿ) ಪ್ರಯೋಗದಲ್ಲಿನ ಅವರ ಪಾತ್ರ, ಅವರನ್ನು ಆಧುನಿಕ ಕನ್ನಡ ನಾಟಕ ಪ್ರಯೋಗಗಳ ಸಂದರ್ಭದಲ್ಲಿ ಶ್ರೇಷ್ಠ ಸಂಘಟನೆಕಾರನ ಸ್ಥಾನಕ್ಕೆ ಕೊಂಡೊಯ್ಯುತ್ತದೆ.

ಉತ್ತಮ ಸಂಘಟನೆಕಾರನಲ್ಲಿ ಉತ್ತಮ ಅಭಿರುಚಿ, ನಿಷ್ಠೆ, ಶ್ರದ್ಧೆ ಹಾಗೂ ಅರ್ಪಣಾ ಭಾವ, ಇವುಗಳ ಒಂದು ಮಿಶ್ರಣವನ್ನೇ ಕಾಣಬಹುದು. ಒಂದೆಡೆ ತನ್ನ ಗರ್ಭದಲ್ಲಿನ ಭ್ರೂಣಕ್ಕೆ

ರೂಪಕೊಡುವ ತಾಯಿಯೂ ಆಗಿ ಇನ್ನೊಂದೆಡೆ ಸೂಲಗಿತ್ತಿಯೂ ಆಗಿ ಕಾಣುವ ಸಂಘಟನೆಕಾರ, ಅನೇಕ ಪ್ರಸವ ವೇದನೆಗಳನ್ನು ದಾಟಿ ಒಂದು ದಷ್ಟಪುಷ್ಟ ಆರೋಗ್ಯವಂತ ರಂಗ ಕೂಸನ್ನು ನೀಡುತ್ತ ಬಂದಿದ್ದಾನೆ. ಕಪ್ಪಣ್ಣ, ಲೋಕೇಶ್, ರಮೇಶ್, ಗುಂಡಣ್ಣ, ನಾಗರಾಜಮೂರ್ತಿ, ಚಂಕು, ಹೀಗೆ ರಂಗ ಸಂಘಟಕರ ತಳಿ ಮುಂದುವರಿಯುತ್ತ ಬಂದಿದೆ. ಇಷ್ಟಿದ್ದೂ ಇಂದಿನ ನಾಟಕ ರಂಗ ಅಷ್ಟಾಗಿ ಕ್ರಿಯಾಶೀಲವಾಗಿ ಕಾಣುತ್ತಿಲ್ಲ ಅನ್ನಿಸುತ್ತದೆ. ರಂಗಭೂಮಿಯಲ್ಲಿ ಯಶಸ್ವಿಯಾದವರಲ್ಲಿ ಬಹಳಷ್ಟು ಮಂದಿ, ಕಲಾವಿದರಾಗಿ, ನಿರ್ದೇಶಕರಾಗಿ, ಟಿ.ವಿ. ರಂಗಕ್ಕೆ ಗುಳೇ ಹೋಗಿದ್ದಾರೆ. ಇನ್ನಷ್ಟು ಮಂದಿ ಆರ್ಟ್ ಡೈರೆಕ್ಟರ್ ಆಗಿ, ಈವೆಂಟ್ ಮ್ಯಾನೇಜರ್ ಆಗಿ ಯಶಸ್ಸು ಕಂಡಿದ್ದಾರೆ. ಸಂತೋಷ, ಬಹಳ ಸಂತೋಷ. ಪ್ರಸ್ತುತ ಅವರೇನಿದ್ದರೂ ಅವರ ಇಂದಿನ ಸ್ಥಾನಮಾನಕ್ಕೆ ಮೂಲ ವೇದಿಕೆಯಾಗಿದ್ದ ರಂಗಭೂಮಿಯತ್ತ ಆಗಾಗ ಬರುವ, ಒಂದಿಷ್ಟು ಉತ್ತಮ ಕಾರ್ಯನಿರ್ವಹಿಸುವ ತೊಂದರೆ ತೆಗೆದುಕೊಳ್ಳುವುದನ್ನು ಮರೆಯಬಾರದು. ಇದರಿಂದ ರಂಗಭೂಮಿಗೂ ಅವರಿಗೂ ಪರಸ್ಪರ ಅನುಕೂಲಗಳಿವೆ. ಪ್ರಯೋಗಕ್ಕೆ, ಕಲಿಕೆಗೆ, ಬೆಳವಣಿಗೆಗೆ, ಖುಷಿಗೆ ರಂಗಭೂಮಿ ಕೊಡುವಷ್ಟು ಮುಕ್ತ ಅವಕಾಶವನ್ನು ಬೇರೆ ಮಾಧ್ಯಮಗಳು ನೀಡಲಾರವು ಅನ್ನುವುದನ್ನು ನಾನು ಪ್ರತ್ಯೇಕ ಹೇಳಬೇಕಿಲ್ಲ.

ರಂಗ ಪ್ರಯೋಗದ ಯಶಸ್ಸಿನಲ್ಲಿ ಬಹಳ ಪ್ರಮುಖ ಪಾತ್ರವಹಿಸುವ ಇಂತಹ ರಂಗ ಸಂಘಟಕರ ಕುರಿತು ಒಂದು ಉಪಯುಕ್ತವಾದ ಪುಸ್ತಕವನ್ನು ಅಕಾಡೆಮಿ ಹೊರತರುವಲ್ಲಿ ಹಿಂದಿನ ಅಧ್ಯಕ್ಷರಾಗಿದ್ದ ಸಿ.ಜಿ. ಕೃಷ್ಣಸ್ವಾಮಿ, ರಿಜಿಸ್ಟ್ರಾರ್, ಆದ ಬಿ.ಟಿ. ಮುನಿರಾಜಯ್ಯ ಹಾಗೂ ಸದಸ್ಯರಾದ ಕೆ. ವಿ. ನಾಗರಾಜಮೂರ್ತಿ, ಡಾ ಸಿದ್ಧಲಿಂಗ ಪಟ್ಟಣಶೆಟ್ಟಿ, ಟಿ. ರಘು, ಹೊಲಿಶೇಖರ್ ಅಂದಿನ ಎಲ್ಲ ಸದಸ್ಯರು ಅಸ್ಥೆವಹಿಸಿ ಸಿದ್ಧಗೊಳಿಸಿದ್ದಾರೆ. ಈ ಕಾರ್ಯಕ್ಕಾಗಿ ಅವರಿಗೆ ವಿಶೇಷ ನಮನಗಳು. ಈ ಪುಸ್ತಕವನ್ನು ನಾಟಕಾಸಕ್ತರೆಲ್ಲಾ ಕೊಂಡು ಓದುವುದರಲ್ಲಿ ಸಂಶಯವಿಲ್ಲ ಎಂಬ ಭರವಸೆ ನನ್ನದು.

ಆರ್. ನಾಗೇಶ್
ಅಧ್ಯಕ್ಷರು.



# ಬೆಳಗಾವಿ ರಂಗಭೂಮಿಯ ಬೆನ್ನೆಲುಬು ಶ್ರೀಪತಿ ಮಂಜನಬೈಲು

— ಶರೀಫ್ ಜೋಷಿ

ಬೆಳಗಾವಿಯ ನೆಲ ಮೊದಲಿನಿಂದಲೂ ರಂಗಭೂಮಿಗೆ ನೀಡಿದ ಕೊಡುಗೆ ಅಮೂಲ್ಯವಾದದ್ದು. ಇಲ್ಲಿ ಕನ್ನಡ ಭಾಷೆ ಹಾಗೂ ಕನ್ನಡದ ಸಾಂಸ್ಕೃತಿಕ ಚಟುವಟಿಕೆಗಳು ಮರಾಠಿಯ ಪ್ರಭಾವ ವಲಯದ ಬೆಳಕಿನಲ್ಲಿ ಮಸಕಾಗಿ ಕಂಡುಬಂದರೂ, ಆರದ ನಂದಾದೀಪದಂತೆ ನಿರಂತರವಾಗಿ ಮಿನುಗುತ್ತಿವೆ ಎಂಬಲ್ಲಿ ಎರಡು ಮಾತಿಲ್ಲ. ರಂಗಭೂಮಿಯೂ ಅಷ್ಟೇ. ಉಳಿದೆಲ್ಲ ಸಾಂಸ್ಕೃತಿಕ ಚಟುವಟಿಕೆಗಳಂತೆ ರಂಗಭೂಮಿಯೂ ಸಹ ದಟ್ಟವಾದ ಮರಾಠೀ ವಾತಾವರಣದಲ್ಲಿ ಬೆಳೆದು ನಿಂತ ಇತಿಹಾಸ ನಮ್ಮ ಕಣ್ಣ ಮುಂದಿದೆ. ಜೊತೆಗೆ, ಉತ್ತರ ಕರ್ನಾಟಕದ ರಂಗಭೂಮಿ ಮರಾಠಿ ರಂಗ ಭೂಮಿಯ ಸತ್ವಯುತ ಅಂಶಗಳನ್ನು ಮೈಗೂಡಿಸಿಕೊಂಡಿದೆ. ಹಾಗೆ ನೋಡಿದರೆ, ಮರಾಠಿಯ ರಂಗಭೂಮಿಯನ್ನು ಶ್ರೀಮಂತಗೊಳಿಸಿದ ಕಿರ್ಲೋಸ್ಕರ ಉತ್ತರ ಕರ್ನಾಟಕದ ಬೆಳಗಾವಿಯವರು.

ಬೆಳಗಾವಿಯಂಥ ಮರಾಠಿ ವಾತಾವರಣದಲ್ಲಿ ಕನ್ನಡ ನಾಟಕಗಳನ್ನಾಡುವುದು ಒಂದು ಕಾಲಕ್ಕೆ ಸಾಹಸದ ಮಾತಾಗಿತ್ತು. ಬೆಳಗಾವಿಯ. ಮಟ್ಟಿಗೆ, ರಂಗಭೂಮಿಯ ಶ್ರೀಮಂತಿಕೆ ಇರುವುದೆಲ್ಲ ಮರಾಠಿಯಲ್ಲಿ ಮಾತ್ರ ಎಂಬ ಮಾತು. ಸಾರ್ವತ್ರಿಕವಾಗಿತ್ತು. ಕನ್ನಡದಲ್ಲಿ ನಾಟಕವೆಂದರೆ ಕಂಪನಿ ನಾಟಕಗಳು ಮಾತ್ರವೆಂಬ ಅಭಿಪ್ರಾಯ ಇಲ್ಲಿನ ಮರಾಠಿಗಳಲ್ಲಂತೂ ಸರಿಯೇ, ಅನೇಕ ಕನ್ನಡಿಗರಲ್ಲೂ ನೆಲೆನಿಂತ ಕಾಲವದು. ವಸ್ತುಸ್ಥಿತಿ ಹೀಗಿರುವಾಗ ಕನ್ನಡದ ಹವ್ಯಾಸಿ ರಂಗಭೂಮಿಯ ಪ್ರಯೋಗವೊಂದನ್ನು ಬೆಳಗಾವಿಯಲ್ಲಿ ಹಮ್ಮಿಕೊಂಡವರು ಆದಾಯ ಕರ ಇಲಾಖೆಯ ಉದ್ಯೋಗಿ ಡಿ.ಟಿ. ಚನ್ನಕೇಶವ ಮೂರ್ತಿ. ೧೯೪೯ರ ಜೂನ್ ತಿಂಗಳಲ್ಲಿ ಕನ್ನಡ ನಾಟಕಗಳ ನಾಟಕೋತ್ಸವ ೩ ದಿನ ನಡೆಯಿತು. ಚನ್ನಕೇಶವ ಮೂರ್ತಿಯಲ್ಲಿ ಈ ನಾಟಕೋತ್ಸವ ರೂವಾರಿ ೧೦ ರೂಪಾಯಿಗೆ ಮೂರು ನಾಟಕಗಳ ಸೀಜನ್ ಟಿಕೇಟ್‌ಗಳನ್ನು ಗೆಳೆಯ ಶ್ರೀಪತಿಯೊಂದಿಗೆ ಮನೆ ಮನೆಗೆ ತಿರುಗಿ ಮಾರುವಾಗ ಜನ ಕೇಳಿದ್ದುಂಟು 'ಕನ್ನಡದಾಗ ಎಂಥಾ ನಾಟಕರಿ?' ಹತ್ತಿಪ್ಪತ್ತು ಜನರನ್ನು ಸಂಪರ್ಕಿಸಿದಾಗ ಎಲ್ಲೋ ಒಬ್ಬ ಟಿಕೇಟು ತೆಗೆದುಕೊಳ್ಳುತ್ತಿದ್ದ. ಜನರ ಪ್ರತಿಕ್ರಿಯೆ ಸಾಧಾರಣವಾಗಿದ್ದರೂ ಆ ನಾಟಕೋತ್ಸವದಲ್ಲಿ ಪ್ರದರ್ಶಿಸಲ್ಪಟ್ಟು ನಾಟಕಗಳು ಚೆನ್ನಾಗಿದ್ದವು. ಹವ್ಯಾಸಿ ರಂಗಭೂಮಿ ಬೆಳಗಾವಿಗೆ ಬಹುಶಃ ಕಾಲಿಟ್ಟಿದ್ದು ಹೀಗೆ.

ಚನ್ನಕೇಶವಮೂರ್ತಿ ವರ್ಗವಾಗಿ ಬೆಂಗಳೂರಿಗೆ ಹೋದಾಗ ಮತ್ತೆ ಬೆಳಗಾವಿಯ ನೆಲ ಕನ್ನಡದ ಹವ್ಯಾಸಿ ನಾಟಕ ತಂಡದ ಆಸೆಯನ್ನು ತೊರೆಯಿತೆಂದು ಭಾವಿಸಿದವರಿಗೆ, ಮುಂದಿನ ವಾರಸುದಾರರಾಗಿ ನಿಂತವರು ಶ್ರೀಪತಿ ಮಂಜನಬೈಲು. ೧೯೭೭ರಲ್ಲಿ ಮೊದಲ್ಗೊಂಡ ಶ್ರೀಪತಿಯವರ ಬೆಳಗಾವಿಯ ರಂಗಭೂಮಿಯಲ್ಲಿನ ಸಕ್ರಿಯ ಪಾತ್ರ ಇಂದಿಗೂ ನಿರಂತರವಾಗಿದೆ. ಹಲವು ಆಯಾಮಗಳನ್ನು ಪಡೆದುಕೊಂಡಿದೆ.

ಶ್ರೀಪತಿ ಮಂಜನಬೈಲು ಬೆಳಗಾವಿಗೆ ಆಗಮಿಸಿದ್ದೊಂದು ಯೋಗಾಯೋಗ. ಹುಬ್ಬಳ್ಳಿಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನ ಕಛೇರಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀಪತಿ ಅಕಸ್ಮಾತ್ ವರ್ಗವಾಗಿ ಬೆಳಗಾವಿಗೆ ಬಂದರು. ಆಗಲೇ ರಂಗಭೂಮಿಯ ನಂಟು ಆರಂಭವಾಗಿತ್ತು ಅಂದು ಬೆಳಗಾವಿಗೆ ಬಂದ ಶ್ರೀಪತಿಗೆ. ರಂಗಭೂಮಿಯ ದೃಷ್ಟಿಯಿಂದ ಈ ಹಸಿರು ನೆಲವೂ ಮರುಭೂಮಿಯಾಗಿ ಕಂಡಿತ್ತು. ಇನ್ನೇನು, ಮರಳಿ ಹುಬ್ಬಳ್ಳಿಗೆ ಹಾರಿಹೋಗುವ ಎಂದುಕೊಂಡಾಗಲೇ, ಚನ್ನಕೇಶವಮೂರ್ತಿ ಅವರ ನಂಟು ಬೆಳೆದು ಬೆಳಗಾವಿ ಶಾಶ್ವತ ನೆಲೆಯಾಯಿತು. ಆಗಲೇ ಹೇಳಿದ ೧೯೭೭ರ ನಾಟಕೋತ್ಸವವನ್ನು ಸವಾಲಾಗಿ ಸ್ವೀಕರಿಸಿ ಅದರ ಯಶಸ್ಸಿಗಾಗಿ ಶ್ರಮಿಸಿದ ಕೆಲವರಲ್ಲಿ ಶ್ರೀಪತಿಯವರೂ ಒಬ್ಬರು.

## ಮನೆ ಮನೆತನದ ಯಶೋಗಾಥೆ

ಬೆಳಗಾವಿಯ ಗುರುಪ್ರಸಾದನಗರದ 'ಅನಂತಮುರಳಿ', ಪ್ಲಾಟ್ ನಂ.೧೬೫ ಇಂದು ಶ್ರೀಪತಿಯವರ ಸ್ವಂತ ಮನೆ. ಆದರೆ, ಇದು ಸುಮ್ಮನೆ. ಶ್ರೀಪತಿಯವರ ಬದುಕು, ಮನೆ, ಮನೆತನ ಎಲ್ಲವೂ ಇರುವುದು ಮಂಜನಬೈಲಿನಲ್ಲಿ. ಮುಲ್ಕಿಯಿಂದ ಮೂಡಬಿದ್ರೆಗೆ ಸಾಗುವ ಮಾರ್ಗಮಧ್ಯದ ಕಾನನದ ಮಡಿಲಿನಲ್ಲಿದೆ ಈ ಮಂಜನಬೈಲು. ಮೊನ್ನೆ ಮೊನ್ನೆಯವರೆಗೂ ಈ ಊರಿಗೆ ರಸ್ತೆ, ವಿದ್ಯುತ್ ಇತ್ಯಾದಿ ನಾಗರಿಕತೆಯ ಸೋಂಕು ತಗುಲಿರಲಿಲ್ಲ. ಈಗ ತಗುಲಿವೆ. ಆದರೂ ಇನ್ನೂ ಈ ಊರಿನಲ್ಲಿ ತುಳಸಿಹಬ್ಬ, ಕಾರ್ತಿಕದ ಭಜನೆ, ಕುಣಿತ, ಯಕ್ಷಗಾನ ಇತ್ಯಾದಿಗಳೆಲ್ಲ ಉಳಿದುಕೊಂಡಿದೆ. ಸಾಯಂಕಾಲವಾದೊಡನೆ ಕೇಳಿಬರುವ ದೇವರ ನಾಮಗಳು ಕಾನನದ ಕೋಗಿಲೆಗಳ ಕುಕಿಲದಂತೆ ಸುಶ್ರಾವ್ಯವಾಗಿವೆ.

ಕರಾವಳಿಯ ಈ ಸಂಸ್ಕೃತಿಯ ಪ್ರಭಾವ ಅಲ್ಲಿನ ಪ್ರತಿಯೊಬ್ಬ ಪ್ರಜೆಯ ಮೇಲೂ ತನ್ನದೇ ಆದ ರೀತಿಯಲ್ಲಿ ಪ್ರಭಾವ ಬೀರುತ್ತದೆ. ಅದಕ್ಕೆ ನಮ್ಮ ಶ್ರೀಪತಿಯೂ ಹೊರತಲ್ಲ. ಇವುಗಳ ಜೊತೆಗೆ ಅವರ ತಾಯಿ ಹೇಳುತ್ತಿದ್ದ ದಾಸರ ಪದಗಳೂ ತಮ್ಮ ಪ್ರಭಾವವನ್ನು ಬೀರಿವೆ.

ಮಂಜನಬೈಲಿನ ಈ ಬ್ರಾಹ್ಮಣ ಕುಟುಂಬ ಅದೇತಕ್ಕೋ ದಾವಣಗೆರೆಗೆ ವಲಸೆ ಬಂತು. ಶ್ರೀಪತಿಯ ತಂದೆ ಹನುಮಂತರಾಯರು ಹೋಟೇಲೊಂದರಲ್ಲಿ ಕೆಲಸಕ್ಕೆ ಸೇರಿಕೊಂಡರು. ಆನೇ ಕ್ಲಾಸಿನ ವರೆಗೆ ಓದಿದ ಅವರಿಗೆ ಇದಲ್ಲದೆ ಅನ್ಯಮಾರ್ಗವೂ ಇರಲಿಲ್ಲ. ನಂತರ ಸ್ವಂತ ಹೋಟೇಲು ಪ್ರಾರಂಭಿಸಿದರು. ಕೆಲಕಾಲ ಚೆನ್ನಾಗಿ ನಡೆದದ್ದು ಕೊನೆಗೆ ದಿವಾಳಿ ಎದ್ದಾಗ ಇಡೀ ಕುಟುಂಬ ಬೀದಿ ಪಾಲು. ಮತ್ತೆ ಮಂಜನಬೈಲಿಗೆ ಇಡೀ ಕುಟುಂಬ ಮರಳಿತು.

ಕಿತ್ತು ತಿನ್ನುವ ಬಡತನದ ಮಧ್ಯೆಯೂ ಶ್ರೀಪತಿ ಯಕ್ಷಗಾನ, ದೇವರನಾಮ ಹಾಗೂ ಹಾಡು, ಭಜನೆ ಇತ್ಯಾದಿಗಳಿಗೆ ತನ್ನ ಮನಸನ್ನು ಬಾಲ್ಯದಲ್ಲಿ ತೆರೆದುಕೊಂಡದ್ದು ಅಪರೂಪದ ಸಂಗತಿ. ತಾಯಿ ಹೆಡ್ಮಾಸ್ತರರ ಮಗಳಾಗಿದ್ದರಿಂದ ಸಾಕಷ್ಟು ತಿಳುವಳಿಕೆಯುಳ್ಳವಳಾಗಿದ್ದು ಮಕ್ಕಳನ್ನು ಇಂಥ ಕಾರ್ಯಗಳಿಗೆ ಪ್ರೇರೇಪಿಸುತ್ತಿದ್ದಳು. ತಂದೆಗಿಂತ ಹೆಚ್ಚು ಓದಿದವಳಾಗಿದ್ದಳು. ಉತ್ತಮ ಗಾಯಕಿಯೂ ಅವಳಾಗಿದ್ದಳು. ಶ್ರೀಪತಿ ತಮ್ಮ ತಾಯಿಯ ಈ ಎಲ್ಲಾ ಒಳ್ಳೆಯ ಅಂಶಗಳನ್ನು ಮೈಗೂಡಿಸಿಕೊಂಡೇ ಬೆಳೆದರು.

ಶ್ರೀಪತಿ ತನ್ನ ೧೧ನೆಯ ವಯಸ್ಸಿನಲ್ಲಿ ಮಂಜನಬೈಲನ್ನು ಬಿಟ್ಟು, ಎರಡನೇ ಬಾರಿ ಹೊರನಡೆದರು. ಒಂದೆಡೆ ಕುಟುಂಬದ ಜವಾಬ್ದಾರಿ. ಮತ್ತೊಂದೆಡೆ ಓದುವ ಅದಮ್ಯ ಹಂಬಲ ಇವೆರಡರ ಒತ್ತಡ ಅವರನ್ನು ಮಂಜನಬೈಲಿನಿಂದ ಹೊರನಡೆಯುವಂತೆ ಮಾಡಿತು. ಮಲೆನಾಡಿನಿಂದ ಬಯಲು ಸೀಮೆಗೆ ಬಂದ ೧೧ರ ಬಾಲಕ ಶ್ರೀಪತಿಗೆ ಆಶ್ರಯ ನೀಡಿದ್ದು ಶಿರಹಟ್ಟಿ, ಬೆಳ್ಳಟ್ಟಿ, ಬಳ್ಳಾರಿ, ಗುಂತಕಲ್ ಇತ್ಯಾದಿ ಊರುಗಳಲ್ಲಿನ ಹೊಟೇಲುಗಳು. ಅಲ್ಲಿ ಮಾಣಿಯಾಗಿ ಕೆಲಸ ನಿರ್ವಹಿಸುತ್ತಲೇ ಓದುತ್ತಿದ್ದ ಶ್ರೀಪತಿ ಎಸ್‌ಎಸ್‌ಎಲ್‌ಸಿ ಪಾಸು ಮಾಡಿದರು. ೧೯೭೭ರಲ್ಲಿ ಕರ್ನಾಟಕ ಗೃಹಮಂಡಳಿಯಲ್ಲಿ ನೌಕರಿ ದೊರೆತಾಗ ಕೌಟುಂಬಿಕ ಚಿಂತೆಗಳಿಗೆ ವಿರಾಮ ದೊರೆತಂತಾಯಿತು. ಈ ಮಧ್ಯೆ ಸಹೋದರಿಯರ ಮದುವೆ, ತಮ್ಮನ ಓದು, ನೌಕರಿ, ತಾಯಿಯ ಅನಾರೋಗ್ಯ ಇತ್ಯಾದಿಗಳಿಗೆ ಆಸರೆಯಾಗಿ ನಿಂತವರು ಶ್ರೀಪತಿ. ಒಂದೆಡೆ ಮನೆತನದ ಜವಾಬ್ದಾರಿ, ಇನ್ನೊಂದೆಡೆ ರಂಗಭೂಮಿಯ ಸೆಳೆತ, ಜೊತೆಗೆ, ಇನ್ನೂ ಓದಬೇಕೆಂಬ ಹಂಬಲ. ಇವು ಮೂರನ್ನೂ ಶ್ರೀಪತಿ ಯಶಸ್ವಿಯಾಗಿ ನಿಭಾಯಿಸಿದರು. ಇಂದು ಮನೆತನದ ಕಷ್ಟಕೋಟಲೆಗಳೆಲ್ಲ ಕಳೆದು ತಮ್ಮ ಪುಟ್ಟ ಸಂಸಾರದೊಂದಿಗೆ 'ಅನಂತಮುರಳಿ' ಯಲ್ಲಿ ನೆಲೆ ನಿಂತಿದ್ದಾರೆ. ಬೆಳಗಾವಿಯ ರಂಗಭೂಮಿಯ ಚಟುವಟಿಕೆಗೆ ತಮ್ಮನ್ನೇ ಮೀಸಲಾಗಿರಿಸಿದ್ದಾರೆ. ನೌಕರಿಯಲ್ಲಿಯೂ ಬಡ್ತಿ ದೊರೆತು ಡೆಪ್ಯೂಟಿ ಮೆನೇಜರ್ ಆಗಿದ್ದಾರೆ. ಎಂ.ಎ. ಪರೀಕ್ಷೆಯನ್ನು ಸಮಾಜಶಾಸ್ತ್ರದಲ್ಲಿ ಪಾಸಾಗಿದ್ದಾರೆ. ಈಗ ಅವರ ಮುಂದಿರುವುದು. ಬೆಳಗಾವಿ ರಂಗಭೂಮಿಯ ಹಾಗೂ ತಮ್ಮ ನೌಕರಿಯ ಜವಾಬ್ದಾರಿ ಮಾತ್ರ. ಕಷ್ಟಕೋಟಲೆಗಳಿಂದ ನೆಮ್ಮದಿಯ ಜೀವನದತ್ತ ಸಾಗಿಬಂದ ಶ್ರೀಪತಿಯ ಜೀವನ ಒಂದು ಯಶೋಗಾಥೆ ಎಂದರೂ ತಪ್ಪಿಲ್ಲ.

**ಬಿಟ್ಟೆನೆಂದರೆ ಬಿಡದೀ ಮಾಯೆ :**

ರಂಗಭೂಮಿಯಿಯ ಗೀಳನ್ನು ಚಟವೆನ್ನಿ, ಛಲವೆನ್ನಿ, ಮೋಹವೆನ್ನಿ ಅಥವಾ ಮಾಯೆ ಎನ್ನಿ. ಒಮ್ಮೆ ಅಂಟಿಕೊಂಡರೆ ಅದರಿಂದ ಮುಕ್ತಿಯಿಲ್ಲ. ಶ್ರೀಪತಿ ರಂಗಭೂಮಿಯಿಂದ ಮಾಯಾಪಾಶಕ್ಕೆ ಸಿಲುಕಿದ್ದು ಬಾಲ್ಯದಿಂದಲೇ. ಶಾಲೆಯ ಒಂದು ನಾಟಕದಲ್ಲಿ ಪಾತ್ರ ನಿರ್ವಹಿಸಿ 'ಸೈ' ಎನಿಸಿಕೊಂಡ ನೆನಪು ಅವರಿಗೆ ಇನ್ನೂ ಹಸಿರು. ಯಕ್ಷಗಾನ ಹಾಗೂ ಅದರ ಆಕರ್ಷಣೆ ಕರಾವಳಿ ಜನರ ಸಂಸ್ಕೃತಿಯೇ ಸರಿ. ಹೀಗಾಗಿ ಹುಬ್ಬಳ್ಳಿಯಲ್ಲಿ ನೆಲೆನಿಂತ ಶ್ರೀಪತಿಗೆ ರಂಗಭೂಮಿಯತ್ತ ಆಕರ್ಷಣೆ ಉಂಟಾಗಿದ್ದು ಆಕಸ್ಮಿಕವೇನಲ್ಲ.

ಮೊದಲಿಗೆ ನಟನಾಗಿ ರಂಗಭೂಮಿಯ ಪ್ರವೇಶ. ಹಲವಾರು ನಾಟಕಗಳಲ್ಲಿ ಅಭಿನಯ. ಅಭಿನಯಿಸುತ್ತಲೇ ನಿರ್ದೇಶನದ ಹಲವು ವರಸೆಗಳ ಕಲಿಕೆ. ನಂತರ ನಿರ್ದೇಶನ. ಉತ್ತಮ ಸಂಘಟಕ ಶ್ರೀಪತಿ ಹೀಗೆ ಬೆಳೆಯುತ್ತಲೇ ಹೋಗುತ್ತಾರೆ. ರಂಗಭೂಮಿಯ ಎಲ್ಲಾ ವಿಭಾಗಗಳಲ್ಲೂ ದುಡಿದ ಶ್ರೀಪತಿ ಬೆಳಗಾವಿಯ ಮಟ್ಟಿಗಂತೂ 'ನಡೆದಾಡುವ ರಂಗವೇದಿಕೆ' ಯಾಗಿದ್ದಾರೆ. ಶ್ರೀಪತಿ ಬಂದರೆಂದರೆ ರಂಗಸಂಪದ ತಂಡವೇ ನಡೆದು ಬಂದಂತೆ. ಅವರಿದ್ದಲ್ಲಿ ನಾಟಕದ, ನಾಟಕಕಾರರ ಬಗೆಗೆ ಮಾತುಗಳು ಸುರುಳಿ ಬಿಚ್ಚಿಕೊಳ್ಳುತ್ತವೆ.

ರಂಗಭೂಮಿಯ ವಿವಿಧ ವಿಭಾಗಗಳ ಕೆಲಸಗಳನ್ನು ಶ್ರೀಪತಿ ಮೈಗೂಡಿಸಿಕೊಂಡಿದ್ದರೂ, ಅವರಿಗೆ 'ಗುರು' ವೆಂಬುದಿಲ್ಲ. ಹಾಗಂತ ಅವರು ಯಾವುದನ್ನೂ 'ಲಘು' ವಾಗಿಯೂ ಕಾಣುವುದಿಲ್ಲ.

ಏಕಲವ್ಯನ ತೆರದಿ ಕಂಡದ್ದನ್ನೆಲ್ಲ ಕಲಿತು ಮುಂದೆ ಬಂದವರ ಸಾಲಿಗೆ ಸೇರುತ್ತಾರೆ ಶ್ರೀಪತಿ. ಬಿ.ವಿ. ಕಾರಂತ, ಆರ್. ನಾಗೇಶ್, ಶ್ರೀನಿವಾಸ ಜಿ. ಕಪ್ಪಣ್ಣ, ಡಿ.ಟಿ.ಚನ್ನಕೇಶವಮೂರ್ತಿ ಇವರೆಲ್ಲ ಶ್ರೀಪತಿಯ ಪಾಲಿಗೆ ದ್ರೋಣರು. ಆದರೆ, ಈ ದ್ರೋಣರು ಶ್ರೀಪತಿಯ ಹೆಬ್ಬೆಳರು 'ಗುರುದಕ್ಷಿಣೆ' ಯನ್ನು ಅಪೇಕ್ಷಿಸಿದವರಲ್ಲ ಎಂಬುದನ್ನಿಲ್ಲಿ ಹೇಳದಿದ್ದರೆ ಅಪಚಾರವಾಗುತ್ತದೆ. ಶ್ರೀಪತಿಯ ಸಾಧನೆಯಲ್ಲಿ ಇವರೆಲ್ಲರ ಮಾರ್ಗದರ್ಶನ, ಹಾರೈಕೆ, ಪ್ರೋತ್ಸಾಹಗಳು ಮೇಳೈಸಿವೆ.

*ಮಾಡು ಸಿಕ್ಕದಲ್ಲ, ಏವಂ ಇಂದ್ರಜಿತ್, ಉತ್ತಮ ಪ್ರಭುತ್ವ ಲೊಳಲೊಟ್ಟೆ, ಕದಡಿದ ನೀರು, ಏನ ಬೇಡಲಿ ನಿನ್ನ ಬಳಿಗೆ ಬಂದು,* ಇವೆಲ್ಲ ಶ್ರೀಪತಿ ಅಭಿನಯಿಸಿದ ಪ್ರಮುಖ ನಾಟಕಗಳು. ಈ ನಾಟಕಗಳಿಂದ ಶ್ರೀಪತಿ ಉತ್ತಮ ನಟನೆಂದು ಖ್ಯಾತಿಹೊಂದಿದ್ದು ಈಗ ಇತಿಹಾಸ. ಇತ್ತೀಚೆಗೆ ಅವರು ಅಭಿನಯಿಸಿದ ನಾಟಕಗಳೆಂದರೆ *ವಾಸಾಂಸಿ ಜೀರ್ಣಾನಿ* ಹಾಗೂ *ಮೃಗಜಲ* ಇವೆರಡೂ ನಾಟಕಗಳು ಅವರ ಅಭಿನಯ ಪ್ರತಿಭೆಗೆ ಸವಾಲೊಡ್ಡಿದವುಗಳು.

ರಂಗಭೂಮಿಯ ಸಂಪರ್ಕ ನಿಕಟವಾಗುತ್ತ ಸಾಗಿದಂತೆಲ್ಲ ಶ್ರೀಪತಿ ಅಭಿನಯದಿಂದ ನಿರ್ದೇಶನದತ್ತ ವಾಲಿದರು. ರಂಗಭೂಮಿಯಲ್ಲಿ ಶ್ರೀಪತಿ ಎಲ್ಲ ಬಗೆಯ ಕೆಲಸಗಳನ್ನು ಮಾಡಿದವರಾದ್ದರಿಂದ ನಿರ್ದೇಶನ ಅವರಿಗೆ ಸಲಭವಾಗಿ ಒಲಿಯಿತು. ಅವರ ನಿರ್ದೇಶನದಲ್ಲಿ ಈವರೆಗೆ ಹಲವಾರು ಉತ್ತಮ ನಾಟಕಗಳು ಮೂಡಿಬಂದಿದೆ. *ಬಂಗಾರದ ಕೊಡ, ನನ್ನ ತಂಗಿಗೊಂದು ಗಂಡು ಕೊಡಿ, ಗೃಹಸ್ಥಾಶ್ರಮ, ದಿಂಡಿ, ಮಿಂಚು* ಹೀಗೆ ಅವರು ನಿರ್ದೇಶಿಸಿದ ನಾಟಕಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈವರೆಗೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅವರು ನಿರ್ದೇಶಿಸಿದ *ದಿಂಡಿ* (ರ: ಚಂದ್ರಕಾಂತ ಕುಸನೂರು) ಸುಮಾರು ಇಪ್ಪತ್ತು ಪ್ರಯೋಗಗಳನ್ನು ಕಂಡಿದೆ. ಕರ್ನಾಟಕವಲ್ಲದೆ ನೆರೆಯ ಮಹಾರಾಷ್ಟ್ರದಲ್ಲೂ ಈ ನಾಟಕ ಪ್ರದರ್ಶನ ಕಂಡಿದ್ದೊಂದು ಹೆಗ್ಗಳಿಕೆಯೇ ಸರಿ. ಭಾರತ ಸ್ವಾತಂತ್ರ್ಯ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಅಖಿಲ ಭಾರತ ಕನ್ನಡ ನಾಟಕ ರಚನಾ ಸ್ಪರ್ಧೆಯಲ್ಲಿ ಪ್ರಥಮ ಪಾರಿತೋಷಕ ಪಡೆದ ಮಿಂಚು (ರ: ಶಿರೀಷಜೋಶಿ) ನಾಟಕವನ್ನು ಬೆಂಗಳೂರು ದೂರದರ್ಶನಕ್ಕಾಗಿ ನಿರ್ದೇಶಿಸಿದರು.

ಕನ್ನಡದ ಹೆಸರಾಂತ ನಾಟಕಕಾರರ ನಾಟಕಗಳನ್ನು ಸಮರ್ಥವಾಗಿ ನಿರ್ದೇಶಿಸಿದ ಹೆಗ್ಗಳಿಕೆ ಶ್ರೀಪತಿಯವರದು. ಶ್ರೀರಂಗರ ಉತ್ತಮ *ಪ್ರಭುತ್ವ ಲೊಳಲೊಟ್ಟೆ. ಏನಬೇಡಲಿ ನಿನ್ನ ಬಳಿಗೆ ಬಂದು, ಪಿ. ಲಂಗೇಶರ ತೆರೆಗಳು, ಟಿ. ಪ್ರಸನ್ನನ ಗೃಹಸ್ಥಾಶ್ರಮ, ತಂಗಿಗೊಂದು ಗಂಡು ಕೊಡಿ,* ಜಡಭರತರ *ಆ ಊರು ಈ ಊರು, ನಿಷ್ಕಾಂತೋರಾಜ,* ಚಂದ್ರಶೇಖರ ಕಂಬಾರರ *ಖರೋಖರ,* ಹೇಮಾ ಪಟ್ಟಣ ಶೆಟ್ಟಿಯವರ ಅನುವಾದ ಮಾಡು ಸಿಕ್ಕದಲ್ಲ, ಗಿರೀಶ ಕಾರ್ನಾಡರ *ನಾಗಮಂಡಲ,* ಶಿವರಾಮ ಕಾರಂತರ *ಗರ್ಭಗುಡಿ,* ಚಂದ್ರಕಾಂತ ಕುಸನೂರರ *ದಿಂಡಿ, ಎಸ್. ಮಿ|| ಪಂಡಿತರಾವ್, ಹೀಗೊಂದೂರಾಗ, ಆನಿ ಬಂತಾನಿ, ವಿದೂಷಕ, ಮೃಗಜಲ,* ಗೋಪಾಲ ವಾಜಪೇಯಿಯವರ *ಆಗಮನ, ಸೂರ್ಯನ ಮಗಳು,* ಎಚ್. ಡುಂಡಿರಾಜ್‌ರವರ *ಅಧ್ವಾನಪುರ* ಇತ್ಯಾದಿ ನಾಟಕಗಳನ್ನು ರಂಗಸಂಪದಕ್ಕಾಗಿ ನಿರ್ದೇಶಿಸಿದ್ದಾರೆ. ಅವರ ನಿರ್ದೇಶನದ ಕಾರ್ಯಕ್ಷೇತ್ರ ಕೇವಲ ರಂಗಸಂಪದಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಉತ್ತರ ಕರ್ನಾಟಕದ ಹಲವಾರು ಪ್ರತಿಷ್ಠಿತ ತಂಡಗಳಿಗೂ ನಾಟಕಗಳನ್ನು ನಿರ್ದೇಶಿಸಿದ್ದುಂಟು. ಹುಬ್ಬಳ್ಳಿಯ ಅಭಿನಯ ಭಾರತಿ, ಬೆಳಗಾವಿಯ ಕರ್ನಾಟಕ

ಭಗಿನಿ ಮಂಡಳ, ಕರ್ನಾಟಕದ ವೀರಶೈವ ಮಹಾಸಭೆ ಹಾಗೂ ಅನೇಕ ವಿದ್ಯಾಸಂಸ್ಥೆಗಳಿಗೆ ತಮ್ಮ ನಿರ್ದೇಶನದ ಸಹಾಯಹಸ್ತ ಚಾಚಿದ್ದಾರೆ.

ಇವರು ನಿರ್ದೇಶಿಸಿದ *ದಿಂಡಿ* ಹಾಗೂ *ಮೃಗಜಲ* ಮಹಾರಾಷ್ಟ್ರದ ಸಾಂಗಲಿ ಪುಣೆಗಳಲ್ಲೂ, *ಆಗಮನ* ನಾಟಕ ಗೋವಾ ರಾಜ್ಯದಲ್ಲೂ ಪ್ರದರ್ಶನ ಕಂಡಿದ್ದೊಂದು ಹೆಗ್ಗಳಿಕೆಯೇ ಸರಿ.

'*ಸ್ವಿಸ್ ಬ್ಯಾಂಕಿನಲ್ಲಿ ಹಣವಿಲ್ಲ*' ಇತ್ಯಾದಿ ಹಲವು ಸಣ್ಣ ನಾಟಕಗಳನ್ನು ಬರೆದು ಅನೇಕ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಲ್ಲದೆ ಕೆಲವನ್ನು ಸ್ವತಃ ನಿರ್ದೇಶಿಸಿ ರಂಗಮಂಚಕ್ಕೂ ತಂದಿದ್ದಾರೆ.

**ಅಪರೂಪದ ಕಲ್ಪನೆ ಪ್ರೇಕ್ಷಕ ಸದಸ್ಯತ್ವ.**

ಇಂದು ರಂಗ ಸಂಪದ ತಂಡ ವಿಶೇಷವಾಗಿ ಉಲ್ಲೇಖಿಸಲ್ಪಡುವುದು ಅದರ 'ಪ್ರೇಕ್ಷಕ ಸದಸ್ಯತ್ವ'ದ ಯಶಸ್ವಿ ಪ್ರಯೋಗಕ್ಕಾಗಿ. ಇಡೀ ಕರ್ನಾಟಕದಲ್ಲಿ ಈ ಯೋಜನೆಯನ್ನು ದೀರ್ಘಕಾಲ ಉಳಿಸಿ ಬೆಳೆಸಿಕೊಂಡ ತಂಡ ಇದೊಂದೇ. ಪ್ರೇಕ್ಷಕ ಸದಸ್ಯತ್ವದ ಕಲ್ಪನೆಯನ್ನು ಶ್ರೀಪತಿಯ ತಲೆಯಲ್ಲಿ ಬಿತ್ತಿದವರು ಶ್ರೀ ರಾಘವೇಂದ್ರ ಹುನಗುಂದ. ಕಳೆದ ಹದಿನಾರು ವರ್ಷಗಳಿಂದ ಶ್ರೀಪತಿ ಪ್ರೇಕ್ಷಕ ಸದಸ್ಯತ್ವ ಕಲ್ಪನೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ.

೧೯೮೨ರಲ್ಲಿ ರಂಗಸಂಪದ ಆಯೋಜಿಸಿದ ನಾಟಕೋತ್ಸವವು ಭರ್ಜರಿಯಾಗಿ ಯಶಸ್ವಿಯಾದ ನಂತರ, ಆ ಪ್ರೇಕ್ಷಕರನ್ನು ನಿರಂತರವಾಗಿ ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗ ಶ್ರೀ ರಾಘವೇಂದ್ರ ಹುನಗುಂದರು ೧೯೮೫ರಲ್ಲಿ ಈ ಪ್ರೇಕ್ಷಕ ಸದಸ್ಯತ್ವದ ಕಲ್ಪನೆಯನ್ನು ಪ್ರಸ್ತಾಪಿಸಿ ಅದೇ ವರ್ಷ ಅದನ್ನು ಪ್ರಯೋಗಿಸಿಯೂ ಬಿಟ್ಟರು. ಅದರ ಪ್ರಕಾರ ಒಂದು ನೂರು ರೂಪಾಯಿ ನೀಡಿ ಸದಸ್ಯರಾದವರಿಗೆ ನವೆಂಬರ್‌ದಿಂದ ಮೇ ತಿಂಗಳ ಅವಧಿಯಲ್ಲಿ ಆರು ನಾಟಕಗಳನ್ನು (ಕನಿಷ್ಠ) ತೋರಿಸುವ ಕರಾರು. ಆಗ ನೂರು ರೂಪಾಯಿ ಟಿಕೇಟಿಗೆ ಇಬ್ಬರಿಗೆ ಪ್ರವೇಶವಿತ್ತು. ಈಗ ಒಬ್ಬರಿಗೆ ಮಾತ್ರ ಇದೆ. ೧೯೮೫ರಿಂದ ಈತನಕ ರಂಗಸಂಪದ ತಾನು ನೀಡಿದ ವಾಗ್ದಾನವನ್ನು ಎಂದೂ ಮುರಿದಿಲ್ಲ. ಬದಲಾಗಿ ಆರಕ್ಕಿಂತ ಹೆಚ್ಚು ನಾಟಕಗಳನ್ನು ಈ ಪ್ರೇಕ್ಷಕರು ನೋಡಿದ್ದಾರೆ. ೧೯೯೪ - ೯೫ರಲ್ಲಿ ೨೧ ನಾಟಕಗಳನ್ನು ತೋರಿಸಿದ ಉದಾಹರಣೆಯೂ ಇದೆ. ಕಳೆದ ವರ್ಷ ಎಂಟು ನಾಟಕಗಳನ್ನು ತೋರಿಸಲಾಯಿತು. ಈ ವರ್ಷ (೨೦೦೦-೦೧) ಈಗಾಗಲೇ ಐದು ನಾಟಕಗಳನ್ನು ರಂಗ ಸಂಪದದ ಸದಸ್ಯರು ನೋಡಿಯಾಗಿದೆ.

ಈ ಪ್ರೇಕ್ಷಕ ಸದಸ್ಯತ್ವ ವ್ಯವಸ್ಥೆ ರಂಗಸಂಪದ ಹಾಗೂ ಪ್ರೇಕ್ಷಕ ಇಬ್ಬರಿಗೂ ಪ್ರಯೋಜನಕಾರಿಯಾಗಿದೆ. ಒಮ್ಮೆ ಸದಸ್ಯನಾದರೆ ವರ್ಷವಿಡೀ ರಂಗಸಂಪದ ನಾಟಕಗಳನ್ನು ನೋಡುವ ಅರ್ಹತೆ ಪ್ರೇಕ್ಷಕನಿಗೆ ದೊರಕಿ, ಮತ್ತೆ ಮತ್ತೆ ಹಣ ಸಂದಾಯ ಮಾಡುವ ಪ್ರಮೇಯ ಆತನಿಗಿರುವುದಿಲ್ಲ. ನಿಶ್ಚಿತವಾದ ಪ್ರೇಕ್ಷಕರ ನಿರೀಕ್ಷೆ ರಂಗ ಸಂಪದಕ್ಕಿರುವುದರಿಂದ ಅದು ನಾಟಕಗಳಿಗೆ ಪ್ರೇಕ್ಷಕರನ್ನು ಹುಡುಕಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲದೆ, ಆ ವರ್ಷ ನಾಟಕಕ್ಕಾಗಿ ತೊಡಗಿಸಬೇಕಾದ ಹಣದ ಬಹುಭಾಗ ರಂಗ ಸಂಪದಕ್ಕೆ ಮುಂಗಡವಾಗಿಯೇ ಸಂದಾಯವಾಗುವುದರಿಂದ ಹಣಕಾಸಿನ ತೊಂದರೆ ಇರುವುದಿಲ್ಲ. ಹೀಗೆ ಪ್ರೇಕ್ಷಕ - ಸದಸ್ಯತ್ವದ ವ್ಯವಸ್ಥೆ ಇಬ್ಬರಿಗೂ ಲಾಭದಾಯಕವಾಗಿದೆ.

ರಂಗಸಂಪದದ ಈ ಪ್ರೇಕ್ಷಕ ಸದಸ್ಯತ್ವದ ವ್ಯವಸ್ಥೆಯು ಸಾಂಸ್ಕೃತಿಕವಾಗಿಯೂ ಲಾಭದಾಯಕವಾಗಿರುವುದನ್ನು ಇಲ್ಲಿ ಉಲ್ಲೇಖಿಸಲೇ ಬೇಕು. ಕಳೆದ ಎರಡು ದಶಕಗಳಿಂದ ರಂಗಸಂಪದ ನಿರಂತರವಾಗಿ ಕನ್ನಡ ನಾಟಕಗಳನ್ನು ಆಡಿಸುವಲ್ಲಿ ಈ ಪ್ರೇಕ್ಷಕ ಸದಸ್ಯತ್ವ ವ್ಯವಸ್ಥೆ ಬಹುಮಟ್ಟಿಗೆ ಕಾರಣವಾಗಿದೆ. ಇದರಿಂದಾಗಿ ಮರಾಠೀಮಯವಾಗಿದ್ದ ಬೆಳಗಾವಿಯಲ್ಲಿ ಕನ್ನಡ ನಾಟಕಗಳು ಜೀವಂತವಾಗಿ ಉಳಿಯಲು ಸಹ ಪ್ರೇಕ್ಷಕ ಸದಸ್ಯತ್ವದ ವ್ಯವಸ್ಥೆ ಪರೋಕ್ಷವಾಗಿ ಕಾರಣವೆನಿಸಿದೆ. ಬೆಳಗಾವಿಯಲ್ಲಿ ರಂಗಸಂಪದ ಗಟ್ಟಿಯಾಗಿ ಬೇರೂರಲು ಸಹ ಈ ವ್ಯವಸ್ಥೆ ಪ್ರಮುಖ ಕಾರಣವಾಗಿದೆ ಎಂಬಲ್ಲಿ ಸಂಶಯವಿಲ್ಲ.

ಶ್ರೀ ರಾಘವೇಂದ್ರ ಹುನಗುಂದವರು ಬಿಟ್ಟು ಹೋದ ಆ ಯೋಜನೆಯನ್ನು ಶ್ರೀಪತಿ ಇಂದು ಹೆಮ್ಮರವಾಗಿ ಬೆಳೆಸಿದ್ದಾರೆ. ಎಂಟುನೂರಕ್ಕೂ ಅಧಿಕ ಪ್ರೇಕ್ಷಕ ಸದಸ್ಯರನ್ನು ಇಂದು ರಂಗಸಂಪದ ಹೊಂದಿದ್ದರೆ ಶ್ರೀಪತಿಯವರು ಪ್ರಮುಖ ಕಾರಣಕರ್ತರಾಗುತ್ತಾರೆ. ಗಣೇಶನ ಹಬ್ಬ ಮುಗಿದ ತಕ್ಷಣ ಪ್ರೇಕ್ಷಕ ಸದಸ್ಯರ ಮನೆಗೆ ಅಲೆಯುವ ಹಾಗೂ ಅವರಿಂದ ಸದಸ್ಯತ್ವ ಹಣ ಸಂಗ್ರಹಿಸುವ ಕೆಲಸಕ್ಕೆ ಶ್ರೀಪತಿ ಶ್ರೀಗಣೇಶ ಹೊರಡುತ್ತಾರೆ. ನಾಟಕೋತ್ಸವ ಆರಂಭವಾಗುವ ತನಕ ಅವರು ಈ ಕೆಲಸದಲ್ಲಿ ತೊಡಗಿರುತ್ತಾರೆ. ಇವರ ಜೊತೆಗೆ ಅವರ ಅನೇಕ ಮಿತ್ರರು ಬೆಂಬಲವಾಗಿ ನಿಲ್ಲುತ್ತಾರೆಂದು ಉಲ್ಲೇಖಿಸದಿದ್ದರೆ ಅಪಚಾರವಾಗುತ್ತದೆ. ಆದರೆ, ಬಹುಪಾಲು ಶ್ರಮ ಶ್ರೀಪತಿಯವರದೆ ಆಗಿರುತ್ತದೆಂಬುದರಲ್ಲಿ ಸುಳ್ಳಿಲ್ಲ.

**ಸಾಧನೆಗೆ ಬಗೆಗಾಣೆ ಎನ್ನಬಹುದೇ ?**

ಕಳೆದ ಇಪ್ಪತ್ತು ವರ್ಷಗಳಿಂದ ಶ್ರೀಪತಿ ಬೆಳಗಾವಿಯ ರಂಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬುದೇ ಒಂದು ಮಹತ್ಸಾಧನೆ. ನಡೆಯುತ್ತ ಸಾಗಿದರೆ ಊರು ತಲುಪುವುದಾವ ಕಷ್ಟ? ಹಾಗೆ ಶ್ರೀಪತಿ ರಂಗಭೂಮಿಯಲ್ಲಿ ದುಡಿಯುತ್ತಲೇ ಇರುವುದರಿಂದ ಹಲವಾರು ಸಾಧನೆಗಳಿಂದ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.

ಬೆಳಗಾವಿಯಲ್ಲಿ ಕನ್ನಡ ನಾಟಕಗಳು ನೆಲೆನಿಲ್ಲುವಂತೆ ಮಾಡಿದ್ದಾರೆಂಬುದು ಅವರ ಮಹತ್ಸಾಧನೆಗಳಲ್ಲಿ ಒಂದನೆಯದು ಹಾಗೂ ವಂದನೆಯದು. ಒಂದು ಕಾಲದಲ್ಲಿ ಕೇವಲ ಹದಿನಾಲ್ಕು ಜನ ಕನ್ನಡ ನಾಟಕಗಳಿಗೆ ಪ್ರೇಕ್ಷಕರಾಗಿರುತ್ತಿದ್ದರೆ, ಈಗ ಎಂಟುನೂರಕ್ಕೆ ಕಡಿಮೆಯಿಲ್ಲದಂತೆ ಪ್ರೇಕ್ಷಕರು ಆಗಮಿಸುತ್ತಾರೆ.

ಬೆಳಗಾವಿಯಲ್ಲಿ ರಂಗಸಂಪದ ತನ್ನ ಕಾರ್ಯಚಟುವಟಿಕೆಯನ್ನು ಆರಂಭಿಸಿದ್ದು ೧೯೮೦ರಲ್ಲಿ. ಅಂದಿನಿಂದ ಇಂದಿನವರೆಗೆ ಅದು ತನ್ನ ನಿರಂತರತೆಯನ್ನು ಕಾಯ್ದುಕೊಂಡು ಬಂದಿದೆ. ಹವ್ಯಾಸಿ ತಂಡವೊಂದು ಇಷ್ಟು ದೀರ್ಘಕಾಲ ತನ್ನ ಕಾರ್ಯಚಟುವಟಿಕೆಯನ್ನು ಜೀವಂತವಾಗಿರಿಸಿಕೊಂಡು ಬಂದಿರುವುದು ಅಪರೂಪದ ಸಂಗತಿಯೇ ಸರಿ. ಇದರಲ್ಲಿ ಶ್ರೀಪತಿಯ ಪಾಲು ಬಲು ಹಿರಿದು ಎಂಬುದನ್ನು ಮರೆಯುವಂತಿಲ್ಲ.

ಮರಾಠೀಮಯವಾಗಿದ್ದ ಬೆಳಗಾವಿಯಲ್ಲಿ ಕನ್ನಡ ನಾಟಕಗಳು ನೆಲೆನಿಲ್ಲುವಂತೆ ಮಾಡಿದವರಲ್ಲಿ ಶ್ರೀಪತಿಯವರು ಪ್ರಮುಖರೆನಿಸುತ್ತಾರೆ. ಅವರು ಸ್ವತಃ ನಾಟಕಗಳನ್ನು

ನಿರ್ದೇಶಿಸುವುದಲ್ಲದೆ ಕರ್ನಾಟಕದ ಅನೇಕ ಪ್ರಮುಖ ಕನ್ನಡ ತಂಡಗಳನ್ನು ಬೆಳಗಾವಿಗೆ ಬರಮಾಡಿಕೊಂಡು ಕನ್ನಡ ನಾಟಕಗಳ ಪ್ರದರ್ಶನಕ್ಕೆ ಏರ್ಪಾಡು ಮಾಡಿದ್ದಾರೆ. ಇದರಿಂದ ಬೆಳಗಾವಿಯ ಜನ ಕನ್ನಡ ನಾಟಕಗಳತ್ತ ಕಣ್ತೆರೆದು ನೋಡುವಂತಾಯಿತು.

ಶ್ರೀಪತಿಯವರು ಕನ್ನಡ ನಾಟಕಗಳನ್ನು ಬೆಳಗಾವಿಯಲ್ಲಿ ನೆಲೆ ನಿಲ್ಲಿಸುವಲ್ಲಿ ಮಾಡಿದ ಪ್ರಯತ್ನದಿಂದಾಗಿ ಮರಾಠೀ ಭಾಷಿಕರೂ ಕನ್ನಡ ನಾಟಕಗಳತ್ತ ಗಮನಹರಿಸುವಂತಾಯಿತು. ಇಂದು ರಂಗಸಂಪದ ಅಭಿನಯಿಸುವ ಹಾಗೂ ಆಯೋಜಿಸುವ ಕನ್ನಡ ನಾಟಕಗಳಿಗೆ ಅನೇಕ ಮರಾಠಿಗರೂ ತುಂಬ ಉತ್ಸುಕತೆಯಿಂದ ಆಗಮಿಸುತ್ತಾರೆ. ಹೀಗಾಗಿ ಕನ್ನಡ ನಾಟಕಗಳನ್ನು ಮರಾಠಿಗರಿಗೆ, ತಲುಪಿಸಿದ ಶ್ರೇಯಸ್ಸಿನಲ್ಲೂ ಶ್ರೀಪತಿ ಭಾಗಿಯಾಗುತ್ತಾರೆ.

ಬೆಳಗಾವಿಯಲ್ಲಿ ನಿರಂತರವಾಗಿ ೩೦ ವರ್ಷಗಳಿಂದ ಕನ್ನಡ ನಾಟಕಗಳು ನಡೆಯುತ್ತಿರುವುದರಿಂದ ಅವುಗಳ ವಿಮರ್ಶೆಯನ್ನು ಬರೆಯುವುದು ಮರಾಠೀ ಪತ್ರಿಕೆಗಳಿಗೂ ಅನಿವಾರ್ಯವೆನಿಸಿದೆ. ಬೆಳಗಾವಿಯಲ್ಲಿ ಕನ್ನಡ ನಾಟಕೋತ್ಸವ 'ವಾರ ಹಬ್ಬ' ದಂತೆ ಆಚರಿಸಲ್ಪಡುತ್ತದೆ. ಈ ಕಾರಣಕ್ಕಾಗಿಯೇ ಮರಾಠೀ ಪತ್ರಿಕೆಗಳು ಕನ್ನಡ ನಾಟಕಗಳ ವಿಮರ್ಶೆಗಳನ್ನು ಪ್ರಕಟಿಸಿ ಹಬ್ಬದಲ್ಲಿ ತಾವೂ ಪಾಲ್ಗೊಳ್ಳುತ್ತಾವೆ. ಹೀಗಾಗಿ ಕನ್ನಡ ನಾಟಕಗಳ ವಿಮರ್ಶೆ ಮರಾಠಿಯಲ್ಲಿ ನಡೆಯಲು ಶ್ರೀಪತಿ ಹಾಗೂ ಅವರು ಪಡುವ ಶ್ರಮ ಕಾರಣವಾಗಿದೆ.

ರಂಗಸಂಪದ ಅನೇಕ ಪ್ರಮುಖ ನಟರನ್ನು ಬೆಳಕಿಗೆ ತಂದಿದೆ ಎಂಬುದು ಮೇಲು ಮಾತು. ಓರ್ವ ನಿರ್ದೇಶಕರಾಗಿ ಶ್ರೀಪತಿ ಹೊಸ ನಟರ ಶೋಧದಲ್ಲಿ ಸದಾ ತೊಡಗಿರುವುದರಿಂದಲೇ ಅನೇಕ ಹೊಸ ಮುಖಗಳು ರಂಗಮಂಚದ ಮೇಲೆ ಬರಲು ಕಾರಣವಾಯಿತೆನ್ನುವುದೇ ಒಳಮಾತು. ರಂಗಸಂಪದದ ಮೂಲಕ ಕನ್ನಡ ರಂಗಭೂಮಿಗೆ ಪರಿಚಿತರಾದವರಲ್ಲಿ ಅನೇಕರು ಮರಾಠೀ ಮೂಲದ ನಟ ನಟಿಯರೆಂಬುದು ಸೋಜಿಗವಾದರೂ ವಾಸ್ತವ. ಅನೇಕರ ಮಾತೃಭಾಷೆ ಮರಾಠಿಯಾಗಿದ್ದರೂ ಅವರು ಕನ್ನಡ ನಾಟಕಗಳಲ್ಲಿ ಸೌಹಾರ್ದಯುತವಾಗಿ ಪಾಲ್ಗೊಳ್ಳುವುದಕ್ಕೆ ಶ್ರೀಪತಿಯವರ ಹೃದಯ ವೈಶಾಲ್ಯವೂ ಬಹುಮಟ್ಟಿಗೆ ಕಾರಣ. ನಾಟಕದ ಮಾತುಗಳನ್ನು ಮರಾಠೀ ಲಿಪಿಯ ಕನ್ನಡದಲ್ಲಿ ಬರೆದುಕೊಂಡು ಬಾಯಿಪಾಠ ಮಾಡುವ ದೃಶ್ಯ ರಂಗಸಂಪದದ ತಾಲೀಮುಗಳಲ್ಲಿ ಬಹು ಸಹಜವಾಗಿ ಕಂಡುಬರುವ ದೃಶ್ಯ.

ಮೇಲೆ ವಿವರಿಸಿದ ಶ್ರೀಪತಿಯವರ ಎಲ್ಲ ಪ್ರಯತ್ನಗಳು ಬೆಳಗಾವಿಯಲ್ಲಿ ಕನ್ನಡ-ಮರಾಠೀ ರಂಗಭೂಮಿಯ ಮಧ್ಯ ಸುಮಧುರ ಬಾಂಧವ್ಯವನ್ನು ಬೆಸೆಯಲು ಕಾರಣವಾಗಿವೆ. ಹೀಗಾಗಿ ಬೆಳಗಾವಿಯ ರಂಗಭೂಮಿಯ ಇತಿಹಾಸದಲ್ಲಿ ಶ್ರೀಪತಿ ತಮ್ಮದೊಂದು ಸ್ಥಾನವನ್ನು ಗುರುತಿಸಿಕೊಂಡಿದ್ದಾರೆ. ಇದೇನು ಕಡಿಮೆಯ ಸಾಧನೆಯಲ್ಲ. ತನ್ನ ಕಾರ್ಯವನ್ನು ತನ್ನ ಪಾಡಿಗೆ ತಾನು ಮಾಡುತ್ತಲೇ ಶ್ರೀಪತಿ ಸಾಧನೆಯ ಹಲವಾರು ಮೈಲಿಗಲ್ಲುಗಳನ್ನು ತಮಗರಿವಿಲ್ಲದಂತೆಯೇ ದಾಟಿ ಮುನ್ನಡೆದಿರುವಾಗ ಸಾಧನೆಗೆ ಬಗೆಗಾಣೆ ಎನ್ನಬಹುದೇ ?


## ಹತ್ತು ಹಲವು ಹವ್ಯಾಸಗಳು

ಶ್ರೀಪತಿಯವರ ವ್ಯಕ್ತಿತ್ವ ಕೇವಲ ರಂಗಭೂಮಿಗೆ ಮಾತ್ರ ಸೀಮಿತವಾಗಿದೆ ಎಂದರೆ ತಪ್ಪಾಗುತ್ತದೆ. ಒಳ್ಳೆಯ ಕಂಚಿನ ಕಂಠದ ಈ ಗಾಯಕ ಕೆಲಕಾಲ ಆರ್.ಎನ್. ಜೋಶಿ ಬುವಾ ಅವರಲ್ಲಿ ಶಾಸ್ತ್ರೀಯವಾಗಿ ಸಂಗೀತವನ್ನು ಕಲಿತಿದ್ದಾರೆ. ಆದರೆ ತಾವು ಜೋಶಿಬುವಾ ಯಕ್ಷಗಾನ ಇತ್ಯಾದಿ ಮೂಲಗಳಿಂದ ಕಲಿತ ಸಂಗೀತವನ್ನು ಬೆಳೆಸಿಕೊಳ್ಳುವುದು ನಾಟಕಗಳಿಗೆ ಮಾತ್ರ. ಅನೇಕ ನಾಟಕಗಳ ನಿರ್ದೇಶನದೊಂದಿಗೆ ಅವರು ಸಂಗೀತ ನಿರ್ದೇಶನವನ್ನು ಕೈಗೊಂಡಿದ್ದಾರೆ. *ಗರ್ಭಗುಡಿ, ಅಧ್ವಾನಪುರ, ಮೃಗಜಲ, ದಿಂಡಿ* ಇತ್ಯಾದಿ, ನಾಟಕಗಳಲ್ಲಿ ಶ್ರೀಪತಿ ಸಂಯೋಜಿಸಿದ ಸಂಗೀತ ಯಶಸ್ವಿಯಾಗಿರುವುದನ್ನಿಲ್ಲಿ ನೆನಪಿಸಿಕೊಳ್ಳಲೇ ಬೇಕು.

ಬಿಡುವಿನ ಸಮಯದಲ್ಲಿ ಶ್ರೀಪತಿ ಮಾಡುವ ಕೆಲಸವೆಂದರೆ ಓದುವುದು. ರಂಗಭೂಮಿ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಅನೇಕ ಪ್ರೌಢಕೃತಿಗಳನ್ನು ಓದಿ ಅವುಗಳ ಬಗ್ಗೆ ಚರ್ಚಿಸಬಲ್ಲವರಾಗಿದ್ದಾರೆ ಶ್ರೀಪತಿ. ಇಂದು ಶ್ರೀಪತಿ ವೈಯಕ್ತಿಕವಾಗಿ ಸಂಗ್ರಹಿಸಿದ ಗ್ರಂಥಗಳ ಸಂಖ್ಯೆ ಎರಡು ಸಾವಿರವನ್ನು ಮೀರುತ್ತದೆ. ನಾಟಕ ಹಾಗೂ ಸಾಹಿತ್ಯ ಕೃತಿಗಳ ಕುರಿತು ನಡೆಯುವ ಚರ್ಚೆ, ಉಪನ್ಯಾಸಗಳಲ್ಲಿ ಪಾಲ್ಗೊಳ್ಳುವುದು ಶ್ರೀಪತಿಯವರ ಮತ್ತೊಂದು ಹವ್ಯಾಸ. ಅನೇಕ ಶಿಬಿರಗಳನ್ನು ಆಯೋಜಿಸಿ ಹಾಗೂ ಅಯೋಜಿಸಿದ ಶಿಬಿರಗಳಲ್ಲಿ ಪಾಲ್ಗೊಂಡು ಶ್ರೀಪತಿ ನಾಟಕಗಳ ಬಗ್ಗೆ ಉಪನ್ಯಾಸ ನೀಡಿದ್ದಾರೆ. ಪ್ರತಿಯೊಂದು ಉಪನ್ಯಾನಕ್ಕೂ ಮೊದಲು ಸಾಕಷ್ಟು ತಯಾರಿ ಮಾಡಿಕೊಂಡು ಅದನ್ನು ಮಂಡಿಸುವುದು ಅವರು ರೂಢಿಸಿಕೊಂಡಿರುವ ಶಿಸ್ತು.

ಆದರೆ, ಶ್ರೀಪತಿಯವರ ಮೊದಲ ಆದ್ಯತೆ ಏನಿದ್ದರೂ ಅದು ನಾಟಕಕ್ಕೆ ಎಂಬುದನ್ನು ಅವರೇ ಒಪ್ಪುತ್ತಾರೆ.

ಒಂದು ಅವಧಿಗೆ ನಾಟಕ ಅಕಾಡೆಮಿಯ ಸದಸ್ಯರಾಗಿ, ಸೇವೆ ಸಲ್ಲಿಸಿರುವ ಶ್ರೀಪತಿ ನಾಟಕ ಅಕಾಡೆಮಿ ಪ್ರಶಸ್ತಿಯನ್ನುಗಳಿಸಿಕೊಂಡಿದ್ದಾರೆ. ಬೆಳಗಾವಿಯೂ ಸೇರಿದಂತೆ ನಾಡಿನ ಹಲವಾರು ಕಡೆಗಳಲ್ಲಿ ಶ್ರೀಪತಿಯವರನ್ನು ಸನ್ಮಾನಿಸಲಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ, ಬೆಳಗಾವಿಯಲ್ಲಿ ಅವರು ಹೊಂದಿರುವ ಅಭಿಮಾನಿ ಬಳಗ ಸದಾ ಅವರ ಬೆನ್ನಿಗಿದ್ದಾರೆ.



# ಎಸ್. ಶಾಮಮೂರ್ತಿ

— ಹೂ.ಲಿ.ಶೇಖರ್

ಕರ್ನಾಟಕದ ಮಲೆನಾಡು ಹಲವು ಪ್ರತಿಭೆಗಳ ಗೂಡು ಸಾಹಿತಿಗಳು, ಕವಿಗಳು, ರಂಗ ಕಲಾವಿದರು, ಯಕ್ಷಗಾನ ಹೀಗೆ ತನ್ನ ಕ್ಷೇತ್ರವನ್ನು ಹಿಗ್ಗಿಸಿಕೊಂಡ ಈ ಪ್ರದೇಶ ರಾಷ್ಟ್ರ ಅಂತರರಾಷ್ಟ್ರ ಮಟ್ಟದ ಪ್ರತಿಭೆಗಳನ್ನು ನಮಗೆ ನೀಡಿದೆ. ಇಂಥ ಮಲೆನಾಡಿನ ಕಲಾವಿದ, ರಂಗಸಂಘಟಕ, ನಟ, ನಿರ್ದೇಶಕ ಎಂದೆಲ್ಲಾ ಖ್ಯಾತರಾದ ಸಿದ್ದಯ್ಯನವರ ಮಗ ಶಾಮಮೂರ್ತಿ ಕರ್ನಾಟಕದ ರಂಗಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿಕೊಂಡವರು. ಯಾವುದೇ ತರಬೇತಿ ಹಿನ್ನಲೆಯಿಲ್ಲದೆ ಹುಟ್ಟಿನಿಂದಲೇ ನಾಟಕವನ್ನು ಮೈಯಂಗಿಯನ್ನಾಗಿ ತೊಟ್ಟ ಶಾಮಮೂರ್ತಿ ನಾಟಕವನ್ನೇ ಉಸಿರಾಗಿಸಿಕೊಂಡವರು.

ಭದ್ರಾವತಿ ಅಂದಾಕ್ಷಣ ನೆನಪಾಗುವುದು ಎರಡು ಸಂಗತಿಗಳು -ಒಂದು ಅಲ್ಲಿಯ ಕಬ್ಬಿಣ ಮತ್ತು ಕಾಗದಗಳು. ಇನ್ನೊಂದು ಅಲ್ಲಿಯ ಕಾರ್ಮಿಕ ರಂಗಭೂಮಿ ಮತ್ತು ಶಾಮಮೂರ್ತಿ ಅಷ್ಟೊಂದು ತಾದಾತ್ಮಕತೆ ಹೊಂದಿದ ಈ 'ರಂಗಕುಶಳ' ನಮ್ಮ ನಡುವಿನ ರಂಗ ಸಿರಿಯೇ ಸರಿ.

ಮೂಲತಃ ಮೈಸೂರು ಜಿಲ್ಲೆಯ ಸೋಸಲೆ ಗ್ರಾಮದವರಾದ ಶಾಮಮೂರ್ತಿ ಉದ್ಯೋಗಕ್ಕಾಗಿ ಭದ್ರಾವತಿಯಲ್ಲಿ ನಿಂತವರು. 'ಶೆಟ್ಟಿ ಬಿಟ್ಟಲ್ಲೇ ಪಟ್ಣ' ಅನ್ನುವ ಮಾತಿನ ಹಾಗೆ ಶಾಮಮೂರ್ತಿ ಇದ್ದಲ್ಲೇ ರಂಗವಾತಾವರಣ. ಇವರೊಡನೆ ಮಾತಿಗಿಳಿಯುವುದೇ ಒಂದು ಸೊಗಸು.

ಶಾಮಮೂರ್ತಿಯನ್ನು ರಂಗಕ್ಕೆಳೆದದ್ದು ವೃತ್ತಿ ರಂಗಭೂಮಿ. ಆಗವರು ೮-೧೦ ವರ್ಷದ ಚಿಣ್ಣರು. ಆ ದಿನಗಳಲ್ಲಿ ಭದ್ರಾವತಿಗೆ ವೃತ್ತಿ ನಾಟಕಗಳ ಸಂಭ್ರಮ ಹೊರಗಿನಿಂದ ಬೀಡು ಬಿಡುವ ಕಂಪನಿಗಳು. ಊರವರೇ ಆಡುವ ಆ ಮಾದರಿ ನಾಟಕಗಳು. ಕುತೂಹಲಿ ಮೂರ್ತಿ ಆ ಎಲ್ಲಾ ನಾಟಕಗಳನ್ನು ಬಿಟ್ಟೂ ಬಿಡದೆ ನೋಡುತ್ತಿದ್ದರು. ಏಕಲವ್ಯನ ಹಾಗೆ ನೋಡುತ್ತಲೇ ಎಲ್ಲವನ್ನು ತನ್ನೊಳಗೆ ಇಳಿಸಿಕೊಂಡರು. ಅದರ ಪರಿಣಾಮವೆಂದರೆ ಹತ್ತು ವರ್ಷದ ಹುಡುಗ ಬಣ್ಣ ಹಚ್ಚಿಕೊಂಡ. ವಿಚಿತ್ರ ವೈದ್ಯ ನಾಟಕದಲ್ಲಿ ಒಂದು ಸಣ್ಣ ಪಾತ್ರದಿಂದ ರಂಗಪ್ರವೇಶ. ಅಲ್ಲಿಂದ ಆರಂಭವಾದ ರಂಗಯಾತ್ರೆಗೆ ಈಗ ನಲವತ್ತೆಂಟು ವರ್ಷ. ಎಂಥಾ ಅದ್ಭುತ ಸಮಯ. ಇಷ್ಟೊಂದು ದೀರ್ಘ ಅವಧಿಯ ನಂತರವೂ ರಂಗ ಉತ್ಸಾಹ ಉಳಿಸಿಕೊಂಡದ್ದು ಇನ್ನೂ ಅದ್ಭುತ.

ಶಾಮಮೂರ್ತಿ ಹುಟ್ಟಿದ್ದು ೧೩-೧೧-೧೯೪೭ರಲ್ಲಿ. ಭದ್ರಾವತಿಯಲ್ಲಿ ಕಾಗದ ಕಾರ್ಖಾನೆಯಲ್ಲಿ ಅಧಿಕಾರಿಯಾಗಿ ಇದೀಗ ನಿವೃತ್ತರಾಗಿರುವ ಶಾಮಮೂರ್ತಿಯವರು ಹಿಂದಣ ಬದುಕೆಲ್ಲ ರಂಗಮಯ. ಭದ್ರಾವತಿಯ ವಿದ್ಯಾರ್ಥಿ ಕಲಾ ಸಂಘ (ವಿಕಸಂ) ತಂಡ ರಾಷ್ಟ್ರವ್ಯಾಪಿ ಪ್ರಸಿದ್ಧ. ೧೯೪೦ರಲ್ಲಿ ಹುಟ್ಟಿದ ಈ ತಂಡದ ಹಿಂದಿನ ಶಕ್ತಿ ಶಾಮಮೂರ್ತಿ. ಒಂದು ರೀತಿಯಲ್ಲಿ ಈ ರಂಗಪೈಲ್ವಾನನಿಗೆ ವಿಕಸಂ ಒಂದು ತಾಲೀಮು ಅಖಾಡ. ತನ್ನ ಜತೆಗೆ ಹಲವು ನಟರು,

ಸಂಗೀತಗಾರರನ್ನು ಮುಂದಕ್ಕೆಳೆಯು ಸಾಹಸ. ೧೯೭೭ರಿಂದ ಇಲ್ಲಿಯವರೆಗೂ ಇವರೇ ಆ ತಂಡದ ಪ್ರಧಾನ ಕಾರ್ಯದರ್ಶಿ, ಪ್ರಮುಖ ಸಂಘಟಕ. ಇದುವರೆಗೆ ಸುಮಾರು ೭೫ ಹೊಸ ನಾಟಕಗಳನ್ನು ರಂಗಕ್ಕೆ ತಂದ ಕೀರ್ತಿ ವಿಕಸಂದ್ದು. ಅವುಗಳ ಮರು ಪ್ರದರ್ಶನಗಳು ೩,೦೦೦ ಕ್ಕೂ ಹೆಚ್ಚು. ಕಾಗದ ಕಾರ್ಖಾನೆ ಕಾರ್ಮಿಕರು, ವಿದ್ಯಾರ್ಥಿಗಳು, ಸೇರಿಕೊಂಡಿರುವ ಈ ತಂಡ ಇಂದಿಗೂ ಅಪ್ಪಟ ದೇಸೀ ತಂಡ. ಕರ್ನಾಟಕ ಅಥವಾ ಇತರ ರಾಜ್ಯಗಳಲ್ಲಿ ನಡೆಯುವ ನಾಟಕ ಸ್ಪರ್ಧೆಗಳೆಂದರೆ ಈ ತಂಡಕ್ಕೆ ನೀಡಿದ ಪಂಥಾಹ್ವಾನ. ತಕ್ಷಣ ನಡುಕಟ್ಟಿ ನಿಲ್ಲುವ ಶಾಮಮೂರ್ತಿ. ಇಂಥ ಶ್ರದ್ಧೆ, ಏಕಾಗ್ರತೆ ಪರಿಣಾಮವಾಗಿ ದೊರೆತ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. ಪರ್ಯಾಯ ಪಾರಿತೋಷಕಗಳ ಕಿರೀಟಗಳು ಅನೇಕ.

ಶಾಮಮೂರ್ತಿ ರಂಗಪ್ರವೇಶ ಮಾಡಿದ್ದು ನಟನಾಗಿ. ನಟನೆ ಈಗಲೂ ಪ್ರೀತಿಯ ಒಂದು ಭಾಗ. ಹಾಗಾಗಿ ಈಗಲೂ ನಟಿಸುತ್ತಾರೆ. *ಎಚ್ಚಮನಾಯ್ಕ, ರಕ್ತಾಕ್ಷಿ, ರಣಪ್ರಚಂಡ, ದುರ್ಗದ ದುರಂತ, ಕಲಿ ಕಂಠೀರವ ಟೀಪು ಸುಲ್ತಾನ್‌ನಂಥ* ಐತಿಹಾಸಿಕ ನಾಟಕಗಳಿಗೆ ತನ್ನದೇ ಛಾಪು ಮೂಡಿಸಿದ ಕೀರ್ತಿ.

ಹಾಗೆಯೇ *ಜೋಕುಮಾರಸ್ವಾಮಿ, ಹಯವದನ, ಬೆಸಕನಕೆರೆ, ದೇವದಾಸಿ, ಬೆಹುವದಂಥ* ನಾಟಕಗಳಿಗೆ ನಟನೆಯ ಹೊಳಪು ನೀಡಿದ ಜಾಣಕ್ಷ ಎಲ್ಲೆಲ್ಲೂ ನಟನಾಶೀಲತೆಯನ್ನು ಮೆರೆದ ಧೀಮಂತ ಒಬ್ಬ ನಟ ಸಮರ್ಥ ನಿರ್ದೇಶಕನಾಗಲೀ ಸಂಘಟಕನಾಗಲೀ ಹೊರಹೊಮ್ಮುವುದು ಅಪರೂಪ. ಆದರೆ ಶಾಮಮೂರ್ತಿ. ಈ ಎಲ್ಲದರಲ್ಲೂ ಅನುಪಮತೆ ಮೆರೆದವರು. ಇವರು ನಿರ್ದೇಶಿಸಿದ ನಾಟಕಗಳ ಸಂಖ್ಯೆ ನಲವತ್ತಕ್ಕೂ ಹೆಚ್ಚು. ಅವುಗಳಲ್ಲಿ ಅನೇಕ ನಾಟಕಗಳು ಮರು ಪ್ರದರ್ಶನಗೊಂಡದ್ದಲ್ಲದೆ ರಾಜ್ಯಮಟ್ಟದ ನಾಟಕೋತ್ಸವ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನ ಪಡೆದಿದೆ. ಕನಿಷ್ಟ ೩೭ ಬಾರಿ ನಿರ್ದೇಶನಕ್ಕೆ ಪ್ರಥಮ ಬಹುಮಾನ ಪಡೆದ ಪ್ರತಿಭಾವಂತರು. ಇವರು ಸ್ವತಃ ಸಂಗೀತ ಸಂಯೋಜನೆ ಮಾಡುವುದರಿಂದ ಜಾನಪದ ನಾಟಕಗಳಿಗೆ ಹೆಚ್ಚು ಒತ್ತು ಕೊಡುತ್ತಾರೆ. *ಬೆಳ್ಳಕ್ಕಿ ಹಿಂಡು ಬೆದರ್ಯಾವೋ, ಸತ್ತವರ ನೆರಳು, ಸಂಗ್ಯಾ ಬಾಳ್ಯ, ಅರಗಿನಬೆಟ್ಟ, ಹಲಗಲಿ ಬೇಡರ ದಂಗೆ, ಜೋಕುಮಾರಸ್ವಾಮಿ* ಮುಂತಾದ ನಾಟಕಗಳು ಇವರಿಗೆ ಹೆಸರು ತಂದುಕೊಟ್ಟಿವೆ. ಹಾಡು ನೃತ್ಯ ಸಂಯೋಜನೆಯಲ್ಲಿ ತಮ್ಮದೇ ಆದ ಗುಣಾತ್ಮಕ ಅಂಶವನ್ನು ಸೇರಿಸಿದ್ದಾರಿಂದ ಅಂಥ ಪ್ರಯೋಗಗಳು ಮನಗೆದ್ದಿವೆ.

ಜೋಗದ ಮಿತ್ರ ಮಂಡಳಿಯಾಗಲಿ, ಉಡುಪಿಯ ರಂಗಭೂಮಿಯಾಗಲೀ ಏರ್ಪಡಿಸುವ ನಾಟಕ ಸ್ಪರ್ಧೆ ಇವರ ಉತ್ಸಾಹಕ್ಕೆ ಹಬ್ಬವಾಗುತ್ತದೆ. ಅಲ್ಲಿಯೂ ಅಷ್ಟೆ. ಸ್ಪರ್ಧೆಗೆ ಶಾಮಮೂರ್ತಿಯ ತಂಡ ಬರುತ್ತದೆ ಅಂದರೆ ಅಲ್ಲಿಯ ಪ್ರೇಕ್ಷಕರಲ್ಲಿ ಏನೋ ವಿದ್ಯುತ್ ಸಂಚಾರ ಅಂಥ ನಿರೀಕ್ಷೆಯನ್ನು ಮುಂದಿನ ವರ್ಷಕ್ಕೆ ಸೃಷ್ಟಿಸಿ ಬಿಡುತ್ತಾರೆ, ಇವರು ನಿದೇಶಿಸಿದ ನಾಟಕಗಳಿಗೆ ನಿರ್ದೇಶನಕ್ಕೆ ಮಾತ್ರವಲ್ಲದೆ ನಟನ ಮಿಭಾಗ, ಸಂಗೀತ ವಿಭಾಗ, ರಂಗಸಜ್ಜಿಕೆ ಹೀಗೆ ಹಲವಾರು ಬಹುಮಾನಗಳು ತಪ್ಪದೆ ಸಿಗುವುದರಿಂದ ಇವರ ತಂಡದಲ್ಲಿ ಭಾಗವಹಿಸಲು ಅನೇಕರು ತುದಿಗಾಲ ಮೇಲೆ ನಿಂತಿರುತ್ತಾರೆ.

ರಿಹಸಲ್‌ನಲ್ಲಿ ಇವರೊಬ್ಬ ಅಪ್ಪಟ ಹಳ್ಳಿ ಮೇಸ್ಟ್ರು ಇದ್ದಂತೆ. ನಾಟಕದಲ್ಲಿ, ಶ್ರದ್ಧೆ, ಶಿಸ್ತು ಇಲ್ಲದಿದ್ದಲ್ಲಿ ಆತ ಎಂಥವನಿದ್ದರೂ ಸರಿ. ಎತ್ತಿ ಬಿಸಾಕಿಬಿಡುತ್ತಾರೆ. ಆದರಿಂದ

ಶಾಮಮೂರ್ತಿಯ ತಂಡಕ್ಕೆ ಸೇರಿದ ಪ್ರತಿಯೊಬ್ಬನಿಗೂ ಇವರ ಬಗ್ಗೆ ಭಯ ಗೌರವ ಎರಡೂ ಒಟ್ಟಿಗೇ ಉಂಟಾಗುತ್ತವೆ. ಅಷ್ಟು ಶಿಸ್ತು ರಂಗಭೂಮಿಗೆ ತೀರ ಅವಶ್ಯಕ. ಅದಿಲ್ಲದಿದ್ದರೆ ಸಂಘಟನೆ ಅಸಾಧ್ಯ ಅನ್ನುವ ಇವರ ಮಾತಿನಲ್ಲಿ ಹುರುಳಿಲ್ಲದೆ ಇಲ್ಲ. ಅಭಿಮಾನವಿಲ್ಲದವರ ಸೇರ್ಪಡೆಯಿಂದ ಕೇವಲ ಒಂದು ನಾಟಕ ಸಾಯುತ್ತಿಲ್ಲ. ಅಂಥವರು ಇಡೀ ತಂಡವನ್ನು ಕೊಲ್ಲುತ್ತಿದ್ದಾರೆ. ಇಂಥವರ ನಿವಾರಣೆಗೆ ಶಿಸ್ತಿನ ಚೌಕಟ್ಟು ಅನಿವಾರ್ಯ ಅನ್ನುವ ಅವರ ಮಾತನ್ನು ಒಪ್ಪಲೇಬೇಕು. ಕೇವಲ ನಾಟಕವೊಂದರಲ್ಲಿ ಅಭಿನಯಿಸಿ ಮಾಧ್ಯಮಗಳ ಗಮನ ಸೆಳೆದು ಟಿ.ವಿ.ಗಳತ್ತ ಹಾರಲೆತ್ನಿಸುವ ನಟರಿಗೆ ಇಂಥ ಮಾತು ಚಾಟಿಯೇಟಾಗಬಹುದು. ಶಾಮಮೂರ್ತಿಯವರ ಇಂಥ ಬಿಗಿಯಾದ ಸಂಘಟನಾ ನೀತಿಯಿಂದ ಭದ್ರಾವತಿಯಲ್ಲಿ ಅನೇಕ ರಂಗನಟರು ಶಿಸ್ತಿಗೊಳಪಡುವಂತಾಯಿತು ಅಂತಲೇ ವಿಕಸಂ ಕಲಾವಿದರು ಇಂದಿಗೂ ನಾಟಕ ಪ್ರದರ್ಶನದಲ್ಲಿ ಶ್ರದ್ಧೆಯಿಂದ ಭಾಗವಹಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲೂ ನಾಟಕಗಳನ್ನು ಸಂಘಟಿಸಿದ ಶಾಮಮೂರ್ತಿ ಶಿವಮೊಗ್ಗ ಜಿಲ್ಲೆಯಲ್ಲಿ ರಂಗಚಳುವಳಿಯನ್ನು ಹಬ್ಬಿಸಿದರು. ವಾರ್ತಾ ಇಲಾಖೆ, ಕುಟುಂಬ ಕಲ್ಯಾಣ ಇಲಾಖೆ, ಗ್ರಾಮಾಭಿವೃದ್ಧಿ, ಅಸ್ಪೃಶ್ಯತೆ ಕುರಿತ ನಾಟಕಗಳನ್ನು ಸಾಮಾಜಿಕ ಕಾಳಜಿಗಳಿಗನುಗುಣವಾಗಿ ಪ್ರದರ್ಶಿಸಿದ್ದಾರೆ. ಅದರಲ್ಲಿ ರಂಗ ತಾಂತ್ರಿಕತೆಯನ್ನು ಹಳ್ಳಿಗಳಿಗೆ ಮುಟ್ಟಿಸಬೇಕು ಅನ್ನುವ ಅವರು ಈ ನಿಟ್ಟಿನಲ್ಲಿ ಸಾಕಷ್ಟು ದುಡಿದಿದ್ದಾರೆ.

ಹಳ್ಳಿಗಾಡಿನಲ್ಲಿ ಅಷ್ಟೇ ಅಲ್ಲ, ಹಳ್ಳಿಯಿಂದ ದಿಲ್ಲಿಯವರೆಗೂ ನಾಟಕ ಒಯ್ದ ಕೀರ್ತಿ ಇವರದು. ಭದ್ರಾವತಿಯ ಮೂರು ಪ್ರಮುಖ ತಂಡಗಳನ್ನು ಒಗ್ಗೂಡಿಸಿ ಸಂಯುಕ್ತ ಎಂಬ ಹೆಸರಲ್ಲಿ *'ಒಂದು ದಂಗೆಯ ಪ್ರಕರಣ'* ನಾಟಕವನ್ನು ೪೫ ಕಲಾವಿದರೊಂದಿಗೆ ದಿಲ್ಲಿಗೆ ಒಯ್ದರು. ಹಳ್ಳಿಯಲ್ಲಿ ಹೇಗೆ ಜನಮನ ಗೆದ್ದರೋ ಹಾಗೆಯೇ ದಿಲ್ಲಿಯ ಪ್ರೇಕ್ಷಕರಿಗೂ ನಾಟಕದ ಬಗ್ಗೆ ಗುಂಗು ಹಿಡಿಸಿದರು. ಕೇವಲ ತಂಡ ಕಟ್ಟಿ ಬೆಳೆಸುವದರ ಮಟ್ಟಿಗೆ ಅವರ ಆಸಕ್ತಿ ಸೀಮಿತವಾಗಲಿಲ್ಲ. ೯೦ರ ದಶಕದಲ್ಲಿ ನಾಟಕ ಅಕಾಡೆಮಿಯ ಸದಸ್ಯನಾಗಿದ್ದಾಗ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ರಂಗ ಸಂಘಟನೆ ಮಾಡಿದರು. ಎರಡೂ ಜಿಲ್ಲೆಗಳಲ್ಲಿ ನಾಟಕೋತ್ಸವಗಳು, ಹೊಸ ನಾಟಕಗಳ ಪ್ರಯೋಗಗಳ ಆಯೋಜನೆ ಮುಂತಾದವುಗಳತ್ತ ಗಮನ ಹರಿಸಿದರು. ವಿಶ್ವಕನ್ನಡ ಸಮ್ಮೇಳನದ ಕಾರ್ಯಕ್ರಮಗಳಿಗೆ ಸಂಚಾಲಕನಾಗಿ ಕೆಲಸ. ಕಾಗಿನೆಲ್ಲಿಯಲ್ಲಿ ನಾಟಕೋತ್ಸವ ಆಯೋಜನೆ. ಭದ್ರಾವತಿಯಲ್ಲಿ ರಂಗಶಿಬಿರ ವ್ಯವಸ್ಥೆ. ಹೀಗೆ ಹತ್ತು ಹಲವು ಕಡೆ ಓಡಾಟ. ಭದ್ರಾವತಿಯಲ್ಲಿ ರಂಗಶಿಬಿರ ನಡೆಸಿದಾಗಂತೂ ಒಂದು ಸ್ಮರಣೀಯ ಅನುಭವ. ೨೦೦ಕ್ಕೂ ಹೆಚ್ಚು ಜನ ಶಿಬಿರಾರ್ಥಿಗಳನ್ನು ಕಲೆಹಾಕಿದರು. ಅಚ್ಚರಿಯೆಂದರೆ ಅವರೆಲ್ಲರೂ ಕಾರ್ಮಿಕರಾಗಿದ್ದರು. ಬಹುಶಃ ಒಂದು ರಂಗಶಿಬಿರದಲ್ಲಿ ಅಷ್ಟೊಂದು ಸಂಖ್ಯೆಯಲ್ಲಿ ಅಭ್ಯರ್ಥಿಗಳು ಭಾಗವಹಿಸಿದ್ದು ಇದೇ ಮೊದಲ ಬಾರಿ. ಅದೇ ಸಂದರ್ಭದಲ್ಲಿ ಶ್ರೀರಂಗರ ನಾಟಕೋತ್ಸವವನ್ನೂ ಆಯೋಜಿಸಿದರು..

ಭದ್ರಾವತಿಯ ಇತರ ನಾಟಕ ತಂಡಗಳನ್ನು ಒಗ್ಗೂಡಿಸುವ ಪ್ರಯತ್ನವನ್ನು ಮಾಡಿದರು. ಇವರ ಸಂಘಟನಾ ಚತುರತೆ ಮುಖ್ಯವಾಗಿ ಶಿಸ್ತಿಗೆ ಒಳಪಟ್ಟವರು ಕೊನೆಯವರೆಗೆ ನಾಟಕವನ್ನೇ ಆಯ್ದುಕೊಂಡರು.

ಈ ಎಲ್ಲಾ ಚಟುವಟಿಕೆಗಳ ಮಧ್ಯೆ ಭದ್ರಾವತಿಯ ಹಿರಿಯ ರಂಗ ಕಲಾವಿದರನ್ನು ಗುರುತಿಸಿ ಗೌರವಿಸುವ ಒಂದು ಮಹತ್ಕಾರ್ಯಕ್ಕೂ ಕೈ ಹಾಕಿದರು. ಈ ನಿಟ್ಟಿನಲ್ಲಿ ಈಗಾಗಲೇ ಅನೇಕ ಕಲಾವಿದರನ್ನು ಸನ್ಮಾನಿಸಿದರು. ಒಬ್ಬ ಕಲಾವಿದ ಇನ್ನೊಬ್ಬ ಕಲಾವಿದರನ್ನು ಗೌರವಿಸುವಂಥ ಹೆಮ್ಮೆ ನಿಜಕ್ಕೂ ಅಭಿನಂದನಾರ್ಹ. ಭದ್ರಾವತಿಯ ಪ್ರಮುಖ ನಾಟಕ ತಂಡಗಳಾದ 'ವಿಕಸಂ', ಶ್ರೀರಾಮ ಹಾಗೂ ನವೋದಯ ಕಲಾವಿದರನ್ನು ಒಗ್ಗೂಡಿಸಿ ಹುಟ್ಟುಹಾಕಿದ 'ಸಂಯುಕ್ತ' ಇಂಥ ಅನೇಕ ಸಾರ್ಥಕ ಕಾರ್ಯ ಮಾಡುತ್ತಿದೆ. ಈ ಕಾರ್ಯಗಳ ಹಿಂದಿನ ಚೇತನವೇ ಶ್ರೀ ಶಾಮಮೂರ್ತಿ ಪ್ರೇಕ್ಷಕ. ಸದಸ್ಯತ್ವ ಯೋಜನೆಯನ್ನು ಭದ್ರಾವತಿಯಲ್ಲಿ ಪ್ರಥಮ ಬಾರಿ ತಂದದ್ದೂ ಇವರೆ. ಈ ಯೋಜನೆಯಿಂದ ಪ್ರೇಕ್ಷಕ ಮತ್ತು ತಂಡಗಳ ನಡುವೆ ಬದ್ಧತೆಯನ್ನು ಹೆಚ್ಚಿಸಿದ್ದಂತೂ ಸತ್ಯ.

ಕೇವಲ ಈಗಿದ್ದವರೇ ತಂಡ ಕಟ್ಟುವ ಮತ್ತು ರಂಗದಲ್ಲಿ ಓಡಾಡುವದರಿಂದ ಭವಿಷ್ಯದಲ್ಲಿ ತಂಡಕ್ಕೆ ದೊಡ್ಡ ಸವಾಲು ಕಟ್ಟಿಟ್ಟ ಬುತ್ತಿ. ಹಾಗೆಂದು ಭಾವಿಸಿದ ಶಾಮಮೂರ್ತಿ ಮಕ್ಕಳ ರಂಗಭೂಮಿಗೂ ಕೈಹಾಕಿದರು. ಭವಿಷ್ಯದ ಕನಸುಗಳನ್ನು ಮಕ್ಕಳ ಕಣ್ಣುಗಳಲ್ಲಿ ಮಾತ್ರ ಕಾಣುವುದು ಸಾಧ್ಯ. ರಂಗಭೂಮಿ ನಿಂತ ನೀರಾಗಬಾರದು. ಅದಕ್ಕೆ ಹೊಸ ನೀರಿನ ಅಗತ್ಯವಿದೆ. ಅದರ ಸೇರ್ಪಡೆ ಅನಿವಾರ್ಯ. ಹಾಗಾಗಿ ಮಕ್ಕಳ ರಂಗಶಿಬಿರಗಳು, ನಾಟಕೋತ್ಸವಗಳು ಹೀಗೆ ಬಾಲಕರಿಗಾಗಿ ಹಾಕಿಕೊಂಡ ಯೋಜನೆಗಳು ಅನೇಕ. ಈ ಕಾರಣಕ್ಕಾಗಿ ಇಂದಿಗೂ ಭದ್ರಾವತಿಯಲ್ಲಿ ಹೊಸ ಪ್ರತಿಭೆಗಳು ಹೊರಬರುತ್ತಲೇ ಇವೆ. ಶಾಮ ಮೂರ್ತಿಯವರ ರಂಗಶ್ರದ್ಧೆ, ಶಿಸ್ತುಗಳು ಹಲವು ಪಾಲಕರನ್ನು ಆಕರ್ಷಿಸಿವೆ. ತಮ್ಮ ಮಕ್ಕಳನ್ನು ಹೆಮ್ಮೆಯಿಂದ ಅವರ ಬಳಿ ಕಳಿಸಿಕೊಡುತ್ತಾರೆ. ಈಗ ಶಾಮಮೂರ್ತಿಯವರಿಗೂ ಮಕ್ಕಳ ಶಿಬಿರ ನಡೆಸುವುದು ಕರ್ತವ್ಯದಂತೆ ಆಗಿದೆ. ಅದನ್ನು ಅವರು ನಗುತ್ತಲೇ ಸ್ವೀಕರಿಸಿದ್ದಾರೆ.

ಭದ್ರಾವತಿ ನಗರದಲ್ಲಿ ಆಬಾಲ ವೃದ್ಧರ ಗಮನವನ್ನು ನಾಟಕದ ಮೂಲಕ ಸೆಳೆದ ಶಾಮಮೂರ್ತಿ ತಾನಿರುವ ಕಡೆ ಅಂಥ ವಾತಾವರಣ ಸೃಷ್ಟಿಸಿಕೊಂಡದ್ದು ಸಣ್ಣ ಮಾತಲ್ಲ. ಇಂದು ಪ್ರತಿಯೊಬ್ಬ ರಂಗಕರ್ಮಿ ತಾನು ತನ್ನ ಸುತ್ತಲಿನ ಪರಿಸರಕ್ಕೆ ಮಾಡಿದ್ದೇನು ಎಂದು ಪ್ರಶ್ನಿಸಿಕೊಂಡರೆ ಆಗ ಇವರ ಕಾರ್ಯತತ್ಪರತೆಯ ಅರಿವಾಗುತ್ತದೆ.

ಒಂದು ಒಳ್ಳೆಯ ಕೆಲಸ ಮಾಡುವಾಗ ಹೊಗಳಿಕೆ ಮತ್ತು ತೆಗಳಿಕೆ ಎರಡೂ ಬರುವುದು ಅನಿವಾರ್ಯ. ಇವರೆಡನ್ನೂ ಸಮನಾಗಿ ಸ್ವೀಕರಿಸುವವನೇ ಮುಂದೆ ಈ ಕ್ಷೇತ್ರದಲ್ಲಿ ಬದುಕುತ್ತಾನೆ. ಅದಕ್ಕೆ ಶಾಮಮೂರ್ತಿ ಒಳ್ಳೆಯ ಉದಾಹರಣೆ. ತಮ್ಮ ೪೮ ವರ್ಷಗಳ ದೀರ್ಘ ರಂಗಜೀವನದಲ್ಲಿ ಇನ್ನೂ ಉತ್ಸಾಹ ಉಳಿಸಿಕೊಂಡಿರುವುದರ ಗುಟ್ಟು ಇದೇ ಅನ್ನುತ್ತಾರೆ ಶಾಮಮೂರ್ತಿ. ಆ ಕಾರಣದಿಂದಲೇ ಅನೇಕ ಕಲಾವಿದರಿಗೆ ಇವರನ್ನು ಕಂಡಾಗಲೆಲ್ಲ ಗುರುಭಕ್ತಿ ಉಕ್ಕುತ್ತದೆ. ಒಳ್ಳೆಯ ಕೆಲಸ ಮಾಡುವವರನ್ನು ಗುರುತಿಸುವ ಒಳ್ಳೆಯ ಜನರೂ ಸಮಾಜದಲ್ಲಿರುತ್ತಾರೆ. ಅಂಥವರು ನೀಡುವ ಮನ್ನಣೆ ಒಬ್ಬ ರಂಗಕರ್ಮಿಗೆ ಅಮೃತ ಕುಡಿದಷ್ಟು ಸಂತೋಷ. ಶಾಮಮೂರ್ತಿ ಈ ಕ್ಷೇತ್ರದಲ್ಲಿ ಚಿರಂಜೀವಿಯಾಗಲು ಇಂಥವರ ಪ್ರೋತ್ಸಾಹ, ಮನ್ನಣೆಯೇ ಕಾರಣ.

ಮೈಸೂರು ಕಾಗದ ಕಾರ್ಖಾನೆಯ ಆಡಳಿತ ವರ್ಗ ಇವರ ಎಲ್ಲ ರಂಗ ಚಟುವಟಿಕೆಗಳಿಗೆ ಪ್ರೋತ್ಸಾಹದ ತಂಪನ್ನೆರೆದಿದೆ. ಅವರ ಅವಿಸ್ಮರಣೀಯ ಸಹಕಾರ ಉತ್ತೇಜನಗಳನ್ನು ಕೃತಜ್ಞತೆಯಿಂದ

ನೆನೆಯುತ್ತಾರೆ. ಹೊರ ಜಿಲ್ಲೆಗಳ ಕಲಾವಿದರಂತೂ ಇವರನ್ನು ಗೌರವದಿಂದಲೇ ಕಾಣುತ್ತಾರೆ. ಅವರ ಸ್ನೇಹ ಇವರನ್ನು ಚಿರಯೌವನಕ್ಕೆ ತಂದಿದೆ ನಟನೆ, ನಿರ್ದೇಶನಕ್ಕೆ ಸಿಕ್ಕ ಪ್ರಶಸ್ತಿಗಳು ಅನೇಕ. ಶಿವಮೊಗ್ಗ ಜಿಲ್ಲೆಯ ಅನೇಕ ಕನ್ನಡ ಸಂಘಗಳು, ಇವರನ್ನು ಸ್ಮರಿಸಿವೆ. ೧೯೮೮ರಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ರಾಜ್ಯೋತ್ಸವ ಸನ್ಮಾನ ನೀಡಿದ್ದಾರೆ. ೧೯೯೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಇವರ ಒಟ್ಟಾರೆ ರಂಗಸೇವೆಗಾಗಿ ಪ್ರಶಸ್ತಿ ನೀಡಿ ಗೌರವಿಸಿದೆ.


ಒಬ್ಬ ರಂಗಕರ್ಮಿಗೆ ಬಹುಮಾನ ಪ್ರಶಸ್ತಿಗಳು ಸಿಗುವುದು ಸಾಮಾನ್ಯ. ಆದರೆ ಬಿರುದುಗಳು ದಕ್ಕುವುದು ಮತ್ತು ದಕ್ಕಿದ ಬಿರುದುಗಳನ್ನು ಸಾರ್ಥಕಗೊಳಿಸುವುದು ಅಪರೂಪ. ೧೯೭೭ರಲ್ಲಿಯೇ ತಿಪಟೂರು ಕಲಾ ಸಂಘದಿಂದ 'ಕಲಾಶ್ರೀ' ಎಂಬ ಬಿರುದು ದಕ್ಕಿತು. ಅನಂತರ ಅಜ್ಜಂಪುರ ಕಲಾ ತಂಡದಿಂದ 'ಕಲಾ ತಪಸ್ವಿ' ಎಂಬ ಬಿರುದು ದೊರೆಯಿತು. ಈ ಎರಡು ಬಿರುದುಗಳನ್ನು ಭಕ್ತಿಯಿಂದ ಸ್ವೀಕರಿಸಿದ ಶಾಮಮೂರ್ತಿಯವರು ಕೊಟ್ಟವರ ಗೌರವವನ್ನು ಹೆಚ್ಚಿಸಿದ್ದಾರೆ. ಇಂದಿಗೂ ಅವರು ತಮ್ಮ ಹೆಸರಿನ ಮುಂದೆ ಈ ಬಿರುದುಗಳನ್ನು ಕೃತಜ್ಞತೆಯಿಂದ ಜೋಡಿಸಿಕೊಳ್ಳುತ್ತಾರೆ.

ಒಬ್ಬ ಕಲಾವಿದ ಏನು ಮಾಡಿದ ಅನ್ನುವುದಕ್ಕಿಂತ ಹೇಗೆ ಬದುಕಿದ ಎಂಬುದೂ ಮುಖ್ಯ, ಅಂಥ ಬದುಕೆ ಕಲಾವಿದರನ್ನು ಜೀವಂತವಾಗಿಸುತ್ತದೆ, ಇಲ್ಲ ಕಣ್ಮರೆ ಮಾಡುತ್ತದೆ. ಎಲ್ಲ ಕಾಲಕ್ಕೂ ಸಲ್ಲುವ ಬದುಕನ್ನು ತೇಯ್ದವರು ಅಪರೂಪ. ಈ ಅಪರೂಪದಲ್ಲಿ ಅಪರೂಪ ಈ ಶಾಮಮೂರ್ತಿ. ಕಲಾವಿದರನ್ನು ಕಂಡರೆ ಗೌರವ, ವೃದ್ಧರನ್ನು ಕಂಡರೆ ಭಕ್ತಿ, ಯುವಕರನ್ನು ಕಂಡರೆ ಪ್ರೋತ್ಸಾಹ ಮಕ್ಕಳನ್ನು ಕಂಡರೆ ಮಮತೆ ನೀಡುವ ಶಾಮಮೂರ್ತಿ ಗೆಳೆಯರಲ್ಲಿ ಸದಾ ಹಸನ್ಮುಖಿ.

ಕಲೆ ಎಂಬುದೊಂದು ಸಮುದ್ರ. ಅದರಲ್ಲಿ ನಮ್ಮ ಬೊಗಸೆಗೆ ದಕ್ಕಿದಷ್ಟೇ ನಮ್ಮದು. ಹಾಗೆಂದುಕೊಂಡರೂ ಮತ್ತೆ ಅದು ಸೇರುವುದು ಸಮುದ್ರಕ್ಕೆ. ಯಾಕೆಂದರೆ ಬೊಗಸೆಯಲ್ಲಿ ನೀರು ನಿಲ್ಲುವುದಿಲ್ಲ.

ಹಾಗೆಯೇ ವಿನಯಶೀಲತೆ ಉಳಿಸಿಕೊಂಡಿರುವ ಅಪ್ಪಟ ಕಲಾವಿದ ಕಲಾಶ್ರೀ ಶಾಮಮೂರ್ತಿ.

# ಚಂದ್ರಕುಮಾರ ಸಿಂಗ



— ಹೂ.ಲಿ. ಶೇಖರ

ಹಲವರಿಗೆ ಕಲೆ ವಂಶಕ್ಕನುಗುಣವಾಗಿ ಬಂದಿರುತ್ತದೆ. ಇನ್ನೂ ಕೆಲವರನ್ನು ಅವರಿದ್ದ ಪರಿಸರ ಅವರನ್ನು ರೂಪಿಸುತ್ತದೆ. ಮತ್ತೆ ಕೆಲವರು ಆಸಕ್ತಿಯಿಂದ ಅವಕಾಶವನ್ನು ಸೃಷ್ಟಿಸಿಕೊಳ್ಳುತ್ತಾರೆ. ಬೆಂಗಳೂರಲ್ಲಿರುವ ರಂಗಪ್ರತಿಭೆಗಳು ಹೀಗೆ ಒಂದಿಲ್ಲೊಂದು ಕಾರಣದಿಂದ ತಮ್ಮನ್ನು ತಾವು ರಂಗಭೂಮಿಗೆ ಅರ್ಪಿಸಿಕೊಂಡಿವೆ. ಇತ್ತೀಚಿನ ದಿನಗಳಲ್ಲಿ ಹೀಗೆ ಕೇವಲ ರಂಗಭೂಮಿಗೆ ಅರ್ಪಿಸಿಕೊಂಡ ಕೆಲವೇ ಜನರಲ್ಲಿ ಚಂದ್ರಕುಮಾರ ಸಿಂಗ್ ಒಬ್ಬರು. ನಾಟಕದ 'ಚಂಕು' ಎಂದೇ ಪ್ರಸಿದ್ಧರಾದ ಇವರು ಬೆಳೆದಿದ್ದು ಸ್ವಆಸಕ್ತಿಯಿಂದ. ಇವರ ರಂಗಾಸಕ್ತಿ ನೋಡುವ ಕ್ರಿಯೆಯಿಂದ ಆರಂಭವಾಗಿ ನಟನೆ, ಬೆಳಕು, ಸಂಘಟನೆ ಹೀಗೆ ಹಲವು ಹರವುಗಳಲ್ಲಿ ಆಡಿದೆ.

ಐವತ್ತೊಂದು ವರ್ಷದ 'ಚಂಕು' ರಂಗಾಸಕ್ತಿಯನ್ನು ಮೂಡಿಸಿಕೊಂಡಿದ್ದು ಕಾಲೇಜು ದಿನಗಳಲ್ಲಿ. ಬೆಂಗಳೂರಿನ ರೇಣುಕಾಚಾರ್ಯ ಕಾಲೇಜು ಇವರಿಗೆ ಕೇವಲ ಪದವಿಯನ್ನು ಮಾತ್ರ ಕೊಡಲಿಲ್ಲ. ಜತೆಗೆ ಇವರ ವ್ಯಕ್ತಿತ್ವವನ್ನು ಪೋಷಿಸುವ ಹಾಗೂ ಅದಕ್ಕೊಂದು ರಂಗರೂಪ ನೀಡುವ ಭೂಮಿಕೆಯಾಯಿತು.

ಆಸಕ್ತಿ ಅನ್ನುವುದು ದೈವದತ್ತವಾದುದು. ಅದು ಎಲ್ಲರಲ್ಲೂ ಇರುತ್ತದೆ. ಆದರೆ ಅದನ್ನು ಹೊರಚಿಮ್ಮಿಸುವ ಶಕ್ತಿಯೊಂದು ಬೇಕು. ಅಂಥ ಸ್ಫೋಟಕ ಶಕ್ತಿಯಾಗಿ ಕಾಲೇಜಿನ ದಿನಗಳಲ್ಲಿ ದೊರೆತವರು ಎಂ.ಎಸ್. ನಾಗರಾಜರು. ಆ ಕಾಲದಲ್ಲಿ ಈ ನಾಗರಾಜರು ರಂಗಭೂಮಿಯಲ್ಲಿ ಕೆಲಸ ಮಾಡುವವರಿಗೆ ಸ್ಫೂರ್ತಿಯಾಗಿದ್ದರು. 'ಚಂಕು'ಗೆ ನಾಟಕದ ಗೀಳು ಹಿಡಿಸಿದವರೇ ಇವರು.

ಒಳಗೇ ದಹಿಸುತ್ತಿದ್ದ ಅಗ್ನಿಗೆ ನಿಧಾನವಾಗಿ ತುಪ್ಪ ಹಾಕುವ ಹಾಗೆ ಕಾಲೇಜಿನ ನಾಟಕಗಳು ಕಾರಣವಾದವು. ಅಂದಿನ ದಿನಗಳಲ್ಲಿ ಕಾಲೇಜು ನಾಟಕಗಳು ಅನೇಕರಿಗೆ 'ಗೀಳು' ಅಂಟಿಸಿದ್ದೇ ಅಲ್ಲಿ. ಮುಂದೆ ಅವರ ಅಭಿರುಚಿಯ ದಿಕ್ಕನ್ನೇ ಬದಲಾಯಿಸಿದವು. ಹಲವರ ಆಸಕ್ತಿಯ ದಿಕ್ಕಿಗೆ ಹೊಸ ನೋಟ ಕೊಟ್ಟದ್ದು ಆಗಿನ ಬೆಂಗಳೂರಿನ ರಂಗಭೂಮಿ. ಚಂದ್ರಕುಮಾರ ಸಿಂಗರಿಗೆ ಆಗ ದೊರಕಿದ್ದ ಎರಡು ಸಹಜ ಅನುಕೂಲಗಳು ಮುಂದೆ ಅವರು ರಂಗಭೂಮಿಯಲ್ಲಿ ಕಾಲೂರಲು ಕಾರಣವಾದವು.

ಒಂದು ಕಾಲೇಜು ರಂಗವಾತಾರಣ, ಇನ್ನೊಂದು ಬೆಂಗಳೂರು ರಂಗವಾತಾವರಣ. ಇವೇ ಅವರಿಗೆ ದೊರಕಿದ ಎರಡು ಮುಖ್ಯ ರಂಗಾನುಕೂಲಗಳು ಕಾಲೇಜು ದಿನಗಳಂತೂ ಆಗ ಹಲವರ ಆಸಕ್ತಿಯನ್ನೇ ಬದಲಿಸಿದವು.

ರಂಗಭೂಮಿಯನ್ನು ಬಿಟ್ಟರೆ ಉಳಿದ ಅಭಿರುಚಿಗಳಿಗೆ ಶಿಸ್ತು ಅನ್ನುವುದೇ ಇರುವುದಿಲ್ಲಾ ಎಂಬುದು ನಿರ್ವಿವಾದ. ನಾಟಕದ ಜತೆಗೆ ಬದುಕಿನ ಬಗೆಗಿರುವ ಕಾಳಜಿ ಹಾಗೂ ಶಿಸ್ತನ್ನು ಅದು ಕಲಿಸಿಕೊಡುತ್ತದೆ. ಕಾಲೇಜಿನಲ್ಲಿ ಎಂ.ಎಸ್.ನಾಗರಾಜರು 'ಚಂಕು' ಅವರಿಗೆ ಇಂಥ ಶಿಸ್ತಿನ ಸೂತ್ರವಾದರು.

ಇವರ ವಿದ್ಯಾರ್ಥಿಕಾಲದಲ್ಲಿ ಉಳ್ಳಾಲ ಪಾರಿತೋಷಕ ಬಹು ಖ್ಯಾತಿ ಪಡೆದಿತ್ತು. ಕೇವಲ ವಿದ್ಯಾರ್ಥಿಗಳಷ್ಟೇ ಅಲ್ಲ, ಅಧ್ಯಾಪಕರಲ್ಲೂ ರಂಗ ಜಾಗೃತಿಯನ್ನು ಮೂಡಿಸಿದ ಖ್ಯಾತಿ ಈ ಪಾರಿತೋಷಕದ್ದು. ಅಂತಲೇ ಆ ಸಂದರ್ಭದಲ್ಲಿ ಈ ಸ್ಪರ್ಧೆಯ ಹೊರತಾಗಿ ಇವರ ಕಾಲೇಜುಗಳಲ್ಲೂ ಅಂಥ ನಾಟಕ ಸ್ಪರ್ಧೆಗಳು ನಡೆಯುತ್ತಿದ್ದವು. ಪಾತ್ರ ಮಾಡುವ ಮೂಲಕ, ನಾಟಕ ಸಂಘಟನೆಯ ಮೂಲಕ ಹಾಗೂ ನಾಟಕ ಕುರಿತು ಮಾತಾಡುವ ಮೂಲಕ ವಿದ್ಯಾರ್ಥಿಗಳು ಒಟ್ಟಾರೆ ರಂಗ ವಾತಾವರಣ ಸೃಷ್ಟಿಸುತ್ತಿದ್ದರು. ಇಂಥ ವಾತಾವರಣ ಚಂದ್ರಕುಮಾರ ಸಿಂಗ್‌ಗೆ ಹಲವು ರೀತಿಯಲ್ಲಿ ಟಾನಿಕ್ಕು ನೀಡಿತು. ಒಂದು ನಾಟಕದ ಸಾಲುಗಳು ಒಬ್ಬ ಆಸಕ್ತನ ಆಲೋಚನೆಯ ದಿಕ್ಕನ್ನೇ ಬದಲಿಸಬಲ್ಲವು. ಪ್ರತಿನಿತ್ಯ ಅಂಥ ಸಾಲುಗಳನ್ನು ಕೇಳುತ್ತಿದ್ದು 'ಚಂಕು' ಆ ನಂತರ ರಂಗಕ್ಕೇ ಒಗ್ಗಿಕೊಂಡದ್ದು ಸಹಜವೇ ಆಗಿತ್ತು. ಮೊದ ಮೊದಲು ಕಿಟಕಿಯ ಆಚೆ ನಿಂತು ನಾಟಕದ ತಾಲೀಮು ನೋಡುತ್ತಿದ್ದ ಇವರನ್ನು ನಾಟಕದ ಮಾತುಗಳು ಕಿವಿ ಹಿಡಿದು ಕೋಣೆಯೊಳಗೆ ಎಳೆತಂದವು. ನಾಟಕದ ಸೆಳೆತವೇ ಅಂಥದ್ದು. ಅಂದಿನ ಆ ಎಳೆತ ಇಂದಿಗೂ ಇವರನ್ನು ಸೆಳೆಯುತ್ತಲೇ ಇದೆ.

ಕಾಲೇಜು ಹರೆಯದ ದಿನಗಳಲ್ಲಿ ಬಿ.ವಿ. ಕಾರಂತ ಹಾಗೂ ಶ್ರೀರಂಗರು ನಡೆಸಿದ ರಂಗಶಿಬಿರಗಳಲ್ಲಿ 'ಚಂಕು' ಭಾಗಿಯಾದರು. ಆಗಲೇ ಇವರ ಆಸಕ್ತಿಗೆ ಮೊನಚು ಸಿಕ್ಕಿದ್ದು. ಮುಂದೆ ತಮ್ಮನ್ನು ಇಡಿಯಾಗಿ ರಂಗಭೂಮಿಗೆ ತೆರೆದುಕೊಂಡುಬಿಟ್ಟರು. ಒಬ್ಬ ಪ್ರಯೋಗಶೀಲ ಹಾಗೂ ಬರಬಹುದಾದ ಎಲ್ಲಾ ಮಿತಿಗಳ ಬಾಗಿಲೂ ಅವರಿಗೆ ಆಗ ದಕ್ಕಿದವು.

*'ನಾಟಕಕಾರನ ಶೋಧನೆಯಲ್ಲಿ'* ಹಾಗೂ *'ಸಾಮಾನ್ಯನು ಸಾಹೇಬನಾದದ್ದು'* ನಾಟಕಗಳಲ್ಲಿ ಪಾತ್ರ ವಹಿಸಿದ ನಂತರ ತಾನೊಬ್ಬ ನಟನೂ ಹೌದು ಎಂಬ ಆತ್ಮವಿಶ್ವಾಸ ಮೂಡಿತು. ಅದರ ಜತೆಗೆ ತನಗಿರುವ ಇತಿ ಮಿತಿಗಳ ಅರಿವೂ ಆಯಿತು. ಚಂದ್ರಕುಮಾರ ಸಿಂಗ ಒಬ್ಬ 'ರಂಗಭೂಮಿಯ ವ್ಯಕ್ತಿ' ಎಂದು ಎಲ್ಲರೂ ಒಪ್ಪಿಕೊಂಡದ್ದು ೧೯೭೦ರಲ್ಲಿ. ಆ ವರ್ಷ ಎಗ್ಗಿಲ್ಲದೆ ದೊರಕಿದ ರಂಗ ಕೆಲಸಗಳು. ರವೀಂದ್ರ ಕಲಾಕ್ಷೇತ್ರದ ಬಯಲು ರಂಗಮಂದಿರದಲ್ಲಿ ಒಂದು ನಾಟಕೋತ್ಸವ. *'ಸಂಕ್ರಾಂತಿ'*, *'ಜೋಕುಮಾರಸ್ವಾಮಿ'* ನಾಟಕಗಳಲ್ಲಿ ಅಭಿನಯಿಸುವುದರ ಜತೆಗೆ ರಂಗಸಜ್ಜಿಕೆ, ಬೆಳಕು, ನಿರ್ವಹಣೆ ಬಗ್ಗೆ ಕಾಳಜಿ ಹುಟ್ಟಿ ಆ ವಿಭಾಗದಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡಿದರು. ತನ್ನೆಲ್ಲ ಪ್ರತಿಭೆಯನ್ನು ಅರೆದು ಹಾಕುವ ಸವಾಲು ಅದಾಗಿತ್ತು. ಅವರ ರಂಗಯತ್ನಗಳಿಗೆಲ್ಲ ಯಶ ದೊರೆತಾಗಲೇ ಅವರು ನಾಲ್ಕು ಜನರ ಬಾಯಲ್ಲಿದ್ದರು.

ಇತ್ತೀಚೆಗಷ್ಟೇ ಅಲ್ಲ, ಹಿಂದೆಯೂ ಹಾಗೆಯೇ ಇತ್ತು. ರಂಗಭೂಮಿಗೆ ಬರುವವರೆಲ್ಲರ ಕಣ್ಣು ನಟನೆಯಲ್ಲಿ ಮಾತ್ರ ಇತ್ತು. ಯಾಕೆಂದರೆ ಅಂಥ ಯಾವ ಶ್ರಮವಿಲ್ಲದೆ ಕೇವಲ

ನಟನೆಯೊಂದನ್ನೇ ಕರಗತ ಮಾಡಿಕೊಂಡರೆ ಸಾಕು ರಂಗದಲ್ಲಿ ಮಿಂಚಿಬಿಡುವ ಸಲೀಸು ದಾರಿ. ಹಾಗಾಗಿ ಇಲ್ಲಿಗೆ ಬರುವ ಬಹಳಷ್ಟು ಜನರಿಗೆ ಈ ಒಳದಾರಿಯ ಬಗೆಗೇ ಯೋಜನೆಗಳು ಆದರೆ ನಿಜಕ್ಕೂ ರಂಗಭೂಮಿಗೆ ಜೀವದಾನ ಕೊಡಬಲ್ಲ ರಂಗ ಸಂಘಟನೆಯತ್ತ ಬಹುತೇಕ ಜನರಿಗೆ ಆಸಕ್ತಿ ಕಡಿಮೆ. ಅದಕ್ಕೆ ಕಾರಣವೂ ಇದೆ. ಒಬ್ಬ ನಾಟಕಕಾರರನ್ನು ಒಬ್ಬ ನಿರ್ದೇಶಕನನ್ನು ಅಥವ ನಟನನ್ನು ಗುರುತಿಸುವ ಹಾಗೆ ಇಲ್ಲಿ ಒಬ್ಬ ರಂಗ ಸಂಘಟನನ್ನು ಗುರುತಿಸುವ ಜಾಯಮಾನ ನಮ್ಮಲ್ಲಿ ಇಂದಿಗೂ ಇಲ್ಲ, ಇದರಿಂದ ಅನೇಕರು ರಂಗಸೇವೆ ಮಾಡುವುದೆಂದರೆ ರಂಗದಲ್ಲಿ ಮಿಂಚುವುದಕ್ಕೇ ಎಂದುಕೊಂಡಿದ್ದಾರೆ.

ಆದರೆ ಈ ಮಿಂಚುವ ಪ್ರಸಂಗಕ್ಕೆ ಕಂಬ ಹೊರಬೇಕಾದವರು ಸಂಘಟಕ ಹಾಗೂ ಇತರೆ ರಂಗಕರ್ಮಿಗಳು. ಈ ವಿಭಾಗದಲ್ಲಿ ಆಸಕ್ತಿ ಮೂಡಿಸಿಕೊಳ್ಳುವವರು ವಿರಳ. ಆದರೆ ಚಂದ್ರಕುಮಾರ ಸಿಂಗ ತಾನೊಬ್ಬ ನಟನಾಗಿದ್ದರೂ ಕೂಡ ನೇಪಥ್ಯದಲ್ಲಿ ಕೆಲಸ ಮಾಡುವ ಆಸಕ್ತಿ ಕೆರಳಿಸಿಕೊಂಡದ್ದು ಒಟ್ಟಾರೆ ರಂಗಭೂಮಿಗೆ ಅನುಕೂಲವೇ ಆಯಿತು.

ಒಂದು ಬೇರು ನೆಲದಾಳಕ್ಕೆ ಇಳಿಯುತ್ತಿದ್ದಂತೆ ಆನೇಕ ಕಣ್ಣುಗಳನ್ನು ಮೂಡಿಸಿಕೊಳ್ಳುತ್ತದೆ. ಹಾಗೆ ಈ ಸಿಂಗ್ ನೇಪಥ್ಯದ ಕಣ್ಣು ಮೂಡಿಸಿಕೊಂಡು ಅದರಲ್ಲೇ ಮುಂದುವರಿಯಲು ನಿಶ್ಚಯಿಸಿದರು. ಅಭಿನಯದ ಜತೆಗೆ ಬೆಳಕು ಸಂಲಗ್ನಗೊಳ್ಳುವ ಮೋಜನ್ನು ಕಂಡುಕೊಂಡ ಚಂದ್ರು ವಿನ್ಯಾಸದಲ್ಲಿ ಆಸಕ್ತಿ ತಳೆದರು. ಹಾಗಾಗಿ ಬೆಳಕು ವಿನ್ಯಾಸದಲ್ಲಿ ಕೆಲಸ ಮಾಡುವ ಸೃಜನತೆ ಆವರಿಸಿತು. ಬೆಳಕು ಒಂದು ಸವಾಲಾಗುವ ಹಾಗೂ ಸ್ವಪ್ನವನ್ನು ಕಣ್ಣೆದುರೇ ಕಟ್ಟುವ ಕ್ರಿಯೆಯಾದ್ದರಿಂದ 'ಸಿಂಗ್' ಆ ಕ್ಷೇತ್ರಕ್ಕೆ ಬೆರಳಾಡಿಸಿದ್ದು ಸಹಜವಾಗೇ ಇತ್ತು.

ಈ ಕ್ಷೇತ್ರದಲ್ಲಿ ಆಸಕ್ತಿ ಅರಳುವ ಸಂದರ್ಭದಲ್ಲೇ ಗಿರೀಶ್ ಕಾರ್ನಾಡ್, ಬಿ.ವಿ.ಕಾರಂತ, ಡಾ. ಕಂಬಾರ, ರಾಮಮೂರ್ತಿಯಂಥವರ ಪರಿಚಯವಾಯಿತು. ಪ್ರೊ|| ಬಿ.ಸಿ. ಅಕಾಲದ ರಂಗದ್ರೋಣರಾಗಿದ್ದರು. 'ಚಂಕು'ಗೆ ಅವರಲ್ಲಿಯೂ ಸಾಕಷ್ಟು ಕಲಿಯುವ ಆಸಕ್ತಿಯಾಯಿತು. ಕಲಿತರೂ ಕೂಡ. ಇದರಿಂದ ಇವರ ಅಭಿರುಚಿಯ ವಿಸ್ತಾರ ಹರಡುತ್ತಲೇ ಹೋಯಿತು.

ಶ್ರೀರಂಗರ ನೇತೃತ್ವದಲ್ಲಿ ಆಗ 'ಶಕಶೈಲೂಷರು' ಎಂಬ ತಂಡ ಹುಟ್ಟಿಕೊಂಡಿತು. ನಾಗಾಭರಣ, ಲೋಕೇಶ, ಸೂರಿ, ಮೋಹನರು, ಮೇಕಪ್ ರಾಮಕೃಷ್ಣರು ಅದರಲ್ಲಿದ್ದರು. ಅಲ್ಲಿಯ ಬಹುತೇಕ ನಾಟಕಗಳಲ್ಲಿ ಸಿಂಗರು ನೇಪಥ್ಯಗಾರರಾಗಿ ದುಡಿದರು. ನೇಪಥ್ಯದ ಹಲವು ಸವಾಲುಗಳು, ಎದುರಾದುವು. ಅವುಗಳನ್ನು ಎದುರಿಸುವ ದಾರ್ಷ್ಟ್ಯವೂ ಮೈಗೂಡಿತು. ಅದರಿಂದ ಒಬ್ಬ ಅಪ್ಪಟ ರಂಗನೇಪಥ್ಯಗಾರ ಹೇಗಿರಬೇಕು ಎಂಬ ಸಾಲುಗಳು ಅಲ್ಲಿ ರಿಂಗಣವಾದವು 'ಚಂಕು' ಆಗ ಪಾದರಸವಾದರು.

ನಾಟಕದಲ್ಲಿ ಒಬ್ಬ ನಟ ತನ್ನ ಪಾತ್ರಕ್ಕೆ ಮಾತ್ರ ಸೀಮಿತವಾಗಿರುತ್ತಾನೆ. ಆದರೆ ನೇಪಥ್ಯಗಾರ ಒಟ್ಟಾರೆ ನಾಟಕದ ಹಂಗಿನಲ್ಲಿರುತ್ತಾನೆ ಎಂಬ ಸತ್ಯದ ಅರಿವು ಆಯಿತು. ಹಾಗೆಂದೇ ಸೈಕಲ್

ತುಳಿಯುವ ಸಾಹಸಕ್ಕೆ ಕೈಹಾಕಿದರು. ಮತ್ತು ಅದೇ ಅವರಿಗೆ ಪ್ರಿಯವಾಯಿತು. ಅಂದಿನ ಸಂದರ್ಭದಲ್ಲಿ 'ಚಂಕು' ಬಹಳಷ್ಟು ಜನರಿಗೆ ಅನಿವಾರ್ಯವಾದರು.

ಅದೇ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಿದ್ದ ಇಂಗ್ಲೆಂಡಿನ ಶೇಕ್ಸ್‌ಪಿಯರ ತಂಡ ಇವರಿಗೆ ಹೊಸ ಅನುಭವ ತಂದುಕೊಟ್ಟಿತು. ಆ ತಂಡಕ್ಕೆ ನೇಪಥ್ಯ ಕೆಲಸ ಮಾಡಿಕೊಟ್ಟಿದ್ದು ಇವರಿಗಾದ ವಿಶಿಷ್ಟ ಅನುಭವ. ಆ ವಿದೇಶ ತಂಡದ ಶಿಸ್ತು, ಏಕಾಗ್ರತೆ ಇವರನ್ನು ಹೆಚ್ಚು ಆಕರ್ಷಿಸಿತು.

ಅನಂತರ ಇವರಿಗೆ ಸಂಭ್ರಮ ತಂದುಕೊಟ್ಟ ನಾಟಕ *ಹಯವದನ*. ಈ ಸಂದರ್ಭದಲ್ಲಿ 'ಚಂಕು'ಗೆ ಹಲವಾರು ಹೊಸ ಆಯಾಮಗಳ ಪರಿಚಯವಾಯಿತು. ಬಿ.ವಿ. ಕಾರಂತರ ನಿರ್ದೇಶನದ ಈ ನಾಟಕದಲ್ಲಿ ಹಲವಾರು ಪ್ರತಿಭಾವಂತರು ಸಂಗಮವಾಗಿದ್ದರು. ನಾಗಾಭರಣ, ಸುಂದರರಾಜ್, ರಮೇಶಭಟ್, ವೈಶಾಲಿ ಕಾಸರವಳ್ಳಿ ಮುಂತಾದವರು ನಟಿಸಿದ್ದ ಈ ನಾಟಕದ ನೇಪಥ್ಯದಲ್ಲಿ ಕೆಲಸ ಮಾಡುವುದು 'ಚಂಕು' ಗೆ ತುಂಬ ತೃಪ್ತಿತಂದಿತ್ತು. ಈ ನಾಟಕದ ಯಶಸ್ಸಿನ ಬಗ್ಗೆ ಹೇಳುವಾಗ 'ಚಂಕು' ಅವರ ಕಣ್ಣು ಅರಳುತ್ತವೆ.

ಈ ನಾಟಕ ಪ್ರೇಕ್ಷಕರನ್ನು ಅದೆಷ್ಟು ಸೆಳೆದಿತ್ತೆಂದರೆ ಪ್ರವೇಶ ಟಿಕೆಟ್‌ಗಾಗಿ ಕಲಾಕ್ಷೇತ್ರದಿಂದ ಜೆ.ಸಿ. ರಸ್ತೆಯ ತನಕ ಸಾಲುಗಟ್ಟಿ ನಿಂತಿದ್ದರು. ರಂಗಭೂಮಿಯ ಇತಿಹಾಸದಲ್ಲಿ ಇದು ಚರಿತ್ರಾರ್ಹ ಘಟನೆ. ಮುಂದೆ ಇಂಥ ದಿನಗಳು ಬಂದಾವೋ ಬಾರದವೋ.. ಎಂಬ ಅನುಮಾನ 'ಚಂಕು'ಗೆ.

ಈ ಹೊತ್ತಿಗಾಗಲೇ ಚಂದ್ರಕುಮಾರಸಿಂಗ ರಂಗಸಂಘಟರಾಗಿ ಬೆಳಕು ವಿನ್ಯಾಸಕಾರರಾಗಿ ವಿಶೇಷವಾಗಿ ಗುರುತಿಸಲ್ಪಟ್ಟಿದ್ದರು. ಸಂಘಟನೆ ಬಿಸಿ ಇವರ ಮೈಯನ್ನಾವರಿಸಿತ್ತು. ಹಾಗೆಯೇ ಕಲಾಕ್ಷೇತ್ರದ ಮೆಟ್ಟಿಲು ಹಲವರಿಗಾದಂತೆ ರಂಗಭೂಮಿಯ ಧ್ಯಾನಕ್ಕೆ ಕೃಷ್ಣಾರ್ಜಿನವಾಯಿತು. ಅದರಿಂದ ಹಲವಾರು ತಂಡಗಳೊಡನೆ ಬೆರೆಯುವುದು ಸಹಜವಾಯಿತು.

ಕಲಾಕ್ಷೇತ್ರ ರಂಗಭೂಮಿಯ ಹಲವು ಆಯಾಮಗಳಿಗೆ ಕಾರಣವಾದ ಸ್ಥಳ. ಎಪ್ಪತ್ತರ ದಶಕದ ರಂಗಭೂಮಿಯ ಉತ್ತುಂಗಕ್ಕೆ ಅದು ಹೇಗೆ ಕಾರಣವಾಯಿತೋ ಹಾಗೆಯೇ ರಂಗಭೂಮಿ ಚಳುವಳಿಗೆ ಪ್ರೇರಕ ಶಕ್ತಿಸ್ಥಳವೂ ಆಯಿತು. ಇಂಥ ಸಂದರ್ಭದಲ್ಲಿ ಅವಘಡವೊಂದು ನಡೆಯಿತು. ಹಲವು ರಂಗತಂಡಗಳು, ನಿರ್ದೇಶಕರು, ನಾಟಕಕಾರರು, ನೇಪಥ್ಯಗಾರರು ನಾಟಕವನ್ನೆ ತಲೆಗೇರಿಸಿಕೊಂಡು ಓಡಾಡುತ್ತಿದ್ದ ಸಂದರ್ಭದಲ್ಲಿ ಎಲ್ಲರೂ ಒಂದು ಕ್ಷಣ ಬೆಚ್ಚುವಂಥ ಪ್ರಸಂಗ.

ಅದೆಂದರೆ ಬಿಟ್ಟುಬಿಡದೆ ರಂಗ ಚಟುವಟಿಕೆಗಳೇ ನಡೆಯುತ್ತಿದ್ದ ಕಲಾಕ್ಷೇತ್ರದಲ್ಲಿ ಸಿನಿಮಾ ಪ್ರೊಜೆಕ್ಟರೊಂದನ್ನು ಹಾಕಲು ಸರಕಾರ ಯೋಚಿಸಿತು. ಮೊದಲೇ ಸಿನಿಮಾ ಕನ್ನಡ ರಂಗಭೂಮಿಗೆ ನಿಧಾನ ವಿಷಪ್ರಾಶನದಂತೆ ಕಾಡುತ್ತಿರುವಾಗ ಸರಕಾರ ನೇರವಾಗಿ ಬೆಂಗಳೂರಿನ ರಂಗ ಹೃದಯಕ್ಕೆ ಅದನ್ನು ಇಳಿಸಲು ಯೋಚಿಸಿದ್ದು ರಂಗಕರ್ಮಿಗಳನ್ನು ಕೆರಳಿಸಿತು. ಕೆಲವರಂತೂ ಪಟ್ಟ ಆತಂಕ ಅಷ್ಟಿಷ್ಟಲ್ಲ. ಚಂದ್ರಕುಮಾರರಂಥ ಯುವಕರಿಗೆ ತಾಳಲಾರದಷ್ಟು ಆಕ್ರೋಶ ಉಂಟುಮಾಡಿತು. 'ಚಂಕು' ಆಗ ರಂಗಾಸಕ್ತರನ್ನು ಒಗ್ಗೂಡಿಸಲು ಅಥವಾ ಹಿರಿಯರ ಸೂಚನೆಯೊಂದಿಗೆ ಸೈಕಲ್ಲು ಹೊಡೆದಿದ್ದೇ ಹೊಡಿದಿದ್ದು. ರಂಗಕರ್ಮಿಗಳಿಗೂ ಒಂದು ಆತ್ಮ ಎದೆ. ಅದಕ್ಕೆ ನೋವಾದರೆ ಅವರು

ಸುಮ್ಮನಿರುವುದಿಲ್ಲ ಎಂದು ಆಗ ತೋರಿಸಿ, ಮುಂದೆ ರಂಗ ಚಳುವಳಿ ಬೆಳೆಯಲು ಪ್ರೇರಣೆಯಾಯಿತು. ಈ ಪ್ರೇರಣೆಯ ಹಿಂದೆ 'ಚಂಕು' ಅವರ ಕಾರ್ಯಶೀಲತೆ ಇತ್ತು ಎಂಬುದನ್ನು ಮರೆಯುವಂತಿಲ್ಲ.

ಬಹುಶ ನಾಟಕದ ಜತೆ ಚಂದ್ರಕುಮಾರ ಸಿಂಗ್ ಪ್ರತಿಭಟನೆಯನ್ನು ಕಲಿತಿದ್ದು ಆಗಲೇ. ಈ ಸಾತ್ವಿಕ ಹೋರಾಟ ಸರಕಾರದ ನಿರ್ಧಾರವನ್ನು ಬದಲಿಸಿತು. ಆದ್ದರಿಂದ ಒಂದು ಬಹುದೊಡ್ಡ ಸಾಂಸ್ಕೃತಿಕ ಆಘಾತದಿಂದ ಕಲಾಕ್ಷೇತ್ರ ಪಾರಾಯಿತು. ಅದರ ಫಲ ಇಂದಿಗೂ ತಟ್ಟಿದೆ. ಇದರಿಂದ ನಾಟಕ ಕಲಾವಿದರಿಗೆ ಇರುವ ಅವ್ಯಕ್ತ ಶಕ್ತಿಯ ಅರಿವಾಗಿ ಸಿಂಗರು ಮತ್ತಷ್ಟು ರಂಗಸೆಳೆತಕ್ಕೆ ಒಳಗಾದರು. ಈ ಸೆಳೆತ ಮತ್ತು ಪ್ರತಿಭಟನೆಯ ಗುಣ ಸೇರಿಕೊಂಡಿದ್ದರಿಂದಲೇ ಮುಂದೆ ಸಿಂಗರು ಬೀದಿನಾಟಕಗಳಂಥ ಮಾಧ್ಯಮದತ್ತ ವಾಲಿದರು. ಬೀದಿನಾಟಕ ಹೋರಾಟ ಮತ್ತು ಪ್ರತಿಭಟನೆಗಳನ್ನು ಮೈಗೂಡಿಸಿಕೊಂಡ ರಂಗ ಮಾಧ್ಯಮ. ಈ ಗುಣಗಳಿಲ್ಲದಿದ್ದರೆ ರಂಗಭೂಮಿ ಕೇವಲ ರಂಜನೆ ಮತ್ತು ನೀತಿ ಹೇಳುವ 'ಸಂತ ರಂಗಭೂಮಿ' ಎಂದು ನಂಬಿದವರಲ್ಲಿ ಚಂದ್ರಕುಮಾರ ಸಿಂಗರೂ ಒಬ್ಬರು.

ಹೋರಾಟ ರಂಗಕರ್ಮಿಗಳಿಗೆ ಒಂದು ಪ್ರಬಲ ಅಸ್ತ್ರ ಎಂಬುದು ಅರಿವಾದೊಡನೆ ಸಿಂಗರ ರಂಗಶೈಲಿಯೇ ಬದಲಾಯಿತು. ಬೀದಿ ನಾಟಕವನ್ನು ಒಪ್ಪಿಕೊಂಡ ಅವರು ಆ ಕ್ಷೇತ್ರದಲ್ಲಿ ಮನಮುಟ್ಟಿ ದುಡಿಯಲು ನಿರ್ಧರಿಸಿದರು. 'ಬಿಂಬ' ತಂಡದ ಮೂಲಕ ಬೀದಿನಾಟಕಗಳ ರಚನಾ ಸ್ಪರ್ಧೆ ಏರ್ಪಡಿಸಿ ಹೊಸ ನಾಟಕಗಳು ಹುಟ್ಟಲು ಕಾರಣರಾದರು. ಆ ಸಂದರ್ಭದಲ್ಲಿ ಅನೇಕ ಹೊಸಬರು ಬೀದಿ ನಾಟಕ ಬರೆಯಲು ಉತ್ಸುಕರಾದರು. ನಾಟಕಗಳ ಪೋಸ್ಟರ್ ವಿನ್ಯಾಸದಂಥ ಸೃಜನಶೀಲ ಕ್ರಿಯೆಗೆ ಒತ್ತಾಸೆ ನೀಡಿದರು. ಅದರಿಂದ ಅನೇಕ ಕಲಾಕಾರರು ನಾಟಕದತ್ತ ನೋಡುವ ಪರಿಪಾಠಕ್ಕೆ ಒಳಗಾದರು. ಬೀದಿನಾಟಕ ಪರಂಪರೆಯಲ್ಲಿ ಸಿಂಗರ ಹೆಸರು ಮರೆಯಲಾರದ್ದು. ಆಗ ಬೆಂಗಳೂರಿನ ವಿವಿಧ ಬಡಾವಣೆಯಲ್ಲಿ ಬೀದಿ ನಾಟಕಗಳ ಸ್ಪರ್ಧೆಯನ್ನು ಸಂಘಟಿಸಿದ ಪ್ರಮುಖರಲ್ಲಿ ಸಿಂಗರೂ ಒಬ್ಬರು. ಕರ್ನಾಟಕದ ಇತರ ಭಾಗಗಳಲ್ಲೂ ಬೀದಿ ನಾಟಕ ಕೊಂಡೊಯ್ದಿದ್ದಾರೆ. ಆ ಸಮಯದಲ್ಲಿ ಬೀದಿ ನಾಟಕದ ಸಿಂಗರೆಂದೇ ಪ್ರಸಿದ್ಧರಾದರು.


ಮೊದಲೇ ಹೇಳಿದ ಹಾಗೆ ಬೆಳಕು ವಿನ್ಯಾಸ ಈ ಕ್ಷೇತ್ರದಲ್ಲಿ ಸಿಂಗರ ವಿಶೇಷ ಆಸಕ್ತಿ. ಹಾಗಾಗಿ ಇವರು ತಂಡಗಳ ನಾಟಕಗಳಲ್ಲಿ ಬೆಳಕಿನ ಜಾಣಾಕ್ಷತೆ ಮೆರೆದರು. ಅದಲ್ಲದೆ ಬೇಲೂರು, ಹಳೇಬೀಡು, ಪಟ್ಟದಕಲ್ಲು, ಸೋಮನಾಥಪುರ ಮುಂತಾದ ಕಡೆ ನಡೆದ ರಾಷ್ಟ್ರೀಯ ಉತ್ಸವಗಳಲ್ಲಿ ರಂಗ ತಜ್ಞರಾಗಿ ಕಾರ್ಯನಿರ್ವಹಣೆ. ಸಾರ್ಕ್ ಸಮ್ಮೇಳನದ ಸಂದರ್ಭದಲ್ಲಿ ಹಾಗೂ ರಷ್ಯಾ ಉತ್ಸವ ಸಂದರ್ಭದಲ್ಲಿ ಅಲ್ಲಿಂದ ಬಂದ ತಂಡಗಳಿಗೆ ಪ್ರದರ್ಶನ ಸಹಾಯಕರಾಗಿ ತಮ್ಮ ಸಂಘಟನೆಯ ಚತುರತೆ ತೋರಿದರು. ಬೆಂಗಳೂರಿಗೆ ಬರುವ ರಾಷ್ಟ್ರೀಯ ನಾಟಕ ಶಾಲೆ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ತಂಡಗಳು ಮುಂತಾದ ಹೊರಗಿನ ತಂಡಗಳು 'ಚಂಕು'ರನ್ನು ಕೇಳಿ ನೆರವು ಪಡೆಯದೆ ಇರುತ್ತಿರಲಿಲ್ಲ.

ಸಿಂಗರ ಪ್ರತಿಭೆಯ ಮುಖ ಹಲವಾರು 'ಕಿನ್ನರ' ಎಂಬ ತಂಡ ಹುಟ್ಟು ಹಾಕಿ ಮೂಕಾಭಿನಯ ಶಿಬಿರ ಆರಂಭವಾಗಲೂ ನೆರವಾದರು. ಮೂಕಾಭಿನಯ ನಟರಿಗೆ ಬಹುದೊಡ್ಡ ಸವಾಲು. ಇಂಥ ನೂರಾರು ಮೂಕಾಭಿನಯ ಶಿಬಿರಗಳನ್ನು ಇವರು ಸಂಘಟಿಸಿ ನೂರಾರು ನಟರನ್ನು ರಂಗಕ್ಕೆ ಪರಿಚಯಿಸಿದರು.

ಬೆಂಗಳೂರಲ್ಲಿ ಆಗ ಹೆಚ್ಚು ಕ್ರಿಯಾಶೀಲ ಹಾಗೂ ರಂಗಭೂಮಿಗೆ ಹೊಸ ಆಯಾಮ ನೀಡಿದ ರಂಗ ತಂಡಗಳ ಪದಾಧಿಕಾರಿಗಳಾಗಿ ದುಡಿದ ಸಿಂಗ್ ನಾಟ್ಯ ಸಂಘ ಥಿಯೇಟರ್ ಸೆಂಟರ್‌ನ ಸಹಕಾರ್ಯದರ್ಶಿ, 'ಶತಶೈಲೂಷರು' ತಂಡದ ಕಾರ್ಯದರ್ಶಿ, ಬೆನಕ ತಂಡದ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿದ್ದರು. ಸಂಘಟನೆ ಒಂದು ಪರಿಣಾಮ ಕೊಡುತ್ತದೆ ಎಂಬ ಭರವಸೆಯನ್ನು ಸದಾ ಇಟ್ಟುಕೊಂಡವರು. ಹಾಗಾಗಿ ಮುಂದೆ ಹುಟ್ಟಿದ ರಂಗಭೂಮಿ ಕ್ರಿಯಾ ಸಮಿತಿಯ ಹಾಗೂ ಗೋಕಾಕ ಚಳುವಳಿಯ ಪ್ರಮುಖ ಸಂಘಟಕರಾದರು ಸಿಂಗ್. ಈ ಹೋರಾಟಗಾರ ರಂಗಕರ್ಮಿಗಳಿಗೆ ಕೊಡುವ ಶಕ್ತಿ ಅಪಾರ. ಜತೆಗೆ ಸಾಮರಸ್ಯ ಮೂಡಿಸುವ, ಪರಸ್ಪರ ಅರಿಯುವ ಗುಣ ಈ ಹೋರಾಟ ಹೀಗೆ ಇವೆ ಅನ್ನುತ್ತಾರೆ ಚಂದ್ರು.

೧೯೮೭ - ೯೦ ಅವಧಿಯಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ.

೧೯೯೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೆ ಹಲವಾರು ಇತರ ಗೌರವಗಳನ್ನು ಪಡೆದ ಸಿಂಗ್ ನಮ್ಮ ನಡುವಿನ ಬಹುಪ್ರತಿಭೆಯ ಅಪರೂಪದ ರಂಗಸಂಘಟಕ. ಇವರ ಮಾರ್ಗದರ್ಶನ ಪಡೆದ ಇತ್ತೀಚಿನ ಹುಡುಗರು ರಂಗಸಂಘಟನೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಸಿಂಗ್‌ರ ಅನುಭವ ಮುಂದಿನವರಿಗೆ ದಾರಿಬುತ್ತಿಯಾಗಲಿ.



# ಮೈಸೂರು ವಾಸು

— ಡಾ|| ಹೆಚ್.ಎ. ಪಾರ್ಶ್ವನಾಥ್

ನಾಟಕವೆಂಬುದು ಸಂಕೀರ್ಣ ಕಲೆ ಹಾಗೂ ಸಾಮೂಹಿಕ ಕ್ರಿಯೆ. ಅದರ ಪ್ರಯೋಗದ ಯಶಸ್ಸಿನ ಹಿಂದೆ ಪರಿಶ್ರಮಿಸುವ ಕಾಣದ ಕೈಗಳು ನೂರಾರು. ರಂಗದ ಪ್ರಜ್ವಲ ಬೆಳಕಿನಲ್ಲಿ ಉಜ್ವಲವಾಗಿ ವಿರಾಜಿಸಲು ಅಪೇಕ್ಷಿಸುವ ನಟನಟಿಯರ ಪ್ರತಿಭಾ ಪ್ರಕಾಶದ ಹಿನ್ನೆಲೆಯಲ್ಲಿ ಹಗಲೆಣೆಯಾಗಿ ಕಾರ್ಯನಿರ್ವಹಿಸುವ ರಂಗಕರ್ಮಿಗಳು ಅಗೋಚರವಾಗಿದ್ದುಕೊಂಡು ನಿರ್ಲಕ್ಷ್ಯಕೊಳಗಾಗಿರುವ ಸಂದರ್ಭ ಸನ್ನಿವೇಶಗಳೇ ಹೆಚ್ಚು. ಈ ನೇಪಥ್ಯ ಕ್ರಿಯೆ ಪ್ರಕ್ರಿಯೆಯಲ್ಲಿ ತಾದಾತ್ಮ್ಯತೆಯಿಂದ ತಮ್ಮನ್ನು ತೊಡಗಿಸಿಕೊಳ್ಳಲು ಮುಂದಾಗುವ ಮಂದಿ ಅತಿ ವಿರಳವೆಂಬುದು ಸರ್ವವಿದಿತ. ಇದಕ್ಕೆ ಅಪವಾದವೆನ್ನುವಂತೆ ನಟನೆ ಮತ್ತು ರಂಗದ ಹಿಂಬದಿಯ ಚಟುವಟಿಕೆಗಳೆರಡರಲ್ಲಿಯೂ ನಿತ್ಯನಿರಂತರವಾಗಿ ದುಡಿಯುತ್ತಾ ಎಲೆಯ ಮರೆಯ ಹಣ್ಣಿನಂತೆ ಇರುವ ಕನ್ನಡ ಹವ್ಯಾಸಿ ರಂಗದ ಪ್ರಮುಖರಲ್ಲಿ 'ವಾಸು' ಎಂಬ ಸಂಕ್ಷಿಪ್ತನಾಮದಿಂದ ಸದಾಕಾಲ ಪ್ರೀತಿಯನಂದದಿಂದ ಕರೆಸಿಕೊಳ್ಳುವ ಮೈಸೂರು ವಾಸಿ ಆರ್. ಎಸ್. ವಾಸುದೇವಮೂರ್ತಿಯವರು ರಂಗ ಹವ್ಯಾಸಿಗಳೆಲ್ಲರ ಅಚ್ಚುಮೆಚ್ಚು.

## ಹುಟ್ಟು, ಬಾಲ್ಯ, ವಿದ್ಯಾಭ್ಯಾಸ

ತುಮಕೂರು ಜಿಲ್ಲೆ ತನ್ನ ಸಾಂಸ್ಕೃತಿಕ ಒಡಲಿನಿಂದ ಅನೇಕ ಪ್ರತಿಭಾನ್ವಿತ ಕುಡಿಗಳನ್ನು ನಾಡಿಗೆ ನೀಡಿ ಪುನೀತವಾಗಿದೆ. ಅಂತಹ ಪ್ರತಿಭೆಗಳು ಚಿಗುರೊಡೆದು ಕರ್ನಾಟಕದ ವಿವಿಧೆಡೆ ಹರಡಿದಂತೆ ಹೆಮ್ಮರವಾಗಿ ಬೆಳೆದು ತಮ್ಮ ಮೆರುಗನ್ನು ಬೀರಿವೆ ಮತ್ತು ಸಾಂಸ್ಕೃತಿಕ ಕೊರಗನ್ನು ನೀಗಿವೆ. ಅದರಲ್ಲಿಯೂ ರಂಗಪ್ರತಿಭೆಗಳು ನಾಟಕದ ಕಂಪನ್ನು ಸದಾ ಜೀವಂತವಾಗಿಟ್ಟಿರುವ ಶಕ್ತಿಗಳಾಗಿ ಬೆಳಗಿವೆ. ಅಂತಹವರಲ್ಲಿ ಜನಪ್ರಿಯ ಮೈಸೂರು ವಾಸು ಅವರು ತಮ್ಮದೇ ಆದ ವಿಶಿಷ್ಟ ರಂಗ ಕಾರ್ಯಕ್ಷಮತೆ ಮತ್ತು ದಕ್ಷತೆಯಿಂದ ಜನಾನುರಾಗಿಯಾಗಿರುವರು. ಅವರು ಜನ್ಮ ತಳೆದದ್ದು ಗುಬ್ಬಿ ತಾಲ್ಲೂಕಿನ ಬಿದರೆ ಎಂಬ ಗ್ರಾಮದಲ್ಲಿ ೧೪-೧೦-೧೯೪೨ ಶ್ರೀ ರಾಮಭಟ್ಟ ಸದಾಶಿವಮೂರ್ತಿ ಮತ್ತು ಶ್ರೀಮತಿ ಲಕ್ಷ್ಮಮ್ಮ ದಂಪತಿಗಳ ಮಗನಾದ ವಾಸು ಅವರದು ಮೊದಲಿನಿಂದಲೂ ಅಧ್ಯಯನಶೀಲ ಮತ್ತು ಕಾಯಕ ಪ್ರವೃತ್ತಿ. ಅವರ ಪ್ರಾರಂಭಿಕ ಓದು ಅಜ್ಜಂಪುರ, ಬೀರೂರು ಮತ್ತು ತರೀಕೆರೆ ಸ್ಥಳಗಳಲ್ಲಿ ನೆರವೇರಿತು. ತರೀಕೆರೆಯಲ್ಲಿ ವಿಶೇಷವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವಾಯಿತು. ತದನಂತರ ಬೆಂಗಳೂರಿಗೆ ಆಗಮಿಸಲಾಗಿ ಅಲ್ಲಿನ ರಾಷ್ಟ್ರೀಯ ವಿದ್ಯಾಲಯದಲ್ಲಿ ಪ್ರೌಢಶಾಲಾ ವ್ಯಾಸಂಗವನ್ನು ಮಾಡಿದರು. ಮೊದಲಿನಿಂದಲೂ ಸೋದರಮಾವ ಪೊಲೀಸ್ ಇನ್ಸ್‌ಪೆಕ್ಟರ್ ವೆಂಕಟಪ್ಪನವರಿಗೆ ಬೌದ್ಧಿಕ ಬೆಳವಣಿಗೆಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸುತ್ತಿದ್ದರಲ್ಲದೆ ಅವರ ವಿದ್ಯಾಭ್ಯಾಸ ಕ್ರಮದಲ್ಲಿ ಆಶ್ರಯವನ್ನಿತ್ತರು. ಅವರು ವರ್ಗವಾಗಿ ಹೋದೆಡೆಯಲ್ಲೆಲ್ಲಾ ವಾಸುರವರು ಕೂಡ ಪರ್ಯಟನೆಗೈದು ತಮ್ಮನ್ನು ಜೀವನಾನು

ಭವದ ಮೂಸೆಗೆ ತೆರೆದಿಟ್ಟುಕೊಂಡರು. ಬದುಕಿನ ಅಂತರಾರ್ಥವನ್ನು ಗ್ರಹಿಸಿ ಅರ್ಥೈಸುವುದನ್ನು ಕಲಿತರು. ಅದು ಅವರಲ್ಲಿ ಕಷ್ಟಸುಖಗಳನ್ನು ಎದುರಿಸುವ ಚೈತನ್ಯ ಮತ್ತು ಸದೃಢತೆಯನ್ನು ಹುಟ್ಟುಹಾಕಿ ಪೋಷಿಸಿತು. ತಮ್ಮ ಮುಂದಿನ ವಿದ್ಯಾಭ್ಯಾಸವನ್ನರಸಿ ೧೯೫೭ರಲ್ಲಿ ಮೈಸೂರಿಗೆ ಬಂದರು. ಅಲ್ಲಿನ ಪ್ರತಿಷ್ಠಿತ ಧರ್ಮಪ್ರಕಾಶ ಡಿ. ಬನುಮಯ್ಯ ಸ್ಕೂಲಿನಲ್ಲಿ ತಮ್ಮ ಓದನ್ನು ಮುಂದುವರಿಸಿದರು. ಈ ಹಂತದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರತ್ತ ಗಮನವಿತ್ತರು. ವರುಷಗಳುರುಳಿದಂತೆ ಊರ ಜನರೊಡನೆ ಮಿಳಿತಗೊಂಡು ನಗರದ ಸಾಂಸ್ಕೃತಿಕ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿ ಮೈತಾಳಿದರು. ತಮ್ಮ ಸ್ಕೂಲು ಕಲಿಕೆಯ ಅವಧಿಯಲ್ಲಿಯೇ ಮೇಷ್ಟ್ರು ಬಿ.ಸಿ. ರಂಗನಾಥಾಚಾರ್‌ರವರ ವ್ಯಕ್ತಿತ್ವಕ್ಕೆ ಮಾರುಹೋದರು. ರಂಗನಾಥಾಚಾರ್ ಅವರು ವಿಶೇಷವಾಗಿ ವೃತ್ತಿನಾಟಕ ಪ್ರದರ್ಶನಗಳಲ್ಲಿ ಪಾತ್ರವಹಿಸುತ್ತಿದ್ದರು. ತುಂಬಾ ಸಂಭಾವಿತರಾದ ಅವರು ವಾಸು ಅವರ ಮೇಲೆ ತಮ್ಮ ಶಿಷ್ಯವಾತ್ಸಲ್ಯವನ್ನು ಧಾರೆಯೆರೆದರು. ಅವರೀರ್ವರೊಡನೆ ಒಂದು ರೀತಿಯ ಅವಿನಾಭಾವ ಸಂಬಂಧವೇರ್ಪಟ್ಟಿದ್ದಿತು. ಗುರುಗಳು ಹಿರಣ್ಯಕಶಿಪು ಪಾತ್ರವಹಿಸಿದರೆ ಶಿಷ್ಯನಾದ ವಾಸುರವರು ನರಸಿಂಹನಾಗಿ ಕಾಣಿಸಿಕೊಳ್ಳುತ್ತಿದ್ದರು. ತಮ್ಮ ಪ್ರಾಮಾಣಿಕ ರಂಗಾಸಕ್ತಿಯ ಕುರುಹಾಗಿ ಒಮ್ಮೆ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಎನ್.ಎಸ್.ಡಿ. ಯನ್ನು ೧೯೬೭ರ ಸಮಯದಲ್ಲಿ ಪ್ರವೇಶಿಸಲು ಉದ್ದೇಶಿಸಿ ಅದರ ಮೆಟ್ಟಲುಗಳನ್ನು ತುಳಿದು ಕೇವಲ ಮೂರು ತಿಂಗಳುಗಳ ಕಾಲ ಅಲ್ಲಿದ್ದು ಆರ್ಥಿಕ ತೊಂದರೆಯ ಕಾರಣದಿಂದಾಗಿ ವಾಪಸ್ಸಾಗಬೇಕಾದುದು ಒಂದು ಅನಿವಾರ್ಯ ಸಂಗತಿ.

## ರಂಗಪ್ರವೇಶ

ಯಾವುದೇ ವ್ಯಕ್ತಿಯ ಬೌದ್ಧಿಕ ಪ್ರಗತಿಗೆ ವಿದ್ಯೆಯೊಂದೇ ಸಾಲದು. ಅದರೊಂದಿಗೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಲಕ್ಷಣಗಳನ್ನು ಆತ್ಮೀಕರಿಸಿಕೊಳ್ಳುವುದು ಅತ್ಯಗತ್ಯವೆಂದು ಮನಗಂಡರು. ಅಂತೆಯೇ ಶ್ರವ್ಯ ಚಾಕ್ಷುಷ ಕಲೆಯಾದ ರಂಗಭೂಮಿಗೆ ಒಲಿದರು ಮತ್ತು ಅದಕ್ಕಾಗಿ ತಮ್ಮ ಬದುಕನ್ನು ಜೀವನ ಪರ್ಯಂತ ಮುಡುಪಾಗಿಟ್ಟಿರುವರು. ಕನ್ನಡಿಗರ ಕಲ್ಯಾಣನಗರಿಯಾದ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ರಂಗಮಂಚವೆ ವಾಸುರವರ ರಂಗಪ್ರವೇಶ ತಾಣವಾಯಿತು. ನಾಡು ನುಡಿಯ ದನಿ ಅವರ ಮನದಾಳದಲ್ಲಿ ನಿನಾದನಿಸಿತು. ಎ.ಎಸ್. ಮೂರ್ತಿ ವಿರಚಿತ 'ಅಧ್ಯಕ್ಷತೆ' ಅವರು ಅಭಿನಯಿಸಿದ ಮೊಟ್ಟಮೊದಲ ನಾಟಕ (ನಿ: ಬಿ.ಆರ್. ಶಿವರಾಮಯ್ಯ) ಅದರಲ್ಲಿ ಅವರದು ಗೀತಾ ಎಂಬ ಹೆಸರಿನ ಮಗುವಿನ ಪಾತ್ರ. ಮುಗ್ಧ ಹಾಗೂ ಸ್ಫುರದ್ರೂಪಿ ವಾಸು ಅವರು ತಮ್ಮ ನಟನಾ ಜೀವನದಲ್ಲಿ ಮೊಟ್ಟಮೊದಲು ಬಣ್ಣ ಬಳಿದು ಕೊಂಡದ್ದು ಹೆಣ್ಣುಮಗಳ ಪಾತ್ರದಲ್ಲಿ ಎಂಬುದು ತುಸು ಗಮನಾರ್ಹ. ಮೇಷ್ಟ್ರು ಶಿವರಾಮಯ್ಯರವರ ಬಗ್ಗೆ ವಾಸು ಅವರಿಗೆ ವಿನೀತಭಾವ. ಶಿವರಾಮಯ್ಯನವರು ಉತ್ತಮ ನಟ ಮತ್ತು ನಿರ್ದೇಶಕನಾಗಿ ಅಂದಿನ ಹವ್ಯಾಸಿ ರಂಗಭೂಮಿಯಲ್ಲಿ ದೊಡ್ಡ ಹೆಸರು ಮಾಡಿದ್ದರು. 'ಅಧ್ಯಕ್ಷತೆ' ಯಿಂದ ಮೊದಲ್ಗೊಂಡ ಅವರ ರಂಗಸೇವೆ ಅಡೆತಡೆಯಿಲ್ಲದೆ ಮುನ್ನಡೆಯಿತು. ಸಾಂಪ್ರದಾಯಿಕ ಗುರು ಶಿಷ್ಯ ಪರಂಪರೆಯಲ್ಲಿ ನಂಬಿಕೆಯನ್ನಿರಿಸಿದ್ದ ಗುಣಸ್ವಭಾವ ಅವರದಾಗಿದ್ದಿತು. ಪ್ರಾರಂಭದ ತಮ್ಮ ಪ್ರೌಢಶಾಲಾ ಅವಧಿಯಲ್ಲಿ ಪಾಲಿಗೆ ಬಂದ ಸಣ್ಣಪುಟ್ಟ ಪಾತ್ರಗಳನ್ನು ಮಾತ್ರ ನಿರ್ವಹಿಸುತ್ತಿದ್ದವರಾದರೂ ಕ್ರಮೇಣ ಶಾರದಾ ವಿಲಾಸ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ದೊಡ್ಡ ಪಾತ್ರಗಳಿಗೆ ಬಡ್ತಿಪಡೆದರು. ಎ.ಎಸ್. ಮೂರ್ತಿಯವರ ರಾಜ್ಯ ಸರ್ಕಾರ

ಬಹುಮಾನಿತ ಕೃತಿ 'ಹುಚ್ಚ'ದಲ್ಲಿ ಗುಮಾಸ್ತ ಶಾಮಣ್ಣನ ಪಾತ್ರವನ್ನು ನಿರ್ವಹಿಸುವುದರ ಮೂಲಕ ಪ್ರೇಕ್ಷಕರ ವಿಶೇಷ ಗಮನ ಸೆಳೆದರು. (೧೯೬೧) ಈ ನಾಟಕದಲ್ಲಿನ ತಮ್ಮ ಪ್ರಧಾನ ನಟನೆಯೊಂದಿಗೆ ನಿರ್ದೇಶನವನ್ನು ಮಾಡಿದ್ದರು. ಇದು ಪುನಃ 'ಅಮರ ಕಲಾ ಸಂಘ'ದ ಪ್ರಥಮ ವಾರ್ಷಿಕೋತ್ಸವ ೧೦-೧೨-೧೯೬೧ರಂದೂ ಪ್ರದರ್ಶನಗೊಂಡಿದ್ದಿತು. 'ಅಮರ ಕಲಾ ಸಂಘ'ದ ಎರಡನೆಯ ವಾರ್ಷಿಕೋತ್ಸವದಂದು ೧೫-೪-೧೯೬೩ ಅವರು ಅಭಿನಯಿಸಿದ *'ನಂಜಿನ ನಾಲಿಗೆ'* ನಾಟಕದ ರಾಮಣ್ಣನ ಪಾತ್ರವಂತೂ ಬಹಳ ಯಶಸ್ಸನ್ನು ಪಡೆದಿದ್ದಿತು. ಯುವ ಪ್ರತಿಭೆಗಳನ್ನು ಗುರುತಿಸಲೋಸುಗ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಿದ್ದ ನಾಟಕೋತ್ಸವದಲ್ಲಿ ಉತ್ತಮ ಕಲಾವಿದನೆಂದು ಆಯ್ಕೆಗೊಂಡು ಎ.ಎಸ್.ಮೂರ್ತಿಯವರ *'ಎರಡು ಧ್ರುವ'* ಪ್ರಯೋಗಕ್ಕೆ ಮೆರಗನ್ನಿತ್ತರು. ಪರ್ವತವಾಣಿಯವರ *'ಉಂಡಾಡಿ ಗುಂಡ'* ದಲ್ಲಿ ವಾಸು ಅವರದು ಕಥಾನಾಯಕನ ಪಾತ್ರ. ಈ ಗುಂಡನಾದರೂ ಆಲಿವರ್ ಗೋಲ್ಡ್‌ಸ್ಮಿತ್‌ನ *'ಷಿ ಸ್ಟೂಪ್ಸ್ ಟು ಕಾನ್ಕರ್'* ನಲ್ಲಿನ ಟೋನಿ ಲಿಂಪ್ಕಿನ್ ಪಾತ್ರದ ಪುನರ್‌ಸೃಷ್ಟಿಯಾಗಿದ್ದಿತು. ಅವರು ನಟಿಸಿದ ಇತರ ನಾಟಕಗಳು -ಪಾತ್ರಗಳಲ್ಲಿ ಪ್ರಮುಖವಾದುವೆಂದರೆ ಕೈಲಾಸಂರವರ *'ತಾಳೀಕಟ್ಟೋಕ್ಕೂಲೀನೇ'* ಯ ನಾಗತ್ತೆ, *'ಹುತ್ತದಲ್ಲಿ ಹುತ್ತ'*ದ ಕಪ್ಪಣ್ಣ, ಕೈವಾರ ರಾಜಾರಾವ್‌ರವರ *ಬುಡುಬುಡಿಕೆ*ಯು ಪ್ರೊ. ಶಂಕರರಾಯರು ಮತ್ತು *'ಅಡಿಗೆ ಭಟ್ಟ'* ದ ಮಾಧು ಮುಂತಾದವು. ಬೆಂಗಳೂರಿನ ಅಂದಿನ ಗುಬ್ಬಿ ಥಿಯೇಟರ್‌ನಲ್ಲಿ ಅಭಿನಯಿಸಿದ *ಅಳಿಯ ದೇವರು* (ನಿ: ಲೋಕನಾಥ್) ವಿನಲ್ಲಿನ ಶಿವು ಪಾತ್ರವು ಅಮೋಘವಾದುದು.

### ಅಮರ ಕಲಾ ಸಂಘ

ಕಲಿಕೆಯ ಅವಧಿಯಲ್ಲಿಯೇ ವಾಸುರವರು ತಮ್ಮ 'ವಿಸ' ರಂಗಚಟುವಟಿಕೆಗಳನ್ನು ವಿಸ್ತರಿಸಿಕೊಂಡು ಸ್ಥಳೀಯ ಕಲಾ ವಿಲಾಸಿ ತಂಡಗಳೊಡನೆ ನಿಕಟ ಸಂಪರ್ಕವನ್ನೇರ್ಪಡಿಸಿಕೊಂಡರು. ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ನಾಟಕ ರಚನಾ ವಿಧಾನ ಮತ್ತು ನೆಳಲು - ಬೆಳಕು ಹಾಗೂ ರಂಗಸಜ್ಜಿಕೆ ಮೊದಲಾದ ತಾಂತ್ರಿಕತೆಯಲ್ಲಿ ಹಲವಾರು ಮಾರ್ಪಾಡುಗಳಾಗುತ್ತಿದ್ದು ಪ್ರವರ್ಧಮಾನ ಸ್ಥಿತಿಗೆ ಬರುತ್ತಿದ್ದ ಸಂದರ್ಭದಲ್ಲಿಯೇ ವಾಸುರವರ ಕರ್ತೃತ್ವ ಶಕ್ತಿ ಪ್ರಮುಖ ಹೆಜ್ಜೆಯೊಂದಕ್ಕೆ ಕಾರಣವಾಯಿತು. ಅದೆಂದರೆ ನಾಲ್ಕು ದಶಕಗಳ ಹಿಂದೆ ಅವರು ಶಾರದಾ ವಿಲಾಸ ಕಾಲೇಜಿನಲ್ಲಿ ಓದುತ್ತಿದ್ದಾಗ ಕೆ.ಎಲ್. ಅನಂತರಾಂ, ಸಿ. ಮಾಧವರಾವ್, ಶ್ರೀಶೈಲನ್, ಸಿ.ಆರ್. ಗುರುರಾಜ್, ಟಿ. ಗಿರೀಶ್, ಎಸ್.ವಾಗೀಶ್‌ಮೂರ್ತಿ, ಎಚ್.ಸಿ. ಅನಂತ, ಜೆ.ಎಲ್. ಸತ್ಯ, ಜೆ.ಎಲ್. ಪ್ರಸಾದ್, ಮುಕುಂದ, ರಾಮನರಸಿಂಹ, ಎ.ವಿ. ಪ್ರಕಾಶ್, ಎಚ್.ಕೆ. ನರಸಿಂಹಮೂರ್ತಿ, ಸುಬ್ರಮಣ್ಯಂ, ರಾಮು, ಶಿವಪ್ರಸನ್ನ ಮತ್ತು ಎನ್. ಆರ್. ಚಂದ್ರಶೇಖರ್ ಮುಂತಾದ ಹತ್ತಾರು ಬಣ್ಣದ ಗೆಳೆಯರೊಡಗೂಡಿ ಸ್ಥಾಪಿಸಿದ 'ಅಮರ ಕಲಾ ಸಂಘ'ದ ಉಗಮಕ್ಕೆ ಕಾರಣವಾದುದು. ಸಂಘದ ಮೊಟ್ಟಮೊದಲ ನಾಟಕವಾಗಿ ೨೩ ಅಕ್ಟೋಬರ್ ೧೯೬೦ರಂದು ವಾಸು ಅವರ ನಿರ್ದೇಶನದಲ್ಲಿ ಎ.ಎಸ್.ಮೂರ್ತಿ ಮತ್ತು ನವರತ್ನರಾಂ ಕೃತಿ *'ಲೇಡೀಸ್ ಓನ್ಲಿ'* ಪ್ರಯೋಗಗೊಂಡಿದ್ದಿತು. ಮುಂದುವರಿದಂತೆ 'ವಾಸು' ಮತ್ತು 'ಅಮರ ಕಲಾ ಸಂಘ' ಅನ್ವರ್ಥನಾಮಗಳಾಗಿ ಒಂದಾಗಿ ಪಡಿಮೂಡಿದುದು ಈಗ ಇತಿಹಾಸ. ಸಂಘದ ಕಾರ್ಯದರ್ಶಿಯಾಗಿ ಅರ್ಥಾತ್ ಅದರ ಜೀವನಾಡಿಯಾಗಿ ದುಡಿಯುತ್ತ ಅದರ ಸರ್ವತೋಮುಖ ಉತ್ಕರ್ಷಕ್ಕೆ ಕಾರಣರಾದರು. ಅವರು ಸಂಘವನ್ನು

ನಿತ್ಯನಿರಂತರವಾಗಿ ಪ್ರೀತಿಸಿ ಪೋಷಿಸಿದರು ಮತ್ತು ಸಂಘವೂ ಅವರನ್ನು ಪೋಷಿಸಿದೆ. ಸಂಘದ ನಲವತ್ತೊಂದು ವರುಷಗಳ ದೀರ್ಘಕಾಲದ ಚರಿತ್ರೆಯು ವಾಸು ಅವರ ಜೀವನ ಮತ್ತು ಸಾಧನೆಯೂ ಆಗಿದೆ ಎಂಬುದು ಗಮನಾರ್ಹ. ೨೪,೨೫ ಆಗಸ್ಟ್ ೧೯೮೭ರಂದು ಸಂಘದ ಬೆಳ್ಳಿಹಬ್ಬ ವಿದ್ವಾನ್ ದೇಶಿಕಾಚಾರ್, ನಾಟ್ಯಚತುರ ಕೆ.ಬಿ. ಮಾಧವರಾವ್, ಜಿ.ವಿ. ಶಿವಾನಂದ, ಡಾ|| ಸಿಂಧುವಳ್ಳಿ ಅನಂತಮೂರ್ತಿ ಮತ್ತು ಶ್ರೀಮತಿ ಹರಿಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಮೈಸೂರಿನಲ್ಲಿ ಮೊಟ್ಟಮೊದಲ ಬಾರಿಗೆ ಬೆಳ್ಳಿಹಬ್ಬ ಆಚರಿಸಿಕೊಂಡ ಹವ್ಯಾಸಿ ರಂಗ ತಂಡವೆಂಬ ಹಿರಿಮೆ ಸಂಘಕ್ಕಿದೆ ಮತ್ತು ಅದರ ಗರಿಮೆ ವಾಸು ಅವರಿಗಿದೆ.

ರಂಗಭೂಮಿಯ ತಾಂತ್ರಿಕ ಅಂಗ ಉಪಾಂಗ ಕಲೆಗಳಾದ ರಂಗಸಜ್ಜಿಕೆ, ವಸ್ತ್ರಭೂಷಣ, ವಿನ್ಯಾಸ, ನೆಳಲು ಬೆಳಕು, ಪ್ರಸಾಧನ ವರ್ಣಿಕೆ ನಿರ್ದೇಶನ ಮತ್ತು ಸಂಘಟನೆ ಮತ್ತಿತರ ಕೆಲಸ ಕಾರ್ಯಗಳಲ್ಲಿ ಅವರು ಸ್ವಯಂಪ್ರೇರಣೆಯಿಂದ ತೊಡಗಿಸಿಕೊಳ್ಳುವುದನ್ನು ಕಂಡು ಅನುಭವಿಸಿ ಸಂತಸಪಡುವುದೇ ಒಂದು ಸೊಗಸು. ರಂಗುರಂಗಿನ ಈ ಕ್ಷೇತ್ರದಲ್ಲಿ ತೆರೆಯ ಮರೆಯ ವ್ಯವಸ್ಥೆ ಮತ್ತು ರಂಗ ವ್ಯವಸ್ಥೆಯ ಕಾಯಕಕ್ಕಿಂತ ಬಣ್ಣ ಹಚ್ಚಿಕೊಂಡು ನಟರಾಗಿ ಮೆರೆಯಲು ಮುಂದಾಗುವ ಪೈಕಿಯ ಜನರೇ ಜಾಸ್ತಿಯೆಂಬುದಿರುವಾಗ ಈ ಮನೋಭಾವಕ್ಕೆ ವ್ಯತಿರಿಕ್ತವಾದ ಒಲವನ್ನು ಸದಾ ಜೀವಂತವಾಗಿರಿಸಿಕೊಂಡಿರುವ ಹೆಗ್ಗಳಿಕೆ ವಾಸು ಅವರದು. ಕ್ರಿಯಾಶೀಲತೆ ಎಂಬ ಪದವು ತನ್ನ ನಿಜವಾದ ಅರ್ಥವನ್ನು ಕಂಡುಕೊಂಡಿರುವುದು ಇಂತಹ ರಂಗಕಾಯಕ ಜೀವಿಗಳಿಂದಲೇ ಎಂಬುದು ಕೇವಲ ತೋರಿಕೆ ಅಥವಾ ಅತಿಶಯೋಕ್ತಿಯ ಮಾತಾಗದು. ರಂಗಭೂಮಿಯ ಯಾವುದೇ ಕೆಲಸವಾದರೂ 'ಸೈ' ಎನ್ನುವ ಅವರ ಅಪರೂಪದ ಉದಾರ ಗುಣ ಅನುಕರಣೀಯ ಅಂತೆಯೇ ಇತರರಿಗೆ ಅವರೊಬ್ಬ ಅಪರೂಪದ ಮಾದರಿ ವ್ಯಕ್ತಿಯಾಗಿ ರೂಪುಗೊಂಡಿದ್ದಾರೆ. ಅಭಿನಯದಲ್ಲಿ ಎಷ್ಟು ಗಟ್ಟಿ ಮತ್ತು ದಟ್ಟವಾದ ಅನುಭವವನ್ನು ರೂಢಿಸಿಕೊಂಡಿರುವರೋ ಅದಕ್ಕಿಂತ ಒಂದು ಪಟ್ಟು ಹೆಚ್ಚಾಗಿಯೇ ಆಹಾರ್ಯಾಭಿನಯ ಅರ್ಥಾತ್ 'ನೇಪಥ್ಯ' ದತ್ತಲೂ ನೆಟ್ಟ ದೃಷ್ಟಿಯನ್ನಿಟ್ಟಿದ್ದಾರೆ. ಉದರಂಭರಣಕ್ಕಾಗಿ ಮೈಸೂರು ಶ್ರೀರಾಮಾನುಜ ರಸ್ತೆಯ ೧೮ನೇ ಅಡ್ಡರಸ್ತೆಯಲ್ಲಿ ಮುದ್ರಣಾಲಯ (ಶ್ರೀ ಸದ್ಗುರು ಪ್ರಿಂಟರ್ಸ್) ವೊಂದನ್ನು ಮಾಲೀಕರಾಗಿ ನಡೆಸಿಕೊಂಡು ಬರುತ್ತಿದ್ದಾಗ್ಯೂ ತಾವು ಕುಂತಾಗ, ನಿಂತಾಗ, ನಡೆದಾಗ ಮತ್ತು ಎಡವಿದಾಗಲೆಲ್ಲ ರಂಗಭೂಮಿಯ ಅಭಿವೃದ್ಧಿಯತ್ತಲೇ ಚಿಂತನೆಯನ್ನಿರಿಸುತ್ತಾರೆ. ಸಂಘದ ನಿಷ್ಠಾವಂತ ರೂವಾರಿಯಾಗಿ ಅನೇಕ ನಟನಟಿಯರನ್ನಲ್ಲದೆ ಯುವ ನಿರ್ದೇಶಕರು ನೈಪಥ್ಯ ವಿಭಾಗದಲ್ಲಿಯೂ ಬೆಳಗುವಂತಾಗಲು ಕಾರಣಕರ್ತರಾಗಿದ್ದಾರೆ. ಇತರರ ಅಭ್ಯುದಯಕ್ಕಾಗಿ ಮನಸಾ ಶ್ರಮಿಸಿದ್ದಾರೆ. ೧೯೭೮-೭೯ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲಾ ಕಾಲೇಜಿನಲ್ಲಿ ಅರೆಕಾಲಿಕ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

### ಸಂಘಟನೆ

ಸಂಘಟನೆ ಬಗೆಗಿನ ಆಸ್ಥೆ ಮತ್ತು ಶ್ರದ್ಧೆ ವಾಸು ಅವರ ಮೂಲ ಮಂತ್ರ. ಅದು ಅವರ ಜಪ ತಪ ಕೂಡ. ರಂಗಪ್ರಯೋಗಗಳಲ್ಲಿ ಕಥಾನಾಯಕನಾಗಿಯೆಂತೋ ನೇಪಥ್ಯನಾಯಕನಾಗಿಯೂ ಮಿಂಚಿದವರು. ಅಮಿತ ತಾಳ್ಮೆ ಮತ್ತು ಜಾಣ್ಮೆಯೇ ಅವರ ಯಶಸ್ಸಿನ ಗುಟ್ಟು. ಇತರ ರಂಗ

ಸಂಘ (ಕ) ಟಕರು ಸಹಜವಾಗಿ ಎದುರಾಗುವ ಸಮಸ್ಯೆಗಳ ಬಗ್ಗೆ ಮಾತ್ರ ಹೆಚ್ಚು ಚಿಂತಿಸಿ ಕಾಲವ್ಯಯ ಮಾಡುತ್ತಿದ್ದರೆ ವಾಸು ಅವರು ಅವುಗಳ ಪರಿಹಾರದತ್ತ ಆಲೋಚಿಸುತ್ತಿರುತ್ತಾರೆ. ತಮ್ಮ ಸ್ವಂತ ಕೆಲಸವನ್ನು ನೀಗಿಕೊಂಡು ಇಲ್ಲವೆ ಬದಿಗೆ ಸರಿಸಿ ರಂಗದತ್ತ ಸಾಗುವ ಜಾಯಮಾನ ಅವರದು. ಯುವ ರಂಗಪ್ರತಿಭೆಗಳನ್ನು ಗುರುತಿಸುವುದರಲ್ಲಿ ಎತ್ತಿದ ಕೈ. ರಂಗಭೂಮಿ ಅಚ್ಚ ಹಸಿರಾಗಿರಬೇಕು, ಬತ್ತದ ಸೆಲೆಯಾಗಿರಬೇಕು, ಹೊಸ ಪ್ರತಿಬೆಗಳು ಮೂಡಿ ಬರಬೇಕು, ಮತ್ತವನ್ನು ನಿತ್ಯ ನಿರಂತರವಾಗಿ ಪ್ರೋತ್ಸಾಹಿಸಿ ಪೋಷಿಸುತ್ತಿರಬೇಕು ಎಂಬುದು ಅವರ ಇರಾದೆ. ಅಂತೆಯೇ ೧೯೭೯ರ ಲಾಗಾಯ್ತು ಅಂತರ ಪ್ರೌಢಶಾಲೆ ಮತ್ತು ೧೯೯೪ರಿಂದ ಕಾಲೇಜು ವಿದ್ಯಾರ್ಥಿಗಳಿಗಾಗಿ ಹತ್ತಾರು ನಾಟಕ ಪ್ರದರ್ಶನ, ಕಲೆಗಳ ಸ್ಪರ್ಧೆ ಮತ್ತು ಉತ್ಸವಗಳನ್ನು ಏರ್ಪಡಿಸಿ 'ಪ್ರತಿಭಾಶೋಧ' ನಡೆಸಿದ್ದಾರೆ. ಈ ವಿಧಾನದ ಮೂಲಕ ರಂಗಭೂಮಿಯಲ್ಲಿ ಹೊಸ ನೀರು, ಹೊಸ ಆಲೋಚನೆಗಳು ಮತ್ತು ಹೊಸ ಆಯಾಮಗಳು ಮೂಡಿ ಬರಲು ಸಾಧ್ಯವಾಗಿದೆ. ಇದಕ್ಕೆ ಪ್ರೇರಕವಾಗಿ 'ಅಮರ ಕಲಾ ಸಂಘ'ದ ಸ್ಮರಣ ಸಂಚಿಕೆಯೊಂದರಲ್ಲಿ (ಮಹಮ್ಮದ್ ಪೀರ್ ೧೯೯೦) 'ರಂಗಭೂಮಿ ನಿಂತ ನೀರಾಗಬಾರದು, ಸಾಂಸ್ಕೃತಿಕ ಸೆಲೆ ಬತ್ತಿಹೋಗಬಾರದು, ಸದಾ ಹರಿವ ಸ್ರೋತ್ರವಾಗಿರಬೇಕು' ಎಂದಿದ್ದಾರೆ.

ಅಮರ ಕಲಾ ಸಂಘದ ಕಲಾವಿದರಿಗಾಗಿ ಫೆಬ್ರವರಿ ೧೯೮೦ರಂದು ಕರ್ನಾಟಕ ನಾಟಕ ಅಕಾಡೆಮಿ ಸಹಕಾರದೊಂದಿಗೆ ಜಿ.ವಿ. ಶಿವಾನಂದರಿಂದಲೂ ಮತ್ತು ಅದೇ ವರುಷ ಮಾರ್ಚ್ ೩೧ ರಿಂದ ಮೇ ೧೪ರವರೆಗೆ ಕ.ನಾ.ಅ. ಸಹಯೋಗದೊಡನೆ ಖ್ಯಾತ ರಂಗತಜ್ಞ ಬಿ.ವಿ. ಕಾರಂತರ ನೇತೃತ್ವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಯ್ದ ಕಾಲೇಜು ಅಧ್ಯಾಪಕರುಗಳಿಗಾಗಿ ಮೈಸೂರಿನಲ್ಲಿ ಮೊಟ್ಟಮೊದಲ ಬಾರಿಗೆ ರಂಗ ತರಬೇತಿ ಶಿಬಿರ ಯೋಜನೆಯನ್ನು ಸಂಘಟಿಸಿದ್ದರು. ಅಧ್ಯಾಪಕರು ಷೇಕ್ಸ್‌ಪಿಯರ್ ಮಹಾಕವಿಯ *'ಕಿಂಗ್ ಲಿಯರ್'* ನಾಟಕವನ್ನು ಯಶಸ್ವಿಯಾಗಿ ನೀಡಿದ್ದರು. ಈ ಸಂದರ್ಭದಲ್ಲಿ ದೇಹ ಮತ್ತು ಧ್ವನಿ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ವ್ಯಾಯಾಮ ಮತ್ತು ಅಭ್ಯಾಸಗಳನ್ನು ಹಾಗೂ ಹತ್ತಾರು ಪ್ರಾತ್ಯಕ್ಷಿಕೆಗಳನ್ನು ಪ್ರಯೋಗಿಸಿ ರಂಗವಿನ್ಯಾಸ, ರಂಗ ಪರಿಕರಗಳು, ಉಡುಗೆ ತೊಡುಗೆಗಳ ತಯಾರಿಕೆ ಮತ್ತು ನೆಳಲು ಬೆಳಕಿನ ವ್ಯವಸ್ಥೆ ಮುಂತಾದ ನೇಪಥ್ಯ ವಿಷಯಗಳ ಕುರಿತು ಪ್ರತ್ಯಕ್ಷ ಮಾಹಿತಿ ಪಡೆಯುವ ಅವಕಾಶವನ್ನು ಒದಗಿಸಲಾಗಿದ್ದಿತು.

ಕನ್ನಡ ವೃತ್ತಿ ಮತ್ತು ಹವ್ಯಾಸಿ ರಂಗಗಳ ಏಳ್ಗೆಗಾಗಿ ದುಡಿದು ಹಣ್ಣಾದ ಮತ್ತು ಮಣ್ಣಾದ ಖ್ಯಾತನಾಮರಾದ ರಂಗಚೇತನಗಳನ್ನು ಸಂದರ್ಭಾನುಸಾರ ಸ್ಮರಿಸಿಕೊಳ್ಳುವ ಸ್ತುತ್ಯ ಕಾರ್ಯವನ್ನು ಕೈಗೊಳ್ಳುವುದರ ಮೂಲಕ ವಾಸು ಅವರು ತಮ್ಮ ನಮನವನ್ನು ಸಲ್ಲಿಸುತ್ತ ಬಂದಿರುವರು. ೩೧-೮-೧೯೭೯ರಂದು ವೃತ್ತಿ ರಂಗಭೂಮಿ ಮತ್ತು ಚಲನಚಿತ್ರ ರಂಗದ ಹೆಸರಾಂತ ಹೆಚ್.ಎಲ್.ಎನ್. ಸಿಂಹ ಅವರಿಗೆ ನಿಧಿ ಸಮರ್ಪಣೆಗೈದು ಸನ್ಮಾನಿಸಿದುದು ಒಂದು ಚಿರಸ್ಮರಣೀಯ ಸನ್ನಿವೇಶ. ಅಂತೆಯೇ ಮಹಾನ್ ಕಲಾವಿದ ಸಂಪತ್ (ಎಂ. ಎಸ್. ಚೆಲುವಯ್ಯಂಗಾರ್) ರವರ ಬಗೆಗಿನ ತಮ್ಮ ಪ್ರೀತ್ಯಾಭಿಮಾನದ ದ್ಯೋತಕವಾಗಿ ೪-೯-೧೯೮೩ರಂದು ಸಂಪತ್ ಸ್ಮರಣೆಯನ್ನು ಸಂಘಟಿಸಿದ್ದರು. ಹವ್ಯಾಸಿ ರಂಗದ ಹರಿಕಾರರಾದ ಪ್ರಹಸನ ಪಿತಾಮಹ ಟಿ.ಪಿ. ಕೈಲಾಸಂ ಶತಮಾನೋತ್ಸವ (೨೬-೨೯ ಮಾರ್ಚ್ ೧೯೮೪) ಮತ್ತು ಕನ್ನಡದ ಕಣ್ವ

ಬಿ.ಎಂ.ಶ್ರೀ ಶತಮಾನೋತ್ಸವ (೧೪ ನವೆಂಬರ್ ೧೯೮೪) ವನ್ನು ಏರ್ಪಡಿಸಿ ಈ ಮಹನೀಯದ್ವಯರ ನಾಟಕಗಳನ್ನು ಜನಮನ ಮೆಚ್ಚುವಂತೆ ಪ್ರದರ್ಶಿಸುವುದರ ಮೂಲಕ ಸಮುಚಿತವಾಗಿ ಸ್ಪಂದಿಸಿದರು. ಅಲ್ಲದೆ ಆಳಿದ ಮಹಾಸ್ವಾಮಿಗಳಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ನಾಡಗೀತೆಯ ಖ್ಯಾತಿವಂತ ಮತ್ತು ನಾಟಕಕಾರ ಹುಯಿಲುಗೋಳ ನಾರಾಯಣರಾವ್ ಇವರ ನೂರರ ನೆನಪಿನ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಏರ್ಪಡಿಸಿದ್ದ ಕಾರ್ಯಕ್ರಮದ ಅಂಗವಾಗಿ ೨-೩-೧೯೮೫ರಂದು 'ಶ್ರೀ'ಯವರ ಬಹು ಪ್ರಶಂಸಿತ 'ಅಶ್ವತ್ಥಾಮನ್' ನಾಟಕ ಪ್ರದರ್ಶನವನ್ನು ನೀಡಿದ್ದರು. ಮೈಸೂರಿನ ನಾಟಕ ಕರ್ನಾಟಕ ರಂಗಾಯಣವು ಸಂಯೋಜಿಸಿದ್ದ ಶ್ರೀರಂಗನಮನ ನಾಟಕೋತ್ಸವ (೨೪-೯-೧೯೯೩) ದಲ್ಲಿ ಸಕ್ರಿಯವಾಗಿ ಪಾಲ್ಗೊಂಡು 'ರಂಗಭಾರತ' (ನಿ: ಬಿ.ವಿ. ಕಾರಂತ) ವನ್ನು ನೀಡಿದ್ದರು. ೧೪ - ೧೭ ಜನವರಿ ೧೯೯೫ರಂದು ಶ್ರೀ ಪರ್ವತ ವಾಣಿ ನಾಟಕೋತ್ಸವವನ್ನು ಹಮ್ಮಿಕೊಂಡ ಸಂದರ್ಭದಲ್ಲಿ ಜರುಗಿದ ಮಹತ್ವಪೂರ್ಣ ವಿಚಾರ ಸಂಕಿರಣದಲ್ಲಿ ನಾಟಕಕಾರನ ಕೃತಿಗಳ ಕುರಿತು ವಿಸ್ತೃತ ಚರ್ಚೆಯಾದುದಲ್ಲದೆ ಅವರ *'ವಾರ್ಷಿಕೋತ್ಸವ', 'ಇಷ್ಟಾರ್ಥ', ಬುದ್ಧಿವ್ರತ, ಬಹದ್ದೂರ್ ಗಂಡ* ಮತ್ತು *'ಶೃಂಗಾರ ಲಹರಿ'* ನಾಟಕಗಳನ್ನು ಪ್ರಯೋಗಿಸಿದರು.

ಕುಂದುತ್ತಿರುವ ವೃತ್ತಿರಂಗದ ಪರಂಪರೆ ಮತ್ತು ವರ್ಚಸ್ಸನ್ನು ಮನಗಂಡು ಅದರ ಪುನಶ್ಚೇತನ ಪ್ರಯತ್ನದ ಅಂಗವಾಗಿ ವೃತ್ತಿಕಲಾವಿದರ ಕೊಡುಗೆಯನ್ನು ಸ್ಮರಿಸಲವಣಿಸಿ ಬಹುಪ್ರಶಂಸಿತರಾದ ವಾಸು ಅವರು ಈಗಲೂ ಅದರತ್ತ ಚಿಂತನ ಮಂಥನಗೈಯುತ್ತಿರುತ್ತಾರೆ. ತತ್ಪರಿಣಾಮವೆಂಬಂತೆ ಸಂಘದ ೩೦ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ (೮ - ೧೦ ಸೆಪ್ಟೆಂಬರ್ ೧೯೯೦) ನಾಟ್ಯ ದುರಂಧರ ಮಹಮ್ಮದ್ ಪೀರ್ ನಾಟಕೋತ್ಸವವನ್ನು ಸಂಘಟಿಸಿ ಅವರು ಅಭಿನಯಿಸುತ್ತಿದ್ದ ಜನಪ್ರಿಯ *'ಷಾ ಜಹಾನ್', 'ಸಂಸಾರನೌಕೆ'* ಮತ್ತು *'ಗೌತಮಬುದ್ಧ'* ನಾಟಕಗಳನ್ನು ಮತ್ತೊಮ್ಮೆ ರಂಗದ ಮೇಲೆ ವಿಜೃಂಭಿಸಿ ಪ್ರೇಕ್ಷಕರಿಗೆ ಹೊಸ ಅನುಭವವನ್ನುಂಟು ಮಾಡಿದರು. ಇದರೊಡನೆ ಪೀರ್‌ರವರ ಶ್ರೀ ಚಂದ್ರಕಲಾ ನಾಟಕ ಮಂಡಳಿಯ ನಟರುಗಳಾದ ಸೋರಟ್ ಅಶ್ವತ್ಥ, ವಾಸುದೇವ ಗಿರಿಮಾಜಿ, ಎಚ್.ಪಿ.ರಾಮಾಚಾರ್. ಎಂ. ವಿ. ನಾರಾಯಣರಾವ್ ಮತ್ತು ಎಚ್.ಕೆ. ಸತ್ಯನಾರಾಯಣ ಶಾಸ್ತ್ರೀಯವರನ್ನು ಸನ್ಮಾನಿಸಿ ಗೌರವಿಸಲಾಗಿದ್ದಿತು. ಎಲ್ಲಕ್ಕೂ ಮುಖ್ಯವಾಗಿ ನಾಟಕರತ್ನ ಡಾ|| ಗುಬ್ಬಿ ವೀರಣ್ಣ ಜನ್ಮ ಶತಮಾನೋತ್ಸವ (೧೪ - ೧೬ ಮಾರ್ಚ್ ೧೯೯೨) ವನ್ನು ಆಚರಿಸಿದಂದಿನ ವಿಚಾರ ಸಂಕಿರಣದಲ್ಲಿ ಹಿರಿಯರಾದ ಜಿ.ವಿ. ಅಯ್ಯರ್, ಎಚ್.ಕೆ. ಯೋಗಾನರಸಿಂಹ ಸೋರಟ್ ಅಶ್ವತ್ಥ, ಎನ್.ಎಸ್.ವಾಮನ್, ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಜಿ.ವಿ. ಶಿವಾನಂದ್ ಮುಂತಾದವರು ಪಾಲ್ಗೊಂಡಿದ್ದರು. ಅಲ್ಲದೆ ಅಂದಿನ ರಂಗ ಸಂಗೀತ ಕಾರ್ಯಕ್ರಮದಲ್ಲಿ ಜುಬೇದಬಾಯಿ ಸವಣೂರ, ಎಚ್.ಕೆ. ಯೋಗಾನರಸಿಂಹ, ಮಹದೇವಪ್ಪ, ಕೆ. ಪ್ರಕಾಶ್ ಶೆಣೈ, ಜಯರಾಂ ಪಾಟೀಲ್ ಮತ್ತು ಲಕ್ಷ್ಮೀಶ್ ಮುಂತಾದ ಹಿರಿಯ ಕಿರಿಯ ವೃತ್ತಿ ಮತ್ತು ಹವ್ಯಾಸಿ ರಂಗಕಲಾವಿದರನ್ನು ಒಂದೆಡೆ ಕಲೆಹಾಕಲಾಗಿದ್ದಿತು. ಗುಬ್ಬಿ ಕಂಪನಿ ಕಲಾವಿದರಾಗಿ ಸೇವೆಗೈದ ಎಂ.ಎಸ್. ಆರಾಧ್ಯ, ಜಿ.ವಿ. ಮಾಲತಮ್ಮ, ಜುಬೇದಬಾಯಿ ಸವಣೂರ, ಬಿ.ಕೆ.ಸಿದ್ಧಲಿಂಗಯ್ಯ ಮತ್ತು ಎಂ.ಎಲ್. ಬಸವಣ್ಣ, ಇವರನ್ನು ಸನ್ಮಾನಿಸಲಾಯಿತು. ಅಲ್ಲದೆ

ಸಂಘದ ವತಿಯಿಂದ ಪಾ.ಗುಂಡೂರಾಯರ 'ಸಾಹುಕಾರ' ವೃತ್ತಿ ನಾಟಕವನ್ನು ಪ್ರದರ್ಶಿಸಲಾಯಿತು. ಇದೇ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ವಾಸು ಅವರು ೧೩ ಮಾರ್ಚ್ ೧೯೯೬ ರಂದು ಸಂಘದ ೩೫ನೆಯ ಹುಟ್ಟುಹಬ್ಬದ ಅಂಗವಾಗಿ ನಾಟಕ ಶಿರೋಮಣಿ ಎ.ವಿ. ವರದಾಚಾರ್ಯ, ನಟರತ್ನ ಎಂ.ವಿ. ಸುಬ್ಬಯ್ಯನಾಯ್ಡು ಮತ್ತು ನಾಟ್ಯಕೇಸರಿ ಕಂದಗಲ್ಲ ಹಣಮಂತರಾಯರನ್ನು ನೆನೆದು ಅವರ ಜೀವನ ಸಾಧನೆ ಕುರಿತು ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಆ-ಧೀಮಂತರ ನಾಟಕ ಪ್ರದರ್ಶನಗಳ ಮೂಲಕ ಸ್ಮರಿಸಿಕೊಂಡರು. ಅಂತೆಯೇ ಕಣಗಾಲ್ ಪ್ರಭಾಕರ ಶಾಸ್ತ್ರೀಯವರ *'ಪ್ರಚಂಡ ರಾವಣ'* ನಂಜನಗೂಡು ಶ್ರೀಕಂಠಶಾಸ್ತ್ರಿಗಳ *'ನಿರುಪಮ'* ಮತ್ತು ಕಂದಗಲ್ಲರ *'ರಕ್ತರಾತ್ರಿ'* ಪ್ರದರ್ಶನಗಳಾದುವು. ಅಲ್ಲದೆ ಕನ್ನಡ ನಾಡಿನ ಕಿಂದರಿ ಜೋಗಿ, ವರಕವಿ ಡಾ|| ದ.ರಾ.ಬೇಂದ್ರೆಯವರ ಕುರಿತು ವಿಶೇಷ ಕಾರ್ಯಕ್ರಮಗಳಾದುವು.

ವಾಸು ಅವರ ಕರ್ಣಧಾರತ್ವದಲ್ಲಿ 'ಅಮರ ಕಲಾ ಸಂಘ' ತನ್ನ ನಲವತ್ತು ವಸಂತಗಳನ್ನು ಕಂಡು ನಲವತ್ತೊಂದನೆಯ ಹುಟ್ಟುಹಬ್ಬದ ನಿಮಿತ್ತ ವರ್ಷವಿಡೀ 'ಶತಮಾನ ೨೧ ಅಮರ ಕಲಾ ಸಂಘ ೪೧' ಎಂಬ ಶೀರ್ಷಿಕೆಯಡಿ ರಂಗ ಕಾರ್ಯಕ್ರಮಗಳನ್ನು ಆಚರಿಸಿ ಮುಂದುವರಿಯುತ್ತಿದೆ.

ವಾಸು ಅವರು ತಮ್ಮ ಅಸಾಧಾರಣ ಸಂಘಟನಾ ಚಾತುರ್ಯ ಮತ್ತು ಸಾಮರ್ಥ್ಯದಿಂದ ಸಹರಂಗ ತಂಡಗಳ ಮತ್ತು ಸಹರಂಗಕರ್ಮಿಗಳ ಗಮನ ಸೆಳೆದು ಸ್ನೇಹ ಸಂಪಾದಿಸಿದ್ದಾರೆ, ಮತ್ತವರು ತಲೆದೂಗುವಂತೆ ಮಾಡಿದ್ದಾರೆ. ಅವರೊಂದಿಗೆ ಮೃದುಭಾಷಿ ಮನೋಭಾವವನ್ನು ಬೆಳೆಸಿಕೊಂಡಿದ್ದಾರೆ. ಇದರಿಂದಾಗಿ ಮೈಸೂರು ರಂಗಭೂಮಿಗೆ ವೈವಿಧ್ಯಮಯ ವಾತಾವರಣವನ್ನು ತಂದಿತ್ತಿದ್ದಾರೆ. ವ್ಯವಹಾರಜ್ಞರಾಗಿ ತಂಡಕ್ಕೆ ಖರ್ಚುವೆಚ್ಚವು ಹೊರೆಯಾಗದಂತೆ ನೋಡಿಕೊಂಡು, ಅಡೆತಡೆಗಳನ್ನು ನಿಭಾಯಿಸಿಕೊಂಡು ಅದನ್ನು ಸರಿದೂಗಿಸಿದ್ದಾರೆ. ರಂಗಭೂಮಿಗೆ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡ ಪರಿಣಾಮವಾಗಿ ಅವರು ದಣಿವರಿಯದೆ ದುಡಿಯಬಲ್ಲರು, ಇತರರ ಶಕ್ತಿ ಸಾಮರ್ಥ್ಯಗಳನ್ನು ಗ್ರಹಿಸಿ ಅವರಿಂದ ಕೆಲಸ ತೆಗೆದುಕೊಳ್ಳಬಲ್ಲರು, ದುಡಿಸಿಕೊಳ್ಳಬಲ್ಲರು. ರಂಗಭೂಮಿಯ ಆಗುಹೋಗುಗಳನ್ನು, ಕಷ್ಟನಿಷ್ಠುರಗಳನ್ನು ಮತ್ತು ಏಳುಬೀಳುಗಳನ್ನು ವಿಶದವಾಗಿ ಕಂಡುಂಡವರು. ಕೆಲವು ವೇಳೆ ಅವರು ಅನ್ಯಮನಸ್ಕರಾಗಿರುವುದನ್ನು ನಾನು ಕಂಡಿದ್ದೇನಾದರೂ ತಾಳ್ಮೆ ಕಳೆದುಕೊಂಡುದನ್ನು ಮಾತ್ರ ನಾನೆಂದೂ ನೋಡಿಲ್ಲ. ಇದೇ ಅವರ ಕಾರ್ಯಸಾಧನೆಯ ಹಿಂದಿನ ಅದಮ್ಯ ಶಕ್ತಿ ಮತ್ತು ಸ್ಫೂರ್ತಿ. ಅರೆಬರೆ ಕೆಲಸದಲ್ಲಿ ಅವರಿಗೆ ಸುತರಾಂ ನಂಬಿಕೆಯಿಲ್ಲ. ಅದು ಅವರಿಗೆ ಒಗ್ಗದ ಕೆಲಸ. ವಾಸು ಅವರು ವಿನೋದಪ್ರಿಯರು ಕೂಡ. ನಿಶಿತಮತಿಯಾಗಿ ತಮ್ಮ ಲಘು ಹಾಸ್ಯದಿಂದ ಸಂಘಟನಾಕ್ರಿಯೆಯಲ್ಲಿ ಎದುರಾಗುವ ಯಾವುದೇ ಕಗ್ಗಂಟನ್ನು ಬಿಡಿಸಬಲ್ಲರು ಮತ್ತು ಒತ್ತಡವನ್ನು ಸಡಿಲಗೊಳಿಸಬಲ್ಲರು. ಇದು ಅವರ ರಂಗಬದ್ಧತೆಯ ದ್ಯೋತಕವಾಗಿದೆ. ಅಂತೆಯೇ ಅವರು ಯಾವುದೇ ಸ್ಥಿತಿಗತಿ ಪರಿಸ್ಥಿತಿಯಲ್ಲಿಯೂ ಜಗ್ಗದೆ, ಕುಗ್ಗದೆ, ಹಿಗ್ಗದೆ, ಬಗ್ಗದೆ ಮುನ್ನಡೆಯುವ ಛಾತಿ ಪಡೆದಿದ್ದಾರೆ. ಯಾವುದೇ ರಂಗ ಸಂಬಂಧಿ ಕೆಲಸವೆಂದರೆ ಸಾಕು ಶೀಘ್ರವಾಗಿ ಸ್ಪಂದಿಸುತ್ತಾರೆ. ಪ್ರತ್ಯಕ್ಷ ಪರೋಕ್ಷವಾಗಿ ಹೆಗಲೆಣೆಯಾಗಿ ನಿಲ್ಲುತ್ತಾರೆ.

ನಿರ್ದೇಶನ

ಕಳೆದ ಶತಮಾನದ ಆರಂಭದ ದಶಕಗಳ ಸಾಹಿತ್ಯ ಸಂದರ್ಭದಲ್ಲಿ ಮೂಡಿಬಂದಂಥ

ಪ್ರತಿಭಾನ್ವಿತ ನಾಟಕಕಾರರ ಒಂದಲ್ಲ ಒಂದು ಕೃತಿಯನ್ನು ವಾಸು ಅವರು ನಿರ್ದೇಶಿಸಿದ್ದಾರೆ. ಕೈಲಾಸಂ, ಶ್ರೀರಂಗ, ಪರ್ವತವಾಣಿ, ದಾಶರಥಿ ದೀಕ್ಷಿತ್ ಮತ್ತು ಆ ನಂತರದ ನವರತ್ನ ಲಕ್ಷ್ಮಣ್, ಎ.ಎಸ್.ಮೂರ್ತಿ, ಕೈವಾರ ರಾಜಾರಾವ್ ಮತ್ತು ಕೆ. ಗುಂಡಣ್ಣ ಮುಂತಾದವರ ಜನಪ್ರಿಯ ನಾಟಕಗಳ ಪ್ರದರ್ಶನದಿಂದಾಗಿ ಮನೋಪ್ರೇಕ್ಷಕ ವರ್ಗದವರಿಗೆ ಮುದ ನೀಡಿದ್ದಾರೆ. '*ತಿರುಗಿಬಿದ್ದ ತಿರುವ್*' ಮತ್ತು '*ವಿಪರೀತಕ್ಕೆ ಬಂತು ವಿವಾಹ*' ದಂತಹ ತಮ್ಮ ಶಾಲಾ ನಾಟಕಗಳಿಂದ ಮೊದಲ್ಗೊಂಡು ಜ್ಞಾನ ಪೀಠಪ್ರಶಸ್ತಿ ವಿಜೇತ ಗಿರೀಶ್ ಕಾರ್ನಾಡರ '*ತುಘಲಕ್*' ವರೆಗೆ ಅವರ ನಿರ್ದೇಶನ ವಿಸ್ತಾರ ಹರಡಿಕೊಂಡಿದೆ. ಇಡೀ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ (೧೯೭೭-೭೮) '*ತುಘಲಕ್*' ನಾಟಕವನ್ನು ರಂಗಕ್ಕೆ ತಂದ ಕೀರ್ತಿ ಮತ್ತು ಸಾಹಸ ಅಮರ ಕಲಾ ಸಂಘದ ವಾಸು ಅವರದು. ಅವರು ನಟಿಸಿ ನಿರ್ದೇಶಿಸಿದ ಆರ್.ಡಿ. ಕಾಮತ್‌ರ '*ಸಾಕ್ರಟೀಸ್*' (ಸಾಕ್ರಟೀಸ್‌ನಾಗಿ) ಮತ್ತು ಜಿ.ವಿ.ಶಿವಾನಂದರ '*ಭ್ರಮೆ*' (ರಂಗಣ್ಣನಾಗಿ) ಹವ್ಯಾಸಿ ರಂಗದ ಮೈಲುಗಲ್ಲುಗಳು. ಈ ಸಾಲಿನ ಇತರ ನಾಟಕಗಳೆಂದರೆ ಸಾಹಿತಿಯಾಗಿ ಅ.ನ.ಸುಬ್ಬರಾಯರ '*ಕಾಬೂಲಿವಾಲ*' ೧೯೬೭ ಮತ್ತು ಕನಕ ದಾಸನಾಗಿ ಆರ್.ಡಿ. ಕಾಮತ್‌ರ '*ಕನಕನ ಕಿಂಡಿ*' ೧೯೬೭ ಮುಂತಾದವು. ಅವರ ನಿರ್ದೇಶಿತ ನಾಟಕಗಳಲ್ಲಿ ಪ್ರಮುಖವಾದುವೆಂದರೆ ಶ್ರೀರಂಗರ '*ಸಂಜೀವಿನಿ*', ನಿರಂಜನರ '*ಸಾಮ್ರಾಜ್ಞ*' ಮತ್ತು ಬಿ.ವಿ. ವೈಕುಂಠರಾಜು ಅವರ '*ಸಂದರ್ಭ*' ಹಾಗೂ ನಿರ್ಮಾಣಗೊಂಡ ಕೃತಿಗಳೆಂದರೆ ಚಂದ್ರಶೇಖರ ಕುಂಬಾರರ '*ಹರಕೆಯ ಕುರಿ*', ಎಚ್.ಕೆ. ಯೋಗಾನರಸಿಂಹರ '*ಕೈಕಾರಾಣಿ*', '*ಚಂದ್ರಹಾಸ*' ಮತ್ತು '*ರಣಧೀರ ಕಂಠೀರವ*', ಕುವೆಂಪುರವರ '*ಅರಸಿ ಬಂದ ಆತ್ಮ*' ವಿಜಯ ತೆಂಡುಲ್ಕರ್‌ರ ಸದ್ದು, ವಿಚಾರಣೆ ನಡೆಯುತ್ತಿದೆ, ದಾಶಿರಥಿ ದೀಕ್ಷಿತರ '*ಗಾಂಪರ ಗುಂಪು*' ಪ್ರೇಮಾ ಕಾರಂತರ '*ಕುರುಡು ಕಾಂಚಾಣ*' ಮತ್ತು ಎ.ಎಸ್. ಮೂರ್ತಿಯವರ *ಶುದ್ಧಿ ಶುಂಠಿ* ಮುಂತಾದವುಗಳು.

## ಸ್ಮರಣೆ

ವಾಸುರವರ ರಂಗ ಉತ್ಕರ್ಷಕ್ಕೆ ಕಾರಣೀಭೂತರಾದವರು ಹಲವಾರು ಮಂದಿ ಅಂತೆಯೇ ಅವರನ್ನು ವಾಸು ಅವರು ಬಹಳ ಪ್ರೀತಿ, ಅಭಿಮಾನ ಮತ್ತು ಕೃತಜ್ಞತಾಭಾವದಿಂದ ನೆನಪಿಸಿಕೊಳ್ಳುತ್ತಾರೆ. ಅವರ ಕಲಿಕೆಯ ಅವಧಿಯಲ್ಲಿ ಶಾರದಾ ವಿಲಾಸ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ದಾನಶೂರಕರ್ಣ ಕೃತಿ ಖ್ಯಾತಿ ಪ್ರೊ|| ಎಂ.ಎಸ್. ರಾಮಸ್ವಾಮಿ ಮತ್ತು ತದನಂತರ ಡಾ|| ಸಿಂಧುವಳ್ಳಿ ಅನಂತಮೂರ್ತಿಯವರು ಸ್ಫೂರ್ತಿದಾಯಕರಾಗಿದ್ದರು. ಮೈಸೂರಿನಲ್ಲಿ ಇಂಡಿಯನ್ ಬ್ಯಾಂಕ್ ಉದ್ಯೋಗಿಯಾಗಿದ್ದ ಕೆ.ವಿ. ರಾಮನ್ ಮತ್ತು *ಅರುಣ* ಪತ್ರಿಕೆಯ ಸಂಪಾದಕ ಕೆ. ರಾಮಣ್ಣ, ಹಿರಿಯ ನಟ ಹೆಚ್.ಜಿ. ಸೋಮಶೇಖರ್‌ರಾವ್ ನಿರ್ದೇಶಕ ಆರ್. ನಾಗೇಶ್, ಸಂಘಟಕ ಕಪ್ಪಣ್ಣ ಶ್ರೀನಿವಾಸ್ ಮತ್ತು ಮೇಕಪ್ ನಾಣಿ ಮೊದಲಾದವರು ವಾಸುರವರ ರಂಗಜೀವನದ ಪ್ರಾರಂಭದಲ್ಲಿ ಬಹಳ ಸಲಹೆ ಸಹಕಾರಗಳನ್ನಿತ್ತವರು. ಕಪ್ಪಣ್ಣ ಮತ್ತು ನಾಗೇಶ್‌ರವರನ್ನು ತಮ್ಮ ನೇಪಥ್ಯ ಗುರುಗಳೆಂದು ಭಾವಿಸುತ್ತಾರೆ. ಮುಂದುವರಿದಂತೆ ಜಿ.ವಿ. ಶಿವಾನಂದ್, ಬಿ. ಜಯಶ್ರೀ ಮತ್ತು ಪ್ರೊ|| ಗುರುರಾಜಾರಾವ್‌ರೊಂದಿಗೆ ಒಡನಾಟದಿಂದಾಗಿ ಅವರ ರಂಗವ್ಯಕ್ತಿತ್ವ, ಸ್ಪಷ್ಟ ರೂಪ ತಳೆಯಿತು. ಅಲ್ಲದೆ ಎಚ್.ವಿ. ಶಂಕರರಾವ್, ಡಾ|| ಪಿ.ಆರ್. ಸೀತಾರಾಂ, ಟಿ. ಆರ್. ಹರೀಶ್, ಆರ್. ಗುರು, ಎಂ.ಎಚ್. ರಾಜಾರಾವ್, ಫಲಾಮೃತದ ಗುಂಡಪ್ಪ, ಆರ್.ಎನ್. ಮೂರ್ತಿ ಆರ್. ಕೃಷ್ಣ,

ಎಂ. ವಿ. ನರಸಿಂಹಯ್ಯ, ಎಂ. ಲಕ್ಷ್ಮಿನಾರಾಯಣ್ ಮತ್ತು ಎಸ್.ಎಲ್. ರಾಮಚಂದ್ರ ಹೀಗೆ ಇನ್ನೂ ಅನೇಕರು ನೆರವಾಗಿದ್ದಾರೆ.

**ಗುಣಗೌರವ**

ವಾಸು ಅವರ ಅನುಪಮ ರಂಗಸೇವೆಯನ್ನು ಗುರುತಿಸಿ ನಾಡಿನ ಅನೇಕ ಪ್ರತಿಷ್ಠಿತ ಸಂಘ ಸಂಸ್ಥೆಗಳು ಸನ್ಮಾನಿಸಿ ಪ್ರಶಸ್ತಿಗಳನ್ನಿತ್ತು ಗೌರವಿಸಿವೆ. 'ಕದಂಬ ರಂಗವೇದಿಕೆ' ೧೯೭೯ 'ಸಮತೆಂತೋ' ೧೯೯೩, ಹವ್ಯಾಸಿ ರಂಗ ಸಂಸ್ಥೆಗಳು ತಮ್ಮ ಬೆಳ್ಳಿ ಹಬ್ಬದ ಸಂದರ್ಭದಲ್ಲಿಯೂ, ಉಜ್ವಲ ಕನ್ನಡ ಕಲಾಮಂದಿರ ಮತ್ತು ಡಾ|| ಬಿ.ಆರ್. ಅಂಬೇಡ್ಕರ್ ಜ್ಯೋತಿ ಲಲಿತ ಕಲಾ ಮಂಡಳಿ ೧೯೯೬ ಮತ್ತು ಮಲ್ಲಾಡಿಹಳ್ಳಿ ಶ್ರೀರಾಘವೇಂದ್ರ ಸ್ವಾಮಿಯನ್ನು ಹಾಗೂ ಮೈಸೂರಿನ ರೋಟರಿ ಸಂಸ್ಥೆ (ಪಶ್ಚಿಮ) ಮತ್ತಿತರರು ಸಾರ್ವಜನಿಕವಾಗಿ ಸನ್ಮಾನಿಸಿರುವರು. ಅಲ್ಲದೆ ಕರ್ನಾಟಕ ನಾಟಕ ಅಕಾಡೆಮಿಯು (೧೯೯೪) ವಾಸು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ರಂಗಭೂಮಿ ಬಗೆಗಿನ ವಾಸು ಅವರ ಕಾಳಜಿ ಅನನ್ಯ ಅನೂನ್ಯ ಮತ್ತು ಅಸಮಾನ್ಯವಾದುದು. ಅವರು ರಂಗಭೂಮಿಯ ಯಾವುದೇ ಪಂಥ, ಗುಂಪು, ಸಿದ್ಧಾಂತ ರಾದ್ಧಾಂತಗಳೊಂದಿಗೆ ಪಕ್ಕಾಗಿ ಗುರುತಿಸಿಕೊಳ್ಳದೆ ಹಾಗೂ ಬಣಗಳಿಗೆ ಈಡಾಗದೆ ಸಮಗ್ರ ಬಣ್ಣದ ಬಣಕ್ಕೆ ಸೇರಿದವರಾಗಿದ್ದಾರೆ. ಶಿಸ್ತು, ಶ್ರದ್ಧೆ, ಶ್ರಮ ಇವು ತಮ್ಮ ಚಟುವಟಿಕೆಗಳಲ್ಲಿ ಅನುಸರಿಸುವ ಮೂರು ಪ್ರಧಾನ ಅಂಶಗಳು. ಮನೋರಂಜನೆಯನ್ನು ಬಯಸಿ ರಂಗಮಂದಿರದ ಒಳಗೆ ಪ್ರವೇಶಿಸುವ ಯಾವುದೇ ಒಬ್ಬ ಪ್ರೇಕ್ಷಕನಿಗೆ ಎಂದೂ ನಿರಾಶೆಯಾಗಬಾರದು ಎಂಬ ದೃಢ ನಿಲುವು ಅವರದು. ರಂಗಭೂಮಿಯನ್ನು ಅವರು ಹೊತ್ತು ಕಳೆಯುವ ಸಾಧನವೆಂಬುದಾಗಿ ಎಂದೂ ಪರಿಗಣಿಸಿದವರಲ್ಲ. ನೇಪಥ್ಯಗಾರರಿಗೆ ರಂಗದ ಮೇಲೆ ರಾರಾಜಿಸುವ ಕಲಾವಿದರ ಗ್ಲಾಮರಸ್ ಆಕರ್ಷಣೆ ಇಲ್ಲದಿರಬಹುದು. ಆದರೆ ಪ್ರಯೋಗಕ್ಕೆ ಸಪೂರಕವಾಗಿ ಹಾಗೂ ಪರಿಣಾಮಕಾರಿಯಾಗಿ ನೆರವಾಗುವ ತಾಂತ್ರಿಕ ತಜ್ಞರ ಪಾತ್ರ ಹಿರಿದು ಎಂಬುದನ್ನು ಅರಿತು ಪ್ರೇಕ್ಷಕ ವರ್ಗದ ಸಂಖ್ಯೆಯನ್ನು ವೃದ್ಧಿಸಿದ್ದಾರೆ. ರಂಗಭೂಮಿಯ ಇಂದಿನ ಪರಿಸ್ಥಿತಿಯನ್ನು ಅವಲೋಕಿಸುತ್ತ ಪ್ರೇಕ್ಷಕರು ಪ್ರಬುದ್ಧರಾಗಿದ್ದಾರೆ. ಮತ್ತು ಬದಲಾದ ಆಧುನಿಕ ರಂಗಭೂಮಿಯನ್ನು ಗ್ರಹಿಸಿದ್ದಾರೆ ಎಂದು ಅಭಿಪ್ರಾಯಪಡುವರು.

*'Mystery of the Dark Jungle'* ಎಂಬ ಚಲನಚಿತ್ರದಲ್ಲಿ ಕಾಣಿಸಿಕೊಂಡಿದ್ದರೂ (೧೯೭೫) ಮತ್ತು ಪಾತ್ರಧಾರಿಯಾಗಿ *'ಬಂಗಾದರ ಗೆಜ್ಜೆ'* (ನಿ : ಪಿ. ಶೇಷಾದ್ರಿ) ಹಾಗೂ *'ಕೊನೆಯ ನಿರ್ಧಾರ'* (ನಿ: ಟಿ.ಎನ್. ಸೀತಾರಾಂ) ಮತ್ತು ನಿರ್ವಾಹಕನಾಗಿ *'ಸಾಕ್ಷಿ ಹೇಳಿದ ಶೀಷೆ'* (ನಿ: ಎಚ್. ಕೆ. ಯೋಗಾನರಸಿಂಹ) ದೂರದರ್ಶನ ತಯಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಅವರ ಪ್ರಥಮ ಹಾಗೂ ಕೊನೆಯ ಆಯ್ಕೆ ರಂಗಭೂಮಿಯೇ ಆಗಿದೆ. ತಮ್ಮನ್ನು ಇಷ್ಟೊಂದು ಅಗಾಧ ಪ್ರಗಾಢವಾಗಿ ರಂಗದೊಡನೆ ಗುರುತಿಸಿಕೊಂಡಿದ್ದರೂ ತಾವಿನ್ನು ಕಲಿಯುವುದು ಬಹಳಷ್ಟಿದೆ ಎಂಬ ಖಚಿತ ಧೋರಣೆ ಹೊಸದಾಗಿ ರಂಗಭೂಮಿಯನ್ನು ಸೇರಬಯಸುವವರಿಗೆ ಅನುಕರಣೀಯವಾಗಿದೆ. ಅಂತೆಯೇ ಅವರು ಮೈಸೂರು ರಂಗಭೂಮಿಯ ಅಧ್ವರ್ಯುಗಳಲ್ಲೊಬ್ಬರು.



# ಚಿತ್ತರಂಜನ ಚಟರ್ಜಿ

— ಈರಣ್ಣ ಪಾಳೇಗಾರ್

ನಾಟಕ ಜೀವನವಲ್ಲ, ನಾಟಕ ಜೀವನವನ್ನು ಸುಧಾರಿಸಬೇಕು. ಹೊಸ ಸಮಾಜ ರಚನೆಗೆ ನಾಟಕ ಉಪಕರಣವಾಗಬೇಕು ಎನ್ನುವ ಕನಸು ಹೊತ್ತು, ನನಸಾಗಿಸಲು ಜೀವನವನ್ನೇ ಮುಡಿಪಾಗಿರಿಸಿದ ವ್ಯಕ್ತಿ ಶ್ರೀ ಚಿತ್ತರಂಜನ ಚಟರ್ಜಿ. ನಮ್ಮ ದೇಶದಲ್ಲಿ ಅನೇಕ ರಂಗ ಕರ್ಮಿಗಳಿದ್ದಾರೆ, ನಾಟಕಕಾರರಿದ್ದಾರೆ, ಕವಿಗಳಿದ್ದಾರೆ, ಲೇಖಕರಿದ್ದಾರೆ, ನಟರಿದ್ದಾರೆ, ನಿರ್ದೇಶಕರಿದ್ದಾರೆ, ನೇಪಥ್ಯ ಕಲಾವಿದರಿದ್ದಾರೆ, ರಂಗ ಸಂಘಟಕರಿದ್ದಾರೆ. ಆದರೆ ರಂಗಶಿಲ್ಪಿಗಳು ವಿರಳ. ಅಲ್ಲದೆ ಈ ಎಲ್ಲವೂ ಒಬ್ಬರಲ್ಲಿ ಕಾಣುವುದು ಅತೀ ವಿರಳ. ಅಂಥಾ ವಿರಳ ವ್ಯಕ್ತಿಗಳಲ್ಲಿ ಚಿತ್ತರಂಜನ ಚಟರ್ಜಿಯವರು ಒಬ್ಬರಾಗಿದ್ದಾರೆ.

ಬಂಗಾಲದವರಾದ ಚಿತ್ತರಂಜನರು ಕರ್ನಾಟಕಕ್ಕೆ ಉದ್ಯೋಗ ಅನ್ವೇಷಣಾರ್ಥ ಬಂದು; ಹುಬ್ಬಳ್ಳಿಯಲ್ಲಿ ನೆಲೆಸುವದರೊಂದಿಗೆ ಕರ್ನಾಟಕವನ್ನು ತಮ್ಮ ಮನೆಯನ್ನಾಗಿಸಿಕೊಂಡರು. ಉದ್ಯೋಗದೊಂದಿಗೆ ಕಲೆಯನ್ನು ಉಸಿರಾಗಿಸಿಕೊಂಡ ಇವರು ಕನ್ನಡ ರಂಗಭೂಮಿಯ ಆವಿರ್ಭಾವಕ್ಕೆ ದುಡಿಯುವ ಪಣ ತೊಟ್ಟರು. ರಂಗಭೂಮಿಯೇ ತನ್ನ ಸರ್ವಸ್ವವೆಂದು ನಂಬಿ, ತನ್ನ ಇಡೀ ಜೀವನವನ್ನೇ ರಂಗಭೂಮಿಗಾಗಿ ಧಾರೆಯೆರೆದ ತ್ಯಾಗಜೀವಿ. ಇವರ ಹೆಸರೇ ಸೂಚಿಸುವಂತೆ ಇವರ ಚಿತ್ತ (ಚಿತ್ತರಂಜನ) ರಂಜನಕ್ಕಾಗಿಯೇ ಇದೆ. ಇವರ ಜೀವನ ವರ್ಣಮಯವಾದುದು. ಚಿತ್ತರಂಜನ ಚಟರ್ಜಿಯವರ ರಂಗನಿಷ್ಠೆ ಅಸಮಾನವಾದುದು. ಆದರೆ ಅವರ ಸರಳತೆ ಯಾರನ್ನಾದರೂ ಬೆರಗುಗೊಳಿಸುವಂತಹದು.

## ಕೌಟುಂಬಿಕ ಹಿನ್ನೆಲೆ.

ಚಿತ್ತರಂಜನರ ತಂದೆಯ ಹೆಸರು ಕಾಲಿಪ್ರಸನ್ನ ಹಾಗೂ ತಾಯಿಯ ಹೆಸರು ಸುನೀತಿ ಚಟರ್ಜಿ, ಕಾಲಿಪ್ರಸನ್ನರವರು ಇನ್‌ಕಮ್ ಟ್ಯಾಕ್ಸ್. ಪ್ರಾಕ್ಟೀಶನರರಾಗಿದ್ದರು. ಕಾಲಿಪ್ರಸನ್ನರು ದುರ್ಗಾಚರಣ, ಕಾಲಿಪ್ರಸನ್, ಗುರುಪ್ರಸಾದ, ರಮೇಶ ಚಂದ್ರ. ನಾಲ್ಕು ಜನ ಅಣ್ಣ ತಮ್ಮಂದಿರು. ಎಲ್ಲರೂ ಕೂಡಿಯೇ ವಾಸಿಸುತ್ತಿದ್ದರು. ಇವರ ಮೂಲ ಸ್ಥಳ ಅಖಂಡ ಬಂಗಾಲದ ಬರಿಸಾಲ ಜಿಲ್ಲೆಯ ಕಾಲಿಗಂಜ ಠಾಣಾ. (ಅದು ಈಗಿನ ಬಾಂಗ್ಲಾ ದೇಶದಲ್ಲಿದೆ). ಅಲ್ಲಿ ಇವರು ಪಿತ್ರಾರ್ಜಿತ ಆಸ್ತಿ ಪಾಸ್ತಿ ಹೊಂದಿದ್ದರು. ಭಾರತ ಸ್ವಾತಂತ್ರ್ಯ ಪೂರ್ವದಲ್ಲಿಯೇ ಉದ್ಯೋಗ ನಿಮಿತ್ತ ಹೌರಾ ಜಿಲ್ಲೆಯ ಶಿವಪುರದಲ್ಲಿ ವಾಸವಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಇವರ ಆಸ್ತಿ ಪಾಸ್ತಿಗಳೆಲ್ಲವೂ ಪೂರ್ವಪಾಕಿಸ್ತಾನದಲ್ಲಿ ವಿಲೀನಗೊಂಡು, ಯಾವುದೇ ಪರಿಹಾರ ಸಿಗದೇ ಶಿವಪುರದಲ್ಲಿಯೇ ವಾಸಿಸುವಂತಾಯಿತು. ಚಟರ್ಜಿಯವರದು, ಅವಿಭಕ್ತ ಕುಟುಂಬವಾದರೂ ಸುಸಂಸ್ಕೃತವಾಗಿತ್ತು.

## ಬಾಲ್ಯ ಹಾಗೂ ವಿದ್ಯಾಭ್ಯಾಸ

೧೯೩೬ರಲ್ಲಿ ಜನಿಸಿದ ಚಿತ್ತರಂಜನರು ಬೆಳೆದದ್ದು ಅವಿಭಕ್ತ ಕುಟುಂಬವಾದ್ದರಿಂದ ಸಾಂಘಿಕ ಜೀವನ ರೂಢಿಯಾಗಿತ್ತು. ಜೊತೆಗೆ ಚಿಕ್ಕಮ್ಮನಾದ ಲೀಲಾವತಿ (ರಮೇಶಚಂದ್ರರ ಪತ್ನಿ) ಅವರ ಶಿಸ್ತು, ಸಮಯ, ಪ್ರಜ್ಞೆ ಚಿತ್ತರಂಜನರನ್ನು ಸದಾ ಜಾಗೃತರನ್ನಾಗಿಸಿತ್ತು. ಸುಸಂಸ್ಕೃತ ಕುಟುಂಬದಲ್ಲಿ ಬೆಳೆದ ಇವರ ಬಾಲ್ಯ ಜೀವನ ಅವರ ಬದುಕಿಗೆ ಆಧಾರಸ್ತಂಭವಾಯಿತು.

ಚಿತ್ತರಂಜನರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಶಿವಪುರದಲ್ಲಿ ಮುಗಿಸಿದರು. ಕಲಕತ್ತಾ ವಿಶ್ವವಿದ್ಯಾಲಯದಿಂದ ಮೆಟ್ರಿಕುಲೇಶನ್ ಪರೀಕ್ಷೆ ಪಾಸು ಮಾಡಿದರು. ಈ ವೇಳೆಗಾಗಲೇ ಅವಿಭಕ್ತ ಕುಟುಂಬ ವಿಭಜನೆಯಾಗಿ ಎಲ್ಲರೂ ಬೇರ ಬೇರೆ ಆಗಿದ್ದರು. ಚಿತ್ತರಂಜನರು ಮೆಟ್ರಿಕುಲೇಶನ್ ಓದುತ್ತಿದ್ದಾಗ ಕಾಲಿಪ್ರಸನ್ನರು ಅಕಸ್ಮಾತ್ತಾಗಿ ಹೃದಯಾಘಾತದಿಂದ ನಿಧನರಾದರು. ಕಾಲಿಪ್ರಸನ್ನರ ಮೂರು ಜನ ಗಂಡು ಮಕ್ಕಳಲ್ಲಿ ಚಿತ್ತರಂಜನರೇ ಹಿರಿಯರಾಗಿದ್ದರು.

ತಂದೆಯವರ ನಿಧನದ ನಂತರ ಚಿಕ್ಕಪ್ಪನವರಲ್ಲಿ ಆಶ್ರಯ ಪಡೆದ ಚಿತ್ತರಂಜನರ ಮೇಲೆ ಮನೆತನದ ಜವಾಬ್ದಾರಿಯೊಂದಿಗೆ ಇಬ್ಬರು ತಮ್ಮಂದಿರರಾದ ನಾರಾಯಣನ್ ಹಾಗೂ ಸನಾತನರ ವಿದ್ಯಾಭ್ಯಾಸದ ಭಾರವೂ ಇವರ ಮೇಲೆಯೇ ಬಿದ್ದಿತು. ಹೀಗಾಗಿ ಅವರು ಮನೆತನ ನಡೆಸಲು ಉದ್ಯೋಗ ಮಾಡಲೇಬೇಕಾಯಿತು. ಆದರೆ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಛಲದಿಂದ ರಾತ್ರಿ ಕಾಲೇಜಿಗೆ ಸೇರಿ ಇಂಟರ್‌ಮಿಡಿಯೆಟ್ ೧ ಹಾಗೂ ೨ನ್ನು ಮುಗಿಸಿದರು. ಆದರೆ ತಮ್ಮಂದಿರ ವಿದ್ಯಾಭ್ಯಾಸವನ್ನು ಅಲ್ಲಿಗೇ ನಿಲ್ಲಿಸಬೇಕಾಯಿತು.

## ರಂಗಾಸಕ್ತಿ ಹಾಗೂ ಪ್ರೇರಣೆ

ಕಾಲಿಪ್ರಸನ್ನರಿಗೆ ನಾಟಕ ನೋಡುವ ಹವ್ಯಾಸವಿತ್ತು. ಅವರು ಪ್ರತಿ ವಾರವೂ ತಪ್ಪದೇ ನಾಟಕ ನೋಡುತ್ತಿದ್ದರು. ಹೋಗುವಾಗ ತಮ್ಮೊಂದಿಗೆ ಚಿತ್ತರಂಜನರನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೆ ಅವರ ಚಿಕ್ಕಪ್ಪನಾದ ರಮೇಶಚಂದ್ರ ಅವರಿಗೆ ಅತ್ಯುತ್ತಮ ಗ್ರಂಥಗಳನ್ನು ಸಂಗ್ರಹಿಸುವದರೊಂದಿಗೆ ನಾಟಕ ನೋಡುವ ಹುಚ್ಚು ಅವರಲ್ಲಿತ್ತು. ಅವರ ಪತ್ನಿ ಲೀಲಾವತಿ ಉತ್ತಮ ಕಲಾವಿದೆಯಾಗಿದ್ದಳು. ಅವರು ಅಭಿನಯಿಸುವ ಪ್ರತಿಯೊಂದು ನಾಟಕಕ್ಕೂ ಚಿತ್ತರಂಜನರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಚಿಕ್ಕಮ್ಮನ ಒಡನಾಟದಿಂದಾಗಿ ರಂಗಭೂಮಿಯ ಒಡನಾಟ ರಕ್ತಗತವಾಯಿತು.

ಈ ರೀತಿಯ ಪರಿಸರದಲ್ಲಿ ಬೆಳೆದ ಚಿತ್ತರಂಜನರಲ್ಲಿ ಸಹಜವಾಗಿಯೇ ರಂಗಾಸಕ್ತಿ ಬೆಳೆದು ತಾನೂ ರಂಗಪ್ರವೇಶ ಮಾಡಬೇಕೆಂಬ ಹಂಬಲಕ್ಕೆ ಪ್ರೇರಣೇ ದೊರೆಯಿತು. ನಾಟಕದ ಗೀಳು ಮೊಳೆತು ಚಿಗುರೊಡೆಯಿತು. ಚಿಕ್ಕಪ್ಪನ ಗ್ರಂಥ ಭಾಂಡಾರ ಅಧ್ಯಯನ ಕೇಂದ್ರವಾಯಿತು. ಆದರೆ ಚಿಕ್ಕಮ್ಮನ ಗಂಭೀರ ಸ್ವಭಾವ ಹಾಗೂ ಕಟ್ಟುಪಾಡಿನ ನಡತೆಯಿಂದಾಗಿ ರಂಗಾಸಕ್ತಿಯನ್ನು ಮನದಲ್ಲಿಯೇ ಹುದುಗಿಸಿಟ್ಟುಕೊಂಡಿದ್ದರು. ಅಲ್ಲದೆ ಉತ್ತಮ ಅವಕಾಶಕ್ಕಾಗಿ ಇದಿರು ನೋಡುತ್ತಿದ್ದರು.

ಚಿತ್ತರಂಜನರಲ್ಲಿ ಹುದುಗಿದ್ದ ರಂಗ ಪ್ರತಿಭೆಯನ್ನು ಗುರುತಿಸಿ, ಪೋಷಿಸಿ, ಪ್ರೋತ್ಸಾಹಿಸಿದವರು ಶಾಲಾ ಶಿಕ್ಷಕರಾದ ಹೃಷಿಕೇಶ ಚಕ್ರವರ್ತಿಯವರು. ಅವರು ಉತ್ತಮ ನಾಟಕಕಾರರೂ, ನಿರ್ದೇಶಕರೂ ಆಗಿದ್ದರು. ಶ್ರೀ ಹೃಷಿಕೇಶ ಚಕ್ರವರ್ತಿಯವರ ಸಾನಿಧ್ಯದಲ್ಲಿ ದೊರೆತ ರಂಗ ತರಬೇತಿ ಚಿತ್ತರಂಜನರನ್ನು ಭಾವೀ ರಂಗಶಿಲ್ಪಿಯನ್ನಾಗಿಸಲು ಭದ್ರ ಬುನಾದಿಯನ್ನು ಹಾಕಿದರೆ, ಆಗಿನ ಕಾಲದಲ್ಲಿ ರಂಗ ಉತ್ಪಾದನೆಯಲ್ಲಿ ಒಂದು ಹೊಸ ಪಥವನ್ನೇ ಪ್ರಾರಂಭಿಸಿದ್ದ ಶ್ರೀ ಶಂಭುಮಿತ್ರ ಹಾಗೂ ಶಿಶಿರ ಬಹಾದ್ದೂರಿ ಇವರುಗಳ ನಾಟಕ ಉತ್ಪಾದನೆಯ ತಂತ್ರವೈವಿಧ್ಯತೆ ಚಿತ್ತರಂಜನರಲ್ಲಿ ಒಂದು ಹೊಸ ಅಂತದರ್ಶನವನ್ನು ರೂಪಿಸುವದರೊಡನೆ ಇವರಲ್ಲಿ ಸಾಮಾನ್ಯ ಪ್ರತಿಭೆಗೆ ಮೆರಗನ್ನು ನೀಡಿತು. ಶಿಶಿರ ಬಹಾದ್ದೂರಿ ಅವರು ರವೀಂದ್ರನಾಥರ ಸಮಕಾಲೀನರು. ಚಿತ್ತರಂಜನರು ಮೊಟ್ಟಮೊದಲು ಅಭಿನಯಿಸಿದ್ದು ರಾಷ್ಟ್ರಕವಿ ರವಿಂದ್ರನಾಥ ಠಾಗೂರರ 'ದಿ|| ಸಾಕ್ರಿಫೈಸ್' ನಾಟಕದಲ್ಲಿ ಜನಸಿಂಹನ ಪಾತ್ರದಲ್ಲಿ ರವೀಂದ್ರನಾಥ ಠಾಗೂರರೇ ಅಭಿನಯಿಸುತ್ತಿದ್ದ ಈ ಪಾತ್ರದಲ್ಲಿ ಮಿಂಚಿ ಹಿರಿಯರಿಂದ ಪ್ರೋತ್ಸಾಹಿಸಲ್ಪಟ್ಟರು. ಚಿತ್ತರಂಜನರಿಗೆ ವಿದ್ಯಾರ್ಥಿ ದೆಸೆಯಲ್ಲಿಯೇ ಕಥೆ, ಕವನ ಬರೆಯುವ ಹವ್ಯಾಸ ಅಂಟಿಕೊಂಡಿತ್ತು. ಶಾಲೆಯಲ್ಲಿದ್ದಾಗ ಇವರು ಬರೆದ ಅನೇಕ ಕವನಗಳು ಅಲ್ಲಿಯ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿದ್ದವು. ಶಾಲೆಯಲ್ಲಿ ಸಾಹಿತ್ಯಾಭಿಲಾಷಿ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ, ತಿಂಗಳಿಗೊಮ್ಮೆ ಸಾಹಿತ್ಯಗೋಷ್ಠಿ ನಡೆಸಲಾಗುತ್ತಿತ್ತು. ಈ ಗೋಷ್ಠಿಗೆ ಬಂಗಾಲಿಯ ದೊಡ್ಡ ದೊಡ್ಡ ಕವಿಗಳು, ಸಾಹಿತಿಗಳು, ನಾಟಕಕಾರರನ್ನು ಆಹ್ವಾನಿಸಲಾಗುತ್ತಿತ್ತು. ವಿದ್ಯಾರ್ಥಿಗಳು ಅವರ ಮುಂದೆ ತಮ್ಮ ಸ್ವರಚಿತ ಕಥೆ, ಕವನ, ಪ್ರಬಂಧ, ನಾಟಕ ಮುಂತಾಗಿ ಬರೆದು ವಾಚನ ಮಾಡಬೇಕಾಗುತ್ತಿತ್ತು. ಇದರ ಸಂಸ್ಥಾಪಕರಲ್ಲೊಬ್ಬರಾದ ಚಟರ್ಜಿಯವರೇ ಈ ಕಾರ್ಯಕ್ರಮವನ್ನು ನಿರ್ವಹಿಸುತ್ತಿದ್ದರು. ಇದರೊಂದಿಗೆ ಸಾಹಿತ್ಯ ಹಾಗೂ ರಂಗಭೂಮಿಗೆ ಸಂಬಂಧಿಸಿದ ಪಾಕ್ಷಿಕ ಪತ್ರಿಕೆಯೊಂದನ್ನು ಹೊರತರುವ ಭಾರವೂ ಒಂದು ಹೊಸ ಕೃತಿ ಪ್ರಕಟವಾದ ಕೂಡಲೇ ಅದರ ಪರ ಹಾಗೂ ವಿರೋಧಿ ವಿಚಾರಗಳ ಕುರಿತು ಚರ್ಚೆ, ಚಿಂತನ ಮಂಥನ ನಡೆಸಿ, ಅದನ್ನು ಈ ಪಾಕ್ಷಿಕದಲ್ಲಿ ಪ್ರಕಟಿಸಲಾಗುತ್ತಿತ್ತು.

ಆ ಸಮಯದಲ್ಲಿ ಕಲಕತ್ತಾದಲ್ಲಿ ಶಂಭು ಮಿತ್ರರ 'ಬಹುರೂಪಿ' ನಾಟಕ ಕಂಪನಿ ಬಹಳ ಪ್ರಸಿದ್ಧವಾಗಿತ್ತು. ಗೆಳೆಯನೊಂದಿಗೆ ಅವರ ಒಂದು ನಾಟಕ ನೋಡಿದ ಚಟರ್ಜಿ, ಗೆಳೆಯನ ಅಣ್ಣನ ರೆಕಮೆಂಡೇಶನ್ ಮೇಲೆ ಶಂಭು ಮಿತ್ರರ 'ಬಹುರೂಪಿ' ನಾಟಕ ಕಂಪನಿಯಲ್ಲಿ ಅಭಿನಯಿಸುವ ಅವಕಾಶವನ್ನು ಗಿಟ್ಟಿಸಿಕೊಂಡರು. ಇದುವೇ ಅವರ ಜೀವನದಲ್ಲಿ ವಿಶೇಷ ತಿರುವು ನೀಡಿತು. ತಮ್ಮನ್ನು ಸಂಪೂರ್ಣವಾಗಿ ರಂಗಭೂಮಿಗೆ ಸಮರ್ಪಿಸಿಕೊಳ್ಳಲು ಸಿಕ್ಕ ಉತ್ತಮ ಅವಕಾಶವೆಂದು ಈಗಲೂ ಅದನ್ನು ಸದಾ ಮೆಲುಕು ಹಾಕುತ್ತಾರೆ. ಆನಂತರ ಸಾಹಿತ್ಯಕ ಚಟುವಟಿಕೆಗೆ ಕಡಿಮೆಯಾಗಿ ರಂಗಭೂಮಿ ಅಧ್ಯಯನದತ್ತ ಸಂಪೂರ್ಣವಾಗಿ ವಾಲಿಕೊಂಡರು. ವಿಶೇಷವಾಗಿ ಸ್ಟಾನ್‌ಸ್ಲಾವಸ್ಕಿಯ ಎಲ್ಲ ಕೃತಿಗಳನ್ನು ಹುಡುಕಾಡಿ ತಂದು ಓದಿ, ಅದರ ಬಗ್ಗೆ ಚಿಂತನೆ ನಡೆಸಿ ಆಂತರಿಕ ವೈರುಧ್ಯಗಳ

ಬಗ್ಗೆ ತುಲನಾತ್ಮಕ ಅಧ್ಯಯನ ಮಾಡುತ್ತಿದ್ದರು. ಉತ್ತಮ ನಾಟಕಗಳನ್ನು ನೋಡುವ ಅವಕಾಶ ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ.

### ಹುಬ್ಬಳ್ಳಿಗೆ ವಲಸೆ

ಚಿತ್ತರಂಜನರು ಉದ್ಯೋಗಾರ್ಥ ೧೯೬೦ರಲ್ಲಿ ಹುಬ್ಬಳ್ಳಿಗೆ ಬಂದರು. ಬರುವ ಮುನ್ನ ಕಲಕತ್ತಾದಲ್ಲಿಯ ರಂಗಭೂಮಿಯ ಎಲ್ಲರೀತಿಯ ಸಂಬಂಧಗಳನ್ನು ಕಳಚಿಕೊಳ್ಳಬೇಕಾಯಿತು. ರಂಗಭೂಮಿಯ ಬೆಳವಣಿಗೆ, ಸೇವೆಗಾಗಿ ಕಟ್ಟಿದ ಅವರ ಕನಸಿನ ಗೋಪುರ, ಆಶಾಸೌಧ, ಒಮ್ಮೆಲೇ ಭೂಕಂಪಕ್ಕೆ ಸಿಲುಕಿದಂತಾಯಿತು. ಆದರೂ ಭವಿಷತ್ ಜೀವನೋಪಾಯಕ್ಕಾಗಿ ದಿಟ್ಟ ನಿರ್ಧಾರ ಕೈಕೊಂಡು ಬಂಗಾಲದ ಒಂದು ಅಧ್ಯಾಯ ಕೊನೆಗೊಳಿಸಿ, ಕರ್ನಾಟಕದಲ್ಲಿ ಹೊಸ ಅಧ್ಯಾಯ ಪ್ರಾರಂಭಿಸಿದರು.

ಹುಬ್ಬಳ್ಳಿಯಲ್ಲಿ ನೆಲೆಸಿದ ಚಿತ್ತರಂಜನರಿಗೆ ರವೀಂದ್ರನಾಥ ಠಾಕೂರರ ಜೀವಿತ ಅವಧಿಯಲ್ಲಿ ಶಾಂತಿನಿಕೇತನದಲ್ಲಿ ವಿದ್ಯಾರ್ಥಿಗಳಾಗಿದ್ದು, ನೆಚ್ಚಿನ ಶಿಷ್ಯರಾಗಿದ್ದ ಹುಬ್ಬಳ್ಳಿಯ ಶ್ರೀಪ್ರಹ್ಲಾದ ನರೇಗಲ್ಲ ಮಾಸ್ತರರು ಹಾಗೂ ಶ್ರೀ ಅನಂತಗೌಡ ಕೆ. ಪಾಟೀಲ ಅವರ ಪರಿಚಯವಾಯಿತು. ನರೇಗಲ್ಲ ಮಾಸ್ತರರು ನೋಬೆಲ್ ಪ್ರಶಸ್ತಿ ಪಡೆದ ರವೀಂದ್ರನಾಥರ "ಗೀತಾಂಜಲಿ"ಯನ್ನು ಬಂಗಾಲಿಯಿಂದ ಕನ್ನಡಕ್ಕೆ ಅನುವಾದ ಮಾಡಿದವರಲ್ಲಿ ಮೊಟ್ಟಮೊದಲಿಗರು. ಇವರೊಂದಿಗೆ ಕನ್ನಡ ಹಾಗೂ ಬಂಗಾಲಿ ಸಾಹಿತ್ಯ ಸಂಸ್ಕೃತಿ ಕುರಿತು ಚರ್ಚೆ ನಡೆಸುತ್ತಿದ್ದರು.

### ಉತ್ತೇಜನ ಹಾಗೂ ಪ್ರೋತ್ಸಾಹ

ಚಿತ್ತರಂಜನ ಚಟರ್ಜಿಯವರಿಗೆ ಬಂಗಾಲಿ ಭಾಷಾ ತಜ್ಞರೂ ಕನ್ನಡ ಕವಿಗಳೂ ಆದ ನರೇಗಲ್ಲ ಮಾಸ್ತರರು ಹುಬ್ಬಳ್ಳಿಯಲ್ಲಿ ಸಾಂಸ್ಕೃತಿಕ ಕಾರ್ಯವನ್ನು ಪ್ರಾರಂಭಿಸಲು ಉತ್ತೇಜನ ಕೊಟ್ಟರು. ಅಲ್ಲದೆ ಚಿತ್ತರಂಜನರಿಗೆ ಕರ್ನಾಟಕದ ರಂಗಭೂಮಿ ಹಾಗೂ ಸಾಂಸ್ಕೃತಿಕ ಪರಂಪರೆ ವಿಷಯವಾಗಿ ಉಪಯುಕ್ತ ಮಾಹಿತಿ ಒದಗಿಸಿದರಲ್ಲದೆ ವರಕವಿ ಡಾ|| ದ.ರಾ.ಬೇಂದ್ರೆಯವರ ಪರಿಚಯವನ್ನು ಮಾಡಿಸಿದರು.

ಅವರ ಉತ್ತೇಜನದಿಂದ ಪ್ರಭಾವಿತರಾದ ಚಟರ್ಜಿಯವರು ಹುಬ್ಬಳ್ಳಿಗೆ ಬಂದ ಮೊದಲ ವರ್ಷದಲ್ಲಿಯೇ ಇಲ್ಲಿಯ ಬಂಗಾಲಿಗಳನ್ನೆಲ್ಲಾ ಕಲೆ ಹಾಕಿ "ಬಂಗಾಲಿ ಅಸೋಸಿಯೇಶನ್" ಎಂಬ ಹೆಸರಿನ ಸಂಸ್ಥೆ ಸ್ಥಾಪಿಸಿ, ಅದರ ಮೂಲಕ ವಿಭಿನ್ನ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಈ ನಿಟ್ಟಿನಲ್ಲಿ ರವೀಂದ್ರನಾಥ ಠಾಕೂರರ ಜನ್ಮದಿನದಂದು ಹಮ್ಮಿಕೊಳ್ಳಲಾದ ಮೊದಲ ಕಾರ್ಯಕ್ರಮಕ್ಕೆ ಡಾ|| ಬೇಂದ್ರೆಯವರನ್ನು ಮುಖ್ಯ ಅತಿಥಿಗಳಾಗಿ ಆಮಂತ್ರಿಸಲಾಗಿತ್ತು. ಆ ಕಾರ್ಯಕ್ರಮವನ್ನು ಬಹುವಾಗಿ ಮೆಚ್ಚಿದ ಬೇಂದ್ರೆಯವರು, ಧಾರವಾಡ ಆಕಾಶವಾಣಿಯಲ್ಲಿ ಬಿತ್ತರಿಸಲು ತಮಗೂ ಒಂದು ಇಂಥಾ ಕಾರ್ಯಕ್ರಮ ಸಂಯೋಜಿಸಿ ಉತ್ಪಾದಿಸಬೇಕೆಂದು ಸೂಚಿಸಿದರು. ಆ ಪ್ರಕಾರ ಚಟರ್ಜಿಯವರು "ರವೀಂದ್ರನಾಥ ಟ್ಯಾಗೋರರ ಬಹುಮುಖಿ ಪ್ರತಿಭೆ" ಯ ಬಗ್ಗೆ ಒಂದು

ಪ್ರಾತ್ಯಕ್ಷಿಕೆ ಬರೆದು ಉತ್ಪಾದಿಸಿದರು. ಇದಾದ ನಂತರ ಬೇಂದ್ರೆಯವರನ್ನು ಭೇಟಿಯಾಗಿ ತಮ್ಮಲ್ಲಿಯ ರಂಗಭೂಮಿಯ ಹಸಿವನ್ನು ಹೊರಗೆಡಹಿದರು. ಅದೂ ಕರ್ನಾಟಕದಲ್ಲಿ ಕನ್ನಡ ರಂಗಭೂಮಿಗಾಗಿ ದುಡಿಯಬೇಕೆಂಬ ನಿರ್ಧಾರವನ್ನು ಬೇಂದ್ರೆಯವರ ಮುಂದಿಟ್ಟರು. ಆಗ ಬೇಂದ್ರೆಯವರು ನಿನ್ನಲ್ಲಿಯ ರಂಗಭೂಮಿಯ ಹಸಿವು, ಕಳಕಳಿ, ಛಲ ಹಾಗೂ ಆತ್ಮವಿಶ್ವಾಸಗಳೇ ನಿನ್ನ ಚಟುವಟಿಕೆಗಳಿಗೆ ಆಧಾರ ಸ್ಥಂಭಗಳಾಗುತ್ತದೆ. ಧೈರ್ಯದಿಂದ ಮುನ್ನುಗ್ಗು, ಸದಾ ನಮ್ಮ ಸಲಹೆ ಸಹಕಾರ ಇದ್ದೇ ಇರುತ್ತದೆ ಎಂದು ಆಶೀರ್ವದಿಸಿ ಪ್ರೋತ್ಸಾಹ ನೀಡಿದರು. ಅವರ ಪ್ರೋತ್ಸಾಹದಿಂದ ಉತ್ಸಾಹಿತರಾದ ಚಟರ್ಜಿಯವರಲ್ಲಿ ಮಿಂಚು ಸಂಚರಿಸಿದಂತಾಗಿ ಹೊಸ ಚೈತನ್ಯದ ಚಿಲುಮೆಯ ಸೆಲೆಯೊಡೆಯಿತು.

## ರಂಗ ಚಟುವಟಿಕೆ ಪ್ರಾರಂಭ

ರವೀಂದ್ರನಾಥ ಠಾಕೂರರಿಗೆ ನೋಬೆಲ್ ಪ್ರಶಸ್ತಿ ಸಿಕ್ಕಾಗ ಮೈಸೂರು ಮಹಾರಾಜರು ಅವರನ್ನು ಸನ್ಮಾನಿಸಿದ್ದರು. ಸನ್ಮಾನದ ನಂತರ ಕಲಕತ್ತೆಗೆ ಹಿಂದಿರುಗುವಾಗ ಧಾರವಾಡದಲ್ಲಿ ರೈಲು ನಿಂತಾಗ, ವಿದ್ಯಾರ್ಥಿ ಮುಖಂಡರಾದ ಬೇಂದ್ರೆಯವರ ವಿನಂತಿಯ ಮೇರೆಗೆ ರೈಲು ನಿಲ್ದಾಣದಲ್ಲಿಯೇ ಭಾಷಣ ಮಾಡಿದರು. ಆ ನಿಮಿತ್ತ ಅವರ ಭಾಷಣದ ಸವಿ ನೆನಪಿಗಾಗಿ ಬೇಂದ್ರೆಯವರು ಧಾರವಾಡ ರೈಲು ನಿಲ್ದಾಣದಲ್ಲಿ "ಟ್ಯಾಗೋರ ಕಾರ್ನರ" ಮಾಡುವ ಇಚ್ಛೆಯನ್ನು ಹೊಂದಿದ್ದರು. ಹೀಗಾಗಿ ಕಲಕತ್ತಾದವರೇ ಆದ ಚಿತ್ತರಂಜನರ ಪರಿಚಯವಾದಾಗ ಅವರಿಂದಲೇ ಕಾರ್ಯಕ್ರಮ ನಡೆಸುವ ಯೋಜನೆಯನ್ನು ಹಾಕಿದರು. ಅವರ ಆಮಂತ್ರಣದ ಮೇರೆಗೆ ಆಕಾಶವಾಣಿಯಲ್ಲಿ ಪ್ರಾತ್ಯಕ್ಷಿಕೆ ಉತ್ಪಾದಿಸುವದರೊಂದಿಗೆ ಚಟರ್ಜಿಯವರು ಕರ್ನಾಟಕದಲ್ಲಿ ರಂಗ ಚಟುವಟಿಕೆಯನ್ನು ಪ್ರಾರಂಭಿಸಿದರು. ಅಲ್ಲದೆ ಪ್ರತಿ ವರ್ಷ ತಪ್ಪದೇ ರವೀಂದ್ರನಾಥರ ಜನ್ಮದಿನದಂದು ಕಾರ್ಯಕ್ರಮಗಳನ್ನು ರೂಪಿಸಿ, ಪ್ರದರ್ಶಿಸಲಾಗುತ್ತಿತ್ತು. ೧೯೬೫ರಲ್ಲಿ ಠಾಕೂರರ "ಕಾಬೂಲಿವಾಲಾ" ನಾಟಕವನ್ನು ಹಿಂದಿಗೆ ಅನುವಾದಿಸಿ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದರು. ಇದರಿಂದಾಗಿ ಕಲಕತ್ತಾ ಬಿಡುವ ಮುನ್ನ ಚಿತ್ತರಂಜನರಲ್ಲಿ ಹುದುಗಿಕೊಂಡಿದ್ದ ರಂಗಾಸಕ್ತಿಗೆ ಕರ್ನಾಟಕದಲ್ಲಿ ಗರಿಗೆದರುವ ಆಸೆ ಮೂಡುವದರೊಂದಿಗೆ ಅವಕಾಶವೂ ಲಭಿಸಿತು.

## ಕಲಾವೃಂದ ಸ್ಥಾಪನೆ

ಈ ರೀತಿಯಾಗಿ ೧೯೬೮ರವರೆಗೆ ಕೆಲವು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದ ಚಿತ್ತರಂಜನ ಚಟರ್ಜಿ ಅವರಿಗೆ ಹುಬ್ಬಳ್ಳಿಯಲ್ಲಿ ಒಂದು ಹವ್ಯಾಸಿ ನಾಟಕ ತಂಡ ಕಟ್ಟಬೇಕೆಂಬ ವಿಚಾರ ಬಂತು. ಅಂತೆಯೇ ೧೯೬೮ರಲ್ಲಿ ಟ್ಯಾಗೋರರ ಜನ್ಮದಿನವಾದ ಮೇ ೯ ರಂದು ಇದಕ್ಕೆ ಒಂದು ಮೂರ್ತಸ್ವರೂಪ ಕೊಟ್ಟು "ಪ್ರೊಗ್ರೆಸ್ಸಿವ್ ಆರ್ಟ್ ಸರ್ಕಲ್" ಎಂಬ ಹೆಸರಿನ ಸಂಘಟನೆಯನ್ನು ಸ್ಥಾಪಿಸಿದರು. ಅಂದು ರಾಷ್ಟ್ರಕವಿ ಠಾಗೂರರ ಸಣ್ಣ ಕವಿತೆಯಾದರಿಸಿ "ಸುಪ್ರಿಯಾ" ಎಂಬ ನಾಟಕವನ್ನು ರಚಿಸಿ, ನಿರ್ದೇಶಿಸಿ, ಉತ್ಪಾದಿಸಿದರು. ಆ ದಿನ ಕನ್ನಡದ ವರಕವಿ ಡಾ|| ಬೇಂದ್ರೆಯವರು ಹಾಗೂ ಆಂಗ್ಲಕವಿ ಪ್ರೊ ಆರ್ಮಂಡೋ ಮೆನೆಝಿಸ್ ಅವರಿಬ್ಬರೂ "ಪ್ರೊಗ್ರೆಸ್ಸಿವ್ ಆರ್ಟ್ ಸರ್ಕಲ್" ನ ಜನನವನ್ನು ಪ್ರತ್ಯಕ್ಷದರ್ಶಿಯಾಗಿ ಕಂಡು, ಮೆಚ್ಚಿ, ಅದರ

ಶ್ರೇಯೋಭಿವೃದ್ಧಿಗೆ ಶುಭಕೋರಿದರು. ತದನಂತರ ಈ ಪ್ರೊಗ್ರೆಸ್ಸಿವ್ ಆರ್ಟ ಸರ್ಕಲ್‌ನ ಗಾಥೆ ಚಿತ್ತರಂಜನ ಚಟರ್ಜಿಯವರ ಜೀವನ ಗಾಥೆಯಾಯಿತು. ಇದರ ಸಾಧನೆಗಳ ಚರಿತ್ರೆ ಚಟರ್ಜಿಯವರ ಸಾಧನೆಯ ಚರಿತ್ರೆಯಾಯಿತು. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಕೆತ್ತಿಡುವ ಸಾಧನೆಗಳ ಸರಮಾಲೆ ಈ ಬಂಗಾಲಿ ಕನ್ನಡಿಗ ಚಿತ್ತರಂಜನರ ಸಾಧನೆಯಾಯಿತು.

"ಆದರ್ಶ ನಾಟಕಗಳನ್ನು ಆದರ್ಶ ರೀತಿಯಲ್ಲಿ ಉತ್ಪಾದಿಸಬೇಕು" ಎಂಬ ಗುರಿಹೊತ್ತು ಜನ್ಮತಾಳಿದ ಪ್ರೊಗ್ರೆಸ್ಸಿವ್ ಆರ್ಟ್ ಸರ್ಕಲ್ ಚಿತ್ತರಂಜನರ ಮಾನಸ ಕುಸುಮ. ನಾಟಕದ ವಸ್ತು ಎಷ್ಟು ಪ್ರಮುಖವೋ ಅದರ ಉತ್ಪಾದನೆಯೂ ಅಷ್ಟೇ ಪ್ರಮುಖ ಎಂದು ಮನಗಂಡ ಚಿತ್ತರಂಜನರು ಹೊಸ ಹೊಸ ವಿಷಯಗಳನ್ನು ಕುರಿತು ನಾಟಕಗಳನ್ನು ಬರೆದು, ಬರೆಯಿಸಿ ಉತ್ಪಾದಿಸತೊಡಗಿದರು. ಭಾರತೀಯ ಸಂಸ್ಕೃತಿಯ ವಿಶಿಷ್ಟತೆಯನ್ನು ಉಳಿಸಿಕೊಂಡು, ಪುರೋಭಿವೃದ್ಧಿಗೊಳ್ಳುವಂತೆ ಮಾಡಬೇಕಾದರೆ, ಭಾರತದ ವಿವಿಧ ಭಾಷೆಗಳ ಪರಸ್ಪರ ವಿನಿಮಯ ನಡೆಯಬೇಕು. ಅಂತೆಯೇ ವಿವಿಧ ಭಾಷೆಗಳ ಇತರ ಪ್ರಾಂತಗಳ ಸಂಸ್ಕೃತಿ ಕಲೆಗಳ ಔನ್ನತ್ಯ ಹಾಗೂ ಪ್ರಗತಿಪರ ಅಂಶಗಳನ್ನು ಕನ್ನಡ ರೂಢಿಸಿಕೊಂಡರೆ, ಕನ್ನಡ ಸಂಸ್ಕೃತಿ ಕಲೆ ಹೆಚ್ಚು ಸಿರಿವಂತಗೊಳ್ಳಬಹುದೆಂದು ನಂಬಿದ ಚಟರ್ಜಿಯವರು ತಾವು ಹುಟ್ಟು ಹಾಕಿದ ಪ್ರೊಗ್ರೆಸ್ಸಿವ್ ಆರ್ಟ್ ಸರ್ಕಲ್ ಈ ಮಹಾನ್ ಕಾರ್ಯಕ್ಕೆ ಒಂದು ಪರಿಣಾಮಕಾರಿ ಉಪಕರಣ ಆಗಬೇಕೆಂಬ ಕನಸು ಕಂಡರು. ಆ ಕನಸನ್ನು ನನಸಾಗಿಸಲು ಈ ಸಂಘಟನೆಯ ಮೂಲಕ ಕಲಾವಿನಿಮಯ, ಸಂಸ್ಕೃತಿ ವಿನಿಮಯ ಕಾರ್ಯಕ್ಕೆ ಕೈಹಾಕಿದರು. ಬಂಗಾಲಿಗರಾದ ಚಟರ್ಜಿಯವರು ಮೊದಲು ಬಂಗಾಲಿಯ ವಿಶಿಷ್ಟತೆಯನ್ನು ಕನ್ನಡಕ್ಕೆ ರೂಢಿಸುವ ಪ್ರಯತ್ನದಲ್ಲಿ ತೊಡಗಿದರು.

### ಕ್ರಿಯಾಶೀಲತೆ

ಈ ದಿಸೆಯಲ್ಲಿ ಕಾರ್ಯೋನ್ಮುಖರಾದ ಚಿತ್ತರಂಜನರು ಬಂಗಾಲಿ ಹಾಗೂ ಹಿಂದಿ ಭಾಷೆಗಳ ವಿನಿಮಯ ಸೇತುವೆಯಾಗಿ ಕನ್ನಡ ರಸಿಕರಿಗಾಗಿ ಪ್ರದರ್ಶಿಸಿದ *ಸುಪ್ರಿಯಾ* ಒಂದು ಮಹತ್ವದ ಪ್ರಾಯೋಗಿಕ ನಾಟಕವಾಯಿತು. ಇದೇ ಪಥದಲ್ಲಿ ಕಾರ್ಯೋನ್ಮುಖರಾದ ಚಟರ್ಜಿಯವರು ಬಂಗಾಲಿಯಲ್ಲಿ ಬರೆದ *ಆಸೂ ಇತಿಹಾಸಕಿ, ಇಲ್‌ಜಾಮ, ಜಬ್ ಅಕೇಲಿ, ಪರಾಜಿತ್‌*ಮುಂತಾದ ನಾಟಕಗಳನ್ನು ಹಿಂದಿಗೆ ಭಾಷಾಂತರಿಸಿ ಕನ್ನಡ ರಸಿಕರಿಗಾಗಿ ದಿಗ್ದರ್ಶಿಸಿ ಉತ್ಪಾದಿಸಿದರು. ಅಲ್ಲದೆ ಹಿಂದಿಯಲ್ಲಿಯೇ *ಕಹಾನಿ ಉನ್ ಲೋಗೋಂಕಿ, ನೀಂದ ರಾತ್ ಭರ್ ಕ್ಯೂಂ ನಹಿ ಆತಿ?* ಮುಂತಾದ ನಾಟಕಗಳನ್ನು ರಚಿಸಿ, ಪ್ರದರ್ಶಿಸಿದರು. ಸುಪ್ರಸಿದ್ಧ ಇಂಗ್ಲೀಷ್ ಸಾಹಿತಿ ಲಾರ್ಡ ಟೆನ್ನಿಸನ್‌ರವರ "*ಗ್ಲಾಸ್ ಮಿನೇಜರಿ*" ಎಂಬ ಇಂಗ್ಲೀಷ್ ನಾಟಕವನ್ನೂ ಕೂಡಾ ದಿಗ್ದರ್ಶಿಸಿ ಪ್ರದರ್ಶಿಸಿದರು.

ಬಂಗಾಲಿ ನಾಟಕ ಸಾಹಿತ್ಯದ ಸವಿಯನ್ನು ಕನ್ನಡಿಗರಿಗೆ ಹಿಂದಿ ಮೂಲಕ ಕೊಡುವುದರಿಂದ ತೃಪ್ತರಾಗದೇ ಬಂಗಾಲಿ ನಾಟಕಗಳನ್ನು ಕನ್ನಡದಲ್ಲಿ ಅರ್ಪಿಸುವ ನಿರ್ಣಯ ಕೈಕೊಂಡರು. ಒಂದೆಡೆ ಅಂತರ್‌ಭಾಷಾ ಔನ್ನತ್ಯಗಳ ವಿನಿಮಯವನ್ನು ಬಹಳ ಯಶಸ್ವಿಯಾಗಿ ಪ್ರಯೋಗಿಸಿದ

ಶ್ರೀ ಚಟರ್ಜಿಯವರು ರಂಗಭೂಮಿಯ ಪ್ರಚಲಿತ ಸಮಸ್ಯೆಗಳ ಚರ್ವಿತ ಚರ್ವಣಕ್ಕೆ ರಂಗಭೂಮಿಯನ್ನು ಪ್ರಯೋಗ ಮಾಡಬೇಕಲ್ಲದೆ, ಹವ್ಯಾಸಿ ರಂಗಭೂಮಿಯು ಪುರೋಗಾಮಿ ಪಥವನ್ನು ಕ್ರಮಿಸಿ, ಸಾಮಾಜಿಕ ಪುನರ್ರಚನೆಯ ಒಂದು ಪ್ರಮುಖ ಉಪಕರಣ ಆಗಬೇಕೆಂಬ ಧೋರಣೆಗೆ ಚಾಲನೆಯನ್ನು ಕೊಡತೊಡಗಿದರು. ಅಂತೆಯೇ ಕನ್ನಡ ನಾಟಕಗಳ ಪ್ರಯೋಗಕ್ಕೆ ಕೈಹಾಕಿದರು. ಆಗ ಪ್ರೊಗ್ರೆಸ್ಸಿವ್ ಆರ್ಟ್ ಸರ್ಕಲ್ ಮೂಲಕ ಅವರ ಕಾರ್ಯಗಳಿಗೆ ಹೊಸ ತಿರುವು ಲಭಿಸಿತು.

ಕನ್ನಡದ ಹೆಸರಾಂತ ಪ್ರಗತಿಪರ ನಾಟಕಕಾರ ಪಿ. ಲಂಕೇಶ್‌ರ "*ಕ್ರಾಂತಿ ಬಂತು ಕ್ರಾಂತಿ*" ನಾಟಕವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ೧೯೭೨ರಲ್ಲಿ ಪ್ರದರ್ಶಿಸಿದಾಗ ಇದರ ಉತ್ಪಾದನಾ ನಾವೀನ್ಯತೆಗೆ ರಂಗ ಪ್ರೇಮಿಗಳು ವ್ಯಕ್ತಪಡಿಸಿದ ಮೆಚ್ಚುಗೆ ಅವರು ಹೆಚ್ಚು ಕ್ರಿಯಾಶೀಲರಾಗಲು ಉತ್ತೇಜನ ನೀಡಿತು. ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಅನುವಾದಿಸಿದ ಹಿಂದಿಯ ಸುಪ್ರಸಿದ್ಧ ನಾಟಕಕಾರ ಮೋಹನ ರಾಕೇಶರವರ "*ಆಧೆ ಅಧೂರೆ*" ನಾಟಕವನ್ನು ಅವರ ಬಯಕೆಯಂತೆ ಕೈಗೆತ್ತಿಕೊಂಡು ನಿರ್ದೇಶಿಸಿ, ಯಶಸ್ವಿಯಾಗಿ ಪ್ರದರ್ಶಿಸಿ ರಂಗಪ್ರೇಮಿಗಳ ಮೆಚ್ಚುಗೆ ಗಳಿಸಿದರು. ಇದರಿಂದ ಉತ್ತೇಜಿತರಾದ ಚಟರ್ಜಿಯವರು ಕನ್ನಡ ನಾಟಕಗಳ ಉತ್ಪಾದನೆಯತ್ತ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಚಂದ್ರಶೇಖರ ಕಂಬಾರರ *ಜೈಸಿದನಾಯ್ಕ*, ನವರತ್ನರಾಮ್ ಅವರ *ಆತ್ಮ ಯಾವ ಕುಲ ಜೀವ ಯಾವ ಕುಲ*, ಶ್ರೀರಂಗರ *ಯಾರಿಗೆ ಮಾಡ್ತೀ ಮ್ಯಾಂ?* ಜಿ.ಬಿ. ಜೋಶಿ (ಜಡಭರತ) ಯವರ *ನಾನೇ ಬಿಜ್ಜಳ* ಮುಂತಾದ ಹೆಸರಾಂತ ನಾಟಕಕಾರರ ನಾಟಕಗಳನ್ನು ಉತ್ಪಾದಿಸಿ ಯಶಸ್ವಿಯಾದರು.

## ನಿರಂತರ ಹೋರಾಟ

ಕ್ರಿಯಾಶೀಲರಾಗಿ ಮುನ್ನುಗ್ಗಿದ ಚಟರ್ಜಿಯವರು ರಂಗಭೂಮಿ ಅಭಿವೃದ್ಧಿಗಾಗಿ ತಮ್ಮ ಹೋರಾಟವನ್ನು ಚುರುಕುಗೊಳಿಸಿದರು. ಸಮಾಜದ ವಿವಿಧ ಪ್ರಚಲಿತ ಸಮಸ್ಯೆಗಳಾದ ದುಡಿಯುವವರ ಶೋಷಣೆ, ರಾಜಕೀಯದಲ್ಲಿನ ಮೋಸ, ಭ್ರಷ್ಟಾಚಾರ, ವ್ಯಭಿಚಾರಿಕೆ, ಅಧಿಕಾರದಾಹ, ಸಾಮಾಜಿಕ ಶೋಷಣೆ ಮುಂತಾದ ಸಮಸ್ಯೆಗಳ ಬಗ್ಗೆ ಪ್ರೇಕ್ಷಕರಲ್ಲಿ ಪ್ರಜ್ಞೆ ಉಂಟುಮಾಡಿ ಅವುಗಳ ವಿರುದ್ಧ ಹೋರಾಡುವ ಕೆಚ್ಚನ್ನು ಹುಟ್ಟಿಸಬಲ್ಲ ನಾಟಕಗಳನ್ನು ಬರೆದು, ಬರೆಯಿಸಿ ಉತ್ಪಾದಿಸತೊಡಗಿದರು. ಕನ್ನಡದಲ್ಲಿ ಕ್ರಾಂತಿಕಾರಿ ನಾಟಕಗಳ ಕೊರತೆಯನ್ನು ಗಮನಿಸಿದ ಚಟರ್ಜಿಯವರು ಬಂಗಾಲಿಯ ಸುಪ್ರಸಿದ್ಧ ಕ್ರಾಂತಿಕಾರಿ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ, ಕನ್ನಡ ರಂಗಭೂಮಿಗೆ ಒಂದು ಹೊಸ ತಿರುವು ನೀಡಬೇಕೆಂದು ಯೋಚಿಸಿದರು. ಹಾಗೂ ಬಂಗಾಲಿಯ ಸುಪ್ರಸಿದ್ಧ ಪ್ರಗತಿಪರ ನಾಟಕಕಾರ ಉತ್ಪಲದತ್ತರ ಹಾಗೂ ಇತರೇ ನಾಟಕಕಾರರ ನಾಟಕಗಳನ್ನು ಕನ್ನಡದಲ್ಲಿ ಯಶಸ್ವಿಯಾಗಿ ಉತ್ಪಾದಿಸಿದರು.

ಈ ಗುರಿ ಮುಟ್ಟಲು ಮುನ್ನಡೆದ ಚಿತ್ತರಂಜನರು *ಕ್ರಾಂತಿ ಬಂತು ಕ್ರಾಂತಿ, ಆಧೆ ಅಧೂರೆ, ರಕ್ತದಾಹ, ಜೈಸಿದನಾಯ್ಕ, ವಿಷವರ್ತುಲ, ಕನಸಿನೊಂದಿಗೆ, ಯಾರಿಗೆ ಮಾಡ್ತೀ ಮ್ಯಾಂ?,*

*ಹೀಂಗೊಂದೂರಾಗ ಒಬ್ಬ, ರಾಜಾ, ನಿಮ್ಮ ಮನೆಯಂಗಳದಿ, ಅನಾವಶ್ಯಕ ಅತಿಥಿಗಳು, ದುರಗಪ್ಪನ ಮಗ, ಸೀಮಾರೇಖೆ, ಉರಿಯುವ ನೆರಳು, ನಗೆಯು ಬರುತಿದೆ ಎನಗೆ, ಬೆವರಿನ ಬೆಲೆ, ಎಲ್ಲಿಗೆ ಹೋಗೋಣ? ಆತ್ಮ ಯಾವಕುಲ ಜೀವ ಯಾವ ಕುಲ, ಸುಖವೆಲ್ಲಿಹುದು?, ಒಂದು ಮುಸ್ಸಂಜೆ, ಸ್ವರಗಳು, ನಾನೇ ಬಿಜ್ಜಳ,* ಮುಂತಾದ ನಾಟಕಗಳನ್ನು ದಿಗ್ದರ್ಶಿಸಿ, ಯಶಸ್ವಿಯಾಗಿ ಪ್ರಯೋಗಿಸಿದರು. ಅಲ್ಲದೆ ತಾವೇ ಹುಟ್ಟು ಹಾಕಿದ "ಪ್ರೊಗ್ರೆಸ್ಸಿವ್ ಆರ್ಟ್ ಸರ್ಕಲ್" ದ ಹೆಸರನ್ನು ಕನ್ನಡಕ್ಕೆ ತರ್ಜುಮೆಗೊಳಿಸಿ ಅದನ್ನು "ಪ್ರಗತಿ ಕಲಾವೃಂದ" ಎಂದು ಹೆಸರಿಸಿ, ಅದರ ಮೂಲಕ ರಂಗಚಟುವಟಿಕೆಯಲ್ಲಿ ತೊಡಗಿದ ಚಟರ್ಜಿಯವರು ತಮ್ಮ ಕನ್ನಡಾಬಿಮಾನವನ್ನು ಎತ್ತಿ ತೋರಿಸಿದರು. ಕನ್ನಡ ಮಾತನಾಡಲು ಕಲಿತ ಇವರು "ಬಂಗಾಲಿ ಕನ್ನಡಿಗ" ರಾದರು.

ಹುಬ್ಬಳ್ಳಿ, ಧಾರವಾಡದಲ್ಲಿ ಹೊಸ ಅಲೆ ನಾಟಕಗಳಿಗೆ ಹುಟ್ಟುಹಾಕಿ ಹವ್ಯಾಸಿ ತಂಡ ಹಾಗೂ ಕಲಾವಿದರಿಗೆ ರಂಗ ರಸದೌತಣ ಉಣಬಡಿಸಲು ಉತ್ತಮ ವಾತಾವರಣ ನಿರ್ಮಿಸಲು ಮುಂದಡಿಯಿರಿಸಿದರು. ಹೊಸ ಹೊಸ ತಂಡಗಳು ಹುಟ್ಟಿಕೊಳ್ಳಬೇಕು, ಕಮಿಟೆಡ್ ಕಲಾವಿದರು ಪ್ರತಿಭೆಯನ್ನು ರಂಗಭೂಮಿಗೆ ಪರಿಚಯಿಸಬೇಕು. ರಂಗಸಂಘಟಕರು, ರಂಗಾಸಕ್ತರನ್ನು ತಯಾರು ಮಾಡಲು ಅಡಿಪಾಯ ಹಾಕಿ, ತಮ್ಮ ತಂಡದೊಂದಿಗೆ ಇತರ ಸೋದರ ತಂಡಗಳೂ ಸಮಸಮನಾಗಿ ಬೆಳೆಯಲು ಅವಕಾಶ ಕಲ್ಪಿಸಿದರು. ಇದಕ್ಕೊಂದು ಉತ್ತಮ ಉದಾರಹಣೆಯೆಂದರೆ "ಅಭಿನಯ ಭಾರತಿ ತಂಡ" ಸ್ಥಾಪನೆಗೆ ಆರ್ಥಿಕ ಸಹಾಯ ನೀಡಿ, ತಮ್ಮ ನಿರ್ದೇಶನದ ನಾಟಕ ಹಾಗೂ ಕಲಾವಿದರನ್ನು ತಾವೇ ಸ್ವತಃ ಕರೆದುಕೊಂಡು ಹೋಗಿ ಆ ತಂಡದ ಹೆಸರಿನಲ್ಲಿ ಉತ್ಸಾಹಿ ಕಲಾವಿದನ ನಿರ್ದೇಶನವೆಂದು ಹೇಳಿ ಯಶಸ್ವಿಯಾಗಿ ಪ್ರದರ್ಶನ ನೀಡಿ ತಂಡದ ಉಗಮಕ್ಕೆ ನಾಂದಿ ಹಾಕಿದರು. ಆ ತಂಡಕ್ಕೆ ಚಟರ್ಜಿಯವರು ನೀಡಿದ ಹಣ ಅವರಿಗೆ ಹಿಂದಿರುಗಲಿಲ್ಲ. ಆದರೆ ಇದನ್ನೆಂದೂ ಅವರು ಎಲ್ಲೂ ಹೇಳಿಕೊಂಡಿಲ್ಲ. ರಂಗಭೂಮಿಯ ಬೆಳವಣಿಗೆಗಾಗಿ ತಮ್ಮ ದುಡಿಮೆಯೊಂದಿಗೆ ಪ್ರಾಣವನ್ನು ಪಣಕ್ಕಿಟ್ಟು ಯಾವುದೇ ಭೇದಭಾವವಿಲ್ಲದೇ ಹೋರಾಡಿದ ತ್ಯಾಗಜೀವಿ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಇನ್ನೂ ಇಂಥಾ ಅನೇಕ ಪ್ರಸಂಗಗಳು ಘಟಿಸಿವೆಯಾದರೂ ಅವರು ತಾವು ನೀರೆರೆದು ಬೆಳೆಸಿದ ರಂಗಸಸಿ ಕ್ರಿಯಾಶೀಲವಾಗಿರುವುದನ್ನು ಕಂಡು ಸಂತಸಪಡುತ್ತಾರೆ. ಅದೇ ಅವರಿಗೆ ಸಂದ ಪ್ರತಿಫಲ ಎನ್ನುತ್ತಾರೆ.

ರಂಗ ವಿನಿಮಯ

ನಾಟಕ ಉತ್ಪಾದನೆಯಲ್ಲಿ ವಸ್ತು ವೈವಿಧ್ಯಕ್ಕೆ ಮಹತ್ವ ಕೊಡುವದರೊಡನೆ ನಾವಿನ್ಯತೆಗೂ ವಿಶೇಷವಾದ ಒತ್ತು ನೀಡುತ್ತಿದ್ದ ಚಟರ್ಜಿಯವರು ಕೇವಲ ಭಾಷಾ ವಿನಿಮಯವಷ್ಟೇ ಸಾಲದು, ವಿವಿಧ ಹವ್ಯಾಸಿ ತಂಡಗಳ ಪ್ರಯೋಗಗಳ ವಿನಿಮಯವೂ ಆಗಬೇಕು. ಇದರಿಂದ ವಿವಿಧ ರಂಗತಂಡಗಳ ಪ್ರಯೋಗ ತಂತ್ರ, ಉತ್ಪಾದನೆಯ ಕುಶಲತೆಗಳ ಪರಸ್ಪರ ಪರಿಜ್ಞಾನವಾಗುತ್ತದೆ ಎಂದು ಮನಗಂಡ ಶ್ರೀ ಚಟರ್ಜಿಯವರು ವಿವಿಧ ರಂಗ ತಂಡಗಳ ಕಾರ್ಯಕ್ರಮಗಳನ್ನು ಪ್ರಗತಿ ಕಲಾವೃಂದದ ಆಶ್ರಯದಲ್ಲಿ ಹುಬ್ಬಳ್ಳಿಯಲ್ಲೂ ನಡೆಸತೊಡಗಿದರು. ಅಂತೆಯೇ ಗದುಗಿನ 'ಅಭಿನಯರಂಗ', ಧಾರವಾಡದ 'ಕರ್ನಾಟಕ ಕಲೋದ್ಧಾರಕ ಸಂಘ', ಧಾರವಾಡದ 'ರಂಗಚೇತನಾ'

ಮುಂತಾಗಿ ಹಲವಾರು ತಂಡಗಳನ್ನು ಹುಬ್ಬಳ್ಳಿಗೆ ಆಮಂತ್ರಿಸಿ, ಅವರ ನಾಟಕಗಳನ್ನು ಪ್ರದರ್ಶಿಸಲು ಅನುವು ಮಾಡಿಕೊಟ್ಟದ್ದು ಚಟರ್ಜಿಯವರ ಪ್ರಯೋಗಶೀಲತೆಗೆ ಒಂದು ಮೆರುಗನ್ನು ಕೊಟ್ಟಿತು. ಧಾರವಾಡ ಆಕಾಶವಾಣಿ ಕಲಾವಿದರನ್ನು ಸತ್ಕರಿಸಿ, ಅವರ "ಅಪೂರ್ಣ ರಾಮಾಯಣ" ನಾಟಕವನ್ನು ಹುಬ್ಬಳ್ಳಿಯಲ್ಲಿ ಪ್ರದರ್ಶಿಸಲು ಅವಕಾಶ ಕಲ್ಪಿಸಿದರು. ಈ ಪ್ರಯೋಗವನ್ನು ಕೇವಲ ಕರ್ನಾಟಕಕಕ್ಕೆಸೀಮಿತಗೊಳಿಸದ ಚಟರ್ಜಿಯವರು ಖ್ಯಾತ ನಿರ್ದೇಶಕ ಶ್ರೀ ಬಿ.ವ್ಹಿ. ಕಾರಂತರ ನೇತೃತ್ವದ ರಾಷ್ಟ್ರ ಪ್ರಖ್ಯಾತಿ ಪಡೆದ ಮಧ್ಯ ಪ್ರದೇಶದ 'ಭೂಪಾಲ ರಂಗ ಮಂಡಲ ರೆಪರ್ಟರಿ ನಾಟ್ಕ ತಂಡ' ವನ್ನು ಹುಬ್ಬಳ್ಳಿಗೆ ಕರೆಯಿಸಿ ಹಿಂದಿ ನಾಟಕೋತ್ಸವವನ್ನು ಸಂಘಟಿಸಿ ಅವರ ಕಡೆಯಿಂದ ಐದು ನಾಟಕಗಳನ್ನು ಪ್ರಯೋಗಿಸಿ ಯಶಸ್ವಿಯಾಗಿಸಿದರು. ಈ ನಾಟಕಗಳ ಬಗ್ಗೆ ಏರ್ಪಡಿಸಿದ್ದ ವಿಚಾರ ಸಂಕಿರಣ ಈ ನಾಟಕೋತ್ಸವದ ವಿಶಿಷ್ಟತೆಯಾಗಿತ್ತು.

ನಾಟಕ ಸಿದ್ಧಾಂತಗಳ ಪ್ರಯೋಗಗಳ ಬಗ್ಗೆ ವಿಚಾರ ವಿನಿಮಯ, ಚರ್ಚೆ ನಡೆದರೆ ಕಲಾವಿದರಿಗೆ ನಾಟಕಗಳ ಬಗ್ಗೆ ಅಂತಃದೃಷ್ಟಿ ಲಭಿಸಲು ಸಹಾಯಕವಾಗುತ್ತದೆ ಎಂಬ ಉದ್ದೇಶದಿಂದ ಚಟರ್ಜಿಯವರು ಕನ್ನಡ ನಾಟಕ ಸಾಹಿತ್ಯಕ್ಕೆ ಹಾಗೂ ರಂಗಭೂಮಿಯ ನಾವಿನ್ಯತೆಗೆ ಮಹಾನ್ ಕೊಡುಗೆ ನೀಡಿದ ಶ್ರೀರಂಗ, ಕೈಲಾಸಂ ಮುಂತಾದವರ ಕುರಿತು ವಿಚಾರ ಸಂಕಿರಣ ಏರ್ಪಡಿಸಿ, ವಿಚಾರ ಪ್ರಯೋಗಗಳ ಸಾಮರಸ್ಯ ಸಾಧಿಸಲು ಹೆಣಗಿದರು. ಮರಾಠಿಯ ಖ್ಯಾತ ನಾಟಕಕಾರ ವಿಜಯ ತೆಂಡೂಲ್ಕರ್ ಹಾಗೂ ಕನ್ನಡದ ಹೆಸರಾಂತ ನಾಟಕಕಾರರೊಂದಿಗೆ ರಂಗ ಚರ್ಚೆ ಸಂವಾದಕ್ಕೆ ಅನುವು ಮಾಡಿಕೊಟ್ಟರು.

ಚಟರ್ಜಿಯವರು ತಮ್ಮ ಕಾರ್ಯ ಕ್ಷೇತ್ರವನ್ನು ಹುಬ್ಬಳ್ಳಿಗಷ್ಟೇ ಸೀಮಿತಗೊಳಿಸದೇ, ಅಖಂಡ ಧಾರವಾಡ ಜಿಲ್ಲೆಯ ಬೇರೆ ಬೇರೆ ಕಡೆ ತಾವು ನಿರ್ದೇಶಿಸಿದ ನಾಟಕ ಪ್ರಯೋಗಗಳನ್ನು ಮಾಡತೊಡಗಿದರು. ಧಾರವಾಡ, ಗದಗ, ಹಾವೇರಿ, ಅಣ್ಣಿಗೇರಿ, ಕಲಘಟಗಿ, ಕುಂದಗೋಳ, ನವಲಗುಂದ ಮುಂತಾದ ಸ್ಥಳಗಳಲ್ಲದೆ, ರಾಜ್ಯದ ಬೇರೆ ಬೇರೆ ನಗರಗಳಲ್ಲೂ ನಾಟಕ ಪ್ರಯೋಗಗಳನ್ನು ಮಾಡಲಾಯಿತು. ಬೆಂಗಳೂರು, ಕೆಜಿಎಫ್, ಗುಲಬರ್ಗಾ, ವಿಜಾಪುರ, ಬೆಳಗಾಂವ, ಕುಮಟಾ ಮುಂತಾದ ಸ್ಥಳಗಳಲ್ಲಿ ನಾಟಕ ಪ್ರದರ್ಶಿಸಿ, ತಮ್ಮ ನಿರ್ದೇಶನದ ಕುಶಲತೆಯ ಕುರುಹನ್ನು ಸ್ಮರಣೆಯಲ್ಲಿ ಉಳಿಸಿದ್ದಾರೆ.

### ಮಕ್ಕಳ ರಂಗ ಕಾರ್ಯಾಗಾರ

ಆಧುನಿಕ ಸಾಮೂಹಿಕ ಮಾಧ್ಯಮಗಳಾದ ರೇಡಿಯೋ, ಸಿನೇಮಾ ಹಾಗೂ ದೂರದರ್ಶನಗಳಿಂದ ಕುಸಿಯುತ್ತಿರುವ ರಂಗಭೂಮಿಯ ದುರಂತವನ್ನು ತಪ್ಪಿಸಬೇಕಾದರೆ ಹಾಗೂ ರಂಗಭೂಮಿಗೆ ಹೊಸ ಚೈತನ್ಯವನ್ನು ಕೊಡಬೇಕಾದರೆ, ಮಕ್ಕಳಿಗೆ ರಂಗ ತರಬೇತಿ ಕೊಡುವುದು ಅನಿವಾರ್ಯ ಎಂದು ಮನಗಂಡ ಶ್ರೀ ಚಟರ್ಜಿಯವರು 'ಪ್ರಗತಿ ಕಲಾವೃಂದ'ದ ಆಶ್ರಯದಲ್ಲಿ ಮಕ್ಕಳ ರಂಗ ತರಬೇತಿ ಕಾರ್ಯಾಗಾರದ ಯೋಜನೆಯನ್ನು ಹಮ್ಮಿಕೊಂಡರು ಶಾಲೆ ಕಾಲೇಜುಗಳಿಗೆ ರಜೆ ಇದ್ದ ಅವಧಿ ಮಕ್ಕಳ ರಂಗ ಕಾರ್ಯಾಗಾರಕ್ಕೆ ಸೂಕ್ತವೆಂದು ನಿರ್ಣಯಿಸಿ. ೧೯೮೮ ರಲ್ಲಿ 'ಪಲ್ಲವಿ ೮೮' ಎಂಬ ಹೆಸರಿನಲ್ಲಿ ರಂಗ ಕಾರ್ಯಾಕಾರವನ್ನು ಪ್ರಾರಂಭಿಸಿ, 'ನೀನಾಸಂ' ಪದವಿ

ಧರೆಯಾದ ಕಿತ್ತೂರಿನ ಕು|| ವಿಶ್ವೇಶ್ವರಿ ಕಲ್ಮಠ ಅವರಿಗೆ ಕಾರ್ಯಾಗಾರದ ನಿರ್ದೇಶನದ ಹೊಣೆಗಾರಿಕೆಯನ್ನು ಒಪ್ಪಿಸಿದರು. ಈ ಕಾರ್ಯಾಗಾರದಲ್ಲಿ ೮ ರಿಂದ ೧೫ ವರುಷಗಳ ಮಕ್ಕಳಿಗೆ ವಿಸ್ತೃತ ರಂಗ ತರಬೇತಿ ಕೊಡಲಾಯಿತು. ನಾಟಕ ಸಿದ್ಧಾಂತ, ನಾಟಕಕಲೆ, ವಿಜ್ಞಾನ, ನಾಟಕ ಉತ್ಪಾದನಾ ತಂತ್ರ, ರಂಗ ಪರಿಸರ, ರಂಗ ಸಜ್ಜಿಕೆಗಳಲ್ಲಿ ವಿಶೇಷ ತರಬೇತಿಯನ್ನು ಕೊಡಲಾಯಿತು. ಮಕ್ಕಳಿಗಾಗಿಯೇ ಚಟರ್ಜಿಯವರು ಬರೆದ *ಸುಪ್ರಿಯಾ, ಸ್ವಾಮಿಗಳ ಅವಾಂತರ, ಗೊಂಬೆ ಆಟ* ನಾಟಕಗಳನ್ನು ಪ್ರದರ್ಶಿಸಲಾಯಿತು. ಈ ರಂಗ ತರಬೇತಿ ಕಾರ್ಯಾಗಾರ ೧೯೯೫ರ ವರೆಗೆ ಮುಂದುವರಿಸಿಕೊಂಡು ಬಂದರು.

## ಬಳುವಳಿ

ಕಳೆದ ಮೂರುವರೆ ದಶಕಗಳಲ್ಲಿ ಚಟರ್ಜಿಯವರು ಹವ್ಯಾಸಿ ರಂಗಭೂಮಿಯಲ್ಲಿ ಅನೇಕಾನೇಕ ಕಲಾವಿದರನ್ನು ತರಬೇತಿಗೊಳಿಸಿದರು. ನಾಟಕ ಉತ್ಪಾದನೆಗೆ ಕಲಾವಿದರೇ ಜೀವಾಳವಾದ್ದರಿಂದ ಹೊಸಬರಲ್ಲಿ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ತರಬೇತಿಯನ್ನು ಕೊಟ್ಟು, ಅನೇಕ ಯುವಕ ಯುವತಿಯರನ್ನು ಉತ್ತಮ ಕಲಾವಿದರು, ನೇಪಥ್ಯಕರ್ಮಿಗಳು, ರಂಗ ಸಂಘಟಕರು ಹಾಗೂ ನಾಟಕಕಾರರನ್ನಾಗಿ ತಯಾರಿಸಿ ಕನ್ನಡ ರಂಗಭೂಮಿಗೆ ಬಳುವಳಿಯಾಗಿ ನೀಡಿದ ಕೀರ್ತಿ ಚಿತ್ತರಂಜನ ಚಟರ್ಜಿಯವರಿಗೆ ಸಲ್ಲುತ್ತದೆ. ಮೊದ ಮೊದಲು ನಾಟಕ ಅನುವಾದ ಮಾಡಲು ತೊಡಗಿಸಿ, ನಂತರ ಅವರನ್ನು ಸ್ವತಂತ್ರವಾಗಿ ನಾಟಕಕಾರರಾಗುವ ತರಬೇತಿ ನೀಡಿದ್ದಾರೆ. ಭಾಷಾಂತರ ಮಾಡಲು ಸಹಕರಿಸಿದ ಸುರೇಶ ಕಿಣಿ, ಗೋಪಾಲ ವಾಜಪೇಯಿ, ಸಿದ್ದಣ್ಣ ಅಂಗಡಿ ಹಾಗೂ ಈರಣ್ಣ ಪಾಳೇದ ಇವರನ್ನು ಸ್ವತಂತ್ರ ನಾಟಕರಾರನ್ನಾಗಿಸಿ ಕನ್ನಡ ಹವ್ಯಾಸಿ ರಂಗಭೂಮಿಗೆ ಕೊಡುಗೆಯಾಗಿ ಇತ್ತಿದ್ದಾರೆ. ಹವ್ಯಾಸಿ ತಂಡಗಳಿಗೆ ಸ್ತ್ರೀ ಕಲಾವಿದರ ಕೊರತೆ ಕಾಡುತ್ತಿತ್ತು. ಆದರೆ ಚಟರ್ಜಿಯವರ ನಾಟಕಕ್ಕೆ ಎಂದೂ ಸ್ತ್ರೀ ಕಲಾವಿದರ ಕೊರತೆಯಾಗಲಿಲ್ಲ. ಗದಗ ಹಾಗೂ ಧಾರವಾಡದಿಂದ ಹುಬ್ಬಳ್ಳಿಗೆ ಬಂದು, ಚಟರ್ಜಿಯವರ ನಿರ್ದೇಶನದಲ್ಲಿ ನಾಟಕ ಅಭಿನಯಿಸಿ ಹಿಂತಿರುಗುತ್ತಿದ್ದರು. ಹೀಗಾಗಿ ಅವರಿಗೆ ಸ್ತ್ರೀ ಪಾತ್ರಕ್ಕಾಗಿ ಕಲಾವಿದೆಯರನ್ನು ಹುಡುಕುವ ಸ್ಥಿತಿ ಎಂದಿಗೂ ಬರಲಿಲ್ಲವೆಂದು ಈಗಲೂ ಮೆಲುಕು ಹಾಕುತ್ತಾರೆ.

ಹವ್ಯಾಸಿ ರಂಗಭೂಮಿಯ ಏಳ್ಗೆಗಾಗಿ ತಂಡವೊಂದನ್ನು ಸ್ಥಾಪಿಸಿ, ಅನೇಕ ಎಡರು ತೊಡರುಗಳನ್ನು ಎದುರಿಸಿ, ನಿರಂತರ ಚಟುವಟಿಕೆಗಳಿಂದ ಕ್ರಿಯಾಶೀಲವನ್ನಾಗಿಸಿ, ಹುಬ್ಬಳ್ಳಿಯ ಇತರ ಹವ್ಯಾಸಿ ತಂಡಗಳಿಗೆ ಮಾತೃಸ್ಥಾನದಂತಿರುವ ಪ್ರಗತಿ ಕಲಾವೃಂದ ಕೂಡಾ ಚಟರ್ಜಿಯವರು ಕನ್ನಡ ರಂಗಭೂಮಿಗೆ ನೀಡಿದ ಬಳುವಳಿಯಾಗಿದೆ.

## ಪ್ರಶಸ್ತಿ ಪುರಸ್ಕಾರಗಳು

ಪ್ರಗತಿ ಕಲಾ ವೃಂದಕ್ಕೂ ಪ್ರಶಸ್ತಿಗಳ ಸಂಪಾದನೆಗೂ ಬಹಳಷ್ಟು ನಂಟಿದೆ. ಚಟರ್ಜಿಯವರು ನಿರ್ದೇಶನದಲ್ಲಿ ಸ್ಪರ್ಧಿಸಿದಲ್ಲೆಲ್ಲಾ ಗೆದ್ದು ತಂದ ಪ್ರಶಸ್ತಿಗಳ ಸರಮಾಲೆಯೇ ಇವರ ಕೊರಳಿಗಿದೆ. ಅವರ ಪ್ರಯೋಗಗಳ ಉತ್ತಮಿಕೆಗೆ ಇವು ಜೀವಂತ ಸಾಕ್ಷಿಯಾಗಿವೆ. 'ಲೈನ್ಸ್ ಕ್ಲಬ್ ಆಫ್ ಹುಬ್ಬಳ್ಳಿ'

ಏರ್ಪಡಿಸಿದ ಜಿಲ್ಲಾ ಮಟ್ಟದ ಚಟುರ್ಭಾಷಾ ನಾಟಕ ಸ್ಪರ್ಧೆ, ಕಲಾದೇಗುಲ ಧಾರವಾಡದವರು ನಡೆಸುತ್ತಿದ್ದ ಸ್ನೇಹಲತಾ ರೆಡ್ಡಿ ಸ್ಮಾರಕ ರಾಜ್ಯ ಮಟ್ಟದ ನಾಟಕ ಸ್ಪರ್ಧೆ, ಧಾರವಾಡ ಜಿಲ್ಲಾ ಯುವಜನ ಸೇವಾ ಮಂಡಳಿಯ ಆಶ್ರಯದಲ್ಲಿ ನಡೆಯುತ್ತಿದ್ದ ಜಿಲ್ಲಾ ಮಟ್ಟದ, ಬೆಳಗಾವಿ ವಿಭಾಗ ಮಟ್ಟದ ಹಾಗೂ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ *ಆಸೂ ಇತಿಹಾಸಕೆ, ಕಹಾನಿ ಉನ್ ಲೋಗೋಂಕಿ, ಜಬ್ ಅಕೇಲಿ, ಪರಾಜಿತ್, ನೀಂದ್‌ರಾತ್ ಭರ್ ಕ್ಯೂಂ ನಹಿ ಆತಿ?* ಹಿಂದಿ, ಇಂಗ್ಲೀಷಿನ *ಗ್ಲಾಸ ಮಿನೇಟರಿ* ಹಾಗೂ ಕನ್ನಡದ *ಕ್ರಾಂತಿ ಬಂತು ಕ್ರಾಂತಿ, ಆದೆ ಅಧೂರೆ, ರಕ್ತದಾಹ, ಜೈಸಿದ ನಾಯ್ಕಾ, ಕನಸಿನೊಂದಿಗೆ* ಮುಂತಾದ ನಾಟಕಗಳಿಗೆ ಬಹುಮಾನ ಲಭಿಸಿವೆ.

ಭಾಷೆ ಬಾರದಿದ್ದರೂ ಹವ್ಯಾಸಿ ತಂಡವನ್ನು ಕಟ್ಟಿ ಕನ್ನಡ ರಂಗಭೂಮಿಗೆ ಮೂರುವರೆ ದಶಕಗಳಿಂದ ನಿರಂತರ ಸೇವೆ ಸಲ್ಲಿಸುತ್ತಿರುವ ಚಟರ್ಜಿಯವರ ಸಾಧನೆಯನ್ನು ಮೆಚ್ಚಿ, ಅನೇಕ ಸಂಘ ಸಂಸ್ಥೆಗಳು, ಸರಕಾರದವರು ಇವರನ್ನು ಸನ್ಮಾನಿಸಿರುವುದುಂಟು. ಈ ದಿಸೆಯಲ್ಲಿ ಹುಬ್ಬಳ್ಳಿ, ಧಾರವಾಡ ಮಹಾನಗರಸಭೆಯವರು ೧೯೮೭ರ ಕನ್ನಡ ರಾಜ್ಯೋತ್ಸವದಂದು ಪ್ರಶಸ್ತಿ ನೀಡಿ ಸನ್ಮಾನಿಸಿದರು. ೧೯೯೦ ರ ಫೆಬ್ರುವರಿಯಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ೫೯ನೇ ಕನ್ನಡ ಸಾಹಿತ್ಯ ಸಮ್ಮೇಳದಲ್ಲಿ ಸ್ವಯಂ ಸೇವಕರಾಗಿ, ಸ್ವಯಂ ಸ್ಫೂರ್ತಿಯಿಂದ ಸೇವೆ ಸಲ್ಲಿಸಿ ಕನ್ನಡಾಭಿಮಾನವನ್ನು ಹಾಗೂ ಕನ್ನಡಕ್ಕಾಗಿ ದುಡಿಯಲು ಸದಾ ಸಿದ್ಧ ಎಂಬುದನ್ನು ತೋರ್ಪಡಿಸಿದರು.

ಹುಬ್ಬಳ್ಳಿಯ 'ನಟರಾಜ ನಾಟ್ಯ ಸಂಘ'ವು ತನ್ನ ರಜತ ಮಹೋತ್ಸವ ಸಂದರ್ಭದಲ್ಲಿ ೨೩-೧೦-೮೪ರಲ್ಲಿ ಚಟರ್ಜಿಯವರನ್ನು ಸನ್ಮಾನಿಸಿದರೆ, ಕನ್ನಡ ರಾಜ್ಯೋತ್ಸವದ ಅಂಗವಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹುಬ್ಬಳ್ಳಿ ವಲಯದವರು ೨೭-೧೧-೧೯೮೮ ರಂದು, ಹುಬ್ಬಳ್ಳಿಯ 'ವಿನೋದಕುಮಾರ ಗುಂಜಾಳ ಗೆಳೆಯರ ಬಳಗ' ದವರು ೧-೧೧-೧೯೯೯ ರಂದು ಚಟರ್ಜಿಯವರನ್ನು ಸನ್ಮಾನಿಸಿದರು. ಇದರಲ್ಲದೆ ಅನೇಕ ಸಂಘ ಸಂಸ್ಥೆಗಳವರು ಚಟರ್ಜಿಯವರನ್ನು ಸನ್ಮಾನಿಸಿ, ಅವರ ಸೇವೆ ಹಾಗೂ ಸಾಧನೆಯನ್ನು ಶ್ಲಾಘಿಸಿದ್ದಾರೆ.

### ಗೌರವ ಫೆಲೋಶಿಪ್

ಚಿತ್ತರಂಜನ ಚಟರ್ಜಿಯವರು ಕಳೆದ ಮೂರು ದಶಕಗಳಿಂದ ಕನ್ನಡ ರಂಗಭೂಮಿಗಾಗಿ ಇಡೀ ಜೀವನವನ್ನೇ ಮುಡಿಪಾಗಿಟ್ಟು ಸಲ್ಲಿಸಿದ ಅಮೂಲ್ಯ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿಯು ೧೯೯೮ರ ಫೆಲೋಶಿಪ್ ನೀಡಿ ಗೌರವಿಸಿದೆ. ಈ ಪ್ರಶಸ್ತಿಯನ್ನು ೧೯೯೯ ರಲ್ಲಿ ವಿಶ್ವ ರಂಗಭೂಮಿ ದಿನವಾದ ಮಾರ್ಚ್ ೨೭ ರಂದು ಬಳ್ಳಾರಿಯಲ್ಲಿ ಪ್ರದಾನ ಮಾಡಿ, ಅವರ ರಂಗ ಸೇವೆಯನ್ನು ಸ್ಮರಿಸಿತು.

ಇವೆಲ್ಲವುಗಳಿಗಿಂತ ಹೆಚ್ಚಾಗಿ ಕರ್ನಾಟಕದ ಜನತೆ ತಮ್ಮನ್ನು 'ಬಂಗಾಲಿ ಕನ್ನಡಿಗ' ನೆಂದು ಗುರುತಿಸಿ, ತಾವು ಹಾಗೂ ತಾವು ಕಟ್ಟಿದ ತಂಡವನ್ನು ಉಳಿಸಿ ಬೆಳೆಸಿಕೊಂಡು ಬರಲು ಹಾಗೂ ನಿರಂತರ ಕ್ರಿಯಾಶೀಲವಾಗಿರುವಲ್ಲಿ ತೋರಿದ ಸಹಕಾರ, ನೀಡಿದ ಪ್ರೋತ್ಸಾಹ ಹಾಗೂ ಮಾಡಿದ

ಆಶೀರ್ವಾದ ಇವುಗಳೇ ತಮಗೆ ಸಂದ ನಿಜವಾದ ಸನ್ಮಾನ ಎನ್ನುತ್ತಾರೆ. ಇದುವೇ ತಮ್ಮ ಸಾಧನೆಗೆ ತೃಪ್ತಿ ಎನ್ನುವ ಚಟರ್ಜಿಯವರ ಮಾತುಗಳಲ್ಲಿ ಸೌಜನ್ಯತೆ ಎದ್ದು ಕಾಣುತ್ತದೆ.

ಚಟರ್ಜಿಯವರ ರಂಗ ಚಟುವಟಿಕೆಗಳು ಹಾಗೂ ಸಾಧನೆ, ಅವರ ಜೀವನ ಮುಂತಾಗಿ ಪತ್ರಿಕಾ ಮಾಧ್ಯಮದವರು ಕಾಲಕಾಲಕ್ಕೆ ಪ್ರಕಟಿಸಿ, ಪ್ರಚಾರ ಮಾಡುವುದರೊಂದಿಗೆ ಅವರು ಸದಾ ರಂಗಭೂಮಿಯ ನಂಟನ್ನು ಉಳಿಸಿಕೊಂಡು ಮುನ್ನಡೆಯಲು ಪ್ರೋತ್ಸಾಹ ಸಹಕಾರ ನೀಡಿರುವುದನ್ನು ಯಾವಾಗಲೂ ಚಟರ್ಜಿಯವರು ಸ್ಮರಿಸುತ್ತಾರೆ. ಅಲ್ಲದೆ ಹೆಸರಾಂತ ನಾಟಕಕಾರರ ಮೆಚ್ಚುಗೆ ಪ್ರೇಕ್ಷಕರ ಶ್ರೀರಕ್ಷೆಯೇ ರಂಗಭೂಮಿಯ ಜೀವಂತಿಕೆಗೆ ಸಲ್ಲುವ ನಿಜವಾದ ಪ್ರಶಸ್ತಿಗಳು ಎನ್ನುತ್ತಾರೆ ಚಟರ್ಜಿ.

## ಉಪಜೀವನ

ಪ್ರತಿಯೊಬ್ಬ ಪುರುಷನ ಸಾಧನೆಯ ಹಿಂದೆ ಸ್ತ್ರೀ ಶಕ್ತಿ ಇದ್ದೇ ಇರುತ್ತದೆ ಎನ್ನುವಂತೆ ಚಿತ್ತರಂಜನರು ಸಾಧನೆಯ ಮೆಟ್ಟಿಲುಗಳನ್ನೇರಲು ಅವರ ಪತ್ನಿ 'ಬೀನಾ' ಹಗಲಿಗೆ ಹಗಲು ಕೊಟ್ಟು ಪಟ್ಟ ಪರಿಶ್ರಮ ಅಸಾಮಾನ್ಯವಾದುದು. ಉಪಜೀವನಕ್ಕಾಗಿ ಕ್ರಮಿಸಿದ ಮಾರ್ಗ ಅತ್ಯಂತ ಕಠಿಣತಮವಾದುದು. ಚಟರ್ಜಿಯವರು ತಮ್ಮ ದುಡಿಮೆಯ ಮುಕ್ಕಾಲು ಭಾಗವನ್ನು ರಂಗಚಟುವಟಿಕೆಗಳಿಗಾಗಿ ವಿನಿಯೋಗಿಸುತ್ತಿದ್ದರು. ಕಾಲುಭಾಗ ಹಣದಲ್ಲಿ ಮನೆತನ ನಡೆಸುವದು ದುಸ್ಸಾಧ್ಯವಾಗಿತ್ತು. ಚಟರ್ಜಿಯವರನ್ನು ವಿವಾಹವಾಗಿ ೧೯೭೦ರಲ್ಲಿ ಕಲಕತ್ತಾದಿಂದ ಹುಬ್ಬಳ್ಳಿಗೆ ಬಂದಾಗ ಪ್ರದೇಶ, ಪರಿಸರ, ಜನ, ಭಾಷೆ ಎಲ್ಲವೂ ಹೊಸದು. ಆದರೂ ವಿದ್ಯಾವಂತರಾದ ಇವರು ಇಲ್ಲಿಯ ಭಾಷೆ ಕಲಿತು, ಹೊಲಿಗೆ ತರಬೇತಿ ಪ್ರಾರಂಭಿಸಿ ದುಡಿಮೆಯನ್ನು ಪ್ರಾರಂಭಿಸಿದರು. ಆದರಿಂದ ಬಂದ ಹಣದಿಂದ ಮನೆತನವನ್ನು ನಡೆಸಿಕೊಂಡು ಧೈರ್ಯವಾಗಿ ಮುನ್ನಡೆದು ಚಿತ್ತರಂಜನ ರಂಗ ಚಟುವಟಿಕೆಗೆ ಸಹಕಾರಿಯಾದರು. ಎಷ್ಟೋ ಸಲ ತಮ್ಮ ಸಂಪಾದನೆಯಲ್ಲೂ ಕೆಲ ಭಾಗವನ್ನು ಚಿತ್ತರಂಜನರಿಗೆ ನೀಡುತ್ತಿದ್ದರು. ಅವರ ರಂಗಚಟುವಟಿಕೆಗೆ ಸದಾ ಬೆನ್ನೆಲುಬಾಗಿದ್ದರು.

ಚಿತ್ತರಂಜನರು ನೌಕರಿ ಮಾಡುತ್ತಿದ್ದ ಕಂಪನಿ ೧೯೯೩ ರಲ್ಲಿ ಹಠಾತ್ತನೆ ಮುಚ್ಚಿಹೋಯಿತು ಆಗ ಮನೆತನದ ಸಂಪೂರ್ಣ ಆರ್ಥಿಕ ಭಾರವನ್ನು ಹಾಗೂ ಮಗ ಥಾಯಾನ್, ಮಗಳು ಶೃತಿಯ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಶ್ರೀಮತಿ ಬೀನಾರವರೇ ನಿರ್ವಹಿಸಬೇಕಾಯಿತು. ಮಗನನ್ನು ಬಿ.ಇ. ಓದಿಸಿದ ಇವರು ಮಗಳ ವಿದ್ಯಾಭ್ಯಾಸದತ್ತ ಗಮನ ಹರಿಸಿದ್ದಾರೆ. ಅಲ್ಲಿಂದ ಇಲ್ಲಿಯ ವರೆಗೆ ಅವರು ಪಡುತ್ತಿರುವ ಕಷ್ಟ ಹೇಳಲಸಾಧ್ಯ.

ಆದರೆ ಚಟರ್ಜಿಯವರ ಬಗ್ಗೆ ಇಲ್ಲಿ ಒಂದು ಮಾತು ಹೇಳಲೇ ಬೇಕೆನಿಸುತ್ತದೆ. ೧೯೭೮ರಲ್ಲಿ ಹವ್ಯಾಸಿ ನಾಟಕ ತಂಡ ಕಟ್ಟಿ, ಯಾವುದೇ ರಾಜಕೀಯ ಆಶ್ರಯವಿಲ್ಲದೆ, ತಮ್ಮ ದುಡಿಮೆಯನ್ನೆಲ್ಲಾ ಧಾರೆಯೆರೆದು, ಇಡೀ ಜೀವನವನ್ನೇ ಮುಡಿಪಾಗಿಟ್ಟರು. ಕನ್ನಡ ರಂಗಭೂಮಿಗಾಗಿ ಗೈದ ಸಾಧನೆಗೆ ಸಿಕ್ಕ ಮಾನ ಸನ್ಮಾನಗಳು ಪ್ರಶಸ್ತಿ ಪುರಸ್ಕಾರಗಳು ಅವರ ಉಪಜೀವನ ಸಮಸ್ಯೆ ನಿವಾರಿಸಲು ನೆರವಾಗಲಿಲ್ಲ. ಈಗಲೂ ಕೂಡಾ ಅವರು ಜೀವನ ಸಾಗಿಸುವುದು

ದುರ್ಭರವಾಗಿದೆ. ಸಂಪೂರ್ಣವಾಗಿ ರಂಗಭೂಮಿಗೆ ತನ್ನನ್ನು ತಾನು ಸಮರ್ಪಿಸಿಕೊಂಡು 'ಕಮಿಟೆಡ್' ಆಗಿ ಜೀವನ ನಡೆಸುವದು ಅತ್ಯಂತ ಕಷ್ಟದಾಯಕವಾಗಿದೆ ಎಂಬುದಕ್ಕೆ ಚಟರ್ಜಿಯವರ ಜೀವನವೇ ಒಂದು ಜೀವಂತ ನಿದರ್ಶನವಾಗಿದೆ.

## ಕೊನೆಯ ಮಾತು

ಚಿತ್ತರಂಜನ ಚಟರ್ಜಿಯವರು ರಂಗಭೂಮಿಗಾಗಿ ಕಳೆದುಕೊಂಡಿರುವುದು ಬಹಳ. ನಿಸ್ವಾರ್ಥಭಾವನೆಯಿಂದ ರಂಗಭೂಮಿಯ ಸೇವೆಗೈದು ಪಡೆದುಕೊಂಡಿರುವುದು ಲಕ್ಷಾನು ಲಕ್ಷ ಪ್ರೇಕ್ಷಕರ ಪ್ರೀತಿ, ಮೆಚ್ಚುಗೆ, ಪತ್ರಿಕಾ ಪ್ರಶಂಸೆ ಅಲ್ಲದೆ ಪ್ರತಿಯೊಂದು ಸ್ಥಳದಲ್ಲಿ ಒಂದರ ಮೇಲೊಂದರಂತೆ ಸಿಕ್ಕ ಮಾನ ಸನ್ಮಾನಗಳು. ಆದರೆ ಆರ್ಥಿಕವಾಗಿ ಯಾವುದೇ ರೀತಿಯ ಸಹಾಯ ಸಹಕಾರಗಳು ಇದೂವರೆಗೆ ಲಭಿಸದಿರುವದು ಒಂದು ದುರದೃಷ್ಟಕರವಾದ ಸಂಗತಿಯಾಗಿದೆ.

ಇಷ್ಟೊಂದು ಆರ್ಥಿಕ ಮುಗ್ಗಟ್ಟಿನಿಂದಲೂ ಕಂಗೆಡದ ಚಟರ್ಜಿಯವರು ರಂಗ ಚಟುವಟಿಕೆಗಳನ್ನು ನಡೆಸುತ್ತಲೇ ಇದ್ದಾರೆ. ಪ್ರಶಸ್ತಿ ಪುರಸ್ಕಾರ, ಮಾನಸನ್ಮಾನಗಳು ಸಿಕ್ಕರೆ ತಮ್ಮ ಕೆಲಸ ಮುಗಿಯಿತೆನ್ನುವ ಜಾಯಮಾನ ಅವರದಲ್ಲ. ಕನ್ನಡ ರಂಗಭೂಮಿಗಾಗಿ ದುಡಿಯಬೇಕೆಂಬ ಹುಮ್ಮಸ್ಸು ಅವರಲ್ಲಿ ಕಡಿಮೆಯಾಗಿಲ್ಲ.

ಸದಾ ರಂಗ ಚಿಂತನೆಯಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿರುವ ಚಿತ್ತರಂಜನ ಚಟರ್ಜಿಯವರ ದೃಷ್ಟಿಯಲ್ಲಿ ನಿಜವಾದ ನಾಟಕ ಬರಬೇಕು. ನಾಟಕ ಉತ್ಪಾದನೆಯ ಮೂಲಕ ಉತ್ತಮ ನಟ ತಯಾರಾಗಬೇಕಲ್ಲದೆ ಉತ್ತಮ ಮಾನವ ತಯಾರಾಗಬೇಕು. ನಾಟಕ ನೋಡಿದ ಪ್ರೇಕ್ಷಕರು ಉತ್ತಮಿಕೆ ಹೊಂದಬೇಕು. ರಂಗದ ಮೂಲಕ ಅವರಿಗೆ ಶಿಕ್ಷಣ ನೀಡಬೇಕು. ಈ ಗುರಿಗಳ ಸಾಧನೆಗೆ ಒಂದು ರಂಗಶಾಲೆ ಪ್ರಾರಂಭಿಸಬೇಕೆಂಬ ಕನಸು ಶ್ರೀ ಚಿತ್ತರಂಜನ ಚಟರ್ಜಿಯವರದಾಗಿದೆ. ಈ ರಂಗಶಿಲ್ಪಿಯ ಕನಸು ನನಸಾಗಿ ಕನ್ನಡ ರಂಗಭೂಮಿ ಪ್ರಜ್ವಲಿಸುವಂತಾಗಲಿ ಎಂದ ಹಾರೈಸೋಣ.



# ಡಾ. ಬಿ. ಆರ್. ಮಂಜುನಾಥ್

— ಸಿ.ಜಿ.ಕೆ.

ಕರ್ನಾಟಕದ ತುಮಕೂರಿನಲ್ಲಿ ೧೯೪೦ರಲ್ಲಿ ಜನನ. ಕಾಲೇಜು ಮಟ್ಟದವರೆಗೆ ತಿಪಟೂರು, ತುಮಕೂರುಗಳಲ್ಲಿ ವಿದ್ಯಾಭ್ಯಾಸ. ಕಾಲೇಜು ಶಿಕ್ಷಣ ಬೆಂಗಳೂರಿನಲ್ಲಿ. ಕನ್ನಡ ವಿಷಯದಲ್ಲಿ ಚಿನ್ನದ ಪದಕ. ಮೈಸೂರು ವಿಶ್ವವಿದ್ಯಾಲಯದ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಭೌತ ಶಾಸ್ತ್ರದಲ್ಲಿ ಎಂ.ಎಸ್‌ಸಿ. ಪದವಿ. ಯುನೈಟೆಡ್ ಕಿಂಗ್‌ಡಮ್‌ನ ಸ್ಕಾಟ್ಲೆಂಡಿನ ಗ್ಲಾಸ್ಗೊ ನಗರದ "ಯೂನಿವರ್ಸಿಟಿ ಆಫ್ ಸ್ಟ್ರಾತ್ ಕ್ಲೈಡ್" ವಿಶ್ವವಿದ್ಯಾಲಯದಿಂದ ಭೌತ ಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ.

ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಭೌತ ಶಾಸ್ತ್ರದ ಅಧ್ಯಾಪಕ. ೧೯೬೪ರಲ್ಲಿ ಮುಂಬೈಯ ಬಾಂಬೆ ಟೆಕ್ಸ್‌ಟೈಲ್ ರಿಸರ್ಚ್ ಅಸೋಸಿಯೇಷ್‌ನ್ನಿಗೆ ಭೌತ ಶಾಸ್ತ್ರ ವಿಭಾಗಕ್ಕೆ ವಿಜ್ಞಾನಿಯಾಗಿ ಸೇರ್ಪಡೆ. ೧೯೭೦ರಲ್ಲಿ ಅದನ್ನು ಬಿಟ್ಟು ಭಾರತ ಸರ್ಕಾರದ ಟೆಕ್ಸ್‌ಟೈಲ್ ಕಮಿಟಿ, ಅಲ್ಲಿಯ ಪ್ರಯೋಗಶಾಲೆಗಳ ಡೈರೆಕ್ಟರ್ ಆಗಿ ಸೇರ್ಪಡೆ.

೧೯೭೮ರಲ್ಲಿ ಅದನ್ನು ಬಿಟ್ಟು "ಇಂಟೆಕ್ಸ್ ಇಂಡಿಯಾ" ಕಂಪನಿಯ ಮುಖ್ಯಸ್ಥರಾಗಿ ದುಡಿದು ಅನಂತರ ಈಗ ಖ್ಯಾತ ಅಂತರಾಷ್ಟ್ರೀಯ ಕಂಪನಿ "ಇಂಟರ್ ಟೆಕ್ ಟೆಸ್ಟಿಂಗ್ ಸರ್ವೀಸಸ್" ನ ಭಾರತದ ಮುಖ್ಯಸ್ಥರಾಗಿದ್ದಾರೆ. ದೇಶ ವಿದೇಶಗಳನ್ನು ತಿರುಗಿ ಅಲ್ಲಿಯ ಕಲೆ, ಸಾಹಿತ್ಯ, ಚರಿತ್ರೆ ಮತ್ತು ಸಂಸ್ಕೃತಿಯ ಅಭ್ಯಾಸ ಮಾಡಿದ್ದಾರೆ.

ಚಿಕ್ಕಂದಿನಿಂದಲೂ ಇವರಿಗೆ ಹಾಡುಗಾರಿಕೆ, ನೃತ್ಯ, ನಾಟಕ ಹಾಗೂ ಸಾಹಿತ್ಯದಲ್ಲಿ ಅಭಿರುಚಿ. ಇದಕ್ಕೆ ಅವರು ಅವರ ಅಕ್ಕಂದಿರ ಪ್ರೇರಣೆಯೇ ಕಾರಣ ಎನ್ನುತ್ತಾರೆ. ತುಮಕೂರಿನ ಅಂದಿನ ಖ್ಯಾತ ನಾಟಕದ ಗುರು ಶ್ರೀ ಶಂಕರ್ ಅವರ ನಿರ್ದೇಶನದ "*ಗೋಕುಲ ನಿರ್ಗಮನ*" ಸಂಗೀತ ನಾಟಕ, ಎಚ್ಚಮ ನಾಯಕ ಮುಂತಾದ ನಾಟಕಗಳಲ್ಲಿ ಪತ್ರವಹಿಸಿ ಆ ವಯಸ್ಸಿನಲ್ಲಿಯೇ ಹೆಸರು ಗಳಿಸಿದ್ದರು.

೧೯೬೪ರಲ್ಲಿ ಅವರು ಮುಂಬೈಗೆ ಬಂದಾಗಿನಿಂದ ಮುಂಬೈಯ ಮಾತುಂಗದ ಬಡಾವಣೆಯಲ್ಲಿರುವ ಮೈಸೂರು ಅಸೋಸಿಯೇಷ್‌ನ್ನಿನ ಸದಸ್ಯರಾದರು.

ಅಲ್ಲಿ ಅವರಿಗೆ ಶ್ರೀ ವಿ.ಕೆ. ಮೂರ್ತಿ, ದಿ|| ಶ್ರೀ ಪದ್ಮಣ್ಣ, ದಿ|| ಬಿ.ಎನ್. ದುಗ್ಗಪ್ಪಯ್ಯ, ಕೆ. ಮಂಜುನಾಥಯ್ಯ, ಸಿ.ಜಿ. ಅಚ್ಯುತಸ್ವಾಮಿ ಮುಂತಾದವರ ಪರಿಚಯವಾಯಿತು. ೧೯೭೧ರವರೆಗೆ ಹೊರಗಿನಿಂದಲೇ ಮೈಸೂರು ಅಸೋಸಿಯೇಷನ್ನಿನ ಕಲಾ ವಿಭಾಗದ ಚಟುವಟಿಕೆಗಳನ್ನು

ಗಮನಿಸುತ್ತಿದ್ದ ಡಾ|| ಮಂಜುನಾಥರ ಹಳೆಯ ಗೆಳೆಯ ದಿ|| ಶ್ರೀ ಪದ್ಮಣ್ಣ (ಕರ್ನಾಟಕದ ಖ್ಯಾತ ರಂಗ ಕರ್ಮಿ) ನವರ ಕರೆಗೆ ಓಗೊಟ್ಟು ಕಲಾ ವಿಭಾಗದ ನಾಟಕಗಳಲ್ಲಿ ಪಾತ್ರವಹಿಸಲಾರಂಭಿಸಿದರು. ಶ್ರೀ ಪದ್ಮಣ್ಣ ಬೆಂಗಳೂರಿಗೆ ತೆರಳಿದ ನಂತರ ಕಲಾ ವಿಭಾಗದ ಚಟುವಟಿಕೆಗಳು ಸ್ವಲ್ಪಮಟ್ಟಿಗೆ ನಿಷ್ಕ್ರಿಯವಾದವು. ಆ ವೇಳೆಯಲ್ಲಿ ವಿಭಾಗದ ಮುಂದಾಳ್ತನವನ್ನು ವಹಿಸಿದ ಗೆಳೆಯ ಶ್ರೀ ಅಚ್ಯುತಸ್ವಾಮಿ ಮತ್ತು ಶ್ರೀ ಕೆ. ಮಂಜುನಾಥಯ್ಯನವರ ನೆರವಿಗೆ ನಿಂತು ಕಲಾ ವಿಭಾಗಕ್ಕಾಗಿ ನಾಟಕಗಳನ್ನು ನಿರ್ದೇಶಿಸತೊಡಗಿದರು. "ತಿಂಗಳಿಗೊಂದು ನಾಟಕ" ಸಂಪ್ರದಾಯದಡಿ ಕರ್ನಾಟಕದ ಟಿ.ಪಿ. ಕೈಲಾಸಂ, ಪಿ. ಲಂಕೇಶ, ಚಂದ್ರಶೇಖರ ಪಾಟೀಲ, ಪರ್ವತವಾಣಿ ಮುಂತಾದವರ ನಾಟಕಗಳನ್ನು ನಿರ್ದೇಶಿಸಿದರು. ಇವರು ೧೯೭೦ ರಿಂದ ೭೩ರ ಅವಧಿಯಲ್ಲಿ ಇವರು ನಿರ್ದೇಶಿಸಿದ ಕೈಲಾಸಂರ ನಂ ಕಂಪ್ನಿ, ಗಿರೀಶ ಕಾರ್ನಾಡ್‌ರ ಹಯವದನ, ಬಿ.ಎನ್. ದುಗ್ಗಪ್ಪಯ್ಯನವರ *ಬೆಕ್ಕಿನ ಕಣ್ಣು*, ಆಲ್ ಫ್ರೆಡ್ ಹಿಚ್‌ಕಾಕರ *ಡಯಲ್ ಮಿ ಫಾರ್ ಮರ್ಡ್‌ರ್*‌ನ ಕನ್ನಡ ರೂಪಾಂತರ *'ಆ ರಾತ್ರಿ'* ಮುಂಬೈ ರಂಗರಸಿಕರ ಮನ ಸೂರೆಗೊಂಡವು. ೧೯೭೬ರಲ್ಲಿ ಡಾ|| ಮಂಜುನಾಥರು ಜರ್ಮನಿಯ ಖ್ಯಾತ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟರ ನಾಟಕ *ಕಕೇಶಿಯನ್ ಚಾಕ್ ಸರ್ಕಲ್* ನಾಟಕವನ್ನು ಕನ್ನಡಕ್ಕೆ *"ರಂಗೋಲಿ ನ್ಯಾಯ"* ಎಂಬ ಹೆಸರಿನಲ್ಲಿ ತಾವೇ ರೂಪಾಂತರಿಸಿ ಮೈಸೂರು ಅಸೋಸಿಯೇಷನ್ನಿನ ನಾಟಕ ತಂಡದವರಿಗಾಗಿ ನಿರ್ದೇಶಿಸಿ ಆಡಿಸಿದರು. ಅನಂತರದ ಇವರ ಸ್ವಂತ ಕೃತಿಗಳಾದ *ಬೆಳ್ಳಿ, ಬೈಲು, ಬಿತ್ತಿ ಬೆಳೆದಿದ್ದು, ಬೆಂದಕಾಳೂರು, ಬಿಸಿಲ್ಗುದುರೆ, ಬೋನು, ಹೀರಾ, ಹೂಗಿಡದಲಿ ಹೂ ಅರಳಿಹುದು, ನಾ ದ್ಯಾವ್ರನ್ನೋಡಬ್ಯಾಕು* ನಾಟಕಗಳ ಮೂಲಕ ಹೊರನಾಡಿನ ಶ್ರೇಷ್ಠ ನಾಟಕಕಾರರೆಂದು ಕೀರ್ತಿಗಳಿಸಿದರು. ತಮ್ಮೆಲ್ಲ ನಾಟಕಗಳನ್ನು ತಾವೇ ನಿರ್ದೇಶಿಸಿರುವುದು ಇವರ ವೈಶಿಷ್ಟ್ಯ. ಮುಂಬೈಯಲ್ಲಿ ಪ್ರತಿ ವರ್ಷ ನಡೆಯುವ ಕನ್ನಡ ಕಲಾ ಕೇಂದ್ರದ ನಾಟಕೋತ್ಸವಗಳಲ್ಲಿ ೧೨ಕ್ಕೂ ಮೀರಿ ನಾಟಕಗಳನ್ನು ನೀಡಿದ ಕೀರ್ತಿ ಇವರದು. ಇವರಿಗೆ ಭಾಷೆ, ಸಂಗೀತ, ಬೆಳಕು, ರಂಗಕ್ರಿಯೆಗಳ ಮೇಲೆ ಅಸಾಧಾರಣವಾದ ಪ್ರಭುತ್ವವಿದೆ. ಅವರ ಈ ಪ್ರತಿಭೆಯೇ ಅವರ ನಾಟಕಗಳ ಯಶಸ್ಸಿಗೆ ಮುಖ್ಯ ಕಾರಣಗಳಾಗಿವೆ. ಡಾ|| ಮಂಜುನಾಥರು ರಂಗಭೂಮಿಯಷ್ಟೇ ಅಲ್ಲದೆ ವಿಜ್ಞಾನ, ಭಾರತದ ಸಾಂಸ್ಕೃತಿಕ, ಧಾರ್ಮಿಕ ಚಾರಿತ್ರಿಕ ವಿಷಯಗಳಲ್ಲಿ ಆಳವಾಗಿ ಅಭ್ಯಾಸ ಮಾಡಿ ಈ ವಿಷಯಗಳ ಬಗ್ಗೆ ಭಾಷಣ, ಲೇಖನಗಳ ಮೂಲಕ ತಮ್ಮ ಅನಿಸಿಕೆಗಳನ್ನು ನಿಖರವಾಗಿ ತಿಳಿಸುವ ತಮ್ಮ ಯತ್ನದಿಂದ ಕನ್ನಡಿಗ ಬುದ್ಧಿ ಜೀವಿಗಳಲ್ಲೊಬ್ಬರೆಂದು ಖ್ಯಾತಿ ಗಳಿಸಿದ್ದಾರೆ. ಕೆಲಕಾಲ ಮೈಸೂರು ಅಸೋಸಿಯೇಷನ್ನಿನ ಮುಖಪತ್ರವಾದ 'ನೇಸರು' ಮಾಸಪತ್ರಿಕೆಯ ಸಂಪಾದಕರಾಗಿ ದುಡಿದು ತಮ್ಮ ವೈಚಾರಿಕ ಲೇಖನಗಳ ಮೂಲಕ ಅನೇಕರನ್ನು ಪ್ರಚೋದಿಸಿದ್ದಾರೆ. ಮೈಸೂರು ಅಸೋಸಿಯೇಷನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮತ್ತು ಕೋಶಾಧಿಕಾರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಕಾರ್ಯಕಾರಿ ಸಮಿತಿಯಲ್ಲಿಲ್ಲದಿದ್ದರೂ ಅಸೋಸಿಯೇಷನ್ನಿನ ಎಲ್ಲಾ ಕೆಲಸ ಕಾರ್ಯಗಳ ಹಿಂದೆಯೂ ಇವರ ಕಾಣದ ಕೈವಾಡ ಇದ್ದು, ಅವುಗಳ ಯಶಸ್ಸಿಗೆ ಪ್ರೇರಕರೂ, ಕಾರಣರೂ ಆಗಿದ್ದಾರೆ. ಇವರು ಖಡಾಖಂಡಿತವಾಗಿ ಇದ್ದದ್ದನ್ನು ಇದ್ದಂತೆ ಹೇಳಿ ಮುಚ್ಚು ಮರೆ ಇಲ್ಲದೆ ವ್ಯವಹರಿಸುವುದರಿಂದ ಎಲ್ಲರ ಮನ್ನಣೆಗೆ ಪಾತ್ರರಾಗಿದ್ದಾರೆ. ಮೈಸೂರು ಅಸೋಸಿಯೇಷನ್ನಿನ ರಂಗ ನಿರ್ಮಾಣ ಕಾರ್ಯದಲ್ಲಿ ಸಲಹೆಗಾರರಾಗಿ ಸೇವೆ ಸಲ್ಲಿಸಿ ರಂಗ ಮಂದಿರದ ನಾಟಕ

ಪ್ರದರ್ಶನಗಳಿಗೆ ಅತ್ಯವಶ್ಯವಾದ ಬೆಳಕು, ಧ್ವನಿ ಪರಿಕರಗಳ ಮತ್ತು ಅವುಗಳ ನಿಯಂತ್ರಣಗಳ ಬಗ್ಗೆಯೂ, ರಂಗ ಪರಿಕರಗಳ ಬಗ್ಗೆಯೂ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದಷ್ಟೇ ಅಲ್ಲದೇ ಅವೆಲ್ಲವೂ ಸುವ್ಯಸ್ಥಿತವಾಗುವಂತೆ ಕಾಳಜಿ ವಹಿಸಿ ರಂಗಮಂದಿರದ ಯಶಸ್ಸಿಗೆ ಕಾರಣರಾಗಿದ್ದಾರೆ.

ನಾಟಕ ರಚನೆ, ನಾಟಕ ನಿರ್ದೇಶನವಷ್ಟೇ ಅಲ್ಲದೆ ಡಾ|| ಮಂಜುನಾಥರು ಉತ್ತಮ ಸಂಘಟಕರೆಂದೂ ಹೆಸರು ಗಳಿಸಿದ್ದಾರೆ. ಮುಂಬೈಯ ಕನ್ನಡ ರಂಗ ಕ್ರಿಯೆಗೆ ಮೀಸಲಾದ ಸಂಸ್ಥೆ ಕನ್ನಡ ಕಲಾಕೇಂದ್ರದ ಸಂಘಟಕರಾಗಿ ಕಳೆದ ೨೦ ವರ್ಷಗಳಿಂದ ದುಡಿದಿದ್ದಾರೆ. ಈ ಸಂಸ್ಥೆ ಪ್ರತಿ ವರ್ಷ ನಡೆಸುವ ನಾಟಕೋತ್ಸವಗಳಿಗೆ ಮುಂಬೈಯ ಅಂತೆಯೇ ಕರ್ನಾಟಕದ ಒಳನಾಡಿನಿಂದ ನಾಟಕ ತಂಡಗಳನ್ನು ಪ್ರೀತಿ ಆದರಗಳಿಂದ ಬರಮಾಡಿಕೊಂಡು ಅವರಿಂದ ನಾಟಕಗಳನ್ನಾಡಿಸಿ ಹೊರನಾಡಿನಲ್ಲಿ ರಂಗಭೂಮಿ ಜೀವಂತವಾಗಿರುವಂತೆ ದುಡಿಯುತ್ತಿದ್ದಾರೆ. ಬೆಂಗಳೂರಿನ ಪ್ರತಿ ತಂಡದವರಿಗೂ ಪರಿಚಿತರಾಗಿರುವ ಡಾ|| ಮಂಜುನಾಥರು ಕನ್ನಡ ಕಲಾ ಕೇಂದ್ರದವರು ಏರ್ಪಡಿಸುವ ಕಿರಿಯರ ನಾಟಕೋತ್ಸವ, ಹಾಗೂ ಕಿರಿಯರಿಗಾಗಿ ರಂಗ ಶಿಬಿರ ಮುಂತಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮುಂಬೈ ರಂಗಭೂಮಿಯ ಕ್ರಿಯಾಶೀಲತೆಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಮುಂಬೈಯ ಅತಿ ಹಳೆಯ ಶಾಲೆಯಾದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿ, ವಡಾಲದಲ್ಲಿ ಕಳೆದ ೧೦ ವರ್ಷಗಳಿಂದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶಾಲೆಯ ಗುಣಮಟ್ಟದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಈಗ ಡಾ|| ಮಂಜುನಾಥರು ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಉಪಾಧ್ಯಕ್ಷರಾಗಿದ್ದಾರೆ. ಮುಂಬೈ ಕನ್ನಡ ಸಂಘ, ಕರ್ನಾಟಕ ಸಂಘ, ಮುಂಬೈಯ ಆಜೀವ ಸದಸ್ಯರಾಗಿದ್ದಾರೆ.

ಹೊರನಾಡ ರಂಗಭೂಮಿ ಅಭಿವೃದ್ಧಿಗೆ ಇವರ ಸೇವೆಯನ್ನು ಗುರುತಿಸಿ ಇವರನ್ನು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಅಂತೆಯೇ ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಮೈಸೂರು ಅಸೋಸಿಯೇಷನ್ನಿನ ರಂಗಮಂದಿರ ಉದ್ಘಾಟನಾ ಸಮಾರಂಭದಲ್ಲಿ ಇವರನ್ನು ಮೈಸೂರು ಅಸೋಸಿಯೇಷನ್ನಿಗೆ ಅವರು ಸಲ್ಲಿಸಿದ ಸೇವೆಗಾಗಿ ಸನ್ಮಾನಿಸಿ ಗೌರವಿಸಲಾಯಿತು.



# ಕೆ. ಮಂಜುನಾಥಯ್ಯ

— ಸಿ.ಜಿ.ಕೆ.

ಕರ್ನಾಟಕದ ಚಿಕ್ಕಮಗಳೂರಿನಲ್ಲಿ ೧೯೪೦ರಲ್ಲಿ ಜನ್ಮ. ವಿದ್ಯಾಭ್ಯಾಸ ತರೀಕೆರೆ, ಹಾಸನ ಹಾಗೂ ಗುಲ್ಬರ್ಗಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶಿಕ್ಷಕರಾಗಿಯೂ ಮಹಾರಾಷ್ಟ್ರದ ಕೊಯ್ನಾ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮತ್ತು ಪುಣೆಯ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಇಂಜಿನಿಯರಾಗಿ ಕೆಲಸ ಮಾಡಿದ ನಂತರ ೧೯೭೨ರಲ್ಲಿ ಬಾಭಾ ಪರಮಾಣು ಸಂಶೋಧನಾ ಕೇಂದ್ರಕ್ಕೆ ಸೇರ್ಪಡೆ. ೧೯೮೭ರಲ್ಲಿ ಅಲ್ಲಿಂದ ಸ್ವಯಂ ಸೇವಾ ನಿವೃತ್ತಿ ಪಡೆದು ಇಂಡೊಥರ್ಮ್ ಇನ್‌ಸ್ಟ್ರುಮೆಂಟ್ಸ್ ಪ್ರವೇಟ್ ಲಿಮಿಟೆಡ್ ಕಂಪನಿಯಲ್ಲಿ ಡೈರೆಕ್ಟರ್ ಆಗಿಯೂ ಕ್ವಾಂಟಮ್ ಸಿಸ್ಟಮ್ ಅಂಡ್ ಸರ್ವೀಸ್‌ನ ಮಾಲೀಕರಾಗಿಯೂ ಕೆಲಸ ಮಾಡಿ ಈಗ ಸೇವಾನಿವೃತ್ತಿ ಹೊಂದಿದ್ದಾರೆ.

ಚಿಕ್ಕಂದಿನಿಂದಲೂ, ಸಂಗೀತ ಮತ್ತು ನಾಟಕಗಳಲ್ಲಿ ಆಸಕ್ತಿ, ಹಾಸನಕ್ಕೆ ಬರುತ್ತಿದ್ದ ಗುಬ್ಬಿ ನಾಟಕ ಮಂಡಳಿ, ಹಿರಣ್ಣಯ್ಯ ಮಿತ್ರ ಮಂಡಳಿ, ಕೇರಳಾಪುರ ನಾಟಕ ಮಂಡಳಿಗಳ ನಾಟಕಗಳನ್ನು ನೋಡುವುದರಲ್ಲಿ ಆಸಕ್ತಿ. ಹಾಸನದ ದನದ ಜಾತ್ರೆಯ ಸಮಯದಲ್ಲಿ ನಡೆಯುತ್ತಿದ್ದ ಕಿರಿಯರ ನಾಟಕೋತ್ಸವದಲ್ಲಿ ಭಾಗವಹಿಸಿದ್ದಾರೆ. ೧೯೭೩ರಲ್ಲಿ ಮುಂಬೈಗೆ ಬಂದಾಗಿನಿಂದ ಮುಂಬೈಯ ಮಾತುಂಗ ಬಡಾವಣೆಯಲ್ಲಿರುವ ಮೈಸೂರು ಅಸೋಸಿಯೇಷನ್ನಿನ ಸದಸ್ಯರು. ಅಲ್ಲಿ ಡಾ|| ಮಂಜುನಾಥರ ಮೈತ್ರಿ ಮತ್ತು ಸಹವಾಸದೊಂದಿಗೆ ಮೈಸೂರು ಅಸೋಸಿಯೇಷನ್ನಿನ ಲಲಿತ ಕಲಾ ವಿಭಾಗದ ಚಟುವಟಿಕೆಗಳಲ್ಲಿ ಆಸಕ್ತಿ. ಲಲಿತ ಕಲಾ ವಿಭಾಗದ ಅಂದಿನ ಕಲಾವಿದರಾದ ವಿ.ಕೆ. ಮೂರ್ತಿ, ಸಂಧ್ಯಾಮೂರ್ತಿ, ಎಸ್.ಆರ್. ಪ್ರಸನ್ನ, ಸಿ.ಜಿ.ಎ. ಸ್ವಾಮಿ, ಇ.ಆರ್. ಕೃಷ್ಣ ಮುಂತಾದವರ ಪರಿಚಯ.

೧೯೭೩ರಿಂದ ಮೈಸೂರು ಅಸೋಸಿಯೇಷನ್ನಿನ ನಾಟಕ ತಂಡದ ತೆರೆ ಹಿಂದೆ ರಂಗತಜ್ಞರಾಗಿ ದುಡಿದು ೧೯೭೮ರಿಂದ ಲಲಿತ ಕಲಾ ವಿಭಾಗದ ಮುಖ್ಯಸ್ಥರಾಗಿ ವಿಭಾಗದ ಸಂಘಟನೆಯ ಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ವೇಳೆಯಲ್ಲಿ ಕೆಲಕಾಲ ನಿಷ್ಕ್ರಿಯವಾಗಿದ್ದ ನಾಟಕ ತಂಡಕ್ಕೆ ಹೊಸ ಕಲಾವಿದರನ್ನೂ, ನಿರ್ದೇಶಕರನ್ನು ಕಲೆಹಾಕಿ ತಂಡದಿಂದ "ತಿಂಗಳಿಗೊಂದು ಹೊಸನಾಟಕ" ಎಂಬ ಸವಾಲನೆತ್ತಿಕೊಂಡು ತಂಡಕ್ಕೆ ಪುನಶ್ಚೇತನ ನೀಡಿದರು. ಈ ಸಮಯದಲ್ಲಿ ಈ ತಂಡ ಕನ್ನಡ ಕಲಾ ಕೇಂದ್ರದ ನಾಟಕೋತ್ಸವಗಳಲ್ಲಿ ಹಲವಾರು ಉತ್ತಮ ನಾಟಕಗಳನ್ನಾಡಿ ಮುಂಬೈಯ ಖ್ಯಾತ ನಾಟಕ ತಂಡವೆನಿಸಿಕೊಂಡರು. ೧೯೭೫ರಿಂದ ಮುಂಬೈಯ ಬೇರೆ ಬೇರೆ ಕಾಲೇಜು ಕನ್ನಡ ಸಂಘಗಳನ್ನು ಹುರಿದುಂಬಿಸಿ ಮೈಸೂರು ಅಸೋಸಿಯೇಷನ್ ಬಂಗಾರದ ಹಬ್ಬದ ಶ್ರೀ ಜಯಚಾಮರಾಜೇಂದ್ರ, ಅಂತರ ಕಾಲೇಜು ನಾಟಕ ಸ್ಪರ್ಧೆಯನ್ನೇರ್ಪಡಿಸಿ ಹಲವಾರು ವರ್ಷಗಳ ಕಾಲ ನಡೆಸಿದರು. ಕಾಲೇಜುಗಳಲ್ಲಿ ಕನ್ನಡ ವಿದ್ಯಾರ್ಥಿಗಳು ಕಡಿಮೆಯಾಗಿ ಕನ್ನಡ

ವಿಭಾಗಗಳು ಮುಚ್ಚಿದ್ದರಿಂದ ಈ ಸ್ಪರ್ಧೆ ಈಗ ನಡೆಯುತ್ತಿಲ್ಲ. ಆ ಸಮಯದಲ್ಲಿ ಮೈಸೂರು ಅಸೋಸಿಯೇಷನ್ನಿನ ನಾಟಕ ತಂಡ ಎಷ್ಟು ಬೆಳೆದಿತ್ತೆಂದರೆ ಮೈಸೂರು ಅಸೋಸಿಯೇಷನ್ ತನ್ನದೇ ನಾಟಕೋತ್ಸವವನ್ನು ಏರ್ಪಡಿಸಿ ತನ್ನ ತಂಡದ ೩ ನಿರ್ದೇಶಕರು ೩ ಬೇರೆ ಬೇರೆ ನಾಟಕಗಳನ್ನು ಈ ಉತ್ಸವದಲ್ಲಿ ಆಡಿಸುತ್ತಿದ್ದರು. ಒಟ್ಟು ಸುಮಾರು ೭೫ರಿಂದ ೮೦ ಜನ ಕಲಾವಿದರು ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು.

ನಂತರದ ವರ್ಷಗಳಲ್ಲಿ ಕರ್ನಾಟಕ - ಮಹಾರಾಷ್ಟ್ರ ಬಾಂಧವ್ಯವನ್ನು ಉತ್ತಮಗೊಳಿಸಲು ಮರಾಠಿ ನಾಟಕೋತ್ಸವಗಳನ್ನೇರ್ಪಡಿಸಿ ಕರ್ನಾಟಕದಿಂದ ಮತ್ತು ಮಹಾರಾಷ್ಟ್ರದಿಂದ ಖ್ಯಾತ ಕನ್ನಡ, ಮರಾಠಿ ನಾಟಕ ತಂಡಗಳನ್ನು ಆಹ್ವಾನಿಸಿದ್ದಷ್ಟೇ ಅಲ್ಲದೆ ಕನ್ನಡ, ಮರಾಠಿ ಕಲಾವಿದರಿಗೆ ಸನ್ಮಾನವನ್ನು ಏರ್ಪಡಿಸಿದ್ದರು. ಅಂತೆಯೇ ಕನ್ನಡ, ಮರಾಠಿ ಜಾನಪದ ಉತ್ಸವ, ಕರ್ನಾಟಕ ಹಿಂದೂಸ್ತಾನಿ ಸಂಗೀತೋತ್ಸವ, ಲಲಿತಕಲಾ ಪ್ರದರ್ಶನಗಳು, ನಾಟ್ಯೋತ್ಸವ, ಫಿಲ್ಮೋತ್ಸವಗಳು, ನಾಟಕ, ಸಾಹಿತ್ಯ, ಲಲಿತ ಕಲೆ, ಜಾನಪದ ಸಂಗೀತ, ಸಂಗೀತ ನೃತ್ಯ, ಸಿನಿಮಾಗಳ ಬಗ್ಗೆ ವಿಚಾರ ಸಂಕಿರಣಗಳನ್ನೇರ್ಪಡಿಸಿ ಮುಂಬೈ ರಂಗಭೂಮಿಯ ಬೆಳವಣಿಗೆಗೆ ಚಾಲನೆ ನೀಡಿದ್ದಾರೆ. ಮೈಸೂರು ಅಸೋಸಿಯೇಷನ್ನಿನಲ್ಲಿ ಮುಂಬೈ ಕಲಾವಿದರಿಗಾಗಿ ಮೊದಲ ಬಾರಿಗೆ ನಾಟಕ ಶಿಬಿರವನ್ನೇರ್ಪಡಿಸಿ ಬೆಂಗಳೂರಿನಿಂದ ಶ್ರೀ ರಾಮಮೂರ್ತಿ, ಶ್ರೀನಿವಾಸ ಪ್ರಭು, ಟಿ.ಎನ್. ನರಸಿಂಹನ್, ಮುಂಬೈಯಿಂದ ಡಾ|| ಬಿ.ಆರ್. ಮಂಜುನಾಥ, ಜಯದೇವ ಹಟ್ಟಂಗಡಿಯವರನ್ನು ಕರೆಸಿ ಮುಂಬೈ ರಂಗ ಕಲಾವಿದರಿಗೆ ತರಬೇತಿ ದೊರಕುವಂತೆ ಮಾಡಿಸಿದ್ದಾರೆ.

ಮೈಸೂರು ಅಸೋಸಿಯೇಷನ್ನಿನ ನಾಟಕ ತಂಡದ ಮುಂದಾಳಾಗಿ ತಂಡವನ್ನು ಮಹಾರಾಷ್ಟ್ರದ ಪುಣೆ, ನಾಶಿಕ್, ಶೋಲಾಪುರ್, ಗುಜರಾತಿನ ಸೂರತ್ ಮತ್ತು ಕರ್ನಾಟಕದ ಬೆಂಗಳೂರು, ಮೈಸೂರುಗಳಿಗೂ ಕೊಂಡೊಯ್ದು ಅಲ್ಲಿ ನಾಟಕಗಳನ್ನಾಡಿಸಿ ಹೊರನಾಡ ರಂಗಭೂಮಿಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಸ್ವತಃ ಕಲಾವಿದರಾದ ಮಂಜುನಾಥ್ ೩೦ಕ್ಕೂ ಮಿಕ್ಕು ನಾಟಕಗಳಲ್ಲಿ ನಟಿಸಿ ಮುಂಬೈಯ ಖ್ಯಾತ ನಟರಲ್ಲೊಬ್ಬರೆಂದು ಹೆಸರು ಗಳಿಸಿದ್ದಾರೆ.

ಇವರು ನಟಿಸಿದ ನಾಟಕಗಳಲ್ಲಿ ಕೆಲವೆಂದರೆ :

ಬರ್ಟೋಲ್ಟ್ ಬ್ರೆಕ್ಟರ *"ಕಕೇಶಿಯನ್ ಚಾಕ್ ಸರ್ಕಲ್ಸ್"* ಕನ್ನಡ ರೂಪಾಂತರ ಡಾ. ಮಂಜುನಾಥರ *"ರಂಗೋಲಿ ನ್ಯಾಯ"* ನಾಟಕದಲ್ಲಿ ಹುಚ್ಚಣ್ಣನ ಪಾತ್ರ *(ಕಕೇಶಿಯನ್ ಚಾಕ್ ಸರ್ಕಲ್‌ನ ಅಜ್‌ಡಾಕ್‌ನ ಪಾತ್ರ)*

ಜಿ.ಬಿ. ಜೋಷಿಯವರ *"ಕದಡಿದ ನೀರು"* ನಾಟಕದಲ್ಲಿ ಶಿವಪ್ಪನ ಪಾತ್ರ

ದ.ರಾ. ಬೇಂದ್ರೆಯವರ *ಜಾತ್ರೆಯಲ್ಲಿ* "ರಾಜನ" ಪಾತ್ರ

ಶ್ರೀರಂಗರ *ಕತ್ತಲೆ ಬೆಳಕು* ನಾಟಕದಲ್ಲಿ "ನಾಟಕಕಾರ"

ಚಂದ್ರಶೇಖರ ಕಂಬಾರರ *"ಹರಕೆಯ ಕುರಿ"* ನಾಟಕದಲ್ಲಿ ರಾಜಕಾರಣಿ

ವಿಶಾಖದತ್ತನ *ಮುದ್ರಾ ರಾಕ್ಷಸ* ನಾಟಕದಲ್ಲಿ "ಚಾಣಕ್ಯ"ನಾಗಿ

*ಬೆಳ್ಳಿ ಬಯ್ಲು ನಾಟಕದಲ್ಲಿ ಆಡ್ವೋಕೇಟ್ ರಮೇಶ*

*ಬಿತ್ತಿ ಬೆಳೆದಿದ್ದು ನಾಟಕದಲ್ಲಿ ರೈತ ನರಸಪ್ಪ*

*ಬೆಂದ ಕಾಳೂರು ನಾಟಕದಲ್ಲಿ ರಾಮಯ್ಯ*

*ಬೆಂದ ಕಾಳೂರು ನಾಟಕದಲ್ಲಿ ಮೇಸ್ತ್ರಿ ತಿರುಮಲಯ್ಯ*

*ಬಿಸಿಲ್ಗುದುರೆ ನಾಟಕದಲ್ಲಿ ಶ್ಯಾಮಣ್ಣ*

*ಹೂಗಿಡದಲಿ ಹೂ ಅರಳಿಹುದು ನಾಟಕದಲ್ಲಿ ಇನ್ಸ್‌ಪೆಕ್ಟರ್*

ಹೀಗೇ ಅನೇಕ ಬಹು ಮುಖ ಪಾತ್ರಗಳನ್ನು ವಹಿಸಿ ಹೆಸರುಗಳಿಸಿದ್ದಾರೆ. ಇವರು ಆಲ್ಬರ್ಟ್ ಕಾಮುರವರ ಕತೆ ಆಧಾರಿತ ನಾಟಕ 'ತಪ್ಪಿದ ಎಳೆ' ನಾಟಕವನ್ನು ನಿರ್ದೇಶಿಸಿದ್ದಾರೆ.

ಮುಂಬೈಯಲ್ಲಿ ಸಾಂಸ್ಕೃತಿಕ ಸಂಘಟಕರಾಗಿ ಇವರ ಸೇವೆ ಗಮನಾರ್ಹ.

೧೯೭೩ರ ನಂತರದಲ್ಲಿ ೬ ವರ್ಷಗಳ ಕಾಲ ಅಸೋಸಿಯೇಷನ್ನಿನ ಲಲಿತ ಕಲಾ ವಿಭಾಗದ ಮುಖ್ಯಸ್ಥರಾಗಿಯೂ ೪ ವರ್ಷಗಳ ಕಾಲ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ೮ ವರ್ಷಗಳ ಕಾಲ ಮೈಸೂರು ಅಸೋಸಿಯೇಷನ್ನಿನ ಗೌರವ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ೧೯೭೬ರಲ್ಲಿ ನಡೆದ ಮೈಸೂರು ಅಸೋಸಿಯೇಷನ್ನಿನ ಬಂಗಾರದ ಹಬ್ಬದ ಇಡೀ ವರ್ಷದಲ್ಲಿ ಲಲಿತ ಕಲಾ ವಿಭಾಗದ ಮುಖ್ಯಸ್ಥರಾಗಿ ೫೦ಕ್ಕೂ ಮೀರಿ ವಿವಿಧ ಕಾರ್ಯಕ್ರಮಗಳನ್ನು ನೀಡಿ ಅಸೋಸಿಯೇಷನ್ನಿಗೆ ಕೀರ್ತಿ ತಂದಿದ್ದಾರೆ. ಆನಂತರ ೧೯೮೧ - ೮೨ರಲ್ಲಿ ನಡೆದ ವಜ್ರ ಮಹೋತ್ಸವದ ಸಮಯದಲ್ಲಿ ಅಸೋಸಿಯೇಷನ್ನಿನ ಗೌರವ ಕಾರ್ಯದರ್ಶಿಗಳಾಗಿದ್ದು ಆ ವರ್ಷವಿಡೀ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕರ್ನಾಟಕೋತ್ಸವ ಎಂಬ ಶೀರ್ಷಿಕೆಯಡಿ ಕನ್ನಡ, ಮರಾಠಿ ಹಿಂದಿ ಭಕ್ತಿ ಸಂಗೀತೋತ್ಸವ, ಕರ್ನಾಟಕ ನಾಟಕ ಅಕಾಡೆಮಿ ಜತೆಗೂಡಿ ಕನ್ನಡ ಮರಾಠಿ ನಾಟಕೋತ್ಸವ, ಕರ್ನಾಟಕ ಜಾನಪದ ಅಕಾಡೆಮಿ ಜತೆಗೂಡಿ ಕರ್ನಾಟಕ, ಮಹಾರಾಷ್ಟ್ರ ಜಾನಪದ ಮಹೋತ್ಸವ, ಕರ್ನಾಟಕ ನೃತ್ಯ ಮಹೋತ್ಸವ, ಕರ್ನಾಟಕ, ಹಿಂದೂಸ್ತಾನಿ ಸಂಗೀತೋತ್ಸವಗಳನ್ನೇರ್ಪಡಿಸಿ ಸುಮಾರು ೨೦೦ ಕ್ಕೂ ಮಿಕ್ಕೂ ಕಲಾವಿದರನ್ನು ಕರೆಸಿ ಕರ್ನಾಟಕ ಸಂಸ್ಕೃತಿಯ ಕೀರ್ತಿ ಪತಾಕೆಯನ್ನು ಮುಂಬೈಯಲ್ಲಿ ಹಾರಿಸಿದ್ದಾರೆ. ನಂತರದ ವರ್ಷಗಳಲ್ಲಿ ಕಾರ್ಯಕಾರಿ ಸಮಿತಿಯಲ್ಲಿಲ್ಲದಿದ್ದಾಗ್ಯು ಅಸೋಸಿಯೇಷನ್ನಿನ ಸಾಂಸ್ಕೃತಿಕ ಚಟುವಟಿಕೆಗಳ ಹಾಗೂ ರಂಗ ಮಂದಿರದ ನಿರ್ಮಾಣ ಕಾಮಗಾರಿಗೆ ಪ್ರಮುಖ ಸಲಹೆಗಾರರಾಗಿ ದುಡಿದು ಮುಂಬೈಯಲ್ಲಿ ಕನ್ನಡಿಗರು ಹೆಮ್ಮೆ ಪಡುವಂಥ ಅತ್ಯಾಧುನಿಕ ರಂಗ ಮಂದಿರದ ನಿರ್ಮಾಣಕ್ಕೆ ಸೇವೆ ಸಲ್ಲಿಸಿದ್ದಾರೆ. ಅಂತೆಯೇ ಇತ್ತೀಚಿನ ವರ್ಷಗಳಲ್ಲಿ ನಡೆದ ಕನ್ನಡ ಫಿಲ್ಮೋತ್ಸವ, ಗಿರೀಶ್ ಕಾರ್ನಾಡ್ ನಾಟಕೋತ್ಸವ, ಮಾಸ್ತಿ ಉತ್ಸವಗಳಲ್ಲಿ ಸಹ ಸಂಯೋಜಕರಾಗಿ ಸೇವೆ ಸಲ್ಲಿಸಿ ಅವುಗಳ ಯಶಸ್ಸಿಗೆ ಕಾರಣರಾಗಿದ್ದಾರೆ.

ಕಳೆದ ೧೦ ವರ್ಷಗಳಿಂದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆ ವಡಾಲ ಮುಂಬೈಯ ಕಾರ್ಯಕಾರಿ ಸಮಿತಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮುಂಬೈ ಕನ್ನಡ ಸಂಘ, ನವ ಮುಂಬೈ ಕನ್ನಡ ಸಂಘ, ವಾಶಿ, ಕರ್ನಾಟಕ ಸಂಘ ಮುಂಬೈಯ ಆಜೀವ ಸದಸ್ಯರಾಗಿದ್ದಾರೆ.



# ರಾಜಾರಾಂ ಬಿ. ವಿ.

— ನಾಗರಾಜಮೂರ್ತಿ ಕೆ. ವಿ.

ಸಂಘಟನೆ ಎಂದ ಕೂಡಲೆ ಎದುರಿಗೆ ಧುತ್ತೆಂದು ನಿಲ್ಲುವುದು ಸವಾಲುಗಳು. ಆದರಲ್ಲೂ ರಂಗಸಂಘಟನೆ ಎಂದರೆ ಇನ್ನಷ್ಟು ಗೋಜಲು ಆರಂಭ, ಅಂತ್ಯಗಳ ಗೊಂದಲ. ೧೯೭೦ರಿಂದ ೨೦೦೧ರವರೆಗಿನ ಈ ೩೦ ವರುಷಗಳ ಕಾಲದ ಹಾಗೆಯೇ ಕಲೆಯ ಕಾಯಕದ ಒಂದು ಪಕ್ಷಿನೋಟ ನೋಡಿದರೆ ಒಂದೊಂದು ವರುಷದ ಮೈಲಿಗಲ್ಲು ಮುಂದಿನ ದಾರಿಗೆ ಕೊಟ್ಟಿದ್ದೇನು; ಹಾಗೇಯೇ ಹಿಂದಿನ ಹಾದಿಯ ನೆನಪಿಗೆ ಬಿಟ್ಟಿದ್ದೇನು ಎನ್ನುವುದು ನಿಚ್ಚಳವಾಗುತ್ತದೆ. ಸುಮಾರು ನೂರು ನಾಟಕಗಳ ನಿರ್ದೇಶನ ಸಂಘಟನೆಯ ಕೆಲಸ ಹಾಗೂ ಸಾವಿರದ ಐದುನೂರಕ್ಕೂ ಹೆಚ್ಚಿನ ಪ್ರದರ್ಶನಗಳ ವ್ಯವಸ್ಥೆ - ಸಂಘಟನೆ. ಸುಮಾರು ನೂರಕ್ಕು ಮಿಗಿಲಾಗಿ ನಾಟಕಗಳಲ್ಲಿ ಮುಖ್ಯ ಪಾತ್ರದ ನಟನೆ ಸಂಘಟನೆ, ಇವುಗಳನ್ನು ಗಮನಿಸಿದಾಗ ಬಿ.ವಿ. ರಾಜಾರಾಂ ಅವರು ಪಟ್ಟಿರಬಹುದಾದ ಶ್ರಮದ ಬಗ್ಗೆ ಅರಿವು ಮೂಡುತ್ತದೆ.

ಬಿ. ವಿ. ರಾಜಾರಾಂ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಮಹತ್ವದ ಹೆಸರು. ಕಲಾ ಗಂಗೋತ್ರಿ ತಂಡದ ಸ್ಥಾಪಕರು. ನಟರು, ನಿರ್ದೇಶಕರು, ಸಂಘಟಕರು, ನೇಪಥ್ಯ ತಂತ್ರಜ್ಞರು, ನಾಟಕಕಾರರು, ನಾಟಕ ಕಲಿಕೆಯ ಮೇಷ್ಟ್ರು, ಮೂಕಾಭಿನಯ ಕಲಾವಿದರು, ಕವಿಗಳು, ರಂಗಶಿಕ್ಷಣ ತಜ್ಞರು, ರಂಗ ಸಂಶೋಧಕರು, ಮುಂತಾಗಿ ಹತ್ತು ಹಲವು ಮುಖಗಳ ಪರಿಚಯವನ್ನು ನೀಡಬಹುದು. ಬಹಳ ಮುಖ್ಯವಾಗಿ ಕಲಾ ಗಂಗೋತ್ರಿಯ ಸಂಘಟಕರು ರಾಜಾರಾಂ. ೩೦ ವರ್ಷಗಳಿಂದ ತಮ್ಮ ತಂಡವನ್ನು ಸಂಘಟಿಸಿ ಅನೇಕ ಮಹತ್ತರ ನಾಟಕ ಪ್ರದರ್ಶನ ನೀಡಿದ್ದಾರೆ. ನಾಟಕ ಕಲೆಯ ಮೇಲಿನ ತೀವ್ರ ಆಸಕ್ತಿ ಅವರನ್ನು ರಂಗಕ್ಕೆ ತಂದಿತು, ದುಡಿಸಿತು.

ಶಾಲಾ ವಿದ್ಯಾರ್ಥಿ ದೆಸೆಯಿಂದಲೇ ನಾಟಕದಲ್ಲಿ ಆಸಕ್ತಿ. ವೀರಗಾಸೆ ಕುಣಿತ ಕೋಲಾಟ ಇತ್ಯಾದಿ ಅಭಿರುಚಿ ಬೆಡ್‌ಶೀಟ್‌ಗಳನ್ನು ಕಟ್ಟಿ ರಂಗ ಸಿದ್ಧಮಾಡಿ, ನಾಟಕ ಆಡಿದ್ದುಂಟು. ಕೇವಲ ನಾಟಕದ ವ್ಯವಸ್ಥೆಗಷ್ಟೇ ಸೀಮಿತವಲ್ಲ. ಶಾಲೆಯ ಹಲವಾರು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದುಡಿತಮಾಡಿದರು. ತಮ್ಮ ೭ನೇ ತರಗತಿಯ ಸಮಯದಲ್ಲಿಯೇ ಶಾಲೆಯ ಗಣೇಶೋತ್ಸವದ ಆಚರಣೆಯನ್ನು ಗೆಳೆಯರೊಡಗೂಡಿ ಗುರುಗಳ ಮಾರ್ಗದರ್ಶನದಲ್ಲಿ ಸಂಘಟಿಸಿ ಯಶಸ್ಸುಗೊಳಿಸಿದವರು. ವಿದ್ಯಾರ್ಥಿ ದೆಸೆಯಿಂದ ಕಾಲೇಜಿಗೆ ಬಂದಾಗ ಕ್ರೀಡೆಗಳಲ್ಲಿ ಆಸಕ್ತಿ ಕಡಿಮೆಯಾಗಿ ನಾಟಕದ ಕಡೆ ಒಲವು ಹೆಚ್ಚಾಯಿತು. ಆಸಕ್ತಿ ಇದ್ದದ್ದು ಕಾರ್ಯಕ್ಷೇತ್ರವನ್ನು ಗುರುತಿಸಿಕೊಂಡಂತಾಗಿ ಅದರ ಬಗ್ಗೆ ಕಲಿಕೆ, ಪರಿಶ್ರಮ ಆರಂಭವಾಯಿತು. ಹಾಗಾಗಿ ಕಾಲೇಜಿನಲ್ಲಿನ ಗೆಳೆಯರನ್ನು ಕೂಡಿಸಿಕೊಂಡು "ಕಲಾ ಗಂಗೋತ್ರಿ"ಯನ್ನು ಕಟ್ಟಿದರು ರಾಜಾರಾಂ.

ಸರ್ವಶ್ರೀ ಪೂಣಚ್ಚ, ಸುದರ್ಶನ, ಸತ್ಯನಾರಾಯಣ, ನಂಜುಂಡ, ಯತಿರಾಜುಲುನಾಯ್ಡು, ಕೇಶವಮೂರ್ತಿ, ಮಂಜುನಾಥ, ನರಸಿಂಹಶೆಟ್ಟಿ ಮುಂತಾದವರು ಜೊತೆಗಿದ್ದವರು. ಕನ್ನಡ ಸಾಹಿತ್ಯ

ಪರಿಷತ್ತಿನ ಒಡನಾಟ, ನಾಡು ನುಡಿಯ ಬಗ್ಗೆ ಅಪಾರ ಅಭಿಮಾನ ಉಂಟಾಗಲು ಕಾರಣವಾಯಿತು. ಕಾಲೇಜಿನ ಆ ದಿನಗಳು ಕನ್ನಡ ಸಂಘ, ಚರ್ಚಾಸ್ಪರ್ಧೆ, ಕವನ ರಚನೆ, ಕನ್ನಡ ಮಾಧ್ಯಮದ ಚಿಂತನೆ, ನಾಟಕ ಚಟುವಟಿಕೆ, ವಿದ್ಯಾರ್ಥಿ ಸಂಘದ ಸಂಘಟನೆ ಹೀಗೆ ನಡೆದವು. ಅಲ್ಲಿಯ ಗೆಳೆಯರ ಗುಂಪು, ಜಾನಪದ ನೃತ್ಯ, ಕೋಲಾಟದ ಪ್ರದರ್ಶಗಳು ನಮ್ಮದೇ ಆದ ರಂಗತಂಡದ ಸ್ಥಾಪನೆಗೆ ಕಾರಣವಾಯಿತು. ಆಗಿನ ಹಿರಿಯರು ಆಡುತ್ತಿದ್ದ ನಾಟಕಗಳನ್ನು ನೋಡಿ, ಅವರಂತೆ ನಾಟಕ ಆಡಬೇಕೆಂಬ ಹಂಬಲ ಅತಿಯಾಯಿತು. ಮೈಸೂರಿನ ಮಾನಸ ಗಂಗೋತ್ರಿ, ಜ್ಞಾನ ಗಂಗೋತ್ರಿ ಇವುಗಳ ಹಿನ್ನೆಲೆಯಲ್ಲಿಯೇ ಕಲಾಗಂಗೋತ್ರಿ ರೂಪು ತಳೆಯಿತು.

50 ದಶಕದ ಆರಂಭಗೊಂಡ ರಂಗತಂಡಗಳು ತೆರೆಗೆ ಸರಿಯುತ್ತಿದ್ದ ಕಾಲ, 70ರ ದಶಕದಲ್ಲಿ ಹೊಸ ಹುರುಪಿನ ಹುಡುಗರ ತಂಡಗಳು ಆರಂಭಗೊಂಡ ಕಾಲ. 3-4 ತಂಡಗಳು ಪೈಪೋಟಿಯ ಮೇಲೆ ನಾಟಕ ಆಡುತ್ತಿದ್ದ ಕಾಲ. ಅದು 71-75 ರಲ್ಲಿ ಕನ್ನಡ ಸಾಹಿತ್ಯ ಕಲಾ ಸಂಘ, ನಟರಂಗ, ರಂಗ ಸಂಘದ, ಕಲಾಘೋಷಣೆ, ನಾಟ್ಯ ಸಂಘ ಪ್ರತಿಮಾ ನಾಟಕ ರಂಗ ಮುಂತಾದವುಗಳ ಜೊತೆಯಲ್ಲಿ ಕಲಾಗಂಗೋತ್ರಿ ತಂಡವು ಪಾಲ್ಗೊಂಡಿತು. ಬೆಂಗಳೂರಿನ ಹವ್ಯಾಸಿ ರಂಗದ ಚಟುವಟಿಕೆಯಲ್ಲಿ. ಮೊದಮೊದಲಿಗೆ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆಯ ಭಾರತೀಯ ಸಂಸ್ಕೃತಿ ವಿದ್ಯಾಪೀಠ, ಪುರಭವನಗಳಲ್ಲಿ ನಾಟಕದ ಪ್ರದರ್ಶನ ಮಾಡಿತು. ನಂತರ ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲು ಹತ್ತಿತು ಕಲಾಗಂಗೋತ್ರಿ.

ಆಗ ಗೆಳೆಯರ ದಂಡಿಗೆ ಇದ್ದದ್ದು ಹುಮ್ಮಸ್ಸು, ಹುರುಪು ಮಾತ್ರ. ಅಸಾಧ್ಯವಾದದನ್ನು ಸಾಧಿಸಬೇಕು ಎನ್ನುವ ಹಂಬಲ. ಯಾರೂ ಮಾಡದ್ದನ್ನು ಮಾಡಬೇಕೆಂಬ ಛಲ. ಸಣ್ಣ ಪುಟ್ಟ ಪ್ರದರ್ಶನಗಳ ನಂತರ ಆರಿಸಿದ್ದು '*ಕಾಲಿಗುಲ*' ನಾಟಕ. ಅಂದಿನ ಕಾಲಕ್ಕಲ್ಲ, ಇಂದಿನ ಕಾಲಕ್ಕೂ ಆಲ್ಬರ್ಟ್ ಕಾಮೂವಿನ ಈ '*ಕಾಲಿಗುಲ*' ನಾಟಕ ನಟರಿಗೆ, ನಿರ್ದೇಶಕರಿಗೆ ಮತ್ತು ತಂಡಕ್ಕೆ ಒಂದು ದೊಡ್ಡ ಸವಾಲೇ ಸೈ. ಆ ದಿನಗಳಲ್ಲಿ ಸುಮಾರು 30ಕ್ಕೂ ಹೆಚ್ಚು ನಟರನ್ನು ಸೇರಿಸಿದ್ದು, ಹೊಸ ನಟರ, ಹೊಸ ನಿರ್ದೇಶಕರ, ಹೊಸ ನೇಪಥ್ಯದವರನ್ನೂ ಒಟ್ಟುಗೂಡಿಸಿದ್ದು ರಾಜಾರಾಂರವರ ಛಲ ಬಿಡದ ತಿವಿಕ್ರಮ ಸಾಧನೆಯೇ ಸರಿ. ರಂಗನಾಟಕಕ್ಕೆ ಪ್ರಪ್ರಥಮ ಬಾರಿಗೆ ಸ್ಟಿಕರ್ಸ್ ಮಾಡಿಸಿ ಪ್ರಚಾರಮಾಡಿದ್ದು, ಅದರೊಂದಿಗೆ ವಿಶೇಷವಾಗಿ ಹೊಸ ನಾಟಕದ ಪ್ರದರ್ಶನ, ಅದೂ ಹೊಸಬರಿಂದ. ಅಕ್ಕಪಕ್ಕದ ಊರುಗಳಿಂದಲೂ ನಾಟಕ ನೋಡಲು ಜನರು ಬಂದಿದ್ದರು. ಏಕೆಂದರೆ ಆ ನಾಟಕದ ಆಯ್ಕೆಯೇ ಜನರ ಹುಬ್ಬೇರಿಸುವಂತಹದಾಗಿತ್ತು, ಜೊತೆಗೆ ವಿಶೇಷ ಪ್ರಚಾರ ನಡೆದಿತ್ತು.

ಹೊಸ ಉಡುಪು, ರಂಗಸಜ್ಜಿಕೆ, ರಂಗ ಸಲಕರಣೆಗಳು, ಪ್ರಚಾರ ಇವು ನಾಟಕದ ವೆಚ್ಚವನ್ನು ಹೆಚ್ಚಾಗಿಸಿದ್ದವು. ಹವ್ಯಾಸಿ ತಂಡದ ನಾಟಕ ಪ್ರದರ್ಶನದ ವ್ಯವಸ್ಥೆ ಮತ್ತು ತಂಡದ ಸಂಘಟನೆ ಹೊಣೆಗಾರಿಕೆಯೆಂದರೆ, ಕನಸುಗಳನ್ನು ಕಟ್ಟಿಕೊಂಡು, ಆಕಾಶದಲ್ಲಿ ನೆಗೆದಂತೆಯೇ. ಕಾಸು ಇಲ್ಲ, ತಲೆತುಂಬಾ ಕನಸು, ಕಲ್ಪನೆ. ಕನಸನ್ನು ನನಸು ಮಾಡುವಾಗ ಪಡುವ ಶ್ರಮ, ಪಡೆಯುವ ಸಾಲ, ಇವೆಲ್ಲಾ, ಪ್ರದರ್ಶನ ಮುಗಿದ ನಂತರ ನಿಜರೂಪದಲ್ಲಿ ನಿಲ್ಲುತ್ತವೆ. ಕೊಡಬೇಕಾದವರಿಗೆಲ್ಲ ಹಣ ಕೊಟ್ಟು, ಫೋಟೊ, ಪೇಪರ್ ಕಟಿಂಗ್ಸ್, ಪ್ರಾಪರ್‌ಟೀಸ್, ಬಟ್ಟೆಗಳ ಬ್ಯಾನರ್, ಪೋಸ್ಟರ್,

ಪಾಂಪ್‌ಲೆಟ್‌ಗಳನ್ನು ಜೋಡಿಸಿಟ್ಟುಕೊಂಡು ಇದು ನಮ್ಮ ಸಾಧನೆ ಎಂದು ಕೂರಬೇಕು. ಆದರೆ ಗೆಳೆಯರು,ಹಿತೈಷಿಗಳು, ಪತ್ರಿಕೆಯವರು ಕೊಟ್ಟ ಚಪ್ಪಾಳೆ, ಶಭಾಷ್‌ಗಿರಿ, ಮೆಚ್ಚುಗೆಗಳು ನಿಜಕ್ಕೂ ಹೊಸ ನಾಟಕದ ತಯಾರಿಗೆ ಸ್ಫೂರ್ತಿ ನೀಡುತ್ತವೆ. ಹಳೆಯ ಸಾಲವನ್ನು ಹೊಸ ಪ್ರದರ್ಶನ, ವ್ಯವಸ್ಥೆ ಸಂಘಟನೆಯಿಂದ ಗಳಿಸಿದ 'ಅನುಭವ' ಮುಂದಿನ ಪ್ರದರ್ಶನಕ್ಕೆ ಅಡಿಪಾಯ ಹಾಕಿರುತ್ತದೆ. ನಾವು ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳಲು, ಸರಿಪಡಿಸಲು ಅವಕಾಶ ನೀಡುತ್ತದೆ. ಇದರೊಂದಿಗೆ ಇನ್ನೊಂದು ತಂಡದ ಬ್ಯಾನರ್ ಕಲಾಕ್ಷೇತ್ರದಲ್ಲಿ ರಾರಾಜಿಸುತ್ತಿರುತ್ತದೆ. ಆಗ ನಮ್ಮದು ? ಈ ತುಡಿತ ಮತ್ತೆ ಸಿದ್ಧತೆಗೆ ರಕ್ತಚಾಲನೆ ನೀಡುತ್ತದೆ. ಹೀಗೆ ಸೈಕಲ್ ಹೊಡೆದವರು ರಾಜಾರಾಂ.

ಹೌದು, ಆಗ ರಾಜಾರಾಂ ತುಳಿಯುತ್ತಿದ್ದುದು ಸೈಕಲ್ಲೇ. ಆ ಸೈಕಲ್ಲಿಗೆ '*ಕಾಲಿಗುಲ* ಎಂದು ಹೆಸರು ಬರೆಸಿ, ಪ್ರಚಾರ ಗಿಟ್ಟಿಸಿಕೊಂಡಿದ್ದರು. ಈಗ 21ನೇ ಶತಮಾನದಲ್ಲಿ ಕಾರುಗಳು ನಿಲ್ಲುವ ಹಾಗೆ, 70-80ರ ದಶಕದಲ್ಲಿ ಕಲಾಕ್ಷೇತ್ರದಲ್ಲಿ ಸೈಕಲ್ಲುಗಳ ಸಾಲುಗಳು. ನಾಟಕದ ಗಲಾಟೆಯಲ್ಲಿ ಸೈಕಲ್ ಕಳೆದುಕೊಂಡಿದ್ದೂ ಉಂಟು, ಬೈಯಿಸಿಕೊಂಡಿದ್ದೂ ಉಂಟು. ಮತ್ತೊಂದು ಹಳೆಯ ಸೈಕಲು ಕೊಂಡು, ಮತ್ತೆ ಕಲಾ ಕ್ಷೇತ್ರಕ್ಕೆ ಸೈಕಲ್ ಹೊಡೆದಿದ್ದು ಉಂಟು. ಜಟಕಾ ಗಾಡಿಯಲ್ಲಿ ನಾಟಕದ ಲಗೇಜನ್ನು ತುಂಬಿಕೊಂಡು ಹಿಂದೆ ಸೈಕಲ್ ಹತ್ತಿ ಹೊರಟು ಸಾಮಾನುಗಳನ್ನು ಇಳಿಸಿ, ಅಟ್ಟದ ಮೇಲೆ ಸೇರಿಸಿದರೆ ಒಂದು ದೊಡ್ಡ ಹೊರೆ ಇಳಿದಂತೆ. ಮತ್ತೆ ಗಡ್ಡಬಿಟ್ಟುಕೊಂಡು, ಹೆಗಲಿಗೆ ಬಟ್ಟೆ ಚೀಲ ನೇತುಹಾಕಿಕೊಂಡು ಕಲಾ ಕ್ಷೇತ್ರದ ಮೆಟ್ಟಿಲು ಸೇರಿದರೆ, ಹೊಸ ನಾಟಕದ ಪ್ರದರ್ಶನ ನೋಡುವುದು, ಹಾಗೂ ಏನಾದರೂ ನಾಟಕದ ಕೆಲಸ. ಮತ್ತೆ ತಂಡದ ಹೊಸ ನಾಟಕದ ಬಗ್ಗೆ ಚರ್ಚೆ, ಸಿದ್ಧತೆ, ತಂಡದ ಸಭೆಗಳು ಇತರ ಕಾರ್ಯಕಲಾಪಗಳು ಹೀಗೆ ದಿನವೂ ನಡೆದಿತ್ತು. ದಿನಾ ಕಲಾ ಕ್ಷೇತ್ರಕ್ಕೆ ಬರಬೇಕು. ಹಾಗಾದರೇ ಊಟ, ನಿದ್ದೆ, ಆರೋಗ್ಯ ಎಲ್ಲಾ ಸರಿ. ಇಲ್ಲವಾದರೆ ಏನನ್ನೋ ಕಳೆದುಕೊಂಡಂತೆ ಎನ್ನುವ ಚಡಪಡಿಕೆ ರಾಜಾರಾಂ ಅವರದ್ದು.

ರಾಜಾರಾಂ ಎಂದರೆ ಕಾಫಿ ಸಮಾರಾಧನೆ ಎಂದೇ ಅರ್ಥ. ಕಲಾ ಗಂಗೋತ್ರಿ ತಂಡದ ಕಂಪನಿ ಕಾಫಿ ಕುಡಿಯದವರು ಉಂಟೇ ಕಾಲಕ್ಷೇತ್ರದ ಅಂಗಳದಲ್ಲಿ? ಇಲ್ಲವೇ ಇಲ್ಲ. ಅಂತಹ ಸ್ನೇಹಿತ ರಾಜಾರಾಂ. ಇತರ ರಂಗ ತಂಡಗಳಿಗೂ ರಾಜಾರಾಂಗೂ ನಂಟು. ಕೈಲಾದ ಏನಾದರೂ ಸಹಾಯ ಮಾಡಲು ಸದಾ ಸಿದ್ಧ, ತಮ್ಮಲ್ಲಿನ ಉಡುಪುಗಳು, ಹಾರ್ಮೋನಿಯಂ, ತಬಲ ಅಥವಾ ಪ್ರಿಂಟಿಂಗ್‌ಗೆ ಸಹಾಯ, ಬರವಣಿಗೆ, ಹೀಗೆ ಏನಾದರೂ ಅಂಟಿಸಿಕೊಳ್ಳುತ್ತಿದ್ದರು. ಯಾವಾಗಲೂ ಸಕ್ರಿಯವಾಗಿ ಸ್ಪಂದಿಸುತ್ತಿದ್ದವರು ರಾಜಾರಾಂ. ತಂಡದ ಹೊಸ ನಾಟಕ ಆರಂಭವಾದಾಗ, ಅದಕ್ಕೆ ಹೊಸ ನಿರ್ದೇಶಕರನ್ನು ಹುಡುಕುವುದು, ಮತ್ತಷ್ಟು ಹೊಸ ನಟರನ್ನು ಒಟ್ಟುಗೂಡಿಸುವುದು, ಮತ್ತೆ ಅದಕ್ಕಾಗಿ ರಂಗತಾಲೀಮು ನಡೆಸಲು ಸ್ಥಳ ಹುಡುಕುವುದು ಹಣ ಹೊಂಚುವುದು, ಗೆಳೆಯರಿಗೆ ಕೆಲಸಗಳನ್ನು ಹಂಚುವುದು ಇವೆಲ್ಲವೂ ರಾಜಾರಾಂ ಅವರದ್ದೇ ಜವಾಬ್ದಾರಿ. ಏಕೆಂದರೆ ತಂಡ ಕಟ್ಟಿರುವುದರಿಂದ ಮುನಿಸಿಕೊಂಡು ಹೋಗುವ ಹಾಗಿಲ್ಲ. ಸಾಲ ತರಲೇಬೇಕು, ಷೋ ಆಗಲೇಬೇಕು. ಜೊತೆಗಾರರನ್ನು ಒಟ್ಟುಗೂಡಿಸಿಕೊಂಡೇ ನಡೆಯಬೇಕು, ಬೇಸರಿಸುವ ಹಾಗಿಲ್ಲ, ಮಾನಸಿಕವಾಗಿ ಕುಗ್ಗುವ ಹಾಗಿಲ್ಲ, ಧೈರ್ಯ ತುಂಬಲೇಬೇಕು. ಹೆಚ್ಚು ಹಣ ಖರ್ಚುಮಾಡುವ ಹಾಗಿಲ್ಲ. ಆದ್ದರಿಂದ ಪರಿಶ್ರಮ ಜಾಸ್ತಿ. ಎಲ್ಲರ ಬಳಿಗೆ ಸೈಕಲಿನಲ್ಲಿ ಹೋಗಿ ಕಂಡು, ತಾಲೀಮಿಗೆ ಬರುವಂತೆ ಮಾಡಬೇಕು.

ಹತ್ತಾರು ಬಾರಿ ಸುತ್ತಬೇಕು ಈಗಿನ ಹಾಗೆ ಫೋನಿಲ್ಲ. ಕೈ-ಕಾಲೇ ಗತಿ, ಸೈಕಲ್ಲೇ ಗತಿ. ಆಗಿನ ಕಲಾ ಕ್ಷೇತ್ರದ ಮಾತೆಂದರೆ ಸೈಕಲ್ ಹೊಡೆಯುವುದು-ಅಂದರೆ-ಮತ್ತೇನು ಹೊಸ ನಾಟಕ ಕೆಲಸ ಎಂದರ್ಥ.

75ರ ಸುಮಾರಿನಲ್ಲಿ ಮತ್ತಷ್ಟು ಹೊಸ ತಂಡಗಳು ಹುಟ್ಟಿಕೊಂಡವು, ಸಮುದಾಯ, ಸ್ಪಂದನ, ಶಕಶ್ಶೆಲೂಷರು - ಬೆನಕ ಮುಂತಾದವು. ಅಂದರೆ ಮತ್ತಷ್ಟು Competation ಇಂತಹ ಸಂದರ್ಭಗಳಲ್ಲಿ ತಂಡದ ಹಳೆಯ ನಟರು ಬೇರೆ ತಂಡಕ್ಕೆ ಹೋಗುತ್ತಾ ಇದ್ದರು. ಮತ್ತೆ ಹೊಸಬರನ್ನು ಹುಡುಕಿ ತರುವ ಕೆಲಸ ರಾಜಾರಾಂರವರ ಮೇಲೆ. ನಾಟಕಕ್ಕೆ ಬೇಕಾದ ಸೂಕ್ತ ನಟರನ್ನು ಆರಿಸಬೇಕಿತ್ತು. ಅದಕ್ಕೆ ಬೇಕಾದ ಚಿತ್ರ, ಬರೆದರು, ನಾಟಕದ ಪ್ರತಿಗಳನ್ನು ಮಾಡಿದರು. ಟಿಕೆಟ್‌ಗಳನ್ನು ಮನೆ ಮನೆಗೆ ಹೋಗಿ ಮಾರಿದರು. ಟಿಕೇಟಿನ ಬೆಲೆ ರೂ. 3/- ರೂ. 2/- ಮತ್ತು ರೂ. 1/- ನಾಗರಾಜ ಮೂರ್ತಿಯವರೇ, 'ನೋಡಿ ಈ ಟಿಕೆಟ್‌ಗಳನ್ನು' ಎಂದು ಕೆಲವು ಹಳೆಯ ಟಿಕೆಟ್‌ಗಳನ್ನು ತೋರಿಸಿದರು. ಕಲಾ ಕ್ಷೇತ್ರದ ಬಾಲ್ಕನಿಗೆ 1/- ರೂ. ಪ್ರವೇಶ. ಈ ಟಿಕೆಟ್ ಬುಕ್‌ಗಳಲ್ಲಿ 10 ಟಿಕೆಟ್‌ಗಳು. ಅವುಗಳನ್ನು ಚೀಲದಲ್ಲಿ ತುಂಬಿಕೊಂಡು, ಸ್ನೇಹಿತರ ಆಫೀಸ್‌ಗಳಿಗೆ ಹೋಗಿ ಮಾರಿಕೊಡಿ ಎಂದು ದುಂಬಾಲು ಬೀಳುವುದು. ಕೆಲವರು ಮಾರಿಕೊಡುವೆವೆಂದು ಟಿಕೆಟ್ ಬುಕ್‌ಗಳನ್ನು ಪಡೆದುಕೊಂಡು, ಹಣ ಕೊಡದೇ ಇದ್ದದ್ದು, ಟಿಕೆಟ್ ಮಾರೇ ಇಲ್ಲ, ಬುಕ್ ಹಾಗೇ ಮನೇಲಿ ಇದೆ, ಬಾ ಕೊಡುತ್ತೀನಿ, ಹೀಗೆ ಹೇಳಿದ್ದು. ಅಂತೂ ಪ್ರತಿ ನಾಟಕದ ಪ್ರತಿ ಪ್ರದರ್ಶನ ಅಂದರೆ ರಾಜಾರಾಂರನ್ನೂ ಕಂಡ ಕೂಡಲೆ ಜನ-ಸ್ನೇಹಿತರು ತಪ್ಪಿಸಿಕೊಳ್ಳುತ್ತಿದ್ದರು, ಯಾಕೆಂದರೆ ಹಿಂದಿನ ಬಾಕಿ ಕೇಳಬಹುದು ಎಂದು. ಆದರೆ ರಾಜಾರಾಂ ಕಾಫಿ ಕುಡಿಸಿ ಅವರಿಗೆ ಹೊಸ ಟಿಕೆಟ್ ಬುಕ್ ಕೊಡ್ತಾ ಇದ್ರು ಲೋ, ಈ ಬಾರಿನಾದ್ರೂ ಟಿಕೆಟ್ ಮಾರಿಕೊಡ್ರೋ. ನಾಟಕ ಮಾಡ್ತಾ ಇದೀವಿ, ಎಂದು ಅವರನ್ನು ಬೆನ್ನು ಬೀಳುತ್ತಿದ್ದರು. ಕೆಲ ಸ್ನೇಹಿತರಂತೂ 1-2 ಟಿಕೆಟ್ ಕೊಂಡು, ಮಾರುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾ ಇದ್ರು. ಆದ್ರೂ ನಾಟಕ ನಡೀಬೇಕು ಅಂದ್ರೆ ಈ ಎಲ್ಲಾ ತಾಪ ಸಹಸ್ರ ಸಹಿಸಲೇಬೇಕು, ಅನುಭವಿಸಲೇಬೇಕು ಅನ್ನುವುದು ರಂಗಕರ್ಮಿ, ರಂಗ ಸಂಘಟಕ ರಾಜಾರಾಂ ಅವರ ಅಂಬೋಣ.

ಹವ್ಯಾಸಿ ರಂಗ ಎಂದರೆ ನಾಟಕದ ಎಲ್ಲಾ ಕೆಲಸಗಳನ್ನು ಅವರೇ ಮಾಡಿಕೊಳ್ಳುವುದು ಎನ್ನುವ ವಾಡಿಕೆ ರೂಢಿಯಲ್ಲಿ ಇದ್ದ ಕಾಲ ಒಮ್ಮೆ ಜಡಭರತರ '*ಮೂಕಬಲಿ*' ನಾಟಕದ ಪೋಸ್ಟರನ್ನು ಅಂಟಿಸಲು 3-4 ಜನ ಸ್ನೇಹಿತರು ಪೇಸ್ಟ್ ಕಾಯಿಸಿಕೊಂಡು, ಡಬ್ಬದಲ್ಲಿ ಹಾಕಿ, ಸೈಕಲ್ಲಿಗೆ ಕಟ್ಟಿಕೊಂಡು, ಪೋಸ್ಟರ್‌ಗಳನ್ನು ಕ್ಯಾರಿಯರಿನಲ್ಲಿ ಇಟ್ಟುಕೊಂಡು, ರಾತ್ರಿ ಹೊರಟರು. ಹತ್ತಾರು ಕಡೆ ಅಂಟಿಸಿ, ಕೆ.ಆರ್. ಸರ್ಕಲ್‌ಗೆ ಅಂಟಿಸುತ್ತಿದ್ದರು. ರಾತ್ರಿ ಪೊಲೀಸರು ಬಂದರು. ಪೋಸ್ಟರ್ ನೋಡಿದರು. ರಕ್ತ ಹನಿಹನಿ ಇಳಿಯುತ್ತಿದಂತಹ ಪೋಸ್ಟರ್ ಓದಿದರು. 'ತೆರಿಮಾಕ ಬಲಿ ಜಾಡಭರತ' 'ಏನೋ ಇದು?' ಗದರಿದರು, ಹಿಡಿದರು. ದಂಬಾಲು ಬಿದ್ದು ದಮ್ಮಯ್ಯ ಮಾಡಿ ಸೈಕಲ್ಲುಗಳನ್ನು ಬಿಡಿಸಿಕೊಂಡು ಬಂದಿದ್ದು ಕಲಾಗಂಗೋತ್ರಿ ರಾಜಾರಾಂ ಅವರ ಚರಿತ್ರೆಯ ಒಂದು ಪುಟ. ರಾಜಾರಾಂ, ನಂಜುಂಡಪ್ಪ, ಸತ್ಯನಾರಾಯಣ, ಪ್ರಸಾದ್, ನರಸಿಂಹಶೆಟ್ಟಿ, ರವೀಂದ್ರ, ಡಿ. ಕೃಷ್ಣಮೂರ್ತಿ, ಜಾನಕಿರಾಮ್, ಹೀಗೆ ಹತ್ತಾರು ಗೆಳೆಯರ ನಿರಂತರ ಶ್ರಮ ಕಲಾಗಂಗೋತ್ರಿ ತಂಡ ಗರಿಗೆದರಿ ಬೆಳೆಯಲಾರಂಭಿಸಿತು. ಈ ಗೆಳೆಯರ ಗುಂಪನ್ನು ಒಟ್ಟಿಗೆ ಹಿಡಿದದ್ದು ಸ್ನೇಹ ಮಾತ್ರ. ಈ ಸ್ನೇಹ

ಕೇವಲ ರಂಗದ ಕಟ್ಟೆಗೆ ಮಾತ್ರ ಸೀಮಿತವಾಗಲಿಲ್ಲ. ಗೆಳೆಯರ ಮನೆ ಮನೆಗೆ ಹೆಜ್ಜೆ ಹಾಕಿತು. ಮನೆಯವರೂ ಕಲಾ ಗಂಗೋತ್ರಿಯ ಸಕ್ರಿಯ ಸದಸ್ಯರಾದರು. ಇದರೊಂದಿಗೆ ರಂಗ ಕ್ಷೇತ್ರದ, ಸಾಹಿತ್ಯ ಕ್ಷೇತ್ರದ ಅನೇಕ ಗಣ್ಯ ವ್ಯಕ್ತಿಗಳ ಒಡನಾಟ ಲಭಿಸಿತು. ಕಲಾಗಂಗೋತ್ರಿಗೆ ಸ್ಫೂರ್ತಿ, ಬೆಂಬಲ ನೀಡಿ ಪೋಷಣೆ ನೀಡಿದವರು ಹಿರಿಯರಾದ ಪ್ರೊ|| ಬಿ.ಸಿ. ಪದ್ಮಣ್ಣ, ಡಾ|| ಹೆಚ್.ಎನ್. ನಾಣಿ, ಪರ್ವತವಾಣಿ, ಅಬ್ಬೂರು, ಪಾರ್ಥಸಾರಥಿ ಇನ್ನೂ ಮುಂತಾದವರೂ. ಬೆನ್ನು ತಟ್ಟಿ ಪ್ರೋತ್ಸಾಹಿಸಿದರು.

ಕಲಾಗಂಗೋತ್ರಿಯ ಸಂಘಟನೆಯ ಕೆಲಸದಲ್ಲಿ ರಾಜಾರಾಂ ಅವರದ್ದೇ ಚಿಂತನೆ ಮತ್ತು ನಿರ್ದೇಶನ. ಪ್ಲಾಟ್‌ಫಾರಂಗಳನ್ನು ಹಾಕುವುದಾಗಲಿ, ಬಟ್ಟೆ, ಮಳೆ ಹೊಡೆಯುವುದಾಗಲಿ, Poster ಹಾಕುವುದಾಗಲಿ, ಬ್ಯಾನರ್ ಕಟ್ಟುವುದಾಗಲಿ ಅದಕ್ಕಾಗಿ ದುಡಿತ. ಸ್ನೇಹಿತರನ್ನು ಕೂಡಿಸಿಕೊಂಡು ಕೆಲಸ ಸಾಧಿಸುವಲ್ಲಿ ಕಷ್ಟವಾದರೂ, ಕೆಲಸ ಮಾಡುವಲ್ಲಿನ ನಗುಮುಖ, ಉತ್ಸಾಹ ಕಡಿಮೆಯಾಗಿಲ್ಲ. ರಂಗಸಜ್ಜಿಕೆ ಮಾಡಿಕೊಂಡು, ಎಲ್ಲಾ ವ್ಯವಸ್ಥೆಯನ್ನು ಸರಿತೂಗಿಸಿ, ಮತ್ತೆ ಪಾತ್ರಮಾಡಲು ಮೇಕಪ್ ರೂಂಗೆ ಓಡುವರು ರಾಜಾರಾಂ. ಈ ನಟನೆಯ ಹೊಣೆ, ಸಂಘಟನೆಯ ಜವಾಬ್ದಾರಿ ಎರಡನ್ನೂ ತೂಗಿಸುವುದು ರಾಜಾರಾಂ ಅವರಿಗೆ ಮಾತ್ರ ಸಾಧ್ಯವಾಗಿದೆ. ಉಳಿದ ಕೆಲವು ರಂಗ ತಂಡಗಳಲ್ಲಿ, ನಾನು ನೋಡಿರುವ ಹಾಗೆ, ಈ ಜವಾಬ್ದಾರಿಗಳನ್ನು ಬೇರೆಯವರು ನಿಭಾಯಿಸುತ್ತಾರೆ. ಹಾಗಾಗಿ ನಟರಾಗಿ ಪ್ರಸಿದ್ಧಿ ಪಡೆಯಬೇಕಿದ್ದ ರಾಜಾರಾಂ, ಸಂಘಟಕರಾಗಿ, ಕಲಾಗಂಗೋತ್ರಿಯ ಸಕ್ರಿಯ ಸದಸ್ಯರಾಗಿ ದುಡಿಯುತ್ತಿದ್ದಾರೆ. ನಟಿಸಿದ ಕೆಲವೇ ಪಾತ್ರಗಳಲ್ಲಿಯೂ ಮಿಂಚಿದ್ದಾರೆ. ಅದು ಅವರದ್ದೇ ನಟನೆ ಎನ್ನುವಷ್ಟು ಛಾಪು ಒತ್ತಿದ್ದಾರೆ.

ತಂಡದ ಹೊರಗಿನ ಕಲಾವಿದರನ್ನು ನಿರ್ದೇಶನಕ್ಕೆ ಆಹ್ವಾನಿಸಿ ದುಡಿಯುತ್ತಿದ್ದ ತಂಡ, ತಮ್ಮವರೇ ನಿರ್ದೇಶಕರುಗಳನ್ನು ಹೊಂದುವಂತಾಗಿದ್ದು ನಿಜಕ್ಕೂ ತಂಡಕ್ಕೆ ಹೊಸ ಚಾಲನೆಯನ್ನು ಕೊಟ್ಟಂತಾಯಿತು. ಬೆಂಗಳೂರು ವಿಶ್ವವಿದ್ಯಾಲಯದ 2 ವರ್ಷದ ನಾಟಕ ಡಿಪ್ಲೊಮಾ ಪಡೆದ ರಾಜಾರಾಂ ಮತ್ತು ಚಂದ್ರಶೇಖರ್, ಕನ್ನರ್ಪಾಡಿ ರಾಮಕೃಷ್ಣ, ವಸಂತಕುಮಾರ್ ಶೆಣೈ, ಕುಳ್ಳಚಂದ್ರು, ನರಸಿಂಹಶೆಟ್ಟಿ, ವಿಜಯೇಂದ್ರ ಮುಂತಾದವರು ಇನ್ನಷ್ಟು ಕ್ರಿಯಾಶೀಲರಾಗಿ ದುಡಿಯಲು ಸಹಕಾರಿಯಾಯಿತು. ಪ್ರೊ|| ಬಿ. ಚಂದ್ರಶೇಖರ್‌ರವರ ನಿರ್ದೇಶನ, ಶ್ರೀ ನಾಣಿಯವರ ಪ್ರಸಾದನ, ಶ್ರೀ ಪದ್ಮಣ್ಣನವರ ನೇಪಥ್ಯ, ಶ್ರೀ ಪರೇಶ್ ಗೆಳೆಯರ ಬೆಳಕು, ಚಂದ್ರುಗೋಪಿರವರ ರಂಗಸಹಾಯ, ಶ್ರೀ ರಂಗನಾಥರಾವ್, ಶ್ರೀ ರಾಜೀವಲೋಚನ, ಶ್ರೀ ಗಂಗಾಟ್ಕರ್, ಶ್ರೀ ರಿಚರ್ಡ್ ಲೂಯಿಸ್, ಮುಂತಾದವರ ಜೊತೆಯ ಕೆಲಸ ಕಲಾಗಂಗೋತ್ರಿಗೆ ಹೆಚ್ಚಿನ ಯಶಸ್ಸನ್ನು ದೊರಕಿಸಿಕೊಟ್ಟಿತು. ಹೊಸ ಹೊಸ ನಾಟಕಗಳ ತಯಾರಿ ಪ್ರದರ್ಶನ, ಮರು ಪ್ರದರ್ಶನಗಳು, ಏಕಾಂಕ ನಾಟಕಗಳ ನಿರ್ದೇಶನ, ಪ್ರದರ್ಶನ ಹೀಗೆ ಕಲಾಗಂಗೋತ್ರಿ ಹತ್ತು ವರ್ಷಗಳನ್ನು ಕ್ರಮಿಸಿತು. ಹತ್ತು ವರ್ಷಗಳ (1982) ಹಬ್ಬವನ್ನು ಆಚರಿಸಿತು. ಹತ್ತು ನಾಟಕಗಳ ಪ್ರದರ್ಶನ, ಇತರ ಸಹ ತಂಡಗಳ ನಾಟಕದ ಪ್ರದರ್ಶನ. 10 ದಿನಗಳ ಮರೆಯಲಾಗದಂತಹ, ಮೊದಲು ಮತ್ತು ಕಡೆಯದು ಎನ್ನಬಹುದಾದ ರಂಗ ಮಾಹಿತಿ ಚಿತ್ರ, ಮಾಹಿತಿಗಳ ಪ್ರದರ್ಶನ, ಗೌರವ, ಸನ್ಮಾನಗಳು, ನಟಸಾರ್ವಭೌಮ ಡಾ||

ರಾಜಕುಮಾರ್‌ರವರಿಂದ ಈ ದಶವಾರ್ಷಿಕ ರಂಗೋತ್ಸವದ ಉದ್ಘಾಟನೆ, ದಿನವೂ ಪ್ರತಿಷ್ಠಿತ ಮಂತ್ರಿಗಳಿಂದ ಸಮಾರಂಭ.

ಬೆಂಗಳೂರು ವಿಶ್ವವಿದ್ಯಾಲಯ ಹೊಸದಾಗಷ್ಟೆ ಸಂಜೆ ವೇಳೆಯ 2 ವರ್ಷ ಅವಧಿಯ ನಾಟಕದ ಡಿಪ್ಲೊಮಾ ಶಿಕ್ಷಣವನ್ನು 1976-77ರಲ್ಲಿ ಆರಂಭಿಸಿತು. ಪ್ರೊ|| ಬಿ.ಸಿ.ಯವರು, ನೃತ್ಯ, ನಾಟಕ, ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದರು. ಬೆಂಗಳೂರಿನ ಆಸಕ್ತ ಯುವ ಪೀಳಿಗೆಯ ಅನೇಕರು ಈ ಕೋರ್ಸ್‌ಗೆ ಸೇರಿದರು. ಹಲವಾರು ವಿಷಯಗಳನ್ನು ಹಿರಿಯರಿಂದ ಕಲಿತರು. ಪ್ರೊ|| ಬಿ.ಸಿ.ಯವರ ನಂತರ ಡಾ|| ಹೆಚ್.ಕೆ. ರಂಗನಾಥರವರು ಮುಖ್ಯಸ್ಥರಾದರು. ಈ ಸಮಯದಲ್ಲಿ 'ಪ್ರತಿಭಾರಂಗ' ವೆಂಬ ವಿದ್ಯಾರ್ಥಿಗಳ ಕಲಾವಿಕಾಸಕ್ಕೆ ಅನುವಾಗುವಂತಹ ಕಾರ್ಯಕ್ರಮ, 'ಪ್ರಯೋಗರಂಗ' ವೆಂಬ ಪ್ರತಿ ಗುರುವಾರ ಸೆಂಟ್ರಲ್ ಕಾಲೇಜಿನ ಹಿಂಭಾಗದಲ್ಲಿ ವಿಭಾಗದ ಪಕ್ಕದಲ್ಲಿದ್ದ ಗ್ಯಾರೇಜ್ ಥಿಯೇಟರ್ (ಬಸ್ ನಿಲ್ಲಿಸುವ ಒಂದು ಗ್ಯಾರೇಜನ್ನು ವಿಭಾಗ ಪಡೆದಿತ್ತು) ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನೃತ್ಯ, ಸಂಗೀತ, ಏಕಾಂಕ ನಾಟಕಗಳು, ಪೂರ್ಣಾವಧಿಯ ನಾಟಕಗಳು, ಯೋಗ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. 'ರಂಗಚಕ್ರ' ಎನ್ನುವ ವಿಭಾಗದ ವಿದ್ಯಾರ್ಥಿಗಳ ತಂಡ, ಪರ ಊರಿನ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಯೋಜನೆ ಹಾಗೂ 'ರಂಗಧ್ವನಿ' ಎನ್ನುವ ಒಂದು ವಿದ್ಯಾರ್ಥಿಗಳ ಸಿದ್ಧಪಡಿಸಿದ ರಂಗ ಸಾಹಿತ್ಯ ಸಂಚಿಕೆ (ಸೈಕ್ಲೋಸ್ಟೈಲ್) ಪ್ರಕಟಣೆ ಇವುಗಳು ಡಾ|| ಹೆಚ್.ಕೆ.ಆರ್. ಅವರ ನೇತೃತ್ವದಲ್ಲಿ ನಡೆದಾಗ, ರಾಜಾರಾಂ ಅವರು ಅದರಲ್ಲಿ ಸಂಘಟನೆಯ ಜವಾಬ್ದಾರಿಯನ್ನು, ಕೆಲವೊಮ್ಮೆ ನಟನೆಯ ಹೊಣೆಯನ್ನು ಹೊತ್ತಿದ್ದವರು. ವಿಭಾಗದ ವಿದ್ಯಾರ್ಥಿಯಾಗಿದ್ದಾಗ ನಡೆಸಿದ ಸಂಘಟನೆಯ ವ್ಯವಸ್ಥೆ ಮತ್ತು ಪ್ರಯೋಗಿಸಿದ ನಾಟಕಗಳೆಂದರೆ, ಬಯಲು ರಂಗ ನಿರ್ಮಿತಿಯಲ್ಲಿನ *ಆಷಾಢದ ಒಂದು ದಿನ* (ನಿ : ಕೆ. ಆರ್. ಸುಧೀಂದ್ರ ಶರ್ಮ, ವ್ಯವಸ್ಥೆ: ರಾಜಾರಾಂ) ಭರತೇಶರ *ಜೋಕೆ ತಪ್ಪಿದ ಬಳಿಕ* (ನಿ: ರಮಾ ಆರ್.ಟಿ. ವ್ಯವಸ್ಥೆ: ರಾಜಾರಾಂ) ಭರತೇಶರ ಎಲ್ಲಾರು ಮಾಡುವುದು (ನಿ: ರಾಜಾರಾಂ, ಚಂದ್ರು) ಚಾಣಕ್ಯನಾಗಿ ಪ್ರಮುಖ ಪಾತ್ರ ವಹಿಸಿ, ಅಪಾರ ಮೆಚ್ಚುಗೆ ಗಳಿಸಿದವರು ರಾಜಾರಾಂ. ಇದೊಂದು ಅಭೂತಪೂರ್ವ ಪ್ರಯೋಗ. ಹಗಲು ಮಹಾಬೋಧಿ ಸಂಸ್ಥೆಯಲ್ಲಿ ಕೆಲಸ, ಸಂಜೆ ಡಿಡಿಎಂನಲ್ಲಿ ನಾಟಕದ ತಾಲೀಮು. ಅಲ್ಲಿಗೇ ತಿಂಡೀಗಾಡಿ ಹಾಜರ್‍ರು. ಇಡ್ಲಿ ಚಿತ್ರಾನ್ನ ತಿಂಡಿ. ವನರಂಗ ಎನ್ನಿ, ಬಯಲು ರಂಗ ಎನ್ನಿ, ಹೊರವಾತಾವರಣದಲ್ಲಿನ ಸಿದ್ಧ ರಂಗ ಎನ್ನಿ. ಈ ಎಲ್ಲವನ್ನು ಮೀರಿಸಿದಂತಹ ರಂಗ ಸಜ್ಜಿಕೆ ಸಿದ್ಧವಾಗಿತ್ತು. ಡಾ|| ಹೆಚ್.ಕೆ.ಆರ್. ರಾತ್ರಿ ೧೦ರ ಸಮಯದಲ್ಲಿ ಬಂದು 'ತಿಂಡಿ ಆಯ್ತೇನ್ರಯ್ಯಾ, ನಾಳೆ ಸ್ಟೇಜ್‌ಗೆ ಬೇಕಾದ ಬಟ್ಟೆಗಳು, ಸೀರೆ ತಂದುಕೊಡ್ತೀನಿ, do a good job, you fellows' ಅಂದು ಹುರಿದುಂಬಿಸಿದ್ದನ್ನು, ಮಾಡಿದ ಕೆಲಸಕ್ಕೆ ಮನ್ನಣೆ ಸಿಕ್ಕಿದ್ದನ್ನು ಇಂದಿಗೂ ರಾಜಾರಾಂ ತುಂಬು ಹೃದಯದಿಂದ ನೆನಪಿಸಿಕೊಳ್ಳುತ್ತಾರೆ. ಡಿಡಿಎಂ ಎಲ್ಲಾ ಗೆಳೆಯರು, ಕಲಾಗಂಗೋತ್ರಿಯ ಗೆಳೆಯರು, ಹಿತೈಷಿಗಳು ನಿಂತು ಸಂಭ್ರಮದಿಂದ ನಡೆಸಿದ ಪ್ರದರ್ಶನಗಳು ಇವು. ಸುಮಾರು ನೂರು ಅಡಿಗೂ ಉದ್ದವಿರುವ ಹಿಂದಿನ ಕಟ್ಟಡವೇ ರಂಗದ ಹಿಂಬದಿ. ಒಂದು ಮಹಡಿ, ಅದರ ಮೇಲೆ ಗೋಪುರ. ಇಂತಹ ಕಟ್ಟಡಕ್ಕೆ ಸೀರೆ, ತೆರೆಗಳನ್ನು ಹಾಕಿ ಅರಮನೆಯಂತೆ ಸಿಂಗರಿಸಲಾಗಿತ್ತು. ಅಲ್ಲಿದ್ದ ನೀರು ಬರದ ನಲ್ಲಿಕಟ್ಟೆಯನ್ನೇ ಚಂದ್ರಗುಪ್ತನ ಸಿಂಹಾಸನ ಮಾಡಲಾಗಿತ್ತು. ಅದರ ಮುಂದಿನ ಮೆಟ್ಟಿಲುಗಳು,

ಆನೆಯ ಕಿವಿಯ ಆಕಾರಗಳಿಂದ ಜೋಡಿಸಿಟ್ಟಿದ್ದು (ರಟ್ಟುಗಳಿಂದ ಮಾಡಿದ್ದು) ಗಾಳಿ ಬಂದಾಗ ಕಿವಿ ಅಲುಗಿಸುತ್ತಿದ್ದವು. ಒಂದು ಬದಿಯ ಮಾವಿನ ಮರದ ಅಡಿಯಲ್ಲಿಯೇ ಮದಿರಾಗೃಹ, ವಸಂತವಾಟಿಕಾ. ಇನ್ನೊಂದು ಬದಿಯಲ್ಲಿದ್ದ ಹಲಸಿನ ಮರದ ಸುತ್ತ ಆಚಾರ್ಯ ಚಾಣಕ್ಯನ ಕುಟೀರ. ಇಂದಿಗೂ ನೆನೆಸಿಕೊಂಡರೆ ಮೈ ರೋಮಾಂಚನ ಆಗುವಂತಹ ದೈತ್ಯಾಕಾರದ ಬಯಲು ರಂಗದ ಸುಂದರ ಪ್ರದರ್ಶನ ಅದಾಗಿತ್ತು ಎನ್ನುತ್ತಾರೆ ರಾಜಾರಾಂ. ಚೆನ್ನಕೇಶವಮೂರ್ತಿ, ಹೂಗೊಪ್ಪಲು ಕೃಷ್ಣಮೂರ್ತಿ, ಶಣೈ, ರಾಮಕೃಷ್ಣ, ಕೃಷ್ಣಮೂರ್ತಿಹೊಳ್ಳ, ರಾಜಶೇಖರ್, ಅಶೋಕ, ಸುರೇಂದ್ರ, ಶಿರೀಷ ಮೋಹನ್, ಕೃಷ್ಣ, ತಿಮ್ಮರಾಜು ಇನ್ನೂ ೩೦ ರಿಂದ ೪೦ ಜನ ದುಡಿದ ಶ್ರಮದ ಫಲ ಅದ್ಭುತ ಪ್ರಯೋಗ. ಪತ್ರಿಕೆಗಳಲ್ಲಿ 'ಚಾಣಕ್ಯನಗರಿಯ ಸುಂದರ ಸ್ವಪ್ನ' ಎಂದು ಪ್ರಶಂಸೆ ಪಡೆದ ಪ್ರಯೋಗ. ಇದರ ದುಡಿತ ಶ್ರಮ ರಾಜಾರಾಂ ಚಂದ್ರು ಅವರದ್ದು. ರಾತ್ರಿ ಇಡೀ ನೆಲ ಅಗೆದು, ಸಮ ಮಾಡಿ, ರೊಟ್ಟು ಪೇಪರ್‌ಗಳಿಂದ ಆಕೃತಿಗಳನ್ನು ಮಾಡಿ, ಪ್ಲಾಟ್‌ಫಾರಂಗಳಿಗೆ ಚಾಪೆಗಳಿಂದ ಸಿಂಗಾರ ಮಾಡಿ, ಲೈಟಿಗಾಗಿ ಬೊಂಬುಗಳನ್ನು ನೆಟ್ಟು ಹೀಗೆ ಪ್ರದರ್ಶನಕ್ಕೆ ಸರ್ವ ಸಿದ್ಧತೆ ಮಾಡಿದ ನಂತರ ರಂಗದ ಮೇಲೆ ಚಾಣಕ್ಯನಾಗಿ ರಾಜಾರಾಂ ಅವರ ಅಭಿನಯ ನಿಜಕ್ಕೂ ಅದ್ಭುತವಾಗಿತ್ತು. ಆಗಲೇ ಪದ್ದಣ್ಣ ನಟ ರಾಜಾರಾಂ ಅವರಿಗೆ 'ರಾಜಗುರು' ಎಂದು ಬಿರುದು ನೀಡಿದರು. ಹಾಗೆಯೇ ಕರೆಯುತ್ತಿದ್ದರೂ ಕೂಡ. ಅನಂತರದಲ್ಲಿ ಬಿ. ಪುಟ್ಟಸ್ವಾಮಯ್ಯನವರ ನಾಟಕ *ಷಾಹಜಹಾನ* (ನಿ: ರಮಾ ಆರ್.ಟಿ. ವ್ಯವಸ್ಥೆ: ರಾಜಾರಾಂ) ಡಾ|| ಹೆಚ್.ಎಸ್. ವೆಂಕಟೇಶಮೂರ್ತಿ ಅವರ *'ಹೆಜ್ಜೆಗಳು'* ಮೊದಲ ಪ್ರಯೋಗ (ನಿ: ಕೆ.ಆರ್. ಸುಧೀಂದ್ರ ಶರ್ಮ, ವ್ಯವಸ್ಥೆ: ರಾಜಾರಾಂ) ಅಲ್ಲಿದ್ದ ಮತ್ತೊಂದು ಬಯಲು ರಂಗದಲ್ಲಿ ಆಶ್ರಮದ ಉರಿಯುತ್ತಿದ್ದ ಹೋಮಕುಂಡ. ಮಧ್ಯದಲ್ಲಿ ಆಳೆತ್ತರದ ಮರ, ಒಂದು ಸುಂದರವಾದ, ಕಾಡಿನಲ್ಲಿನ ತಪೋಭೂಮಿಯನ್ನು ಸೃಷ್ಟಿಸಿದಂತಿದ್ದು, ಯಶಸ್ವೀ ಪ್ರಯೋಗವಾಯಿತು. ಮತ್ತೊಂದು ಮಹತ್ತರ ಪ್ರಯೋಗವೆಂದರೆ ಡಾ|| ಶಿವರಾಮ ಕಾರಂತರ *'ಗರ್ಭಗುಡಿ'* ನಾಟಕ. ರಾಜಾರಾಂ ಚಂದ್ರು ನಿರ್ದೇಶನ ಮಾತ್ತು ಅಭಿನಯ ಹತ್ತಾರು ಕಡೆ ಪ್ರದರ್ಶನಗೊಂಡಿತು. ಇವುಗಳಲ್ಲದೆ ಪ್ರತಿ ಗುರುವಾರದ ಪ್ರದರ್ಶನದಲ್ಲಿ 25 -30ಕ್ಕೂ ಹೆಚ್ಚು ನಾಟಕದ ಪ್ರದರ್ಶನಗಳನ್ನು ನೀಡಿ, ಅದನ್ನು ಸಂಘಟಿಸಲು ಶ್ರಮಿಸಿದ್ದಾರೆ ರಾಜಾರಾಂ. ರಂಗಸಜ್ಜಿಕೆ, ಪ್ರಚಾರ, ಒಟ್ಟುಗೂಡಿ ಕೆಲಸ ಮಾಡಿಸುವುದು ಮತ್ತು ಅಮೇರಿಕಾದ ಜಾಕಲೀನ ಹನ್ನಿ ಅವರ ನಿರ್ದೇಶನದ ರಾಜಾರಾಂ ನಾಟಕದ ವ್ಯವಸ್ಥೆ ಮತ್ತು ನಟನೆ ರಾಜಾರಾಂ ಅವರ ಶ್ರಮಕ್ಕೆ ಶಬಾಷ್‌ಗಿರಿ ಕೊಟ್ಟಿತ್ತು. ರಾಜಾರಾಂ ಚಂದ್ರು ನಿರ್ದೇಶನ ಜೋಡಿ ಹೊಸ ಬಗೆಯ ನಾಟಕಗಳನ್ನು ಪ್ರದರ್ಶನ ಮಾಡಲು ಆರಂಭಿಸಿತು. ಬೆಂಗಳೂರಿನ ಇತರ ಹವ್ಯಾಸಿ ತಂಡಗಳು ಪ್ರತಿಷ್ಟಿತರ ನಾಟಕಗಳನ್ನು ಪ್ರದರ್ಶಿಸಲು ಸಿದ್ಧತೆ ನಡೆಸುತ್ತಿದ್ದರೆ ಕಲಾಗಂಗೋತ್ರಿ ಭಿನ್ನ ರೀತಿಯ ನಾಟಕಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡುತ್ತಿತ್ತು. ಪ್ರತಿ ನಾಟಕವೂ ಭಿನ್ನವಾಗಿರಬೇಕು. ಅದರ ರಂಗಸಜ್ಜಿಕೆ ಶೈಲಿ ವಿಭಿನ್ನವಾಗಿರಬೇಕು, ಹೊಸತೇನನ್ನೋ ಸಾಧಿಸಬೇಕು ಎನ್ನುವುದು ರಾಜಾರಾಂರವರ ಚಿಂತನೆ ತುಡಿತ. ಹಾಗಾಗಿ ಪ್ರತಿ ನಾಟಕದ ರಂಗಸಜ್ಜಿಕೆಯ ಜವಾಬ್ದಾರಿ ರಾಜಾರಾಂ ಅವರದ್ದು. ಹೀಗೆ ಪ್ರದರ್ಶನಗೊಂಡು ಯಶಸ್ವಿಯಾದ ನಾಟಕಗಳು *ಅಚಲಾಯತನ, ಮೋಡಗಳು, ಮೂಕಿ ಟಾಕಿ, ಮುಖ್ಯಮಂತ್ರಿ, ಭರತಪ್ಪನ ಸೊಂಟಕ್ಕೆ ಗಂಟೆ* ಮುಂತಾದವು. ಗುರುದೇವ ರವೀಂದ್ರನಾಥ ಠಾಕೂರರ ನಾಟಕ *'ಅಚಲಾಯತನ'*

ವಿದ್ಯಾಕ್ರಮದಲ್ಲಿನ ಮೌಢ್ಯಗಳನ್ನು, ಸಮಾಜದಲ್ಲಿ ಬೇರು ಬಿಟ್ಟಿರುವ ಅಂಧವಿಶ್ವಾಸಗಳನ್ನು ಕೆದಕಿ, ವಿಚಾರ ಮಂಥನ ಮಾಡುವ ನಾಟಕ. ರಾಜಾರಾಂ ಚಂದ್ರು ಜೋಡಿ ನಿರ್ದೇಶನದಲ್ಲಿ ಅತ್ಯಂತ ಯಶಸ್ಸು ಕಂಡಿತು. ಹೊಸ ರೀತಿಯ ರಂಗಸಜ್ಜಿಕೆ, ಹೊಸ ಬಗೆಯ ನಾಟಕಶೈಲಿ ಮತ್ತು ಹಾಡು ಕುಣಿತ, 50 ಜನರ ತಂಡದ ಶ್ರಮ ಹವ್ಯಾಸಿ ರಂಗದಲ್ಲಿ ಹೊಸ ಹೆಜ್ಜೆ ನಿರ್ಮಿಸಿತು. ಯುವಜನ ಮತ್ತು ಕ್ರೀಡಾ ಇಲಾಖೆ ನಡೆಸಿದ ಜಿಲ್ಲಾಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿಗಳಿಸಿತು. ಹಾಗೆಯೇ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲೂ ಪ್ರಶಸ್ತಿ ಗಳಿಸಿತು. ಅಂದಿನ ರಂಗಸಜ್ಜಿಕೆಯನ್ನು ಕಂಡ ಖ್ಯಾತ ನಿರ್ದೇಶಕ ಪ್ರಸನ್ನ ಹೊಗಳಿದ್ದನ್ನು ರಾಜಾರಾಂ ಜ್ಞಾಪಿಸಿಕೊಂಡರು. ಈ ನಾಟಕಕ್ಕೆ ಸಿ.ಜಿ.ಕೆ.ಯವರ ಬೆಳಕು ಸಂಯೋಜನೆ. ಅವರು ಮೊದಲ ಬಾರಿಗೆ ಬೆಳಕು ವಿನ್ಯಾಸ ಮಾಡಿದ್ದು '*ಅಚಲಾಯತನ*' ನಾಟಕಕ್ಕೆ.

ಕಲಾಗಂಗೋತ್ರಿ ಮತ್ತು ಸಮುದಾಯದ ಗೆಳೆಯರು ಜೊತೆಗೂಡಿ ಕೆಲಸ ಮಾಡಿದ್ದು *ಅಚಲಾಯತನ* ಮತ್ತು *ಮೋಡಗಳು* ನಾಟಕದಲ್ಲಿ. ವಾರಾಂತ್ಯ ರಂಗಭೂಮಿ Week End Theatre ಚಟುವಟಿಕೆ ಅಡಿಯಲ್ಲಿ ನೃಪತುಂಗ ರಸ್ತೆಯಲ್ಲಿನ YMCA ಸಣ್ಣ ಸಭಾಂಗಣದಲ್ಲಿ 6 *ವಾರಗಳು ಮೋಡಗಳು* ನಾಟಕದ ಪ್ರದರ್ಶನ ಮಾಡಿದೆವು. 2400ವರ್ಷದ ಹಿಂದಿನ ಗ್ರೀಕ್ ನಾಟಕಕಾರ ಅರಿಸ್ಟೊಫೆನಸ್‌ನ *ಕಾಮಿಡಿ* ನಾಟಕ. ವಿದ್ಯೆಯ ಕಲಿಕೆಯನ್ನು ಜನರಿಗೆ ಹೇಗೆ ಮೋಸ ಮಾಡಲು ಬಳಸುತ್ತಾರೆಂದು ತಿಳಿಸುತ್ತಾ, ವಿಡಂಬಿಸುವ ನಾಟಕ. ಡಾ|| ನರಸಿಂಹಾಚಾರ್ ಅದರಲ್ಲಿ ಸಾಕ್ರೆಟೀಸ ಪಾತ್ರ. ಈ ನಾಟಕದ ಸಂಬಂಧದಲ್ಲಿಯೇ, ಆನಂತರದ ಮರು ಪ್ರದರ್ಶನ ಒಂದು ಮಲ್ಲೇಶ್ವರಂನ ಗೋಖಲೆ ಇನ್‌ಸ್ಟಿಟ್ಯೂಟ್‌ನಲ್ಲಿ ಇತ್ತು. ಹಿಂದಿನ ದಿನ ನರಸಿಂಹಾಚಾರ್‌ರವರ ಹಿರಿಯ ಮಗ ದುಡಿವ ಮಗ ಮೃತನಾಗಿದ್ದ. ಬೆಳಿಗ್ಗೆ ಮನೆಯ ಮುಂದೆ ಶವ ಸಂಜೆ *ಕಾಮಿಡಿ* ನಾಟಕದ ಪ್ರದರ್ಶನ. ನರಸಿಂಹಾಚಾರ್ ಅವರು ಪಾತ್ರ ಮಾಡ್ತೀನಿ ಅಂದರೂ ಸಹ, ಆ ವಯಸ್ಸಿನಲ್ಲಿ ಅವರು ಅನುಭವಿಸಿದ ಯಾತನೆ ಹೇಳತೀರದು. ಆದರೆ "The show must go on" ಸಂಜೆಯ ಪ್ರದರ್ಶನಕ್ಕೆ ರಾಜಾರಾಂ ಸಾಕ್ರೆಟೀಸ್ ಪಾತ್ರವಹಿಸಿದರು, ಚಂದ್ರು ನಾಯಕನ ಪಾತ್ರದಲ್ಲಿ ನಟಿಸಿದರು ನಾಟಕದ ಪ್ರದರ್ಶನ ನಡೆಯಿತು. ಸಂಘಟನೆ ಎಂದರೆ ಎಂತಹ ಕಷ್ಟಕರ. ಇನ್ನೊಂದು ವಿಷಯ ನೆನಪಿಗೆ ಬಂದು ರಾಜಾರಾಂ ಅವರು ತಿಳಿಸಿದ್ದು ಅಪಘಾತದ ವಿಚಾರ. ನಾಳೆ YMCA ನಲ್ಲಿ 'ಮೋಡಗಳು' ನಾಟಕದ ಪ್ರದರ್ಶನ ಇರುವ ಹಿಂದಿನ ದಿನದ ರಿಹರ್ಸಲ್ ಮುಗಿಸಿ ಸುಮಾರು ರಾತ್ರಿ 10 ಗಂಟೆಗೆ ರಿಕ್ಷಾದಲ್ಲಿ ಚಂದ್ರು ರಾಜಾರಾಂ ಶ್ರೀನಿವಾಸ ಮೇಸ್ತ್ರು ಕನ್ನಪ್ಪಾಡಿ ರಾಮಕೃಷ್ಣ 4 ಜನ NR ರಸ್ತೆಯಲ್ಲಿ. ಅತ್ತ ಸಿಟಿ ಮಾರ್ಕೆಟಿನ ಕಡೆಯಿಂದ 3 ಚಕ್ರದ ಟೆಂಪೊ ಮೂತಿ ಹತ್ತಿ ಉರಿಯುತ್ತಾ ವೇಗವಾಗಿ ಬರುತ್ತಿತ್ತು. ಆದಾಗಲೇ 2-3 ವಾಹನಗಳಿಗೆ ಡಿಕ್ಕಿ ಹೊಡೆದು ನಿಯಂತ್ರಣವಿಲ್ಲದೆ. ಅಡ್ಡಾದಿಡ್ಡಿ ಬರುತ್ತಿದ್ದಾತ್ತು ಬಂದೇ ಬಂದು ರಿಕ್ಷಾಗೆ ಗುದ್ದಿದ. 4 ಜನ ನಾಲ್ಕು ದಿಕ್ಕು. Driver ಪಕ್ಕದಲ್ಲಿ ರಾಜಾರಾಂ ಇದ್ದರಂತೆ, ಹಿಂದೆ 3 ಜನ. ಚಂದ್ರು ಕಿವಿ ಹರಿದಿತ್ತು. ಏಟುಗಳು, ರಾಜಾರಾಂಗೆ ಹಣೆಯಲ್ಲಿ ರಕ್ತ, ಏಟುಗಳು. ರಾಮಕೃಷ್ಣನಿಗೆ ಗಾಯಗಳು. ಶ್ರೀನಿವಾಸ ಮೇಸ್ತ್ರಿಗೂ ಮೂಗೇಟುಗಳು. ರಕ್ತ ಸೋರುವ ಹಾಗೆ ಹರಿದ ಕಿವಿ ಹಿಡಿದು ವಿಕ್ಟೋರಿಯಾ ಆಸ್ಪತ್ರೆಯ ಮಹಾಬೋಧಿ ಅಪಘಾತ ಕೇಂದ್ರಕ್ಕೆ ಹೋಗಿ, ಹೊಲಿಗೆ ಹಾಕಿಸಿಕೊಂಡು, ಮೈನಡುಗುವ ಜ್ವರ, ಏಟುಗಳ ನೋವು, ಮನೆಗೆ ಹೋಗುವ ಹಾಗಿಲ್ಲ. ಚಾಮರಾಜಪೇಟೆಯಲ್ಲಿದ್ದ ಕಲಾಗಂಗೋತ್ರಿ ರೂಂನಲ್ಲಿ ಮಲಗಿದ್ದು ಬ್ರೆಡ್ಡು

ಹಾಲು ಕುಡಿದು, ಮಾರನೆಯ ದಿನ ಹಾಗೆಯೇ *ಮೋಡಗಳು* ನಾಟಕದ ಪ್ರದರ್ಶನ ಮಾಡಿದೆವು ಅಂದರು. ಎಲ್ಲರದ್ದೂ ಮೂಕವೇದನೆ. ಆದರೆ ನಾಟಕ ಚೆನ್ನಾಗಿ ಬಂತು. ಇಂತಹ ಸಮಯಗಳಲ್ಲೂ ಪ್ರದರ್ಶನದ ಎಲ್ಲಾ ಜವಾಬ್ದಾರಿ ಹೊತ್ತು ರಾಜಾರಾಂ ಅದನ್ನು ನಿಭಾಯಿಸಲೇಬೇಕು. ಪ್ರದರ್ಶನದ ವ್ಯವಸ್ಥೆ ಮತ್ತು ಮೇಳನಾಯಕನ ಪಾತ್ರ ಅವರದ್ದು.

ಕಲಾಗಂಗೋತ್ರಿ ಜನಪ್ರಿಯತೆಯ ಎತ್ತರವನ್ನು ಮುಟ್ಟಿದ್ದು ಬಿ.ವಿ. ರಾಜಾರಾಂ ನಿರ್ದೇಶಿಸಿ ಸಂಘಟಿಸಿದ ಮುಖ್ಯಮಂತ್ರಿ ನಾಟಕದಲ್ಲಿ. ಮೊದಲ ಹಂತದಲ್ಲಿ ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡಿದ್ದ ಟಿ.ಎಸ್. ಲೋಹಿತಾಶ್ವ ಅವರಿಗೆ ಜ್ವರ ಬಂದು, ಚಂದ್ರು ಮುಖ್ಯಮಂತ್ರಿ ಪಾತ್ರ ಮಾಡುವಂತಾಗಿದ್ದು, ಆನಂತರದ ಚಂದ್ರು ಅವರ ಅಭಿನಯ ಶೈಲಿ, ಮಾತಿನ ಚಕಮಕಿ, ಗಾತ್ರ ಎಲ್ಲವೂ ಅವರನ್ನು ಎಂದೂ ಮರೆಯಲಾಗದ ಮಾಜಿಯಾಗದ ಕರ್ನಾಟಕ ಜನತೆಯ ಪ್ರೀತಿಯ ಮುಖ್ಯಮಂತ್ರಿ ಚಂದ್ರು ಎಂದಾಗಿಸಿದ್ದು, ಆನಂತರ ರಾಜಕೀಯದ ಚದುರಂಗದಾಟದಲ್ಲಿ ಗೌರಿಬಿದನೂರಿನ ಕ್ಷೇತ್ರದ ಎಂ.ಎಲ್.ಎ. ಆಗಿದ್ದು, ನಂತರ MLC ಆಗಿದ್ದು ಎಲ್ಲವೂ ಆಶ್ಚರ್ಯದಷ್ಟೇ ಸತ್ಯ. ಕನ್ನಡ ಹವ್ಯಾಸಿ ರಂಗಭೂಮಿಯ ಚರಿತ್ರೆಯಲ್ಲಿ, ಬೇರೆ ಯಾವ ಹವ್ಯಾಸಿ ತಂಡವೂ ಮಾಡದ ದಾಖಲೆಗಳು 'ಮುಖ್ಯಮಂತ್ರಿ' ನಾಟಕದಿಂದ ಮೈಲಿಗಲ್ಲುಗಳಾದವು. ಅತ್ಯಂತ ಬೇಗ ೧೦೦ ಪ್ರದರ್ಶನಗಳನ್ನು ಕಂಡ ನಾಟಕ. ಒಬ್ಬ ಪ್ರತಿಷ್ಠಿತ ವ್ಯಕ್ತಿಯನ್ನು ನಿರ್ಮಿಸಿದ ನಾಟಕ. ಒಬ್ಬ ಚಲನಚಿತ್ರ ತಾರೆಯನ್ನು ಬೆಳಗಿಸಿದ ನಾಟಕ. ಹಿಂದಿ ಮೂಲ ನಾಟಕದ ನಟರು, ನೇಪಥ್ಯ ಕಲಾವಿದರು ಎದುರಿಗೆ ಪ್ರದರ್ಶನ ನೀಡಿ 'ಸೈ' ಎನಿಸಿಕೊಂಡ ನಾಟಕ. ಅಳಿಸಲಾಗದ ಬಿರುದು ಉಳಿಸಿದ ನಾಟಕ. ನೂರಾರು ಪ್ರದರ್ಶನಗಳಿಗೆ 'ಜನಭರಿತ' ಎನಿಸಿ, ಪೋಲೀಸ್ ಲಾಠಿ ಚಾರ್ಜ್ ಆದ ನಾಟಕ. ಹತ್ತಾರು ಸಂಘ ಸಂಸ್ಥೆಗಳಿಗೆ ಸಹಾಯ 'ಪ್ರದರ್ಶನ ನೀಡಿದ' ನಾಟಕ. ಹೀಗೆ ಹತ್ತು ಕೊಂಬುಗಳು *'ಮುಖ್ಯಮಂತ್ರಿ'* ನಾಟಕಕ್ಕೆ. ಅದರ ಹಿರಿಮೆ ಚಂದ್ರು, ರಾಜಾರಾಂಗೆ ಸಲ್ಲಬೇಕು. ಈ ಸಾಧನೆ ನಟರದ್ದು, ನೇಪಥ್ಯದಲ್ಲಿ ದುಡಿದ ನಂಜುಂಡಿ, ಸತ್ಯನಾರಾಯಣ, ಶೆಟ್ಟಿ ಪರೇಶ್, ಮುರಳೀಧರ ಮುಂತಾದವರಿಗೆ ಸಲ್ಲಬೇಕು. ಸಂಸ ಬಯಲು ರಂಗದಲ್ಲಿ ಗೂಟ ನೆಟ್ಟು ರಂಗ ಮಂಚದ ಹಲಗೆ ಹೊಡಿಸಿ ಕಂಭಗಳನ್ನು ಹೂಡೆಸಿ, ತಟಿಗೆ ಚಾಪೆ ಸುತ್ತ ಕಟ್ಟಿಸಿ, ಕಂಬಗಳನ್ನು ನಿರ್ಮಿಸಿ ಕರ್ಟನ್‌ಗಳನ್ನು ಹಾಕಿಸಿ (ದೊಡ್ಡದಾದ 30' x 30' ಎರಡು ಕರ್ಟನ್‌ಗಳನ್ನು ಹೊಲಿಸಿ, ಅಶೋಕಚಕ್ರ ಚಿತ್ರ 12' x 12' ದೊಡ್ಡ ಬ್ಯಾನರ್ ಬರೆಸಿ) ಮುಂದಿನ ಗೇಟಿನವರೆಗೂ ಬ್ಯಾನರ್, ತಳಿರು ತೋರಣ, ಲೈಟ್ಸ್ ಹಾಕಿಸಿ, 8 ದಿನಗಳ ಕಾಲ ಪ್ರತಿದಿನ House Full ಶೋ ನೀಡಿ MGM ಪ್ರೊಡಕ್ಷನ್ ತರಹ ಮೆರೆಸಿದ ನಾಟಕ *ಮುಖ್ಯಮಂತ್ರಿ* ಅಂದಿನ ಕಾಲಕ್ಕೆ ಗಾಬರಿ ಹುಟ್ಟಿಸುವಂತಹ ಬಡ್ಜೆಟ್ ನಾಟಕ ಯಶಸ್ವಿಯಾಯಿತು. ಕಲಾಗಂಗೋತ್ರಿಯ ಕಿರೀಟದ ಗರಿಯಾಯಿತು. ಇದರ ಹಿಂದಿನ ಪೂರ್ಣ ಪರಿಶ್ರಮ ರಾಜಾರಾಂ ಅವರದ್ದು. ಆನಂತರ *'ಮುಖ್ಯಮಂತ್ರಿ'* ಯ ಪ್ರವಾಸ ಪ್ರದರ್ಶನಗಳು. ಭಾರತದ ಮುಖ್ಯಕೇಂದ್ರಗಳಲ್ಲಿ ಪ್ರದರ್ಶನ ನೀಡಿದ್ದೇ ಅಲ್ಲದೆ. ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲೂ ಪ್ರದರ್ಶನ ನೀಡಿ ಸುಮಾರು 300ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕೊಟ್ಟಿದೆ ಕಲಾಗಂಗೋತ್ರಿ. ಇಂತಹ ಅನೇಕ ಹೊರ ಊರಿನ ಪ್ರದರ್ಶನಗಳು ಅಂದರೆ ಪ್ರಯಾಸದ ಪ್ರದರ್ಶನಗಳು. ಈ *ಮುಖ್ಯಮಂತ್ರಿ* ನಾಟಕದ್ದೇ ಒಂದು ದೊಡ್ಡ ಪುಸ್ತಕವಾಗುವಷ್ಟು ಕಥೆ ಘಟನೆಗಳಿವೆ ಎಂದರು. ಈ *'ಮುಖ್ಯಮಂತ್ರಿ'* ನಾಟಕದ ಸಮಯದಲ್ಲಿ

ಪರಿಚಯವಾದದ್ದು ಗಿಬ್ಸ್ ನಾಗರಾಜಮೂರ್ತಿ. ಇದಕ್ಕೂ ಮುಂಚೆ ರಾಜಾಜಿನಗರದ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆಯು ರಾಮಮಂದಿರ ಮೈದಾನದಲ್ಲಿ ನಡೆಸುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದುಡಿಯುತ್ತಿದ್ದ ಶ್ರೀ ನಾಗರಾಜ ಮೂರ್ತಿಯವರ ಸ್ನೇಹವಾಗಿದ್ದರೂ. ಅತ್ಯಂತ ನಿಕಟವಾಗಿ, ಸಹರಂಗ ಕರ್ಮಿಯಾಗಿ ತೊಡಗಿಸಿಕೊಂಡದ್ದು 'ಮುಖ್ಯಮಂತ್ರಿ' ಯಿಂದ, 'ಮುಖ್ಯಮಂತ್ರಿ' ನಾಟಕದ ರಜತ ಪ್ರದರ್ಶನ ಮಲ್ಲೇಶ್ವರಂ ಮೈದಾನದಲ್ಲಿ ನಡೆದು ಸಾವಿರಾರು ಜನರು ಆನಂದಿಸುವಂತಾಯ್ತು. ಇದರಲ್ಲಿ ಮೈಮುರಿದು ದುಡಿದವರೆಂದರೆ ಜುಬ್ಬಿಗ ಪುರುಷೋತ್ತಂ ತಿಳಿ ಸುರೇಶಕುಮಾರ ದಿ ಮ್ಯಾನೇಜರ್ ಕೃಷ್ಣ, ತಿಮ್ಮರಾಜು, ರಾಜಾರಾಂ. ಆ ಸಮಯಕ್ಕೆ ಅವರಲ್ಲಿ ಒಂದು ಸುವೇಗ ಗಾಡಿ ಇತ್ತು. ಅದು ರಸ್ತೆಯಲ್ಲಿ ಓಡಿದ್ದಕ್ಕಿಂತ, ರಾಜಾರಾಂ ಅವರು ಅದನ್ನು ದೂಡಿದ್ದೇ ಜಾಸ್ತಿ. ಮಲ್ಲೇಶ್ವರಂ ಅಸೋಸಿಯೇಷನ್ ಮುಂಭಾಗ ರಂಗ ಸ್ಥಳವೆಂದು ತೀರ್ಮಾನಿಸಿದ ನಂತರ ರಂಗಸ್ಥಳಕ್ಕೆ ಬೇಕಾದದ್ದು ಲಾರಿ ಮಣ್ಣನ್ನು ಹೇರಿಸಿ ತಂದು, ಸುಮಾರು 2-3 ರಾತ್ರಿಗಳು ದುಡಿದು ಸಮತಟ್ಟಾಗಿ ಉಳಿದ ಬೆಳಕು ಧ್ವನಿವ್ಯವಸ್ಥೆ ಮಾಡಿ ಅದ್ಭುತ ಪ್ರದರ್ಶನ ಮಾಡಿದ ಗತ್ತು ಈಗ ನೆನಪು ಮಾತ್ರ. ರಾತ್ರಿ ಗಸ್ತಿನ ಪೊಲೀಸರು ಸುವೇಗ ಗಾಡಿ ನೋಡಿ ಅಲ್ಲೇ ಚಳಿಯಲ್ಲಿ ಮಲಗಿದ್ದ ಅವರನ್ನು ಎಬ್ಬಿಸಿದ್ದು ಮರದ ಮೇಲೆ ಹತ್ತಿ ದೊಡ್ಡ ಪರದೆ ಕಟ್ಟಿದ್ದು ಎಲ್ಲಾ ಹೇಳುತ್ತಾ ಹೋದರೆ ಈಗ ಹೆದರಿಕೆಯಾಗುತ್ತದೆ. ಆದರೂ ಇಷ್ಟು ಸಾಧಿಸಿದ್ದೇವೆ ಎನ್ನುವ ನೆನಪಿನಂಗಳದ ಖುಷಿ ರಾಜಾರಾಂ ಅವರದ್ದು ಮತ್ತು ಅವರನ್ನು ಹತ್ತಿರದಿಂದ ಬಲ್ಲವರದ್ದು. ಇದೆಲ್ಲದರ ಹಿಂದೆ ಕತ್ತೆಯಂತೆ ದುಡಿದು, ಹಣ ಖರ್ಚುಮಾಡಿಕೊಂಡು, ಸಾಲದ ಹೊರೆಯಲ್ಲಿ ಮುಳುಗಿ ತಾಪತ್ರಯಪಡುವ ರಾಜಾರಾಂ, ಅವರ ರಂಗ ಸಂಘಟನೆ ಸಾಧನೆಯನ್ನು ಯಾರೂ ಅಭಿಮಾನದಿಂದ ಮೆಚ್ಚಲೇಬೇಕು. ಏಕಾಂಗಿಯಾಗಿ ಹತ್ತು ಜನರ ಬಳಿ ಸುತ್ತುತ್ತಾ, ಕೆಲಸ ಸಾಧಿಸಿದವರು ರಾಜಾರಾಂ. ನಟರಿಂದಾಗುವ ತೊಂದರೆಗಳು, ವ್ಯವಸ್ಥೆ ಸರಿಯಾಗದಿದ್ದರೆ ಕೆಡುವ ಪ್ರದರ್ಶನಗಳು, ಪ್ರೇಕ್ಷಕರ ಪ್ರತಿಕ್ರಿಯೆ, ಎದುರಿಸಬೇಕಾದ ಪರಿಣಾಮ, ಪತ್ರಿಕೆಗಳ ಕಟು ವಿಮರ್ಶೆ ಜೊತೆಗಾರರ ಮೂದಲಿಕೆಗಳು, ನಿರ್ದೇಶಕರ ಆಜ್ಞೆಗಳು ಇನ್ನೂ ಹತ್ತು ಹಲವು ಮಾತುಗಳನ್ನು ಕೇಳಿ ಸಹಿಸಿಕೊಂಡು ನಡೆದಿದ್ದಾರೆ ರಾಜಾರಾಂ. ಬಡಾವಣಾ ರಂಗಭೂಮಿಯನ್ನು ಆರಂಭಿಸುವುದರಲ್ಲಿ ಶ್ರಮಿಸಿ, ಮಲ್ಲೇಶ್ವರದ ಗೋಖಲೆ ಇನ್ಸ್ಟಿಟ್ಯೂಟಿನಲ್ಲಿ 6 ತಿಂಗಳುಗಳ ಕಾಲ ನಾಟಕ ಪ್ರದರ್ಶನಗಳ ವ್ಯವಸ್ಥೆ, ಪ್ರಚಾರ, ಸಂಘಟನೆ ಮಾಡಿ ಸೇವೆ ಸಲ್ಲಿಸಿದ್ದಾರೆ.

ಹೊಸದೇನಾದರೂ ಮಾಡಬೇಕೆಂಬ ನಿರಂತರ ಚಿಂತನೆಯಿಂದ ಆರಂಭವಾದದ್ದು ಮೂಕಾಭಿನಯ ರಂಗಶಿಬಿರ ಶ್ರೀ ವಿ. ರಾಮಮೂರ್ತಿ ಅವರ ನಿರ್ದೇಶನದಲ್ಲಿ. ಮೊದಲಿಗೆ ದೇಹದ ಅವಯುವಗಳಿಗೆ ವ್ಯಾಯಾಮ, ಕಣ್ಣು - ಮುಖಕ್ಕೆ ವ್ಯಾಯಾಮ. ನಂತರ ಮೂಕಾಭಿನಯದ ಮೊದಲ ಪಾಠಗಳು, ನಂತರ ಒಂದು ಪೂರ್ಣಾವಧಿಯ ಪ್ರದರ್ಶನಕ್ಕೆ ತುಣುಕುಗಳ ಸಿದ್ಧತೆ. ಹೀಗೆ ಸುಮಾರು 90 ದಿನಗಳ ನಿರಂತರ ಶ್ರಮ, ಕಲಿಕೆ, ಸಾಧನೆ ಫಲ ಕೊಟ್ಟಿತು. 'ಮೂಕಿ ಟಾಕಿ' ರಾಜಾರಾಂ ಅವರು ಕೊಟ್ಟ ಹೆಸರು. ಈ ಮೂಕಾಭಿನಯದ ಮೂಕರು ಹೇಗೆ ಟಾಕಿ ಮಾಡುತ್ತಾರೆ ನೋಡಿ ಎನ್ನುವುದು ಅವರ ಆಶಯ. 1980ರ ಜನವರಿ 27-28 ರಂದು ಮೊದಲ ಪ್ರದರ್ಶನ ನೀಡಿದ ನಂತರ ಇದುವರೆಗೆ ಸುಮಾರು ಸಾವಿರ ಪ್ರದರ್ಶನಗಳನ್ನು ಮೀರಿ ಯಶಸ್ಸು ಕಂಡಿದೆ. ಈಗ ಕೇವಲ ಕಲಾಗಂಗೋತ್ರಿ ಕಲಾವಿದರಿಗಷ್ಟೇ ಮೀಸಲಾಗದೆ, ನೂರಾರು ನಟರು ಈ

ತುಣುಕುಗಳನ್ನು ಕಲಿತು ರಾಜ್ಯದ ಎಲ್ಲೆಡೆ ಲೆಕ್ಕವಿಲ್ಲದಷ್ಟು ಪ್ರದರ್ಶನಗಳನ್ನು ನೀಡುತ್ತಿದ್ದಾರೆ. ಈ ಎಲ್ಲದರ ಹಿಂದಿನ ಕೀರ್ತಿ NSD ಪದವೀಧರ, ಭಾರತದಲ್ಲಿ ಹೆಸರಾಂತ ಬೆಳಕು ತಜ್ಞರಾದ, ನಟರಾದ, ಸಂಗೀತಗಾರರಾದ, ನಿರ್ದೇಶಕರಾದ, ಸದಾ ಗುಣಗುಣಿಸುತ್ತಾ ಗುಡುಗುತ್ತಾ, ರಂಗಭೂಮಿಯಲ್ಲಿ ನಿರಂತರವಾಗಿ ದುಡಿಯುತ್ತಿರುವ ಶ್ರೀ ವಿ. ರಾಮಮೂರ್ತಿಯವರದ್ದು. ಈ ಎಲ್ಲದರ ಹಿಂದಿನ ಶ್ರಮ ವ್ಯವಸ್ಥೆ ಸಂಘಟನೆ ಚಿಂತನೆ ರಾಜಾರಾಂ ಅವರದ್ದು. ಇದರ ನಂತರ ಹತ್ತಾರು ಹೊಸ ಹೊಸ ವಿಷಯಗಳ, ಘಟನೆಗಳ, ಮೈಮ್‌ತುಣುಕುಗಳನ್ನು ರಾಜಾರಾಂ ಚಿಂತಿಸಿ ನಿರ್ದೇಶಿಸಿದ್ದಾರೆ. ಕಲಾಗಂಗೋತ್ರಿಯ ರಜತ ರಂಗ ವರ್ಷ 1996ರಲ್ಲಿ ನಡೆಸಿದ ಮೂಕಾಭಿನಯ ಪ್ರದರ್ಶನದಲ್ಲಿ ಸುಮಾರು 50 ಜನ ಕಲಾವಿದರನ್ನು ಬಳಸಿ *'ಇಂಡಿಯಾ'* ಎನ್ನುವ ದೊಡ್ಡ ರೀತಿಯ ಪ್ರದರ್ಶನವನ್ನು ನೀಡಿದ್ದಾರೆ. ಕಲಾಗಂಗೋತ್ರಿ ಮಂಜು ಮೈಮ್‌ಪಟುವಾಗಿದ್ದಾರೆ. ತುರ್ತು ಪರಿಸ್ಥಿತಿ, ಪೇಪರ್ ಸೆನ್ಸಾರ್ ಶಿಕ್ಷೆ, ಹವಾಲಾ, ವಾಹನ ಚಾಲನೆ ನಿಯಮಗಳು, ಮಾಲಿನ್ಯಗಳು, ಯುವಜನ ಸಮಸ್ಯೆ, ಏಡ್ಸ್ ಮುಂತಾದ ಹಲವಾರು ಜನಜನಿತ ಸಮಸ್ಯೆಗಳನ್ನು ಕುರಿತು ಮೂಕಾಭಿನಯ ತುಣುಕುಗಳನ್ನು ರೂಪಿಸಿ ನಿರ್ದೇಶಿಸಿ ಪ್ರದರ್ಶಿಸಿದ್ದಾರೆ. ಹಾಗೆಯೇ ಬೀದಿ ನಾಟಕ ರಚನೆ, ನಿರ್ದೇಶನ, ಅವುಗಳಿಗೆ ಹಾಡು, ನಟನೆ ವ್ಯವಸ್ಥೆ ಸಂಘಟನೆಯನ್ನು ಮಾಡಿದ್ದಾರೆ. ಬಾಲಕಾರ್ಮಿಕ ಪದ್ಧತಿ, ಶಾಲೆ ತಪ್ಪಿಸುವ ವಿದ್ಯಾರ್ಥಿಗಳು, ಹೆಣ್ಣು ಶಿಶು ಸಮಸ್ಯೆ, ಯುವಜನ ಸಮಸ್ಯೆ, ವಾತಾವರಣ ಮಾಲಿನ್ಯ, ವಿದ್ಯೆ, ಕೆಲಸ, ವ್ಯಸನ ಇನ್ನೂ ಮುಂತಾದ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಂತಹ ಸ್ಕಿಟ್ ರೂಪಕಗಳನ್ನು ಸಿದ್ಧಪಡಿಸಿ ನಿರ್ದೇಶಿಸಿ ಪ್ರದರ್ಶಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ರವರ ಮಹಾಕಾವ್ಯ *'ರಾಮಾಯಣ ದರ್ಶನ'* ವನ್ನು ರೂಪಕವನ್ನಾಗಿಸಿ ನಿರ್ದೇಶಿಸಿ ಪ್ರದರ್ಶಿಸಿದ್ದಾರೆ. ಕುವೆಂಪು, ಕೈಲಾಸಂ, ಶ್ರೀರಂಗ, ಸಂಸ ಮುಂತಾದವರ ನಾಟಕ ನಿರ್ದೇಶನದಲ್ಲಿ, ನಟನೆಯಲ್ಲಿ ಸಿದ್ಧಹಸ್ತರಾಗಿದ್ದಾರೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜಾನಪದ, ಅಸಂಗತ, ಆಕಾಶವಾಣಿ, ದೂರದರ್ಶನ, ಚಲನಚಿತ್ರ ಹೀಗೆ ಹತ್ತು ಹಲವಾರು ಮಾಧ್ಯಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಯಶಸ್ವಿ ನಟರೆನಿಸಿದ್ದಾರೆ. ಡಾ|| ಚಂದ್ರಶೇಖರ ಕಂಬಾರರ ನಾಟಕ, ಶ್ರೀ ಗಿರೀಶ್ ಕಾರ್ನಾಡರ ನಾಟಕ, ಶ್ರೀ ಹೆಚ್.ಎಸ್.ಶಿವಪ್ರಕಾಶ್‌ರವರ ನಾಟಕ ಪ್ರಸನ್ನರ ನಾಟಕ, ಡಾ|| ಹೆಚ್.ಎಸ್. ವೆಂಕಟೇಶಮೂರ್ತಿಯವರ ನಾಟಕ, ಡಾ||ಶಿವರಾಮ ಕಾರಂತರ ನಾಟಕ, ಬೇಂದ್ರೆಯವರ ನಾಟಕ ಇನ್ನು ಹತ್ತು ಪ್ರಸಿದ್ಧರ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅವುಗಳಲ್ಲಿ ಕೆಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. *ತುಘಲಕ್, ಯಯಾತಿ, ಬೆರಳಿಗೆ ಕೊರಳ್, ಅಶ್ವತ್ಥಾಮನ್, ಸುಲ್ತಾನ್ ಟಿಪ್ಪು, ಉತ್ತಮ ಪ್ರಭುತ್ವ, ಲೊಳಲೊಟ್ಟೆ, ಹೋಂರೂಲು, ವಿಗಡ ವಿಕ್ರಮರಾಯ, ನೀಗಿಕೊಂಡ ಸಂಸ, ಸಂಸನಾಟಕ ಚಕ್ರ, ಆಷಾಢಭೂತಿ, ಪುರುಷ್, ಪುಷ್ಪರಾಣಿ, ಮಹಿಮಾಪುರ, ಮೃಕಂಡು, ಸಿರಿ ಪುರಂದರ, ಸಿಂಗಿರಾಜ, ಲಕ್ಷಾಪತಿ ರಾಜನ ಕಥೆ, ಹುಲಿಯ ನೆರಳು, ಅಪಕಾರಿಯ ಕಥೆ, ಪರಹಿತ ಪಾಷಾಣ, ಸಂಚಯನ, ಭಾಸನ ಏಕಾಂಕ ನಾಟಕಗಳು, ಶ್ಮಶಾನ ಕುರುಕ್ಷೇತ್ರ, ಕಿಸಗೌತಮಿ, ಜಲಗಾರ, ಅಂಗುಲಿಮಾಲ* ಹೀಗೆ ಅವರು ದುಡಿದ ನಾಟಕಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ರಾಜಾರಾಂ ಅವರು ಮೀರ್ ಸಾದಿಕ್ ಆಗಿ ಸುಲ್ತಾನ್ ಟಿಪ್ಪುನಲ್ಲಿ ನೀಡಿದ ಅಭಿನಯವನ್ನು ಶ್ರೀ ಎಂ. ಪಿ. ಪ್ರಕಾಶ್ ಆದಿಯಾಗಿ ನೂರಾರು ಅಭಿಮಾನಿಗಳು ಇಂದಿಗೂ ಪ್ರಶಂಸಿಸುತ್ತಾರೆ.

ಮುಖ್ಯಮಂತ್ರಿ ಪ್ರವಾಸಗಳು ಅನೇಕ. ಅವುಗಳಲ್ಲಿ ಕೆಲವಂತು ಮರೆಯಲಾಗದ ಮರುಜೀವ ಕೊಟ್ಟ ಯಾತ್ರೆಗಳು. ಒಂದು ಮೆಟಡಾರ್‌ನ ಚಕ್ರದ joint ಮುರಿದುಹೋದಾಗ, ಇನ್ನೊಮ್ಮೆ ಹಗರಿಬೊಮ್ಮನಹಳ್ಳಿ ಪ್ರದರ್ಶನ ಮುಗಿಸಿ ವಾಹನದ ಹಿಂಭಾಗ ಚಕ್ರ ನಿಯಂತ್ರಣ ತಪ್ಪಿ ಗುಂಡಿಗಿಳಿದಾಗ, ಸಾಮಾನುಗಳನ್ನು ರಾತ್ರಿ ೧೨ರ ಸುಮಾರಿನಲ್ಲಿ ಹೊತ್ತು, ಬರುತ್ತಿದ್ದ ತುಂಬಿದ್ದ ಹೆಂಡದ ವ್ಯಾನ್‌ನಲ್ಲಿ ತುಂಬಿಕೊಂಡು ರಾತ್ರಿ ೨ರ ಸುಮಾರಿನಲ್ಲಿ ಚಿಗಟೇರಿಯಲ್ಲಿ ಪ್ರದರ್ಶನ ನೀಡಿದ್ದು ಮತ್ತೊಂದು ಬೆಂಗಳೂರಿಗೆ ಹಿಂದಿರುಗುತ್ತಿದ್ದಾಗ ವಾಹನ ನಿಯಂತ್ರಣ ತಪ್ಪಿ, ಮೈಲಿಗಲ್ಲಿಗೆ ಹೊಡೆದು, ಅದು ಉರುಳಿಬಿದ್ದು, ವ್ಯಾನ್ ಅದರ ಮೇಲೆ ಅದೃಷ್ಟವಶಾತ್ ನಿಂತದ್ದು, ವ್ಯಾನಿನ ಮೇಲೆ ಕಟ್ಟಿದ್ದ ಲೈಟ್‌ಗಳು ಹಾಸಿಗೆ, ಸೌಂಡ್‌ಬಾಕ್ಸ್ ಎಲ್ಲವೂ ವ್ಯಾನಿನ ಮೇಲಿದ್ದ Stand ನ ಸಮೇತ ಹಾರಿ, 20-30 ಅಡಿಯ ದೂರಕ್ಕೆ ಬಿದ್ದಿದ್ದು, ಕೇವಲ ಒಂದಿಂಚು ಗಾಡಿ ಅಲುಗಿದ್ದರೆ. ಒಳಗಿದ್ದ 20 ಜನರು ಟಿನ್ ಸುತ್ತಿದಂತಾಗಿ ಯಾತ್ರೆ ಹೋಗುವುದು ತಪ್ಪಿದ್ದು, ದಾವಣಗೆರೆಯ ಡಿಸೆಂಬರ್ 31ರ ರಾತ್ರಿಯ ಪ್ರದರ್ಶನ ಆಗದೆ, ನಡೆದ ಸಿದ್ಧತೆ, ಜನರ ಗಡಿಬಿಡಿ, ಕಲಾವಿದರ ಹುಡುಕಾಟ, ರಾತ್ರಿ ರಾತ್ರಿ ಮದರಾಸಿಗೆ ರಾಜಾರಾಂ, ಮಂಜು ಹೋಗಿ ಅಲ್ಲಿ ಚಿತ್ರೀಕರಣದಲ್ಲಿದ್ದ ಮುಖ್ಯಮಂತ್ರಿ ಚಂದ್ರುರನ್ನು ಕರೆದುಕೊಂಡು ಬಂದು, ಮಾರನೇ ದಿನ ಪ್ರದರ್ಶನ ನೀಡಿದ್ದು, ಶ್ರೀ ಕೃಷ್ಣಗೌಡರು ಗೋವಾದಲ್ಲಿ ಚಂದ್ರು ಹುಡುಕಿದ್ದು, ಹೆಗಡೆ, ವಾಸು, ಅಶೋಕ ಉಳಿದ ನಟ ನಟಿಯರ ಸಾಮಾನು ಸರಂಜಾಮುಗಳ ವ್ಯವಸ್ಥೆ ಮಾಡಿದ್ದು, ಭದ್ರಾವತಿಯಲ್ಲಿ ಸುರೇಶ ಅವರ ಆಹ್ವಾನದ ಮೇಲೆ ಎರಡು ಬಾರಿ ಪ್ರದರ್ಶನ ಕೊಡಲು ಸಿದ್ಧಮಾಡಿಕೊಂಡರು. ಪ್ರದರ್ಶನ ಭಾರಿ ಮಳೆ ಗಾಳಿಗಳಿಂದ ಇತರ ತೊಂದರೆಯಿಂದ ಆಗದೇ ಇದ್ದದ್ದು. ಅಂದಿನ ಮಳೆ ರಭಸಕ್ಕೆ ಬಯಲಿನಲ್ಲಿ ನಿರ್ಮಿಸಿದ್ದ ವೇದಿಕೆ, ಅದರ ಸುತ್ತಲಿನ ತಗಡುಗಳು, ಹಾಳೆಗಳಂತೆ, ಗಾಳಿ ಮಳೆಗಳಿಂದ ಹಾರಿ ಕಿಲೋಮೀಟರ್ ಆಚೆಗೆ ಬಿದ್ದದ್ದು. ಓಹ್, ಒಂದೆ ಎರಡೇ ಇಂತಹ ನೂರಾರು ತೊಂದರೆಗಳನ್ನು ಅನುಭವಿಸಿ ಚಿಂತಾಕ್ರಾಂತರಾಗಿದ್ದಾರೆ ರಾಜಾರಾಂ. ಈ ಎಲ್ಲದರ ಒತ್ತಡ, ಸೋಲು, ಹಣದ ಖರ್ಚು, ಸಾಲಗಳ ನಡುವೆಯು ಅವರಿಗೆ ಕಲಾಗಂಗೋತ್ರಿ ತಂಡದ ನಟರು ನೇಪಥ್ಯದಲ್ಲಿ ದುಡಿದ ಸ್ನೇಹಿತರು ಜೊತೆಯಲ್ಲಿ ನಿಂತಿದ್ದಾರೆ, ನೋವು ಉಂಡಿದ್ದಾರೆ, ಹಾಗೆಯೇ ನಲಿದಿದ್ದಾರೆ. ಅದಕ್ಕಾಗಿ ಆ ಎಲ್ಲಾ ಕಲಾವಿದರ ವೃಂದವನ್ನು ರಾಜಾರಾಂ ಅವರು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಶ್ರೀಮತಿ ಭಾರ್ಗವಿ ನಾರಾಯಣ್, ಸುಜಾತಾ, ಗಾಯಿತ್ರಿ, ಸುಧಾ, ಶ್ರೀಮತಿ ಮಾಲತಿ ಸುಧೀರ, ಶ್ರೀ ನಂಜುಂಡಯ್ಯ, ಮಾಧವರಾವ್, ಕಿಟ್ಟಿ, ಚಂದ್ರಮೋಹನ್ ಸುಬ್ರಹ್ಮಣ್ಯ ಶಾಸ್ತ್ರಿ, ಶಂಕರ್, ವಿನಾಯಕ ಪ್ರಸಾದ್, ಗಾಂಧೀ, ರಾಜೇಂದ್ರ, ರಾಮಮೂರ್ತಿ (ಗಮ್ಮು) ಬಿ. ವಿ. ಪುರುಷೋತ್ತಂ, ಎಂ. ಎಸ್. ವಿದ್ಯಾ ಇನ್ನೂ ಹಲವಾರು ಗೆಳೆಯರನ್ನು ಮರೆಯುವ ಹಾಗೇ ಇಲ್ಲಾ ಎನ್ನುತ್ತಾರೆ ರಾಜಾರಾಂ.

NSD ಪದವೀಧರ ಸುರೇಂದ್ರನಾಥರವರು ಕಲಾಗಂಗೋತ್ರಿಗೆ ನಿರ್ದೇಶಿಸಿದ ನಾಟಕಗಳ ನೋಬೆಲ್ ಪ್ರಶಸ್ತಿ ವಿಜೇತ ಡೇರಿಯೋಫೋನ 'ಒಂದು ಆಕಸ್ಮಿಕ ಸಾವು' ಸಂಕೇತ್ ತಂಡದಲ್ಲಿ ಮೊದಲ ಪ್ರಯೋಗ. ದಿ|| ಶಂಕರ್‌ನಾಗರವರ ಆತ್ಮೀಯ ಒಡನಾಟ, ಜಗದೀಶ ಮಲ್ನಾಡ್ ತಿಂಡಿ ವ್ಯವಸ್ಥೆ ಇಂದಿಗೂ ಮೆಲುಕು ಹಾಕುತ್ತಾ, ಸಿಹಿ ನೆನಪುಗಳು ಎನ್ನುತ್ತಾರೆ ರಾಜಾರಾಂ. ಇನ್ನೊಂದು ಅಮೇರಿಕಾದ ರಿಜಿನಾಲ್ಡ್ ರೋಸರವರ *12 Angry Men* ನಾಟಕ ಅನುವಾದ,

ನಿರ್ದೇಶನ ಸುರೇಂದ್ರನಾಥ್. ನಾಟಕ *ಈ ಮುಖದವರು*. ದಿ|| ಸತ್ಯಸಂಧನ ನೆನಪು ಎದೆ ತುಂಬಿ ಬರುವುದು ರಾಜಾರಾಂ ಅವರಿಗೆ. ಸತ್ಯ, ಅದ್ಭುತ ನಟ, ಪಾತ್ರದ ತುಂಬಾ ತುಂಬಿಕೊಂಡು, ಪ್ರೇಕ್ಷಕರನ್ನು ತಲ್ಲಣಿಸುವಂತೆ ಮಾಡುವ ಮಾಂತ್ರಿಕ ನಟ. ಸತ್ಯಸಂಧ *ಈ ಮುಖದವರಲ್ಲಿ* ಒಬ್ಬ. 10 ಜನ ಘಟಾನುಘಟಿ ನಟರನ್ನು ಹೊಂದಿದಂತಹ ಅದ್ಭುತವಾದ ನಾಟಕ ಹತ್ತಾರು ಯಶಸ್ವೀ ಪ್ರದರ್ಶನ. ಆಗಸ್ಟ್ ಸ್ಟ್ರಿಂಡ್‌ಬರ್ಗ್‌ನನ್ನು ಮೊದಲ ಬಾರಿಗೆ ರಂಗಕ್ಕೆ ತಂದ ಕೀರ್ತಿ ಕಲಾಗಂಗೋತ್ರಿಯದು ಆತನ ಮಿಸ್‌ಜೂಲಿ ನಾಟಕದ ಪ್ರದರ್ಶನದಿಂದ (ನಿ: ಕೆ.ಆರ್.ಸುಧೀಂದ್ರ ಶರ್ಮರವರದು) ಸಮಯದಲ್ಲಿಯೇ 1984 ಅಕ್ಟೋಬರ್ ತಿಂಗಳಿನ 4 ವಾರಗಳಲ್ಲಿ ಸುಮಾರು 6 ನಾಟಕಗಳ 20 ಪ್ರದರ್ಶನ ಮತ್ತು ಮೂಕಾಭಿನಯ ಕಾರ್ಯಕ್ರಮ. ಕನ್ನಡದ ಖ್ಯಾತ ನಾಟಕಕಾರರಾದ ಶ್ರೀರಂಗರು ಕಾಲವಾಗಿದ್ದು, ಭಾರತದ ಹೆಮ್ಮೆಯ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಕಾಲವಾಗಿದ್ದು, ಆಗಲೇ ಮತ್ತೆ ಜನವರಿ 7, 8, 9, 1987ರಲ್ಲಿ '*ಈ ಮುಖದವರು*' ನಾಟಕವನ್ನು ಪ್ರೇಕ್ಷಕರ ಒತ್ತಾಯದ ಮೇರೆಗೆ, ನಟರ ಒಂದುಗೂಡಿಕೆಯ ಮೇರೆಗೆ ಪ್ರದರ್ಶನ ಏರ್ಪಾಟ್ಟಾಗಿ 7,8 ರಂದು ಮರೆಯಲಾಗದ ನಟನೆಯನ್ನು ನೀಡಿದ ಸತ್ಯಸಂಧ, ಜನವರಿ 9ರಂದು ಹೃದಯಾಘಾತದಿಂದ ತೀರಿಹೋದ. ಕಲಾಗಂಗೋತ್ರಿಯ ಕೊರಗು, ಹವ್ಯಾಸಿ ರಂಗದ ಗೆಳೆಯರ ನೋವು ಹೇಳಲಾಗದು. ಸತ್ಯನ ಅಗಲಿಕೆ ಅಷ್ಟು ದಾರುಣವಾಗಿ ಹೃದಯ ತಟ್ಟಿತ್ತು. ಸತ್ಯಸಂಧನ ಹೆಸರಿನಲ್ಲಿ, ಆಗಷ್ಟೆ ಆರಂಭಗೊಂಡಿದ್ದ ಜ್ಞಾನಭಾರತಿ ಕಾಲೇಜು ರಂಗ ಸ್ಪರ್ಧೆಗಳಲ್ಲಿನ ಎಲ್ಲಾ ನಾಟಕದಲ್ಲಿ ೨೪ ಜನ ಪ್ರತಿ ಉತ್ತಮ ನಟನಿಗೆ ನೆನಪು ಪ್ರಶಸ್ತಿ ನೀಡಿ ಸ್ಮರಿಸಿದ್ದು ಇನ್ನೂ ಹಸಿ ಹಸಿಯಾಗಿಯೇ ಉಳಿದಿದೆ ರಾಜಾರಾಂ ಅವರಲ್ಲಿ. ಹಾಗೆಯೇ ಸಿ.ಜಿ.ಕೆ.ಯ ೧೫೦ ದಿನಗಳ ರಂಗ ನಿರಂತರದ ರಂಗಸ್ಥಳಕ್ಕೆ ಸತ್ಯಸಂಧನ ಹೆಸರಿಟ್ಟಿದ್ದು, ಅದರಲ್ಲಿ ರಾಜಾರಾಂ, ಪಾಲ್ ಸುದರ್ಶನರವರ *ಸುಣ್ಣ ಹಚ್ಚಿದ ಸಮಾಧಿಗಳು* ನಾಟಕವನ್ನು ನಿರ್ದೇಶಿಸಿದ್ದು ಸುಧೀಂದ್ರರವರ ಅದ್ಭುತ ನಟನೆಯ ಮೋಡಿ ಜನರನ್ನು ಸೆರೆಹಿಡಿದಿದ್ದು ಈಗ ನೆನಪು ಮಾತ್ರ. ಆ ನಂತರದಲ್ಲಿ ೯೦ರಲ್ಲಿ ಎಲ್.ಎಸ್.ಸುಧೀಂದ್ರ ಗತಿಸಿದ್ದು ಮತ್ತೊಂದು ದುರಂತ. ರಾಜಾರಾಂ ಅವರನ್ನು ನಟಭಯಂಕರನೆಂದೆ, ಕರೆಯುತ್ತಿದ್ದ ಟಿ.ಎನ್. ನರಸಿಂಹನ್ ತೀರಿಕೊಂಡದ್ದು ಅವರಿಗೆ ಭರಿಸಲಾಗದ ನಷ್ಟ, ಹೀಗೆ ಸತ್ಯ, ಸುಧೀ, ನರಸಿಂಹ ಅವರೊಂದಿಗೆ ರಾಜಾರಾಂ ಅವರ ರಂಗಗುರುಗಳಾಗಿದ್ದ ಪದ್ದಣ್ಣನವರು ಕಾಲವಾಗಿದ್ದು, ಅವರಿಗೆ ನಿರ್ದೇಶಿಸಿದಂತಹ ರಂಗ ಧ್ವನಿ ನಟನೆ, ತಿದ್ದಿದಂತಹ ಬಿ.ಸಿ.ದಂತಹ ಪ್ರೊ|| ಬಿ. ಚಂದ್ರಶೇಖರರವರು ಕಾಲವಾಗಿದ್ದು, ಅವರ ಈ ಕೆಲವು ವರ್ಷಗಳ ರಂಗ ಜೀವನದಲ್ಲಿ ಘಟಿಸಿದಂತಹ ದುರಂತಗಳು. 1996ನೇ ವರ್ಷದಲ್ಲಿ ಕಲಾ ಗಂಗೋತ್ರಿಯ ರಜತ ರಂಗ ವರ್ಷವನ್ನು ಪದ್ದಣ್ಣನವರ ನೆನಪಿನಲ್ಲಿ ನಡೆಸಿದರು. ಈಗ ಸಂಸ್ಥೆಯ 30ನೇ ವರ್ಷವನ್ನು ಹಿರಿಯ ನಿರ್ದೇಶಕ ಪ್ರೊ|| ಬಿ.ಸಿಯವರ ನೆನಪಿನ ವರ್ಷವಾಗಿ ಆಚರಿಸುತ್ತಿದ್ದಾರೆ. ಪದ್ದಣ್ಣನವರ ನೆನಪಿಗೆ ಬಿ.ಸಿ.ಯವರ ನೆನಪಿಗೆ, ರಂಗ ಕಲಾವಿದರಿಗೆ ನೇಪಥ್ಯ ತಂತ್ರಜ್ಞರಿಗೆ ಗೌರವ ನಮನ ಸಲ್ಲಿಸಿ ಪ್ರಶಸ್ತಿಗಳನ್ನು ನೀಡುತ್ತಿದ್ದಾರೆ. ಬಿ.ಸಿ. ಅವರ 60 ವರ್ಷ ತುಂಬಿದ ಸಂದರ್ಭದಲ್ಲಿ ಅವರು ರಚಿಸಿದಂತಹ '*ಸಂಚೆಯುನ*' ನಾಟಕವನ್ನು ಕಲಾಗಂಗೋತ್ರಿ ಪ್ರಕಟಣೆ ಮಾಡಿತು. ಆನಂತರ ಕಲಾಗಂಗೋತ್ರಿಯ ಸಕ್ರಿಯ ಸ್ಥಾಪಕ ಸದಸ್ಯ, ಶ್ರೀ ಬಿ.ಕೆ.ನಂಜುಂಡಪ್ಪ. ಆ ಆಶಯವನ್ನು ಮುಂದುವರೆಸಿ, ಅವರ ಭಾಗ್ಯಲಕ್ಷ್ಮಿ ಪ್ರಕಾಶನದ ವತಿಯಿಂದ ಪ್ರೊ|| ಬಿ.ಸಿ.ಯವರ ಎಲ್ಲಾ ನಾಟಕಗಳನ್ನು ಪ್ರಕಟಿಸಿದ್ದಾರೆ. 1250 ಪುಟಗಳ ಗೌರವ

ಗ್ರಂಥ ಹೊರತರುವ ಗುರುಕಾಣಿಕೆಯ ಸಂಕಲನ ಮುದ್ರಣದ ಕಾರ್ಯಭಾರ ಈಗ ರಾಜಾರಾಂ, ನಂಜುಂಡಪ್ಪನವರ ಹೆಗಲ ಮೇಲಿದೆ. ಅದರ ತಯಾರಿ ನಡೆದಿದೆ.

ರಾಜಾರಾಂ ಅವರ ರಂಗ ಸಾಧನೆ-ಸಿದ್ಧಿಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಅವರನ್ನು 1987-90 ರ ಅವಧಿಗೆ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರನ್ನಾಗಿ ನೇಮಿಸಿತು. ಆಗ ಅಕಾಡೆಮಿಯ ಅಧ್ಯಕ್ಷರು ಶ್ರೀ ಬಿ.ವಿ. ವೈಕುಂಠರಾಜುರವರು. ಅಂದಿನ ಸದಸ್ಯರುಗಳ ದಕ್ಷತೆ, ಹೊಸ ಹೊಸ ಕಾರ್ಯಕ್ರಮದ ಯೋಜನೆಗಳು, ಶ್ರೀ ವೈಕುಂಠರಾಜುರವರ ಪ್ರಾಮಾಣಿಕ ಪರಿಶ್ರಮ ಇದನ್ನು ಇಂದಿಗೂ ರಾಜಾರಾಂ ಮರೆಯದೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆ ಸದಸ್ಯರ ಪಟ್ಟಿಯಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿ ದುಡಿದಿದ್ದೇನೆ. ಆಗ ರೂಪಿಸಿದ ಯೋಜನೆಗಳಲ್ಲಿ ಮಹತ್ತರವಾದದ್ದು, ರಾಜಾರಾಂರವರ ರಂಗಕಾಳಜಿಗೆ ಕನ್ನಡಿ ಹಿಡಿಯುವಂಥಾದ್ದು ಎಂದರೆ ಕಾಲೇಜು ವಿದ್ಯಾರ್ಥಿಗಳಿಗಾಗಿ ಆರಂಭವಾದ ಜ್ಞಾನಭಾರತಿ ಪರ್ಯಾಯ ಪಾರಿತೋಷಕ ರಂಗ ಸ್ಪರ್ಧೆಗಳು. ಇದರ ರೂವಾರಿ ರಾಜಾರಾಂ. ನಂತರ ಜೊತೆಗೂಡಿ ಇಂದಿನವರೆಗೂ ನಡೆಸುತ್ತಿರುವ ಭಾರತ ಯಾತ್ರಾ ಕೇಂದ್ರಕ್ಕೆ ಅದರ ಪದಾಧಿಕಾರಿಗಳಾದ ಶ್ರೀ ಬಿ.ಎಲ್. ಶಂಕರರವರಿಗೆ, ನನಗೆ ಮತ್ತು ಶ್ರದ್ಧೆಯಿಂದ ದುಡಿಯುವ ಯುವ ರಂಗಕರ್ಮಿಗಳಿಗೆ ರಾಜಾರಾಂ ತಮ್ಮ ಅಪಾರ ಗೌರವವನ್ನು ಅರ್ಪಿಸುತ್ತಾರೆ. ಅಂದು ನಾಟಕ ಸ್ಪರ್ಧೆಯಾಗಿದ್ದು, ಇಂದು ೧೩ ವರ್ಷಗಳ ನಂತರ ಕಾಲೇಜು ರಂಗೋತ್ಸವವಾಗಿ ಹೊಸ ಚೈತನ್ಯವನ್ನು ತುಂಬಿ, ಕಾಲೇಜು ರಂಗ ಕಟ್ಟಿ, ಹವ್ಯಾಸಿ ರಂಗಕ್ಕೆ ಹೊಸ ಪ್ರತಿಭೆಗಳು ಬರುತ್ತಿರುವುದನ್ನು ಕಂಡು ಧನ್ಯತೆಯನ್ನು ಕಾಣುತ್ತಾರೆ. 'ನಾಗರಾಜಮೂರ್ತಿಗಳೆ, ನಿಜಕ್ಕೂ ನೀವು ಅಸಾಧ್ಯವಾದದನ್ನು ಸಾಧಿಸಿದ್ದೀರಿ. ಕೇವಲ ಕರ್ನಾಟಕದಲ್ಲೇ ಅಲ್ಲಾ ಇಡೀ ಭಾರತದಲ್ಲೇ ಇಂತಹ ಯುವಜನ ರಂಗೋತ್ಸವದ ಹಬ್ಬ ಎಲ್ಲೂ ನಡೆಯುವುದಿಲ್ಲ. ಅದು ನಿಮ್ಮೆಲ್ಲರ ಸಾಧನೆ' ಎಂದು ಮುಕ್ತ ಕಂಠದಿಂದ ಪ್ರಶಂಸಿಸುತ್ತಾರೆ. ಅಕಾಡೆಮಿಯ ೩ ವರ್ಷಗಳ ಅವಧಿಯಲ್ಲಿ ರಂಗ ಚೈತ್ರೋತ್ಸವ, ಜ್ಞಾನಭಾರತಿ ಸ್ಪರ್ಧೆಗಳು, ರಂಗ ತರಬೇತಿ ಶಿಬಿರಗಳು, ನಗರ ಹವ್ಯಾಸಿ ರಂಗಭೂಮಿ ೫೦ ವರ್ಷ ವಿಚಾರ ಸಂಕಿರಣ, ನಾಟಕ ಪ್ರದರ್ಶನ, ರಂಗತಂಡಗಳ ಮಾಹಿತಿ ಪ್ರದರ್ಶನ, ಇನ್ನೂ ಮುಂತಾದ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಶ್ರಮವಹಿಸಿ ದುಡಿದಿದ್ದಾರೆ ರಾಜಾರಾಂ.

ರಾಜಾರಾಂ ಅವರ ಶ್ರಮ ಸಾಧನೆ ಸಿದ್ಧಿ ಸಂಘಟನೆ ಚಿಂತನೆ ಇನ್ನೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಯುತ್ತಿದೆ. ಅವೆಂದರೆ ಕಲಾಚಿಂತನ, ಕಲಾ ಮೈತ್ರಿ ಕೂಟ, ನೀನಾಸಂ ತಿರುಗಾಟದ ನಾಟಕ ಪ್ರದರ್ಶನಗಳ ವ್ಯವಸ್ಥೆ, ಬೇರೆ ರಂಗ ತಂಡಗಳಿಗೆ, ಸಂಸ್ಥೆಗಳಿಗೆ, ಬ್ಯಾಂಕ್ ಸಿಬ್ಬಂದಿಗಳಿಗೆ, ಸರ್ಕಾರಿ ಇಲಾಖೆಗಳಿಗೆ, ಸಾರ್ವಜನಿಕರಿಗೆ, ಕಾಲೇಜುಗಳಿಗೆ ರಂಗತರಬೇತಿ ಶಿಬಿರಗಳು, ರಂಗ ನಾಟಕ ನಿರ್ದೇಶನ, ಸಂಘಟನೆ ವ್ಯವಸ್ಥೆ ಇವುಗಳನ್ನು ರೂಢಿಸಿ, ಮುಂದುವರೆಯುವಂತೆ ಮಾಡಿದ್ದಾರೆ. ಹತ್ತು ಕಡೆ ಸ್ನೇಹಿತರ ಜೊತೆಯಲ್ಲಿ ಕೂಡಿ, ಹತ್ತಾರು ವರ್ಷಗಳ ಕಾಲ ಆ ಸಂಸ್ಥೆಗಳು ನಾಟಕ ಪ್ರದರ್ಶನ ನೀಡುವಂತೆ, ಪ್ರೇರೇಪಿಸಿದ್ದಾರೆ, ಪ್ರೋತ್ಸಾಹಿಸಿದ್ದಾರೆ. ಸಂಘಟಿಸಿದ್ದಾರೆ ನಿರ್ದೇಶಿಸಿದ್ದಾರೆ. ಯೂನಿಯನ್ ಬ್ಯಾಂಕ್‌ನ ಚೇತನ ಕನ್ನಡ ಸಂಘ, ರಾಜಾಜಿನಗರದ ಆರ್.ಟಿ.ಓ. ಕಛೇರಿ ಸಿಬ್ಬಂದಿ, ವಿವಿಎಸ್ ಸಂಸ್ಥೆಯ ವಿದ್ಯಾರ್ಥಿ ವೃಂದ,

ಕ್ರೈಸ್ತ ಕಾಲೇಜಿನ ವಿದ್ಯಾರ್ಥಿ ವೃಂದ, ಕೃಷಿ ಕಾಲೇಜು ವಿದ್ಯಾರ್ಥಿ ವೃಂದ, ವಾಸವಿ ಯುವ ಜನ ಬಳಗ, ಮೈಸೂರು ಬ್ಯಾಂಕ್ ಕನ್ನಡ ಬಳಗದ ಮಕ್ಕಳ ಶಿಬಿರ, ಅಂತರಂಗ ತಂಡ, ಜನಪದ ತಂಡ, ಮೈಕೊ ಕಾರ್ಮಿಕ ತಂಡಗಳು, ಮೈಕೊ ಲಲಿತ ಕಲಾ ಸಂಘಕ್ಕೆ, ಭಾರತೀಯ ವಿದ್ಯಾಭವನದ ಕೂರ್ಗ್ ಫೌಂಡೇಶನ್ ಶಿಬಿರ, ನ್ಯಾಷನಲ್ ಕಾಲೇಜ್ ವಿದ್ಯಾರ್ಥಿ ವೃಂದದ ಶಿಬಿರ, ಪ್ರಯೋಗ ರಂಗ ತಂಡಕ್ಕೆ NIMHANS ಕನ್ನಡ ಸಂಘಕ್ಕೆ ಚಿತ್ತಾರ ತಂಡ, ಆಯುರ್ವೇದ ಕಾಲೇಜು ವಿದ್ಯಾರ್ಥಿ ವೃಂದಕ್ಕೆ ಹೀಗೆ ಇನ್ನೂ ಹಲವಾರು ಸಂಸ್ಥೆಗಳಿಗೆ ದುಡಿದಿದ್ದಾರೆ. ರಮಣ ಮಹರ್ಷಿ ಸೆಂಟರ್ ಬ್ಯಾಲೆಗಳಿಗೆ ಬೆಳಕಿನ ವಿನ್ಯಾಸಕರಾಗಿ ದುಡಿದ್ದಾರೆ. ಮಹತ್ವದ ಪಾತ್ರಗಳಿಗೆ ಮತ್ತು ಕೇಂದ್ರ ಸರ್ಕಾರದ 'ಕರ್ನಾಟಕ ವೈಭವ ಧ್ವನಿ ಬೆಳಕು 'ದೃಶ್ಯ' ನಾಟಕಕ್ಕೆ ಕಂಠದಾನ ಮಾಡಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದಲ್ಲಿ ಸುಮಾರು ೧೫ ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ದುಡಿಯುತ್ತಿದ್ದಾರೆ. ಅಲ್ಲಿನ ವಿದ್ಯಾರ್ಥಿಗಳಿಗೆ ರಂಗ ಶಿಕ್ಷಣದ ಬೋಧನೆ ಮಾಡುತ್ತಿದ್ದಾರೆ. ಹೊರದೇಶಗಳಿಂದ ಬಂದ ರಂಗ ತಂಡಗಳಿಗೆ ನೇಪಥ್ಯದ ಕೆಲಸ ಕಾರ್ಯಗಳಲ್ಲಿ ನೆರವಾಗಿದ್ದಾರೆ. ಐ.ಸಿ.ಸಿ.ಆರ್. ರಷ್ಯಯನ್ ಉತ್ಸವ, ಷೇಕ್ಸಪಿಯರ್ ಕಂಪನಿ ನಾಟಕಗಳು ಅಮೇರಿಕದ ತಂಡದ ನಾಟಕಗಳು, SAARC ದಕ್ಷಿಣ ಉತ್ಸವ, ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಕನ್ನಡ ಸಮಾವೇಶ, ಅಧಿವೇಶನಗಳು, ಕರ್ನಾಟಕಾಂದ್ಯತ ನಡೆದ ಉತ್ಸವಗಳು ಹೀಗೆ ಹಲವಾರು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ದುಡಿದಿದ್ದಾರೆ. ವಿಶೇಷವಾಗಿ ತರಗತಿಯಲ್ಲಿ ಬೋಧಿಸುವ ಪಠ್ಯಗಳನ್ನು ರಂಗಾಂಶಗಳಿಂದ ಕೂಡಿಸಿ, ಸಮರ್ಥವಾಗಿ ಸಂವಹನ ಮಾಡುವ ತರಬೇತಿ ಶಿಬಿರಗಳಲ್ಲಿ, ಶಿಕ್ಷಕರ ತರಬೇತಿ ಕೇಂದ್ರಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ದುಡಿಯುತ್ತಿದ್ದಾರೆ. ಅನೇಕ ರಂಗ ಲೇಖನ, ಕಿರು ಹೊತ್ತಿಗೆಗಳನ್ನು ಕೈಪಿಡಿಗಳನ್ನು ಬರೆದಿದ್ದಾರೆ. ನಾಟಕ ರೂಪಕ ಕವನಗಳನ್ನು ರಚಿಸಿದ್ದಾರೆ. ಕಲಾಗಂಗೋತ್ರಿಯ ಹೊರೆ ಹೊತ್ತು ನಡೆಯುತ್ತಿದ್ದಾರೆ.

ರಾಜಾರಾಂ ಅವರು ರಂಗಸಾಧನೆಗಾಗಿ ಮತ್ತಷ್ಟು ಕನಸು ಕಟ್ಟಿಕೊಂಡು ದುಡಿಯುತ್ತಾರೆ. ಅವರ ಯೋಜನೆಗಳು ರಂಗ ಭಂಡಾರ, ರಂಗ ಮಾಹಿತಿ ಕೇಂದ್ರ, ರಂಗನಾಟಕ ಪ್ರತಿಗಳ ಕೇಂದ್ರ, ರಂಗ ಶಿಕ್ಷಣ ಕೇಂದ್ರಗಳು, ರಂಗ ಅಭಿನಯ ನೇಪಥ್ಯ ತರಬೇತಿ ಕೇಂದ್ರಗಳು, ಕೊರೆಯಿರದ ಒಂದು ಮಹತ್ವದ ನಾಟಕದ ಪ್ರದರ್ಶನ, ಅಭಿನಯ, ಪುಸ್ತಕಗಳ ನಾಟಕಗಳ ರಚನೆ. ಆಸೆಗೆ ಅಂತ್ಯವಿಲ್ಲ. ಅವರ ಶರಣುಹೋಗಿರುವ ಭಗವಾನ ಬುದ್ಧರ ಮಾತು 'ಆಸೆಯೇ ದುಃಖಕ್ಕೆ ಮೂಲ.' ಈ ಮಾತು ಸದಾ ಅವರ ಮನದಲ್ಲಿ ರಿಂಗಣವಾಗುತ್ತಿರುತ್ತದೆ. ಹಾಗಾಗಿ ಆದಷ್ಟು ಸಾಧನೆ ಸಿದ್ಧಿ ರಂಗದಲ್ಲಿ.

ಕನ್ನಡ ಸಾಹಿತ್ಯ ಕಲಾ ಸಂಘದ ಗೆಳೆಯರ ಜೊತೆಯಲ್ಲಿ ಅಭಿನಯಿಸಿದ ಭಾಗವಹಿಸಿದ ಹಲವು ನಾಟಕಗಳ ಪ್ರದರ್ಶನಗಳನ್ನು ನೆನೆಯುತ್ತಾರೆ. ನಾಟಕಕಾರ, ನಿರ್ದೇಶಕ, ನಟ, ಶ್ರೀನಿವಾಸ ಪ್ರಭುರವರೊಂದಿಗೆ ಮೊದಲ ನಾಟಕಗಳಾದ *ಬೆಳ್ಳಿ, ಗುಂಡು, ನೆರಳಿಲ್ಲದ ಜೀವಗಳು* ಮತ್ತು *ಅವರ ಓಡನಾಟ*, ದೂರದರ್ಶನದಲ್ಲಿ ಪ್ರಸಾರವಾಗಿ ಕರ್ನಾಟಕದ ಮನೆ ಮಾತಾಗಿರುವ *ಅಜಿತನ ಸಾಹಸಗಳು* ಮಾಲಿಕೆಯಲ್ಲಿನ ಅಜಿತ್ ಪಾತ್ರ ಅವರಿಗೆ ನೆಮ್ಮದಿ ಗೌರವ, ಮನ್ನಣೆ ತಂದುಕೊಟ್ಟಿದೆ. ಅದಕ್ಕಾಗಿ ಶ್ರೀ ಪ್ರಭುರವರಿಗೆ ಕೃತಜ್ಞತೆ ಸಲ್ಲಿಸುತ್ತಾರೆ. ರಾಜಾರಾಂ ಅವರ ರಂಗ ಸಾಧನೆಯನ್ನು

ಗೌರವಿಸಿ ೧೯೯೨ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅಷ್ಟೇ ಅಲ್ಲದೆ ಅನೇಕ ಸಂಘ ಸಂಸ್ಥೆಗಳು ಅವರನ್ನು ಗೌರವಿಸಿದೆ.

ಕಲಾಗಂಗೋತ್ರಿ ತಂಡವಾಗಿ ಮತ್ತು ರಾಜಾರಾಂ ವೈಯಕ್ತಿಕವಾಗಿ ರಂಗ ಚಳುವಳಿಗಳಲ್ಲಿ ಪಾಲ್ಗೊಂಡಿದ್ದಾರೆ. ರಂಗಭೂಮಿ ಕ್ರಿಯಾ ಸಮಿತಿ ಸದಸ್ಯರಾಗಿ ದುಡಿದಿದ್ದಾರೆ. ರವೀಂದ್ರ ಕಲಾಕ್ಷೇತ್ರದ ತಜ್ಞರ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಉತ್ಸವಗಳಲ್ಲಿ ದುಡಿದಿದ್ದಾರೆ. ಯುವಜನ ಮತ್ತು ಕ್ರೀಡಾ ಇಲಾಖೆ ಯೋಜಿಸಿದ್ದ ಶಿಬಿರದಲ್ಲಿ ಸೇವೆ ಸಲ್ಲಿಸಿದ್ದಾರೆ. NSD, RRC ಯ ರಂಗ ಶಿಬಿರದಲ್ಲಿ ಉಪನ್ಯಾಸಕರಾಗಿ ಭಾಗಿಯಾಗಿದ್ದಾರೆ. ಹತ್ತಾರು ಪ್ರತಿಷ್ಠಿತ ರಂಗ ಸ್ಪರ್ಧೆಗಳ ತೀರ್ಪುಗಾರರಾಗಿ, ಸಮರ್ಥವಾಗಿ ಕೆಲಸ ನಿರ್ವಹಿಸಿದ್ದಾರೆ. ಬಹು ಭಾಷಿಯ ನಾಟಕ ಸ್ಪರ್ಧೆಯ ತೀರ್ಪುಗಾರರಾಗಿ ತಮ್ಮ ಜವಾಬ್ದಾರಿ ನಿರ್ವಹಿಸಿದ್ದಾರೆ. ಅವರು ಓದಿರುವುದು ಬಿ.ಕಾಂ., ಎಂ.ಎ., ಕನ್ನಡ ಎಂ.ಎ., ಸಂಸ್ಕೃತ ನಾಟ್ಯಶಾಸ್ತ್ರ ಮತ್ತು ಭಾರತೀಯ ಆಧುನಿಕ ರಂಗಭೂಮಿ ವಿಷಯದಲ್ಲಿ ಎಂ.ಫಿಲ್., ಪಿಹೆಚ್.ಡಿ.

ಈಗ ಕಲಾಗಂಗೋತ್ರಿಯಲ್ಲಿ ಯುವಕರ ಗುಂಪು ದುಡಿಯುತ್ತಿದೆ. ಕಲಾಗಂಗೋತ್ರಿಯ ರಂಗರಥವನ್ನು, ಅದು ಸಿಕ್ಕಿಸಿಕೊಂಡಿರುವ ಯಶಸ್ಸಿನ ಭಾವುಟಗಳೊಂದಿಗೆ ಮತ್ತಷ್ಟು ವರ್ಷ ಕ್ರಿಯಾಶೀಲವಾಗಿರಿಸುವ ಹಂಬಲ ಹೋರಾಟ ರಾಜಾರಾಂ ಅವರದ್ದು. ಈಗ ಯುವಕರಿಗೆ ರಂಗತರಬೇತಿ ನೀಡುವಲ್ಲಿ ಶ್ರಮಿಸುತ್ತಿದ್ದಾರೆ. ಕೆಲವಾರು ಹುಚ್ಚು ಪ್ರದರ್ಶನಗಳ ಕನಸು ಕಲ್ಪನೆ ಹೊಂದಿದ್ದಾರೆ. ಸಾಧ್ಯವಾದರೆ ಅವು ರಂಗದ ಮೇಲೆ ಮೂಡಿ ಬರಬಹುದು ಅನ್ನುತ್ತಾರೆ ಅವರು. ಈಗ ನಾಟ್ಯಶಾಸ್ತ್ರದಲ್ಲಿನ ಅರಿವನ್ನು ಪಡೆಯಲು ಯತ್ನಿಸುತ್ತಿದ್ದಾರೆ. ಕಾರ್ಯಮಗ್ನರಾಗಿದ್ದಾರೆ. ಕೆಲವು ಬೌದ್ಧಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇನ್ನು ಕೆಲವು ತಿಂಗಳುಗಳಲ್ಲಿ ೫೦ ವರ್ಷಕ್ಕೆ ಕಾಲಿಡುತ್ತಾರೆ ರಾಜಾರಾಂ. ಈ ವರ್ಷಗಳಲ್ಲಿ ಅವರಿಗೆ ಕಲಿಸಿದ ಗುರುಗಳಿಗೆ, ಪ್ರೋತ್ಸಾಹಿಸಿದ ಹಿತೈಷಿಗಳಿಗೆ, ಜೊತೆಗೂಡಿ ದುಡಿದ ಸ್ನೇಹಿತರಿಗೆ ಪದ್ದಣ್ಣ, ಬಿ.ಸಿ. ಶಾಸಕ ಚಂದ್ರುಗೆ ತಮ್ಮನ್ನು ಸಲಹಿದ ಪೂಜ್ಯ ಬುದ್ಧರಕ್ಷಿತ ತಂದೆ ತಾಯಿಯರಿಗೆ, ಚಿಕ್ಕಪ್ಪನವರಿಗೆ ತೇಜ, ಅಣ್ಣನಿಗೆ ಹೆಂಡತಿ ಸಂಧ್ಯಾ, ಮಗಳು ಸರಯೂಗೆ ಅತ್ತೆ ಮಾವನವರಿಗೆ ರಂಗ ನಮನಗಳನ್ನು ಸಲ್ಲಿಸುತ್ತಾರೆ ತಮ್ಮ ಈ ಮಾತುಗಳಿಂದ, ನೆನಪುಗಳಿಂದ. ನೂರಾರು ಸ್ನೇಹಿತರು ಸಲಹೆ ಸಹಾಯ ಸಹಕಾರ ನೀಡಿದ್ದಾರೆ. ಸಾಲ ಕೊಟ್ಟಿದ್ದಾರೆ, ನೆರವು ನೀಡಿದ್ದಾರೆ. ಅವರೆಲ್ಲರಿಗೆ ತಮ್ಮ ಧನ್ಯವಾದಗಳನ್ನು ತಿಳಿಸುತ್ತಾರೆ ರಾಜಾರಾಂ. ಜೀವನದ 50 ವರ್ಷಗಳು, ನಡೆದ ಘಟನೆಗಳು, ಜೊತೆಗೂಡಿದ ಸ್ನೇಹಿತರುಗಳು, ಜೀವನ ಯಾತ್ರೆ, ರಂಗಯಾತ್ರೆ, ಹೀಗೆ ನೆನಪುಗಳನ್ನು ಬಿಚ್ಚುತ್ತಾ, ಇಷ್ಟಾದರು ಮಾತುಗಳನ್ನು ಆಡಲು ಅವಕಾಶ ಒದಗಿಸಿದ ನಿಮಗೆ ಮೂರ್ತಿಯವರೇ ಮತ್ತು ಕರ್ನಾಟಕ ನಾಟಕ ಅಕಾಡೆಮಿಗೆ,ಶ್ರೀ ಸಿ.ಜಿ.ಕೆ.ಯವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾರೆ.



# ಪಿ. ಎ. ವೇಣುಗೋಪಾಲರೆಡ್ಡಿ

"ಕನ್ನಡ ರಂಗಭೂಮಿ ಸತ್ವಶಾಲಿಯಾಗಿ ರೂಪುಗೊಳ್ಳಬೇಕೆಂಬ ಆಕಾಂಕ್ಷೆ ನಮ್ಮ ಒಂದು ದಿನದಲ್ಲಾಗುವ ಕಾರ್ಯವಲ್ಲ. ಅಂತಹ ರಂಗಭೂಮಿ ನಿರ್ಮಾಣ ಆಗಬಹುದೆಂಬ ಭರವಸೆಯನ್ನು ಕೈಲಾಸಂ ಹಾಗೂ ಶ್ರೀರಂಗರು ಮಾಡಿ ಪ್ರಾತಃಸ್ಮರಣೆಯರನ್ನಿಸಿದ್ದಾರೆ" ಎಂಬ ತಮ್ಮ ಅಭಿಪ್ರಾಯಗಳನ್ನು ಮುಂದಿಡುತ್ತಾರೆ. ರಂಗಭೂಮಿಯ ಹಿರಿಯ ನಟರೂ, ಸಮರ್ಥ ನಿರ್ದೇಶಕರೂ, ಉತ್ತಮ ಸಂಘಟಕರೂ ಅಲ್ಲದೆ ಕಲಾಜ್ಯೋತಿ ನಾಟಕ ಸಂಸ್ಥೆ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಶ್ರೀಯುತ ವೇಣುಗೋಪಾಲರೆಡ್ಡಿ.

ಕೋಲಾರ ಜಿಲ್ಲೆಗೆ ಸೇರಿದ ಪೆರೇಸಂದ್ರ ಒಂದು ಸುಂದರವಾದ ಹಳ್ಳಿ. ಹಳ್ಳಿಯ ಆಸುಪಾಸಿನಲ್ಲಿ ಹರಿಯುವ ಪಿನಾಕಿನಿ ನದಿಯ ದಡದಲ್ಲಿ ವಿಜಯನಗರದ ರಾಯರು ಕಟ್ಟಿಸಿರುವ ಸಂಗಮೇಶ್ವರ, ಈಶ್ವರ, ಆಂಜನೇಯ ದೇವಾಲಯಗಳಿವೆ. ಗ್ರಾಮದ ಹೆಚ್ಚು ಜನರ ಭಾಷೆ, ತೆಲುಗು, ಕೃಷಿ ಮೂಲ ಕಸುಬು. ಶ್ರೀ ಆವಲಕೊಂಡರೆಡ್ಡಿ ಗ್ರಾಮದ ಪಟೇಲರು, ಭಾರಿ ಜಮೀನುದಾರರು. ಶ್ರೀಮತಿ ಮುನಿವೀರಮ್ಮ ಇವರ ಧರ್ಮಪತ್ನಿ. ಈ ದಂಪತಿಗಳಿಗೆ ಮಗನಾಗಿ ವೇಣುಗೋಪಾಲರೆಡ್ಡಿಯವರು 1928ರಲ್ಲಿ ಜನಿಸಿದರು. ಹುಟ್ಟಿದ ತಿಂಗಳಿಗೆ ತಂದೆಯನ್ನು ಕಳೆದುಕೊಂಡು, ಅಜ್ಜಿಯ ಆಸರೆಯಲ್ಲಿ ದಿನಗಳೆದರು. ವಿದ್ಯಾಭ್ಯಾಸದ ನಿಮಿತ್ತ ತಾಯಿಯೊಡನೆ ಬೆಂಗಳೂರಿಗೆ ಬಂದು ಇಲ್ಲೇ ನೆಲೆಸಿದರು.

ಕಲಿತ ಶಾಲೆಯಲ್ಲಿ ಉತ್ತಮ ವಿದ್ಯಾರ್ಥಿ ಎಂಬ ಪ್ರಶಂಸೆಯೊಂದಿಗೆ, ಒಳ್ಳೆ ಶಾರೀರವಿದ್ದುದರಿಂದ ಉತ್ತಮ ಹಾಡುಗಾರನೆಂದು ಗುರುತಿಸಲ್ಪಟ್ಟರು. ಶಾಲೆಯ ಸಮಾರಂಭ, ವಾರ್ಷಿಕೋತ್ಸವಗಳಲ್ಲಿ ಹಾಡುಗಾರನಾಗಿ ಭಾಗವಹಿಸಿ ಎಲ್ಲರ ಮೆಚ್ಚುಗೆ ಪಡೆದರು. ಸಂಗೀತದ ಹುಚ್ಚು ಶಾಸ್ತ್ರೀಯ ಸಂಗೀತದ ಅಭ್ಯಾಸಕ್ಕೆ ತೊಡಗಿಸಿತು. ರೆಡ್ಡಿಯವರಿಗೆ ಬಾಲ್ಯದಿಂದಲೇ ನಾಟಕ ನೋಡುವ ಗೀಳು. ಗುಬ್ಬಿ ಕಂಪನಿ, ಹಿರಣ್ಣಯ್ಯನವರ ಕಂಪನಿ, ಸುಬ್ಬಯ್ಯ ನಾಯ್ಡು ಕಂಪನಿಯ ನಾಟಕಗಳನ್ನು ತಪ್ಪದೇ ನೋಡುತ್ತಿದ್ದರು. ಈ ಗೀಳು ಮುಂದಿನ ದಿನಗಳಲ್ಲಿ ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಳ್ಳಲು ಮೂಲವಾಯಿತು.

1948ರಲ ಅವಧಿಯಲ್ಲಿ ಕೈಲಾಸಂರ ನಾಟಕ ವಾಚನಗಳಿಂದ ಪ್ರಭಾವಿತರಾಗಿ ಕೈಲಾಸಂರ ಅಭಿಮಾನಿಯಾದರು. ಕೈಲಾಸಂ ನಾಟಕಗಳೊಂದಿಗೆ ಬಿಡಲಾರದ ನಂಟು ಬೆಳೆಯಿತು. ಮಿತ್ರರಾದ ಪಿ. ದೇವರಾಜ್ ಹಾಗೂ ದಿ|| ಎಂ. ವೆಂಕಪ್ಪನವರು ಗೆಳೆಯನಲ್ಲಿದ್ದ ಆಸಕ್ತಿಯನ್ನು ಗುರುತಿಸಿ ಕೈಲಾಸಂ ಅವರ ನಾಟಕಗಳಲ್ಲಿ ಅಭಿನಯಿಸುವಂತೆ ಪ್ರೇರೇಪಿಸಿದರು. ಆದರೆ ಭಾಷೆಯ ಉಚ್ಚಾರಣಾ ಕ್ಲಿಷ್ಟತೆಯಿಂದಾಗಿ ಆರಂಭಕ್ಕೆ ರಾ.ವೆಂ. ಶ್ರೀನಿವಾಸರ "ಪುನರ್ಜನ್ಮ" ನಾಟಕವನ್ನು

ನಿರ್ದೇಶಿಸುವುದರೊಂದಿಗೆ, ತಾವೂ ಪ್ರಮುಖ ಪಾತ್ರ ನಿರ್ವಹಿಸಿದರು. ಎಲ್ಲರ ಪ್ರಶಂಸೆ ಪಡೆದರು. ಇದೇ ಉತ್ಸಾಹದಲ್ಲಿ ರಾ.ವೆಂ. ಶ್ರೀನಿವಾಸರ *ಗಗ್ಗಯ್ಯನ ಗಡಿಬಿಡಿ*, ಪರ್ವತವಾಣಿಯವರ *ಮೀನಾ ಮದ್ವೆ*, *ವಾರ್ಷಿಕೋತ್ಸವ*, ಕ್ಷೀರಸಾಗರ ಅವರ *ಭರಟುಕ್ಕಿ*, *ನಿಶ್ಚಿತಾರ್ಥ*, ಕೈಲಾಸಂ ಅವರ *ಹೋಂ ರೂಲು*, *ಅನುಕೂಲಕ್ಕೊಬ್ಬಣ್ಣ* ನಾಟಕಗಳಲ್ಲಿ ಅಭಿನಯಿಸಿದರು.

ರಂಗಭೂಮಿಯಲ್ಲಿ ವಿಶೇಷವಾದುದ್ದನ್ನು ಸಾಧಿಸಲು ಸಂಘಟನೆ ಅತ್ಯಗತ್ಯ ಎಂದರಿತ ರೆಡ್ಡಿಯವರು 1946ರ ಅವಧಿಗೆ ಗೆಳೆಯರಾದ ಮುಕಂದ, ವೆಂಕಟಪ್ಪ, ಪಿ. ದೇವರಾಜ್ ಅವರೊಡಗೂಡಿ ದಿ|| ಕೆ. ಹನುಮಂತಯ್ಯನವರ ಸಮ್ಮುಖದಲ್ಲಿ ಕಲಾಜ್ಯೋತಿ ಸಂಸ್ಥೆಯನ್ನು ಆರಂಭಿಸಿದರು. ಆರಂಭದ ಪ್ರಯತ್ನವಾಗಿ ದೇಶವಿಭಜನೆ ಸಂದರ್ಭದಲ್ಲಿ ಪಂಜಾಬ್‌ನಲ್ಲಿ ನಡೆದ ದಾರುಣ ಮಾನವ ಹತ್ಯಾ ಸಂತ್ರಸ್ಥರ ಸಹಾಯಾರ್ಥ *ಪುನರ್‌ಜನ್ಮ*, *ನನ್ನ ಗೋಪಾಲ*, *ನಮ್ಮೂರಿನ ಪಕ್ಷಿಮಕ್ಕೆ* ನಾಟಕಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮ ಯಶಸ್ವಿಯಾಗಿ ಇವರ ಉತ್ಸಾಹವನ್ನು ಇಮ್ಮಡಿಗೊಳಿಸಿತು.

ಪ್ರಾರಂಭದಲ್ಲಿ ಕಲಾಜ್ಯೋತಿ ಸಂಸ್ಥೆಗೆ ರೆಡ್ಡಿಯವರು ಖಜಾಂಚಿಯಾಗಿ ನೇಮಕಗೊಂಡು, ಅನಂತರದ ವರ್ಷಗಳಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದರು. (ಇಂದಿಗೂ ಅದೇ ಸ್ಥಾನದಲ್ಲಿ ರಂಗಸೇವೆ ಮಾಡುತ್ತಿದ್ದಾರೆ) ನಾಟಕ ಪ್ರಯೋಗದ ಸಮಸ್ತ ಜವಾಬ್ದಾರಿಯನ್ನು ವಹಿಸಿಕೊಂಡು ಹೆಸರಾಂತ ನಾಟಕಕಾರರ ನಾಟಕಗಳಲ್ಲಿ ಪಾತ್ರವಹಿಸಿ, ಅವುಗಳು ಉತ್ತಮ ಪ್ರದರ್ಶನ ಕಾಣಲು ಕಾರಣರಾದರು. *ಹೋಂರೂಲು*, *ಅಮ್ಮಾವ್ರಗಂಡ*, *ನಮ್ಮ ಬ್ರಾಹ್ಮಣ್ಕೆ*, *ಅನುಕೂಲಕ್ಕೊಬ್ಬಣ್ಣ*, *ತಾಳಿ ಕಟ್ಟೋಕ್ಕೂಲೀನೇ*, *ಸಾತೂ ತೌರ್ಮನೆ*, *ಪಾತೂ ತೌರ್ಮನೆ*, *ಟೊಳ್ಳುಗಟ್ಟಿ*, *ನಂಕಂಪ್ನಿ*, *ಹುತ್ತದಲ್ಲಿ ಹುತ್ತ*, *ಬಂಡ್ವಾಳಿಲ್ಲದ ಬಡಾಯಿ*, *ವೈದ್ಯನ ವ್ಯಾಧಿ*, *ಗಂಡಸ್ಕತ್ರಿ*, *ಪೋಲಿಕಿಟ್ಟಿ*, *ಸೂಳೆ*, *ಸತ್ತವನ ಸಂತಾಪ*, *ನಂಕ್ಲಬ್ಬು* ನಾಟಕ ಪ್ರಯೋಗಗಳು ಸಂಸ್ಥೆಗೆ ಜನಪ್ರಿಯತೆ ತಂದಿತ್ತವು. 1948 ರಿಂದ 1973ರ ತನಕ ಕೈಲಾಸಂ ಅವರ ಎಲ್ಲಾ ನಾಟಕ ಕೃತಿಗಳನ್ನು ಸಮರ್ಥವಾಗಿ ರಂಗಕ್ಕೆ ಅಳವಡಿಸಿದ ಕೀರ್ತಿ ಸಂಸ್ಥೆಯದಾಯಿತು.

ಅಂತೆಯೇ ಕನ್ನಡದ ಮತ್ತೊಬ್ಬ ಮಹತ್ವದ ನಾಟಕಕಾರರಾದ ಪರ್ವತವಾಣಿಯವರ ಬಹುದ್ದೂರ್ ಗಂಡ, ಉಂಡಾಡಿ ಗುಂಡ, ಸುಂದ್ರೋಪಸುಂದ್ರು, ಮೀನಾಮದ್ವೆ, ವಾರ್ಷಿಕೋತ್ಸವ ನಾಟಕಗಳು ಉತ್ತಮ ಪ್ರದರ್ಶನ ಕಂಡವು. ನಾಟಕ ಪರದೆಗಳನ್ನು ಕಟ್ಟುವುದು, ರಂಗಸಜ್ಜಿಕೆ, ನೇಪಥ್ಯ ಸಲಕರಣೆಗಳು, ಬೆಳಕಿನ ವ್ಯವಸ್ಥೆ, ಧ್ವನಿವ್ಯವಸ್ಥೆ ಹೀಗೆ ನಾಟಕ ಪ್ರಯೋಗದ ಎಲ್ಲಾ ವಿಭಾಗಗಳಲ್ಲೂ ಕಾರ್ಯ ನಿರ್ವಹಿಸಿ ಉತ್ತಮ ರಂಗಕರ್ಮಿಯಾಗಿ ರೂಪುಗೊಂಡರು.

ಬೆಂಗಳೂರು ಆಕಾಶವಾಣಿಯವರು ನಡೆಸುತ್ತಿದ್ದ ನಾಟಕೋತ್ಸವಗಳಲ್ಲಿ ಇವರು ಅಭಿನಯಿಸಿದ ನಾಟಕಗಳು ಪ್ರದರ್ಶನಗೊಂಡವು. ದೆಹಲಿಯಲ್ಲಿ ನಡೆದ ಬೇಸಗೆಯ ನಾಟಕೋತ್ಸವದಲ್ಲಿ ಕೈಲಾಸಂ ಅವರ ನಾಟಕವನ್ನು ಹಿಂದಿ ಹಾಗೂ ಕನ್ನಡದಲ್ಲಿ ಪ್ರಯೋಗಿಸಿ ಆಗಿನ ಪ್ರಧಾನಿ ದಿ|| ನೆಹರೂ ಅವರಿಂದ ಪ್ರಶಂಸೆಗೆ ಪಾತ್ರರಾಗಿದ್ದರು. ದೆಹಲಿ ಕನ್ನಡ ಸಂಘ ಮತ್ತು ಪಾರ್ಲಿಮೆಂಟ್ ಸದಸ್ಯರ ಕ್ಲಬ್‌ಗಾಗಿ ವಿಶೇಷ ಪ್ರದರ್ಶನಗಳನ್ನು ನೀಡಿ, ಯೋಜನಾ

ಸಚಿವಾಲಯದ ಪ್ರಚಾರ ನಾಟಕಗಳನ್ನು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಪ್ರದರ್ಶಿಸಿ ಅವುಗಳ ಸಂದೇಶಗಳು ಜನರನ್ನು ತಲುಪುವಂತೆ ಮಾಡಿದರು.

ಮುಂದೆ ರಾಜ್ಯ ನಾಟ್ಯ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ತಮ್ಮ ಅಧಿಕಾರಾವಧಿಯಲ್ಲಿ ನಾಟ್ಯ ಸಂಘ ಸುವರ್ಣಯುಗ ಕಾಣುವಂತೆ ಮಾಡಿದರು. 1970 ರಿಂದ 1985 ರವರೆಗೆ ಉಲ್ಲಾಳ ಪಾರಿತೋಷಕ ಅಂತರಕಾಲೇಜು ನಾಟಕ ಸ್ಪರ್ಧೆ, ವಿಲಾಸೀ ಕಲಾ D ತ್ರ || ರಾಜ್‌ಕುಮಾರ್ ಪಾರಿತೋಷಕ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿ, ನಿರ್ವಹಿಸಿದ ಹೆಗ್ಗಳಿಕೆ ಇವರದು. ಹೊರದೇಶಗಳಿಂದ ಬಂದ ನಾಟಕ, ನೃತ್ಯ, ಸಂಗೀತದ ತಂಡಗಳು ಪ್ರದರ್ಶನ ನೀಡಬೇಕಾದರೆ ಇವರ ಸಹಾಯ ಅತ್ಯಗತ್ಯವಾಗಿತ್ತು.

ಆಗ ಪ್ರತೀ ವರ್ಷ ಬೇಸಿಗೆಯಲ್ಲಿ ಪ್ರೌಢಶಾಲಾ ಉಪಾಧ್ಯಾಯರಿಗಾಗಿ ೩೦ ದಿನಗಳ ಕಾಲ ನಾಟಕ ತರಬೇತಿ ಶಿಬಿರವನ್ನು ಏರ್ಪಡಿಸಿ, ಹೆಸರಾಂತ ಕಲಾವಿದರಾದ ಪು.ಲ. ದೇಶಪಾಂಡೆ, ದಿ|| ಉತ್ಪಲ್‌ದತ್, ಬಾದಲ್ ಸರ್ಕಾರ್, ಅಲಕಾಜೀ, ಹಬೀಬ್ ತನ್ವೀರ್, ಡಾ|| ಸುರೇಶ್ ಅವಸ್ಥಿ, ಸತ್ಯದೇವ್ ದುಬೆ, ವಿಜಯ ತೆಂಡೂಲ್ಕರ್, ಎಂ. ಎಸ್. ಸತ್ಯು, ಕರ್ನಲ್ ಗುಪ್ತೆ, ದಿ|| ರುಕ್ಮಿಣೀ ಅರುಂಡೇಲ್ ಮುಂತಾದವರಿಂದ ಉಪನ್ಯಾಸ ಏರ್ಪಡಿಸಿದರು.

1973ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸಹಯೋಗದೊಂದಿಗೆ ನಾಟ್ಯ ಸಂಘವು ಅಖಿಲ ಭಾರತ ರಂಗಭೂಮಿ ಸಂಕಿರಣ ಹಾಗೂ ನಾಟಕೋತ್ಸವ ವಸ್ತು ಪ್ರದರ್ಶನ 15 ದಿನಗಳ ಕಾಲ ನಡೆಸಿತು. ಬಂಗಾಳಿ, ಗುಜರಾತಿ, ತೆಲುಗು, ಕನ್ನಡ, ಮಲೆಯಾಳಂ, ಮರಾಠಿ, ಕೊಂಕಣಿ ನಾಟಕಗಳು ಈ ಪ್ರದರ್ಶನದಲ್ಲಿ ಪಾಲ್ಗೊಂಡವು. ನಾಟಕ ಕಲೆಯ ಬಗ್ಗೆ ಸಿನಿಮಾ ಪ್ರದರ್ಶನಗಳು, ಕನ್ನಡ ಹಿರಿಯ ವೃತ್ತಿ ನಾಟಕರಂಗದ ಕಲಾವಿದರಿಂದ ರಂಗಗೀತೆಗಳನ್ನು ಏರ್ಪಡಿಸಿ, ಇಂದಿನ ತಲೆಮಾರಿಗೆ ಅವುಗಳ ಪರಿಚಯ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೊಟ್ಟಮೊದಲ ಬಾರಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಿಂಬದಿ ಮತ್ತು ಪಕ್ಕದ ಪಾರ್ಶ್ವದಲ್ಲಿ ನಾಟಕ ಪ್ರದರ್ಶನಗಳು ಇವರ ಕಾಲದಲ್ಲಿ ಜರುಗಿದವು.

ಇವರು ರಂಗದ ಮೇಲೆ ಅಭಿನಯಿಸುವುದಕ್ಕಿಂತ ರಂಗದ ನೇಪಥ್ಯದ ಚಟುವಟಿಕೆಗಳಲ್ಲಿ ಅಪಾರ ಶ್ರದ್ಧೆಯಿಂದ ದುಡಿದಿದ್ದಾರೆ. ತಮ್ಮ ಸಂಗಡ ರಂಗಭೂಮಿಯ ಏಳಿಗೆಗೆ ದುಡಿದ ಎಲ್ಲ ಕಲಾವಿದರನ್ನು ಸ್ಮರಿಸುತ್ತಾ, ರಾಜ್ಯದಲ್ಲಿ ರಂಗಭೂಮಿಯ ಚಟುವಟಿಕೆಗಳು ಕ್ಷೀಣಿಸುತ್ತಿರುವ ಬಗ್ಗೆ ಚಿಂತಿಸುತ್ತಾ ಇಂದಿನ ಯುವ ಕಲಾವಿದರು ಆಸಕ್ತಿವಹಿಸಬೇಕೆಂದು ಆಶಿಸುತ್ತಾರೆ.



# ಕೆ. ಆನಂದ ಗಾಣಿಗ

– ಐ. ಕೆ. ಬೋಳುವಾರು

ಕರಾವಳಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಪ್ರತ್ಯೇಕ ಹೆಸರಿನಿಂದ ಕರೆಯಲ್ಪಡುವ ಮೊದಲು ಮತ್ತು ಈಗಲೂ ಕೂಡಾ ಉಡುಪಿಯನ್ನು ಗುರುತಿಸುವುದು ಒಂದು ಮುಖ್ಯ ಸಾಂಸ್ಕೃತಿಕ ಕೇಂದ್ರವಾಗಿ. ಉಡುಪಿಯಲ್ಲಿರುವ ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಕೇಂದ್ರಗಳು ವಾಣಿಜ್ಯ ಸಂಸ್ಥೆಗಳು ಹಾಗೂ ಇವುಗಳ ಜೊತೆಯಲ್ಲಿಯೇ ಅವಿನಾಭಾವ ಸಂಬಂಧ ಹೊಂದಿರುವ ಉಡುಪಿಯ ರಂಗಭೂಮಿ. ನಾಡಿನ ಬೇರೆಡೆ ರಂಗಭೂಮಿಯ ಅರ್ಥವ್ಯಾಪ್ತಿ ಹಲವು ಬಗೆಯಲ್ಲಿದ್ದರೆ ಉಡುಪಿಯಲ್ಲಿ ಮಾತ್ರ ರಂಗಭೂಮಿ ಎಂದರೆ ಆನಂದಗಾಣಿಗ ಅಥವಾ ಆನಂದಗಾಣಿಗರೆಂದರೆ ರಂಗಭೂಮಿ.

ಉಡುಪಿಯ ರಂಗಭೂಮಿ ಏರ್ಪಡಿಸುವ ಅಖಿಲ ಕರ್ನಾಟಕ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು ನಾಡಿನ ರಂಗಾಸಕ್ತರು ಬೇರೆ ಬೇರೆ ಕಾರಣಗಳಿಗಾಗಿ ಕುತೂಹಲದಿಂದ ಗಮನಿಸುತ್ತಿರುತ್ತಾರೆ. ಈ ಪ್ರತಿಷ್ಠಿತ ನಾಟಕ ಸ್ಪರ್ಧೆಯಂತಹ ನಾಟಕ ಸ್ಪರ್ಧೆ ಇಷ್ಟು ವ್ಯವಸ್ಥಿತವಾಗಿ ನಾಡಿನ ಬೇರೆಲ್ಲೂ ನಡೆಯುತ್ತಿಲ್ಲ. ಇಲ್ಲಿನ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗಳಿಸುವುದೆಂದರೆ ಅದು ರಂಗಭೂಮಿಯಲ್ಲಿ ಕೆಲಸಮಾಡಿದವರ ಕಿರೀಟಕ್ಕೊಂದು ಹೊಸ ಗರಿ ಸಿಕ್ಕಿಸಿದ ಹಾಗೆ. ಹಾಗಾಗಿ ಈ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಲು ಹಾಗೂ ಬಹುಮಾನ ಪಡೆಯಲು ನಿಜವಾದ ಸ್ಪರ್ಧೆಯೇ ನಡೆಯುತ್ತದೆ. ಉಡುಪಿಯ ಜನರಿಗಂತೂ ವರ್ಷದ 15 ದಿನಗಳು ಒಂದು ಬಗೆಯ ರಂಗಜಾತ್ರೆಯೇ ಸರಿ. ಕಳೆದ 21 ವರುಷಗಳಿಂದ ಯಾವುದೇ ಅಡೆತಡೆಯಿಲ್ಲದೆ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ರಾಜ್ಯ ಮಟ್ಟದ ಕನ್ನಡ ನಾಟಕ ಸ್ಪರ್ಧೆಯ ಪ್ರಧಾನ ಸಂಚಾಲಕನಾಗಿ, ಸೂತ್ರಧಾರನಾಗಿ ಕೆಲಸ ಮಾಡಿದವರೆಂದರೆ ಶ್ರೀ ಕೆ. ಆನಂದ ಗಾಣಿಗರು.

1936ನೇ ಇಸವಿ ಜುಲೈ ಒಂದರಂದು ಉಡುಪಿ ತಾಲ್ಲೂಕಿನ ಕುತ್ಪಾಡಿಯಲ್ಲಿ ಜನಿಸಿದ ಆನಂದ ಗಾಣಿಗ ಶಾಲಾ ದಿನಗಳಲ್ಲಿಯೇ ನಾಟಕಗಳಲ್ಲಿ ಆಸಕ್ತಿ ಹೊಂದಿದ್ದವರು. ಗಾಣಿಗರು ತಮ್ಮ 16ನೆಯ ವಯಸ್ಸಿನಲ್ಲಿ SSLC ಓದುತ್ತಿದ್ದಾಗಲೇ ಅವರ ತಂದೆಯವರು ಅಪಘಾತಕ್ಕೊಳಗಾಗಿ ನಿಧನರಾಗುತ್ತಾರೆ. ಮನೆಯಲ್ಲಿ ಹಿರಿಯಮಗ. ಕೌಟುಂಬಿಕ ಜವಾಬ್ದಾರಿ ಎಲ್ಲವೂ ಹಿರಿಯ ಮಗನ ಮೇಲೆ ಬೀಳುತ್ತದೆ. ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗುವುದಿಲ್ಲ ಅಕಾಡೆಮಿಕ್ ಶಿಕ್ಷಣ SSLCಗೆ ನಿಂತುಬಿಡುತ್ತದೆ. 17ನೆಯ ವಯಸ್ಸಿಗೇ ಕೆನರಾ ಮ್ಯೂಚುವಲ್ ಇನ್ಸುರೆನ್ಸ್ ಕಂಪನಿಗೆ ಗುಮಾಸ್ತನಾಗಿ ನೌಕರಿಗೆ ಸೇರುತ್ತಾರೆ. ಮುಂದೆ ಒಂದೂವರೆ ವರ್ಷಗಳಲ್ಲಿ ಜೀವ ವಿಮಾ ನಿಗಮದ ಉಗಮವಾಗುತ್ತದೆ. LICಯಲ್ಲಿ ಗುಮಾಸ್ತ ನೌಕರಿ ಮುಂದುವರಿಯುತ್ತದೆ. ಉದ್ಯೋಗದಲ್ಲಿ ಬಡ್ತಿಗೆ ಬೇಕಾದ ಇಲಾಖಾ ಪರೀಕ್ಷೆಗಳನ್ನೆಲ್ಲಾ ಪಾಸು ಮಾಡಿಕೊಳ್ಳುತ್ತಾರೆ. ಬಡ್ತಿ ಸ್ವೀಕರಿಸಿದರೆ ವರ್ಗಾವಣೆಗೆ ಒಪ್ಪಬೇಕಾಗುತ್ತದೆ ಎಂಬ ಒಂದೇ ಕಾರಣದಿಂದ ಉಡುಪಿಯ

ಸಾಂಸ್ಕೃತಿ ರಂಗದ ಸೆಳೆತವನ್ನು ತಪ್ಪಿಸಲು ಸಾಧ್ಯವೇ ಇಲ್ಲ ಎನ್ನುವ ನಿರ್ಧಾರಕ್ಕೆ ಬದ್ಧನಾದುದರಿಂದ ತನ್ನ 42 ವರ್ಷಗಳ ವೃತ್ತಿ ಜೀವನದಲ್ಲಿ ಬಂದ 10-12 ಬಡ್ತಿ ಅವಕಾಶಗಳನ್ನೆಲ್ಲವನ್ನೂ ನಿರಾಕರಿಸಿ ಗುಮಾಸ್ತನಾಗಿಯೇ 1996ರಲ್ಲಿ ನಿವೃತ್ತನಾಗುತ್ತಾರೆ. ಆದರೆ ಉಡುಪಿ ರಂಗಭೂಮಿಯಿಂದ ಅವರನ್ನು ನಿವೃತ್ತಿಗೊಳಿಸುವ ಮಾತೇ ಇಲ್ಲ. ಏಕೆಂದರೆ ಈಗಾಗಲೇ ಹೇಳಿದ ಹಾಗೆ ರಂಗಭೂಮಿ ಎಂದರೆ ಆನಂದ ಗಾಣಿಗ, ಆನಂದ ಗಾಣಿಗ ಎಂದರೆ ರಂಗಭೂಮಿ.

ತಮ್ಮ ಶಾಲಾ ದಿನಗಳಲ್ಲಿಯೇ 7ನೇ ತರಗತಿಯಿಂದ ಆರಂಭಿಸಿ SSLC ಕಲಿಯುವ ತನಕ ನಾಟಕ ಪಾತ್ರಗಳನ್ನೇ ನಟಿಸುತ್ತಿದ್ದ ಆನಂದ ಗಾಣಿಗರು ಈಗ ೭೫ ವರ್ಷದಾಟಿದ್ದರೂ ಅಭಿನಯದ ಸಂಪರ್ಕವನ್ನು ಕಳಚಿಕೊಂಡಿಲ್ಲ. ನಟನೆ, ನಿರ್ದೇಶನ ಹಾಗೂ ಸಂಘಟನೆಯ ಕೆಲಸವನ್ನು ನಡೆಸುತ್ತಲೇ ಬಂದವರು. 1954ರಲ್ಲಿ ನೌಕರಿಗೆ ಸೇರಿದ ವರ್ಷವೇ ನಾಟಕ ತಂಡವೊಂದನ್ನು ಆರಂಭಿಸುತ್ತಾರೆ. 1954 ರಿಂದ 1965ರ ವರೆಗಿನ ಅವಧಿಯಲ್ಲಿ ತನ್ನ ಕಛೇರಿಯ ನಾಟಕ ತಂಡ, ಉಡುಪಿ ಹಾಗೂ ಪರಿಸರದ ಹಲವಾರು ಹವ್ಯಾಸಿ ಕೂಟಗಳಲ್ಲಿ ನಾಟಕ ನಟನಾಗಿ, ನಿರ್ದೇಶಕನಾಗಿ ಕೆಲಸ ಮಾಡುತ್ತಾರೆ. ಕರೆದವರ ಬಳಿ ಹೋಗಿ ಅತಿಥಿ ನಟನಾಗಿ ಕೆಲಸ ಮಾಡಿ ಚಪ್ಪಾಳೆ ಗಿಟ್ಟಿಸುವುದಕ್ಕಿಂತ ತಮ್ಮದೇ ಆದ ಹೊಸ ತಂಡವೊಂದನ್ನು ರೂಪಿಸಬೇಕು ಎನ್ನುವ ಕನಸು ಕಾಣುತ್ತಾರೆ. ಆ ದಿನಗಳಲ್ಲಿ ಉಡುಪಿಯಲ್ಲಿ ಹವ್ಯಾಸಿಗಳಿಗಾಗಿಯೇ 'ರಂಗತಂಡ' ಇಲ್ಲ ಎಂಬಂತಿತ್ತು. ತನ್ನ ಸ್ನೇಹಿತ ರಂಗಾಸಕ್ತರೊಂದಿಗೆ ಚರ್ಚಿಸಿ ಉಡುಪಿಯ 'ರಂಗಭೂಮಿ' ಹೆಸರಿನ ಹೊಸ ಸಂಸ್ಥೆಯೊಂದನ್ನು ಸ್ಥಾಪಿಸುತ್ತಾರೆ.

ಮುಂದಿನ 15 ವರುಷಗಳು ಗಾಣಿಗರ ರಂಗ ಬದುಕಿನ ಸುವರ್ಣ ಯುಗ. ಉಡುಪಿಯ ಮಹಾನ್ 'ರಂಗನಾಯಕ' ಯಾರೆಂದು ಕೇಳಿದರೆ ಗಾಣಿಗರೇ ಆಗಿದ್ದರು. 1965ರಿಂದ 1970ರ ವರೆಗಿನ ಅವಧಿ ಉಡುಪಿಯಲ್ಲಿ ಕಂಪೆನಿ ನಾಟಕಗಳ ಕಾಲ ಕಂಪೆನಿ ನಾಟಕ ಪುಸ್ತಕಗಳಲ್ಲದೆ ಬೇರೆ ನಾಟಕ ಪುಸ್ತಕಗಳೇ ದೊರಕುತ್ತಿರಲಿಲ್ಲ ಎಂದರೂ ತಪ್ಪಾಗಲಾರದು ಹಾಗೆ ನೋಡಿದರೆ ಅದಾಗಲೇ ಕಂಪೆನಿ ನಾಟಕಗಳಲ್ಲಿ ಚಾಲ್ತಿಯಲ್ಲಿದ್ದ ಕೀಳು ಹಾಸ್ಯಗಳು, ಅಶ್ಲೀಲ ಅಭಿನಯ ಶೈಲಿಗಳು, ಒಂದೇ ತೆರನಾದ ಸಂಭಾಷಣಾ ವಿಧಾನಗಳು ಗಾಣಿಗರ ಜಾಯಮಾನಕ್ಕೆ ಒಗ್ಗುವಂತದ್ದಾಗಿರಲಿಲ್ಲ. ಆದುದರಿಂದಲೇ ಉಡುಪಿ ರಂಗಭೂಮಿಯವರು ಆರಂಭದ ವರ್ಷಗಳಲ್ಲಿ ಅಭಿನಯಿಸಿದ *೧. ರಾಷ್ಟ್ರಭಕ್ತಿ. ೨. ಅಗ್ಗಿ ತಮ್ಮ ೩. ಪುತ್ಥಳಿ ೪. ಸಾಧ್ವೀಮಗ, ೫. ಮಂಗಳಾ* ಇವು ಕಂಪೆನಿ ಶೈಲಿಯ ನಾಟಕಗಳಾಗಿದ್ದರೂ ಅವುಗಳನ್ನು ಪರಿಷ್ಕರಿಸಿ ನಿರ್ದೇಶಕ ಕೆ. ವೆಂಕಟಾಚಲ ಭಟ್ಟರಿಗೆ ಕೊಡುವುದು. ಅವರು ತಪ್ಪುಗಳನ್ನು ತಿದ್ದಿದ ಬಳಿಕ ಭಟ್ಟರ ನಿರ್ದೇಶನದಲ್ಲಿ ನಾಟಕ ಅಭ್ಯಾಸ ನಡೆಸುವುದು, ಆ ಬಳಿಕ ಪ್ರದರ್ಶಿಸುವುದು ಆನಂದ ಗಾಣಿಗರ ರಂಗಕಾಯಕದ ವಿಧಾನಗಳಾಗಿದ್ದವು.

1970ರ ಬಳಿಕ ಉಡುಪಿಗೆ ಬಿ.ವಿ.ಕಾರಂತರು ಬರುತ್ತಾರೆ. ಕು.ಶಿ. ಹರಿದಾಸ ಭಟ್ಟರ ಹಿರಿತನದಲ್ಲಿ ಕಾಲೇಜು ಅಧ್ಯಾಪಕರಿಗಾಗಿ, ಶಾಲಾ ಮಕ್ಕಳಿಗಾಗಿ ರಂಗತರಬೇತಿ ಶಿಬಿರಗಳು ನಡೆಯುತ್ತದೆ. ರಂಗಭೂಮಿಯನ್ನು ನೋಡುವ ನೋಟದ ಬದಲಾವಣೆಯ ಅಗತ್ಯವನ್ನು ಮನಗಂಡ ಉಡುಪಿಯ ರಂಗಾಸಕ್ತರು ಬಿ.ವಿ ಕಾರಂತರ ನೇತೃತ್ವದ ರಂಗ ತಂಡಗಳನ್ನು ಉಡುಪಿಗೆ ಆಹ್ವಾನಿಸಿ ರಂಗ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಸ್ವತಃ ಆನಂದ ಗಾಣಿಗರು ತನ್ನ ಗೆಳೆಯರೊಂದಿಗೆ

ಬೆಂಗಳೂರಿನಲ್ಲಿ ಸಮುದಾಯ ಏರ್ಪಡಿಸಿದ ಶ್ರೀನಿವಾಸ ಪ್ರಭು, ಗಂಗಾಧರ ಸ್ವಾಮಿಗಳಂತಹ ರಂಗ ನಿರ್ದೇಶಕರು ನಿರ್ದೇಶಿಸಿದ 10 ದಿನಗಳ ರಂಗತರಬೇತಿ ಶಿಬಿರದಲ್ಲಿ ಭಾಗಿಗಳಾಗುತ್ತಾರೆ. ನಾಟಕರಂಗದ ವಿವಿಧ ಸಾಧ್ಯತೆಗಳ ಬಗ್ಗೆ, ಹೊಸ ಆಯಾಮಗಳ ಬಗ್ಗೆ ಆತನಕ ರಂಗಭೂಮಿಯ ಬಗ್ಗೆ ಹೊಂದಿದ್ದ ದೃಷ್ಟಿಕೋನ ಬದಲಾಗುತ್ತದೆ.

1971 ರಿಂದ 1977ರ ವರೆಗೆ ಅಭಿನಯಿಸಿದ್ದ ನಾಟಕಗಳ ಬಗ್ಗೆ ಹೇಳುವುದಾದರೆ ಒಂದು ಬಗೆಯ ಅರೆ ಆಧುನಿಕ ಅಥವಾ Bridge ನಾಟಕಗಳನ್ನಾಡುವ ಪ್ರಯತ್ನ ಮಾಡುತ್ತಾರೆ. ರಂಗಪರಿಕರ, ಸಂಗೀತ, ಪ್ರಸಾಧನ, ರಂಗ ತಂತ್ರ ಅಭಿನಯಗಳಲ್ಲಷ್ಟೇ ಪರಂಪರೆಯ ಶೈಲಿ. ವಸ್ತು, ವಿನ್ಯಾಸ, ರಂಗಚಲನೆ, ಬೆಳಕು ಇತ್ಯಾದಿಗಳಲ್ಲಿ ಆಧುನಿಕ ಶೈಲಿ. ಈ ಬಗೆಯ ನಾಟಕ ಪ್ರಯೋಗಗಳು ಜನರಿಗೆ ಹುಚ್ಚನ್ನೇ ಹಿಡಿಸಿದವು ಎಲ್ಲಿ ಹೋಗಿ ಅಭಿನಯಿಸಿದರೂ ಉಡುಪಿ ರಂಗಭೂಮಿಯ ಪ್ರಯೋಗಗಳಿಗೆ ಅಪಾರ ಜನಸಂದಣಿ, ನೂಕುನುಗ್ಗಲು, ಪ್ರಶಂಸೆ, ಪ್ರಸಿದ್ಧಿ, ಖ್ಯಾತಿ, ಸನ್ಮಾನ ಸಮಾರಂಭಗಳು ಇತ್ಯಾದಿ.

ಉಡುಪಿಯ ರಂಗಭೂಮಿ 35 ವರ್ಷಗಳ ಕಾಲ ನಿರಂತರ ರಂಗಚಟುವಟಿಕೆ ನಡೆಸಿ ಈಗ 36ನೆಯ ವರ್ಷಕ್ಕೆ ಕಾಲಿಟ್ಟಿದೆ. ಆರಂಭದಿಂದ ಇದುವರೆಗೆ ಆನಂದ ಗಾಣಿಗರೇ ಪ್ರಧಾನ ಕಾರ್ಯದರ್ಶಿ. ಬಹುಶಃ ಹವ್ಯಾಸಿ ನಾಟಕ ರಂಗದಲ್ಲೊಂದು ದಾಖಲೆಯೇ ಇರಬೇಕು 35 ವರ್ಷಗಳಲ್ಲಿ 35 ನಾಟಕಗಳನ್ನು ರಂಗಕ್ಕೆ ತಂದು ಸುಮಾರು 200 ಪ್ರಯೋಗಗಳನ್ನು ಕರ್ನಾಟಕದಾದ್ಯಂತ, ಕೇರಳ, ಗೋವಾ ರಾಜ್ಯಗಳಲ್ಲಿ, ದೆಹಲಿ, ಮುಂಬಯಿಯಂತಹ ಮಹಾನಗರಗಳಲ್ಲಿ. ಕೊಲ್ಲಿ ರಾಷ್ಟ್ರಕ್ಕೂ ಸಂಚರಿಸಿ ಬೆಹರಿನ್ ನಗರದಲ್ಲಿ ನಾಟಕ ಪ್ರದರ್ಶನ ನೀಡಿದೆ. ಇದುವರೆಗೆ ಉಡುಪಿ ರಂಗಭೂಮಿ ಆಡಿದ, ಬೇರೆ ತಂಡಗಳಿಂದ ಆಡಿಸಿದ, ಸಂಘಟಿಸಿದ ಒಟ್ಟು ಪ್ರದರ್ಶನಗಳ ಸಂಖ್ಯೆ 691 ಗಾಣಿಗರು ಸಂಘಟಿಸಿದ ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆಗಳು 21, ಕೊಂಕಣಿ ನಾಟಕ ಸ್ಪರ್ಧೆಗಳು 9, ತುಳು ನಾಟಕ ಸ್ಪರ್ಧೆ 1, ರಾಜ್ಯಮಟ್ಟದ ಕನ್ನಡ ನಾಟಕ ರಚನಾ ಸ್ಪರ್ಧೆ 3 ರಂಗತರಬೇತಿ ಶಿಬಿಗಳು 3, ವಿಚಾರಗೋಷ್ಠಿಗಳು 4, ರಂಗಸಂವಾದಗಳು 8, ಇದುವರೆಗೆ ಅಭಿನಯಿಸಿದ ಕಲಾವಿದ ಕಲಾವಿದೆಯರ ಸಂಖ್ಯೆ 800ಕ್ಕೂ ಅಧಿಕ.

ಆನಂದ ಗಾಣಿಗರ ಈ ಬಗೆಯ ರಂಗಸಾಧನೆಯೊಂದಿಗೆ ಉಡುಪಿ ರಂಗಭೂಮಿ 14 ನಾಟಕ ಸ್ಪರ್ಧೆಗಳಲ್ಲಿ ಭಾವಹಿಸಿದೆ. ಇವುಗಳಲ್ಲಿ 12ರಲ್ಲಿ ಪ್ರಥಮ ಪ್ರಶಸ್ತಿ, 2ರಲ್ಲಿ ದ್ವಿತೀಯ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ಎಲ್ಲಾ ಸ್ಪರ್ಧೆಗಳಲ್ಲೂ ಆನಂದ ಗಾಣಿಗರಿಗೆ ವೈಯಕ್ತಿಕ ಶ್ರೇಷ್ಠ ನಟನೆಗಾಗಿ ಬಹುಮಾನಗಳು ಪ್ರಾಪ್ತವಾಗಿವೆ. ರಂಗಭೂಮಿಯ ಎಲ್ಲ ಚಟುವಟಿಕೆಗಳಿಗೂ ಗೌರವ ತರುವ ಇನ್ನೊಂದು ಕೆಲಸವೆಂದರೆ ನಾಡಿನ ಅಗ್ರಮಾನ್ಯ ಕಲಾವಿದರನ್ನು ಗುರುತಿಸಿ ಅವರಿಗೆ ಸಾರ್ವಜನಿಕ ಸನ್ಮಾನ ನೀಡುವುದು. ಇದು ತನಕ 36 ಮಂದಿ ಹಿರಿಯರನ್ನು ಗೌರವಾದರಗಳಿಂದ ಅದ್ದೂರಿಯಾಗಿ ಸನ್ಮಾನಿಸಿದ್ದಾರೆ.

ಈ ಕಾರಣಕ್ಕಾಗಿಯೇ ಇರಬೇಕು. ಸನ್ಮಾನ, ಗೌರವಾರ್ಪಣೆಗಳು ಆನಂದ ಗಾಣಿಗರನ್ನೂ ಬಿಟ್ಟಿಲ್ಲ. ಅಂಕಕ್ಕೂ ಅಧಿಕ ಸಂಘ ಸಂಸ್ಥೆಗಳು, ಪೀಠಗಳು ಗಾಣಿಗರನ್ನು ಸನ್ಮಾನಿಸಿವೆ.

1984ರಿಂದ 1987ರ ಅವಧಿಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

1990 — ಮೂಡುಬಿದಿರೆಯ ವರ್ಧಮಾನ ಪ್ರಶಸ್ತಿ.

1992 — ದೆಹಲಿ ಕರ್ನಾಟಕ ಸಂಘ ನೀಡಿದ ಗೌರವ.

1992 — ಮುಂಬಯಿ ಕರ್ನಾಟಕ ನೀಡಿದ ಸನ್ಮಾನ.

1992 — ಬೆಹರಿನ್ ಕನ್ನಡ ಸಂಘ ಕೊಡಮಾಡಿದ ಗೌರವಾರ್ಪಣೆ.

1994 — ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ.

1994 ಉಡುಪಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸನ್ಮಾನ ಹೀಗೆ ಉಲ್ಲೇಖಿಸುತ್ತಾ ಹೋದರೆ ದೀರ್ಘವೆನಿಸುವಷ್ಟು ಗೌರವಗಳಿಗೆ ಭಾಜನರಾದವರು ಆನಂದ ಗಾಣಿಗರು. ಈಗ ನಾಟಕ ಕರ್ನಾಟಕ ರಂಗಾಯಣದ ಆಡಳಿತ ಮಂಡಳಿ ಸದಸ್ಯರಾಗಿದ್ದಾರೆ.

ಕರಾವಳಿ ಜಿಲ್ಲೆಯೆಂದರೆ ಯಕ್ಷಗಾನದಲ್ಲಿ ಬಿಡಲಾಗುವುದೇ ಇಲ್ಲ. ಇಲ್ಲಿಯ ನೆಲದ ನಂಟೇ ಆ ಬಗೆಯದು. ಸುಮಾರು 35 ವರ್ಷಗಳಿಂದ ಹವ್ಯಾಸಿ ಯಕ್ಷಗಾನ ರಂಗದಲ್ಲಿ ಅರ್ಥದಾರಿಯಾಗಿ, ವೇಷಧಾರಿಯಾಗಿ ಸೇವೆ ಸಲ್ಲಿಸಿರುವ ಗಾಣಿಗರು 1958ರಲ್ಲಿ ಆರಂಭಿಸಿದ ಅಂಬಲಪಾಡಿ ಶ್ರೀ ಲಕ್ಷ್ಮೀ ಜನಾರ್ಧನ ಯಕ್ಷಗಾನ ಕಲಾಮಂಡಳಿ ಇಂದಿಗೂ ಸಕ್ರಿಯವಾಗಿ ಯಕ್ಷಗಾನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದೆ.

ಪತ್ರಿಕೆಗಳಲ್ಲಿ ಅಂಕಣ ಬರಹಗಾರರಾಗಿ, ಸ್ಮರಣ ಸಂಚಿಕೆಗಳ ಸಂಪಾದಕರಾಗಿ ಗಾಣಿಗರು ನಿರ್ವಹಿಸಿದ ಸೇವೆ ಉಲ್ಲೇಖನೀಯ.

ಶ್ರೀ ಕೆ. ಆನಂದಗಾಣಿಗರು ಉತ್ತಮ ವಾಗ್ಮಿ ಹಾಗೂ ಅಸಾಮಾನ್ಯ ಸಂಘಟಕ. ಉಡುಪಿ ಪರಿಸರದಲ್ಲಿ ಕಳೆದ ಮೂರು ದಶಕಗಳಲ್ಲಿ ಅಸಂಖ್ಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿದವರು. ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ತನ್ನ ಬದುಕನ್ನೇ ಅರ್ಪಿಸಿಕೊಂಡು ದುಡಿಯುತ್ತಾ ಬಂದವರು. ಅವರು ಹೇಳುತ್ತಾರೆ : ಆಧುನಿಕ ರಂಗಭೂಮಿ ಕ್ಷೇತ್ರದಲ್ಲಿ ರಂಗ ಶಿಕ್ಷಣ ಅತಿ ಅಗತ್ಯ. ಆದರೆ ಯಾವ ಶಿಕ್ಷಣವನ್ನೂ ಪಡೆಯದವನೂ ತನ್ನ ಸ್ವಪ್ರತಿಭೆಯಿಂದ ಶ್ರೇಷ್ಠ ನಟನಾಗಿ ಮೆರೆಯುವುದನ್ನು ನಾವು ಕಾಣಬಹುದು. ಉದಾಹರಣೆಗೆ ಈಗ ನೂರುಗಟ್ಟಲೆ ಪ್ರಯೋಗಗಳನ್ನು ನೀಡುತ್ತಿರುವ ತುಳು ರಂಗಭೂಮಿಯ ಕಲಾವಿದರು ಕೇವಲ ಒಂದೆರಡು ಪ್ರಯೋಗಗಳಿಗೇ ಪತ್ರಿಕೆಯಲ್ಲಿ ಪ್ರಶಂಸೆಯ ವಿಮರ್ಶೆ ಬರುವ ಹಾಗೆ ಮಾಡಿ ತೆಪ್ಪಗಿರುವವರಿಗಿಂತ ನಿರಂತರ ಚಟುವಟಿಕೆ ನಡೆಸುತ್ತಿರುವ ಕಲಾವಿದರನ್ನು ಸಂಘಟಿಸಿ ಹೊಸ ರಂಗ ಸೇತುವೆ ನಿರ್ಮಿಸಬೇಕಾದ ಅಗತ್ಯವಿದೆ. ಈ ದಿಶೆಯಲ್ಲಿ ನಾವೆಲ್ಲರೂ ರಂಗಶಿಕ್ಷಣ ಪಡೆಯಬೇಕಾಗಿದೆ ಎಂದು.

# ಸಿ. ಪಿ. ಪರಮೇಶ್ವರಪ್ಪ

– ಕೆ. ವಿ. ನಾಗರಾಜಮೂರ್ತಿ



ಕನ್ನಡ ರಂಗಭೂಮಿ ಯಶಸ್ಸಿಗೆ ದುಡಿದ ಹಲವು ರಂಗಸಂಘಟಕರಲ್ಲಿ ಶ್ರೀ ಸಿ. ಪಿ. ಪರಮೇಶ್ವರಪ್ಪನವರು ಒಬ್ಬರು. ಇಂದಿಗೂ ತನ್ನ ಇಳಿ ವಯಸ್ಸಿನಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿರುವವರು. ಸುಮಾರು ೫೫ ವರ್ಷಗಳಿಂದ ಸತತವಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ಪರಮೇಶ್ವರಪ್ಪ ಚಿಕ್ಕಮಗಳೂರಿನ ರಂಗಚಳುವಳಿಯ ಬೆಳವಣಿಗೆಯ ಒಂದು ಭಾಗವಾಗಿದ್ದಾರೆ.

ಕರ್ನಾಟಕದಲ್ಲಿ ಎಷ್ಟೋ ರಂಗ ಸಂಸ್ಥೆಗಳು ಉದಯವಾಗಿವೆ. ಆದರೆ ವರ್ಷಕ್ಕೆ ಒಂದು ಅಥವಾ ಎರಡು ನಾಟಕ ಮಾಡುವ ಮಟ್ಟಕ್ಕೆ ಸೀಮಿತವಾಗಿರುವುದು ನಾವು ಕಂಡ ಸತ್ಯ. ಶ್ರೀ ಪರಮೇಶ್ವರಪ್ಪ ಈ ನಿಟ್ಟಿನಲ್ಲಿ ಉದಾಹರಿಸಬೇಕಾದ ವ್ಯಕ್ತಿ. ೭೦ ವರ್ಷಗಳ ಸಮೀಪಕ್ಕೆ ಬರುತ್ತಿರುವ ಇವರು ಸಾಧಿಸಿದ್ದು ಬಹಳ. ಚಿಕ್ಕಮಗಳೂರಿನ ಅತ್ಯಂತ ಹಳೆಯ ಹಾಗೂ ಕ್ರಿಯಾಶೀಲ ರಂಗ ತಂಡ ಕಲಾ ಸೇವಾ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ ಇಲ್ಲಿಯವರೆಗೆ ನಿರಂತರವಾಗಿ ಅದನ್ನು ಕಟ್ಟಿ ಬೆಳೆಸಿದವರು.

ಇವರ ಸಂಘಟನಾ ಸಾಮರ್ಥ್ಯ ಕೇವಲ ಈ ಸಂಸ್ಥೆಗಷ್ಟೇ ಸೀಮಿತವಾಗಲಿಲ್ಲ. ಚಿಕ್ಕಮಗಳೂರಿನ ಯಾವುದೇ ರಂಗ ತಂಡ ಹೊಸ ನಾಟಕ ಮಾಡಿದರೆ, ವಿಚಾರ ಸಂಕಿರಣವಾದರೆ ರಂಗ ತರಬೇತಿ ಶಿಬಿರವಾದರೆ, ಅಲ್ಲಿ ಪರಮೇಶ್ವರಪ್ಪ ಹಾಜರ್. ಕೇವಲ ತಮ್ಮ ಇರುವಿಕೆಯಿಂದಷ್ಟೆ ಅಲ್ಲದೆ ತಮ್ಮ ಶಕ್ತಿಗೂ ಮೀರಿ ರಂಗ ಚಟುವಟಿಕೆಗಳಿಗೆ ತೊಡಗಿಸಿಕೊಂಡವರು. ಸಂಗೀತ ಸಮ್ಮೇಳನ, ಸಾಹಿತ್ಯ ಸಮ್ಮೇಳನ ಹೀಗೆ ಹಲವಾರು ದೊಡ್ಡ ದೊಡ್ಡ ಉತ್ಸವಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದರು.

ಪರಮೇಶ್ವರಪ್ಪನವರೇನೂ ಆರ್ಥಿಕವಾಗಿ ಬಹುದೊಡ್ಡ ಕುಳವೇನಲ್ಲ. ಮಧ್ಯಮ ವರ್ಗದ ಕುಟುಂಬದ ಇವರು ತಮ್ಮ ಸಂಘಟನಾ ಶಕ್ತಿಯಿಂದ ಎಲ್ಲವನ್ನು ಗೆದ್ದವರು. ತಮ್ಮ ವಿನಯ, ಕಾರ್ಯಕ್ಷಮತೆ ಇತರರಿಗೆ ಮಾದರಿಯಾಗುವಂತಹದು. ಒಂದು ವಿಚಾರವಂತೂ ನನಗೆ ಈಗಲೂ ನೆನಪಿದೆ. ಭಾರತ ಯಾತ್ರಾ ಕೇಂದ್ರ ೧೯೯೫ರಲ್ಲಿ ಸಂಘಟಿಸಿದ್ದ ಚಿಕ್ಕಮಗಳೂರಿನ ನಾಟಕೋತ್ಸವ, ನನಗೆ ಪರಮೇಶ್ವರಪ್ಪ ಪರಿಚಯವಾದದ್ದು ಅಲ್ಲೆ. ಅಲ್ಲಿನ ನಮ್ಮ ತಂಡದ ಸಂಚಾಲಕರು ಶ್ರೀ ಎಂ.ಜೆ. ದೀಪಕ್. ಉತ್ಸವಕ್ಕೆ ಒಂದು ತಿಂಗಳ ಮೊದಲು ದೀಪಕ್ ಕರೆದಿದ್ದ ಸ್ಥಳೀಯ ಸಂಘಟನಾ ಸಭೆಗೆ ನಾನೂ ಹೋಗಿದ್ದೆ. ಅಲ್ಲಿ ಉತ್ಸವ ಹೇಗಿರಬೇಕು, ನಾಟಕಗಳ ಆಯ್ಕೆ, ವಿಚಾರ ಸಂಕಿರಣ, ಪ್ರಚಾರ ಹೀಗೆ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾಯಿತು. ಅಲ್ಲಿ ಬಂದಿದ್ದ ಬಹುತೇಕ ರಂಗಕರ್ಮಿಗಳು ಕೊಟ್ಟ ಸಲಹೆಗಳನ್ನು ಅಲ್ಲಿ ಆಗ ಬೇಕಾದ ಅವಶ್ಯಕ ಕಾರ್ಯಗಳನ್ನು ಪೂರೈಸಿ ಈ ಉತ್ಸವ ನಡೆಸುವುದು ಕಷ್ಟಸಾಧ್ಯವೆನಿಸಿತು. ನಾನು ದೀಪಕ್‌ಗೆ "ಇಲ್ಲಿ ಉತ್ಸವ ಮಾಡೋದು

ಬಹಳ ಕಷ್ಟ. ಇಲ್ಲಿನ ಸಮಸ್ಯೆಗಳೆ ಜಾಸ್ತಿ ಇದೆ" ಅಂತ ಇನ್ನೂ ಮಾತು ಮುಂದುವರಿಸ್ತಾ ಇದೆ. ಅಷ್ಟರಲ್ಲಿ ಮಧ್ಯೆ ಪ್ರವೇಶಿಸಿದ ಸಿ.ಪಿ. ಪರಮೇಶ್ವರಪ್ಪ ನೀಡಿದ ಧೈರ್ಯ ಅಂದು ಉತ್ಸವದ ಯಶಸ್ಸಿಗೆ ಕಾರಣವಾಯಿತು. "ನೋಡ್ರಿ ನಾಗರಾಜಮೂರ್ತಿ ಬೆಂಗಳೂರಿಂದ ನೀವೇನು ಮಾಡಕ್ಕಾಗುತ್ತೊ ನೀವು ಮಾಡಿ, ಮಿಕ್ಕಿದ್ದು ನಾವು ಮಾಡ್ತೀವಿ, ಇಲ್ಲಿ ನಾಟಕೋತ್ಸವ ಆಗೋದು ಮುಖ್ಯ" ಅಂದ್ರು. ಈ ಮಾತುಗಳು ನನ್ನನ್ನು ನಿಜಕ್ಕೂ ಉತ್ಸಾಹದಿಂದ ಕೆಲಸ ಮಾಡಲು ಪ್ರೇರೇಪಿಸಿತು. ಹೇಳಿದ ಮಾತಿನಂತೆ ದೀಪಕ್‌ಗೆ ಹೆಗಲಿಗೆ ಹೆಗಲು ಕೊಟ್ಟು ಉತ್ಸವದ ಯಶಸ್ಸಿಗೆ ದುಡಿದರು. ಅವರ ಉತ್ಸಾಹ ಎಂತಹ ಯುವಕರನ್ನು ನಾಚಿಸುವಂತಿತ್ತು.

ಮೊದಲನೆ ದಿನ ನಾಟಕ ಮುಗಿದಾಗ ರಾತ್ರಿ ೧೦.೩೦ ಗಂಟೆ. ಎಲ್ಲರಿಗೂ ಸುಸ್ತಾಗಿತ್ತು. ಆದ್ರೆ ಬೆಂಗಳೂರಿನ "ನಾಗೇಂದ್ರ ಷಾ" ನೇತೃತ್ವದ ತಂಡ ೯.೦೦ ಗಂಟೆಗೆ ಬರಬೇಕಾಗಿತ್ತು. ಇನ್ನೂ ಬಂದಿರಲಿಲ್ಲ. ಸಮಿತಿಯ ಎಲ್ಲರು ಒಂದಲ್ಲ ಒಂದು ಕಾರಣ ನೀಡಿ ಮನೆಗಳಿಗೆ ಹೋದರು. ಆದರೆ ಸಿ.ಪಿ. ಪರಮೇಶ್ವರಪ್ಪ ಮಾತ್ರ ಬೆಳಗಿನ ಜಾವ ಮೂರು ಗಂಟೆಯವರೆಗೆ ನನ್ನ ಜೊತೆ ರಂಗ ಮಂದಿರದಲ್ಲೆ ಕಳೆದರು. ಅಷ್ಟೆ ಅಲ್ಲ, ತಮ್ಮ ಹಳೆಯ ಒಂದು ಲೂನಾದಲ್ಲಿ ೧೨.೩೦ಕ್ಕೆ ಮನೆಗೆ ಹೋಗಿ, ಬರುವ ನಟರಿಗೆಲ್ಲಾ ಚಹಾ ಮಾಡಿಸಿಕೊಂಡು ಬಂದು ಕಲಾವಿದರಿಗಾಗಿ ಕಾದಿದ್ದು ನನಗೆ ನಿಜಕ್ಕೂ ಅವರ ತ್ಯಾಗಶಕ್ತಿಯ ಬಗ್ಗೆ ಹೆಮ್ಮೆಯಾಯಿತು. ನಾನು ತೂಕಡಿಸುತ್ತಿದ್ದರೆ "ನೀವು ರೆಸ್ಟ್ ತೆಗೆದುಕೊಳ್ಳಿ ಬೆಳಿಗ್ಗೆ ಬೇಕಾದಷ್ಟು ಕೆಲಸ ಇರುತ್ತೆ" ಅಂತ ಹೇಳಿ ಬೆಂಗಳೂರಿನ ಕಲಾವಿದರು ಎಲ್ಲಾದರು ಹಾದಿ ತಪ್ಪಿಸಿಕೊಂಡಿದ್ದರೆ? ಎಂದು ಊರೆಲ್ಲಾ ಹುಡುಕಿ ಬಂದಿದ್ದರು. ಪರಮೇಶ್ವರಪ್ಪ ಕೊನೆಗೂ ಬಂದ ತಂಡಕ್ಕೆ ವಾಸ್ತವ್ಯ ಒದಗಿಸಿ ಗುಡ್‌ನೈಟ್ ಎಂದಾಗ ಸೂರ್ಯ ಉದಯಿಸುತ್ತಿದ್ದ.

ಸಿ.ಪಿ. ಪರಮೇಶ್ವರಪ್ಪ ರಂಗಭೂಮಿಗೆ ಹನ್ನೆರಡನೆಯ ವಯಸ್ಸಿನಲ್ಲಿಯೇ ಪ್ರವೇಶಿಸಿದರು. ಇವರ ಪ್ರವೇಶ ಅತ್ಯಂತ ಅನಿರೀಕ್ಷಿತ. ಅಂದಿನ ದಿನಗಳಲ್ಲಿ ತಾಲ್ಲೂಕಿನ ಎಲ್ಲಾ ಶಿಕ್ಷಕರು ಒಂದೆಡೆ ಸೇರಿ ಮಾಸಿಕ ಸಭೆ ನಡೆಸುವುದು ವಾಡಿಕೆಯಾಗಿತ್ತು. ಅಂತಹ ಸಂದರ್ಭದಲ್ಲಿ ಆ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡುವುದು ರೂಢಿಯಲ್ಲಿತ್ತು. ಅದರಂತೆ ಸಿ.ಪಿ.ಪಿ. ಅವರ ಶಾಲೆಯು ಮಾಸಿಕ ಸಭೆ ಏರ್ಪಡಿಸಿತ್ತು. ಆ ಸಂದರ್ಭಕ್ಕೆಂದು "ಭಕ್ತ ಧ್ರುವ" ನಾಟಕವನ್ನು ಪ್ರದರ್ಶಿಸಲು ಶಾಲೆ ನಿರ್ಧರಿಸಿತು ಶ್ರೀ ಚನ್ನಯ್ಯನವರ ಅಚ್ಚುಮೆಚ್ಚಿನ ವಿದ್ಯಾರ್ಥಿ ಶ್ರೀ ಸಿ.ಪಿ.ಪಿ. ಓದು ಬರಹದಲ್ಲಿ ಬಹಳ ಮುಂದಿದ್ದವರು. ಹೀಗಾಗಿ ಚನ್ನಯ್ಯ ಇವರನ್ನೆ ಮುಖ್ಯ ಪಾತ್ರಕ್ಕೆ ಆರಿಸಿದರು. ಆದರೆ ಅಂದಿನ ದಿನಗಳಲ್ಲಿ ಎಲ್ಲರಿಗೂ ಮುಖ್ಯ ಪಾತ್ರದ ಮೇಲೆಯೇ ಕಣ್ಣು. ಎಲ್ಲರೂ ಮುಖ್ಯ ಪಾತ್ರ ವಹಿಸಬೇಕೆನ್ನುವವರೆ. ಬಹಳ ಕಷ್ಟಪಟ್ಟು ಪೋಷಕ ಪಾತ್ರಗಳನ್ನು ಹುಡುಕಬೇಕಾಗುತ್ತಿತ್ತು. ಆಗ ಪೋಷಕ ಪಾತ್ರಗಳನ್ನು ಹುಡುಕಿ ನಾಟಕ ನಡೆಯುವಂತೆ ಮಾಡಿದ ಶ್ರಮವೇ ಪರಮೇಶ್ವರಪ್ಪನವರು ಸಂಘಟಕರಾಗಲು ನೆರವಾಯಿತು. ನಾಟಕದ ಪ್ರದರ್ಶನ ನಾಳೆ ಇದೆ ಎನ್ನುವಾಗ ಮೂರು ಜನ ಪ್ರಮುಖ ಪಾತ್ರಧಾರಿಗಳಿಗೆ ಚಳಿ ಜ್ವರ. ನಾಟಕದ ಹೆದರಿಕೆಯ ಚಳಿ ಜ್ವರವಲ್ಲ. ನಿಜವಾದ ಚಳಿಜ್ವರ. ಸರಿ ಅವರನ್ನು ಡಾಕ್ಟರ್ ಬಳಿ ಕರೆದುಕೊಂಡು ಹೋಗಿ ಅವರಿಗೆ ಶುಶ್ರೂಶೆ ಮಾಡುವ ಜವಾಬ್ದಾರಿ ಕೂಡ ಇವರ ಮೇಲೆಯೆ. ಹೀಗೆ ನಾಟಕದ ಪ್ರದರ್ಶನಕ್ಕೆ ಪಟ್ಟ ಕಷ್ಟ ಎಂದೂ ಮರೆಯಲಾಗದಂತಹದು. ಸಂಘಟಕರಾಗಿ, ನಟನಾಗಿ ರಂಗ ಪ್ರವೇಶ ಮಾಡಿದ ಸಿ.ಪಿ. ಪರಮೇಶ್ವರಪ್ಪ ಮತ್ತೆ ಹಿಂದಿರುಗಿ ನೋಡಲಿಲ್ಲ.

1944ರಲ್ಲಿ ಚಿಕ್ಕಮಗಳೂರಿನ ಕಲಾವಿದರೆಲ್ಲಾ ಸೇರಿ "ಕಲಾ ಸೇವಾ ಸಂಘ ಸ್ಥಾಪಿಸಿದಾಗ ತಂಡದ ಸದಸ್ಯರಾಗಿ ಶ್ರೀ ಸಿ.ಪಿ. ಪರಮೇಶ್ವರಪ್ಪ ಸೇರ್ಪಡೆಯಾದರು. ತಂಡದ ನಾಟಕಗಳಲ್ಲಿ ಪಾತ್ರವಿರಲಿ, ಬಿಡಲಿ ಎಲ್ಲಾ ಕಾರ್ಯಕ್ರಮಗಳಲ್ಲಿ ಅವಿರತವಾಗಿ ದುಡಿದರು. ತಂಡದ ಪದಾಧಿಕಾರಿಗಳಿಗೆ ಸಿ.ಪಿ. ಪರಮೇಶ್ವರಪ್ಪ ಅಚ್ಚು ಮೆಚ್ಚಿನವರಾದರು. ಅತ್ಯಂತ ಚಿಕ್ಕ ವಯಸ್ಸಿನ ಇವರು ವಿದ್ಯಾಭ್ಯಾಸದ ಜೊತೆ ರಂಗಾಭ್ಯಾಸವನ್ನು ತಮ್ಮ ಜೀವನದ ಒಂದು ಕ್ರಮವನ್ನಾಗಿಸಿಕೊಂಡರು.

ಚಿಕ್ಕಮಗಳೂರಿನ "ಕಲಾ ಸೇವಾ ಸಂಘ" ವೆಂದರೆ ಅದೊಂದು ಅತ್ಯಂತ ಶಿಸ್ತು ಬದ್ಧವಾದ ರಂಗ ಸಂಘಟನೆ. ಸಾಮಾಜಿಕ ನಾಟಕಗಳ ಜೊತೆಗೆ ಆಗಾಗ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿದ್ದ ಸಂಸ್ಥೆ. ಅಂದಿನ ದಿನಗಳಲ್ಲಿ ರಂಗ ಚಟುವಟಿಕೆಗಳಲ್ಲಿ ಪ್ರಮುಖರಾಗಿದ್ದ ಶ್ರೀ ಸಿ. ಎಂ. ಅನವಟ್ಟಿಯವರು ಕಲಾ ಸೇವಾ ಸಂಘದ ಕಾರ್ಯದರ್ಶಿಯಾಗಿದ್ದರು. ಅವರ ಮಾರ್ಗದರ್ಶನ ಪರಮೇಶ್ವರಪ್ಪ ಸಂಘಟನಾ ಚಾತುರ್ಯವನ್ನು ಹೆಚ್ಚಿಸಲು ಬಹಳ ನೆರವಾಯಿತು.

ಶ್ರೀ ಸಿ.ಪಿ.ಪಿ. ರಂಗಭೂಮಿಗೆ ಎಲ್ಲರಿಗೂ ಹತ್ತಿರವಾಗುವ ಸಂದರ್ಭ ಬಂದಿದ್ದು "ಕಲಾ ಸೇವಾ ಸಂಘ" ಪ್ರಾರಂಭಿಸಿದ ಪ್ರತಿಷ್ಠಿತ ರಾಜ್ಯ ಮಟ್ಟದ ನಾಟಕ ಸ್ಪರ್ಧೆ. ಇಡಿ ಜಿಲ್ಲೆಯಲ್ಲೇ ನಾಟಕ ಉಸ್ತುವಾರಿ ವಹಿಸಿದ್ದ ಖ್ಯಾತಿಯನ್ನು ಪಡೆದ ಈ ಸ್ಪರ್ಧೆಯನ್ನು ಸಂಘ ಸುಮಾರು 30 ವರ್ಷ ಯಶಸ್ವಿಯಾಗಿ ನಡೆಸಿತು. ಇದರ ಪ್ರಮುಖರಾಗಿ ಶ್ರೀ ಸಿ.ಪಿ. ಪರಮೇಶ್ವರಪ್ಪ ಕಾರ್ಯನಿರ್ವಹಿಸಿದರು. ಈ ಸ್ಪರ್ಧೆಗೆ ಪಾರಿತೋಷಕಗಳನ್ನು ತಿರಿವಾನೆಯ ಶ್ರೀ ಮುಳ್ಳೆಗೌಡರು, ಆಂಜನೇಯ ಬಸ್ ಮಾಲೀಕರಾದ ಶ್ರೀ ಬಿ.ಡಿ. ಬೋಜೆಗೌಡರು, ಹಾಗೂ ಶ್ರೀ ವಿಶ್ವನಾಥರಾವ್ ಅವರುಗಳು ಪಾರಿತೋಷಕಗಳನ್ನು ನೀಡಿದರೆ, ಸರ್ಕಾರ ದಾನಿಗಳು ಮತ್ತು ವಿವಿಧ ಸ್ವಯಂ ಸೇವಾ ಸಂಸ್ಥೆಗಳು ನಿರಂತರವಾಗಿ ಈ ಉತ್ಸವವನ್ನು ಪ್ರೋತ್ಸಾಹಿಸಿದವು. ಇವೆಲ್ಲದರ ಹಿಂದೆ ಸಿ.ಪಿ. ಪರಮೇಶ್ವರಪ್ಪ ಎಲ್ಲರ ಕೊಂಡಿಯಾಗಿ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಎಲ್ಲಾ ಕಲಾವಿದರ ಅಚ್ಚುಮೆಚ್ಚಾದರು.

ಕಲಾ ಸೇವಾ ಸಂಘ ಕೇವಲ ಸ್ಪರ್ಧೆಗಳನ್ನು ನಡೆಸುವುದಲ್ಲದೆ ತಾನೇ ಅನೇಕ ಸ್ಪರ್ಧೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಸಂಸ್ಥೆ ಪ್ರದರ್ಶಿಸಿ ಬಹುತೇಕ ನಾಟಕಗಳ ರಾಜ್ಯಮಟ್ಟದ ಅನೇಕ ಬಹುಮಾನಗಳನ್ನು ಗಳಿಸಿದವು. ಕೇವಲ ಬಹುಮಾನಗಳನ್ನು ಗಳಿಸುವುದಷ್ಟೆ ಅಲ್ಲದೆ ಜನಮನವನ್ನು ಗೆದ್ದು ಹಲವು ಬಾರಿ ಈ ನಾಟಕಗಳು ಮರುಪ್ರದರ್ಶನವಾಗುತ್ತಿದ್ದವು. ಅಂದಿನ ದಿನಗಳಲ್ಲಿ ತಂಡದ ಎಲ್ಲರಲ್ಲಿಯೂ ಉತ್ಸಾಹ ತುಂಬಿ ತುಳುಕುತ್ತಿತ್ತು. ದಿನ ಕಳೆದಂತೆ ಎಲ್ಲ ತಂಡಗಳಂತೆಯೆ ಕಲಾ ಸೇವಾ ಸಂಘ ಅತ್ಯಂತ ಅದ್ದೂರಿಯಾಗಿ ೧೯೭೦ರಲ್ಲಿ ಬೆಳ್ಳಿ ಮಹೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಿತು. ಈ ಉತ್ಸವವಂತೂ ಇಡೀ ಚಿಕ್ಕಮಗಳೂರಿಗೆ ಮೆರಗನ್ನು ತಂದುಕೊಟ್ಟಿತ್ತು. ಅಂದಿನ ರಂಗಭೂಮಿಯ ಪ್ರಮುಖರಾಗಿದ್ದ ಶ್ರೀ ಗುಬ್ಬಿವೀರಣ್ಣ, ಬಿ. ಜಯಮ್ಮ, ಯೋಗಾನರಸಿಂಹ, ಜೋಮನದುಡಿ ಖ್ಯಾತಿ ವಾಸುದೇವರಾವ್, ಮಾಸ್ಟರ್ ಹಿರಣ್ಣಯ್ಯ, ಮೊದಲಾದವರನ್ನು ಸನ್ಮಾನಿಸಿ ಚಿಕ್ಕಮಗಳೂರು ತನ್ನ ರಂಗಭೂಮಿಯ ಹಿರಿತನವನ್ನು ಮೆರೆಯಿತು. ಇಡೀ ಉತ್ಸವದ ರೂವಾರಿಗಳಲ್ಲಿ ಶ್ರೀ ಸಿ. ಪಿ. ಪರಮೇಶ್ವರಪ್ಪನವರು ಒಬ್ಬರು.

ದಿನಗಳೆದಂತೆ ತಂಡದ ಸದಸ್ಯರು ಒಂದಲ್ಲ ಒಂದು ಕಾರಣಕ್ಕಾಗಿ (ವಯಸ್ಸು ಸೇರಿ) ತಂಡದಲ್ಲಿ ನಿಷ್ಕ್ರಿಯರಾಗತೊಡಗಿದರು. ಆದರೆ ಶ್ರೀ ಸಿ.ಪಿ.ಪರಮೇಶ್ವರಪ್ಪನವರು ತಂಡವನ್ನು ಕ್ರಿಯಾಶೀಲವಾಗಿಡಲು ಪ್ರಯತ್ನಿಸಿದರು. 1985ರ ಹೊತ್ತಿಗೆ ತಂಡ ಇನ್ನೇನು ನಿಂತೇ ಹೋಯಿತು ಎನ್ನುವ ಮಟ್ಟಿಗೆ ಬಂದಿತು. ತಂಡದ ಹಲವು ಸದಸ್ಯರು ದಿವಂಗತರಾಗಿದ್ದರು ಮತ್ತು ಕೆಲವರು ಆರ್ಥಿಕ ದುರ್ಬಲವಾಗಿದ್ದರು. ಇಂತಹ ಸಮಯದಲ್ಲಿ ಮೊದಲಿನಂತೆ ತಂಡವನ್ನು ಕ್ರಿಯಾಶೀಲಗೊಳಿಸಬೇಕೆಂಬ ಹಂಬಲದಿಂದ 1990ರಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಸಿ.ಪಿ. ಪರಮೇಶ್ವರಪ್ಪನವರು ಒಪ್ಪಿಕೊಂಡರು. ಹಳೆಯ ಕಲಾವಿದರ ಜೊತೆಗೆ ಹೊಸ ಕಲಾವಿದರುಗಳನ್ನು ಸೇರಿಸಲು ನಿರ್ಧರಿಸಿದರು. ಕಲಾವಿದರ ಹುಡುಕಾಟ ಮತ್ತೆ ಪ್ರಾರಂಭವಾಯಿತು.

ಮನೆ ಮನೆ ಅಲೆದು ಕೊನೆಗೂ ನಾಟಕದ ತಾಲೀಮು ಪ್ರಾರಂಭಿಸಿ ಬಿ.ಎಲ್. ವೇಣು ವಿರಚಿತ *"ಯಮಲೋಕದಲ್ಲಿ ಮಾನವ"* ನಾಟಕವನ್ನು ಕಲಿಯಲು ತಂಡ ನಿರ್ಧರಿಸಿತು. ಆದರೆ ನಿರ್ದೇಶಕರು ಯಾರು ಎಂಬ? ಪ್ರಶ್ನೆ ಎದುರಾಯಿತು. ಸರಿಯಾದ ನಿರ್ದೇಶಕರು ದೊರೆಯಲಾಗದೆ ಸಿ.ಪಿ. ಪರಮೇಶ್ವರಪ್ಪನವರು ತಾವೇ ನಿರ್ದೇಶನದ ಜವಾಬ್ದಾರಿಯನ್ನು ಹೊತ್ತರು. ಹೀಗೆ ಸಂಘಟನೆ, ನಿರ್ದೇಶನ ಎರಡು ಜವಾಬ್ದಾರಿ ಹೊತ್ತು ನಾಟಕ ತಾಲೀಮು ನಡೆಸಿದರು. 15 ದಿನಗಳ ನಾಟಕ ತರಬೇತಿ ನಡೆಯುವ ಹೊತ್ತಿಗೆ ಅರ್ಧ ಜನ ಅನೇಕ ಕಾರಣಗಳಿಂದಾಗಿ ಗೈರು ಹಾಜರ್, ಮತ್ತೆ ಅಲೆದಾಟ. ಕಲಾವಿದರ ಅನೇಕ ಸಮಸ್ಯೆಗಳಿಗೆ ಪರಿಹಾರ ರೂಪಿಸುವ ಕಾರ್ಯವನ್ನು ತಾವೇ ಮಾಡಿದರು. ಜಿಲ್ಲಾಧಿಕಾರಿಗಳ ಬಳಿ ಹೋಗಿ ಕಲಾವಿದರೊಬ್ಬರ ವರ್ಗಾವಣೆ ಆದೇಶ ರದ್ದು ಮಾಡಿಸುವುದರಿಂದ ಹಿಡಿದು, ಆರ್ಥಿಕ ಸಮಸ್ಯೆಗಳನ್ನು ನಿವಾರಿಸುವ ಹೊಣೆಯನ್ನು ತಾವೇ ಹೊತ್ತರು. ಹೀಗೆ ನಾಟಕದ ಪ್ರದರ್ಶನ ಯಶಸ್ವಿಯಾಗುವಲ್ಲಿ ತಮ್ಮ ಸಂಘಟನ ಶಕ್ತಿಯನ್ನು ಮೆರೆದರು. ಹೀಗೆ ಕಲಾ ಸೇವಾ ಸಂಘ ಮತ್ತೆ ಪುನರುಜ್ಜೀವನಗೊಂಡು ತನ್ನ ಹಳೆಯ ಮೆರಗನ್ನು ಪಡೆದುಕೊಳ್ಳುವತ್ತ ತಂಡವನ್ನು ಸಿ.ಪಿ. ಪರಮೇಶ್ವರಪ್ಪನವರು ಮುನ್ನಡೆಸಿದರು.

ತಂಡ ಸಕ್ರೀಯವಾಗಿರಬೇಕೆಂಬ ಉದ್ದೇಶದಿಂದ ಸತತವಾಗಿ ನಾಟಕ ಪ್ರದರ್ಶನಗಳನ್ನು ಏರ್ಪಡಿಸುವತ್ತ ಯೋಜನೆಗಳನ್ನು ಸಿ.ಪಿ. ಪರಮೇಶ್ವರಪ್ಪನವರು ನಿರೂಪಿಸಿದರು. ಒಂದಾದರೊಂದರಂತೆ ಹೊಸ ನಾಟಕಗಳನ್ನು ತಯಾರಿಸಿದರು.. ಈ ನಾಟಕಗಳನ್ನು ಗ್ರಾಮೀಣ ಜನರ ಮನರಂಜನೆಯ ಉದ್ದೇಶವಾಗಿಟ್ಟುಕೊಂಡು ತಯಾರಿಸಲಾಯಿತು. ಇವುಗಳಲ್ಲಿ ಪ್ರಮುಖವಾಗಿ *"ಬಳ್ಳಿ ಬಾಡಿತು"*, *"ಹೂವು ಅರಳಿತು"* *"ಯಾರಿಗೂ ಹೇಳ್ಬೇಡಿ"*, *"ಲರ್ನೆಡ್ ಲೇಡಿ"*, *"ತೆರೆದ ಹೃದಯ"* ಮುಂತಾದ ಸಾಮಾಜಿಕ ನಾಟಕಗಳ ನೂರಾರು ಪ್ರದರ್ಶನಗಳನ್ನು ಏರ್ಪಡಿಸಿದರು. ಜಿಲ್ಲೆಯ ಯಾವುದೇ ಕಾರ್ಯಕ್ರಮವಾದರೂ "ಕಲಾ ಸೇವಾ ಸಂಘದ" ಕಾರ್ಯಕ್ರಮ ಇರುವಂತಾಯಿತು. ಹೀಗೆ ೫೦ ವರ್ಷಗಳು ತುಂಬುವ ಹೊತ್ತಿಗೆ ಕಲಾ ಸೇವಾ ಸಂಘ ಸುಮಾರು ೩೫೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ಮಿಸಿದ ಖ್ಯಾತಿಯನ್ನು ಪಡೆಯಿತು.

ಕಲಾ ಸೇವಾ ಸಂಘ ನಾಟಕ ಪ್ರದರ್ಶನ ಹಾಗೂ ತನ್ನ ಉತ್ಸವಗಳ ಜೊತೆಗೆ ಸಾಂಸ್ಕೃತಿಕ ಕ್ಷೇತ್ರದ ಬೇರೆ ಕಾರ್ಯಕ್ರಮಗಳನ್ನು ನಡೆಸುವತ್ತ ಹಾಗೂ ಸಂಘಟಿಸುವತ್ತ ಶ್ರಮ ವಹಿಸಿತು.

ಭಾರತ ಯಾತ್ರಾ ಕೇಂದ್ರದ ನಾಟಕೋತ್ಸವ, ಅಜ್ಜಂಪುರದ ಕಲಾ ಸೇವಾ ಸಂಘದ ನಾಟಕ ಪ್ರದರ್ಶನ, ಕರ್ನಾಟಕ ಪ್ರಸಿದ್ಧ ತಂಡಗಳ ನಾಟಕ ಪ್ರದರ್ಶನ, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಯಶಸ್ವಿಗೆ ತರುವಲ್ಲಿ ಪರಮೇಶ್ವರಪ್ಪನವರ ಕಾಣಿಕೆ ಅಪಾರ.

1996 ಕಲಾ ಸೇವಾ ಸಂಘ ತನ್ನ 50 ವರ್ಷಗಳನ್ನು ಪೂರೈಸಿದ ಸಂದರ್ಭ ಕಲಾ ಸೇವಾ ಸಂಘ ಅದರ ಮೂಲಕ ಪರಮೇಶ್ವರಪ್ಪನವರ ರಂಗಭೂಮಿ ಕಾರ್ಯಗಳಿಗೆ ಒಂದು ಹೊಸ ತಿರುವು. ಇಡೀ ಚಿಕ್ಕಮಗಳೂರಿನ ಎಲ್ಲಾ ರಂಗಾಸಕ್ತರು ಈ ಉತ್ಸವದಲ್ಲಿ ಪಾಲ್ಗೊಂಡು, ಇದೊಂದು ಅಭೂತಪೂರ್ವ ಕಾರ್ಯಕ್ರಮವಾಯಿತು. ರಾಜ್ಯದ ಪ್ರಮುಖ ತಂಡಗಳನ್ನು ಕರೆಸಿ ಹತ್ತು ದಿನಗಳ ಬೃಹತ್ ನಾಟಕೋತ್ಸವದ ಸಂಘಟನೆ ಇದರೊಂದಿಗೆ ರಂಗಭೂಮಿಯ ಸಮಸ್ಯೆಗಳನ್ನು ಕುರಿತು ಚರ್ಚೆ, ವಿಚಾರ ಸಂಕಿರಣ. ನಾಡಿನ ಪ್ರಸಿದ್ಧ ರಂಗಕರ್ಮಿಗಳು ಈ ಉತ್ಸವದಲ್ಲಿ ಭಾಗವಹಿಸಿದರು. ಅಂದಿನ ನಾಟಕ ಅಕಾಡೆಮಿ ಅಧ್ಯಕ್ಷ ಡಾ|| ಕೆ. ಮರುಳಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಚಿತ್ರ ನಟ ಕೆ.ಎಸ್. ಅಶ್ವತ್ಥ್ ಹಾಗೂ ರಂಗಭೂಮಿಯ ದಿಗ್ಗಜಗಳು ಭಾವಹಿಸಿ, ಪರಮೇಶ್ವರಪ್ಪ ಹಾಗೂ ಕಲಾ ಸೇವಾ ಸಂಘದ ಚಟುವಟಿಕೆಗಳನ್ನು ಅಭಿಂದಿಸಿದರು. ಈ ಉತ್ಸವದಿಂದ ಆದ ಮುಖ್ಯ ಲಾಭವೆಂದರೆ ಸಂಸ್ಥೆ ಆರ್ಥಿಕವಾಗಿ ಸದೃಢವಾಗಿದ್ದು.

ಅಂದು ಪ್ರಕಟಿಸಿದ "ಸುವರ್ಣಸಿರಿ" ಸ್ಮರಣ ಸಂಚಿಕೆಯ ಜಾಹಿರಾತು ಹಾಗೂ ಉತ್ಸವದ ಎಲ್ಲಾ ಖರ್ಚುಗಳನ್ನು ಕಳೆದು ರೂ. 1,65,000-00 ಗಳು ನಿಶ್ಚಿತ ಠೇವಣಿಯಾಗಿ ಉಳಿಯಿತು. ಹೀಗೆ ಕಲಾ ಸೇವಾ ಸಂಘ ಪರಮೇಶ್ವರಪ್ಪನವರ ನೇತೃತ್ವದಲ್ಲಿ ಹಲವು ಕಾರ್ಯಕ್ರಮಗಳನ್ನು ಸುವರ್ಣ ಮಹೋತ್ಸವದಲ್ಲಿ ನಡೆಸಿ ಒಟ್ಟಾರೆ ವರ್ಷ ಮುಗಿಯುವ ವೇಳೆಗೆ 2 ಲಕ್ಷ ರೂಪಾಯಿ ಹಣವನ್ನು ಬ್ಯಾಂಕಿಗೆ ಜಮಾ ಮಾಡಿ ನಿಶ್ಚಿತ ಠೇವಣಿಯನ್ನು ಸ್ಥಾಪಿಸಿತು. ಯಾವುದೇ ಸಂಸ್ಥೆ ಪ್ರಾಮಾಣಿಕವಾಗಿ ಕೆಲಸ ಮಾಡಿ ತನ್ನ ಸ್ವಂತ ಸಂಪಾದನೆಯಿಂದ ಆರ್ಥಿಕವಾಗಿ ಸದೃಢವಾಗುವುದು ಎಂತಹವರಿಗೂ ಸಂತಸದ ವಿಷಯ. ಇದರಿಂದಾಗಿ ಸಂಘದ ಚಟುವಟಿಕೆಗಳು ಇನ್ನಷ್ಟು ವಿಸ್ತಾರಗೊಂಡವು.

ಶ್ರೀ ಪರಮೇಶ್ವರಪ್ಪ ಕಾರ್ಯ ವೈಖರಿ, ಅವರ ರಂಗಶಿಸ್ತು, ಸಂಘಟನಾ ಸಾಮರ್ಥ್ಯ ಇವೆಲ್ಲವುಗಳನ್ನು ಗಮನಿಸಿ 1996ನೇ ಸಾಲಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ ಗೌರವಿಸಿತು. ಸಹೃದಯಿ ಪರಮೇಶ್ವರಪ್ಪನವರಿಗೆ ಬಂದ ಪ್ರಶಸ್ತಿ ತಮಗೇ ಬಂತೇನೋ ಎಂಬಂತೆ ಚಿಕ್ಕಮಗಳೂರಿನ ಎಲ್ಲ ರಂಗಕರ್ಮಿಗಳು ಸಂಭ್ರಮಿಸಿದರು. ಬಹುಶಃ ಚಿಕ್ಕಮಗಳೂರಿನ ರಂಗಕರ್ಮಿಗಳಿಗೆ 25 ವರ್ಷಗಳ ಇತಿಹಾಸದಲ್ಲಿ ಬಂದ ಮೊದಲನೆ ಪ್ರಶಸ್ತಿ. ನಗರದ ಸುಪ್ರಸಿದ್ಧ ವೈದ್ಯ, ರಾಜ್ಯ ಪ್ರಶಸ್ತಿ ವಿಜೇತ ಸಮಾಜ ಸೇವಕ ಡಾ|| ಜಿ.ಪಿ. ಕೃಷ್ಣೇಗೌಡ, ಯಶವಂತ್, ಜ್ವಾಲನಪ್ಪ, ಗಿರಿಜಾ ಶಂಕರ್, ಶಿವಪ್ಪ ಹೀಗೆ ರಂಗಭೂಮಿಯ ಎಲ್ಲರು ಸೇರಿ ಶ್ರೀ ಪರಮೇಶ್ವರಪ್ಪ ನವರಿಗೆ ಅಭಿನಂದನೆಗಳ ಸುರಿಮಳೆಯನ್ನೆ ಹರಿಸಿದರು. ಉಡುಪಿಯಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಏರ್ಪಡಿಸಿತ್ತು. ಅಲ್ಲಿನ ಕಾರ್ಯಕ್ರಮಕ್ಕೂ ಸಿ.ಪಿ. ಪರಮೇಶ್ವರಪ್ಪನವರನ್ನು ಅಭಿನಂದಿಸಲು ಚಿಕ್ಕಮಗಳೂರಿನಿಂದ ಬಂದ ಅಭಿಮಾನಿಗಳ ಸಂಖ್ಯೆ ಕಡಿಮೆ ಇರಲಿಲ್ಲ. ಇಷ್ಟೆಲ್ಲಾ ಮಾತುಗಳನ್ನು ನಾನು ಹೇಳುವ ಉದ್ದೇಶ ಒಬ್ಬ, ಸಾರ್ಥಕ ರಂಗ ಸಂಘಟಕ ಹೇಗೆ ಜನ ಪ್ರೀತಿಯನ್ನು

ಗಳಿಸಬಹುದು ಎಂಬುದು. ಯಾವುದೇ ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳು ಇವರನ್ನು ಎಡತಾಕಿದರೂ ಇವರು ಆರಕ್ಕೇರಲಿಲ್ಲ ಮೂರಕ್ಕಿಳಿಯಲಿಲ್ಲ ಎಂಬಂತಿದ್ದರು. ನಂತರದ ದಿನಗಳಲ್ಲಿ ತನ್ನ ಜವಾಬ್ದಾರಿ ಇನ್ನು ಹೆಚ್ಚಿದೆ ಎನ್ನುವ ರೀತಿಯಲ್ಲಿ ರಂಗ ಚಟುವಟಿಕೆ ನಡೆಸಿದ್ದು ನಿಜಕ್ಕೂ ಅಭಿನಂದನೀಯ.

1997ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸಮಾರಂಭವನ್ನು ಚಿಕ್ಕಮಗಳೂರಿನಲ್ಲಿ ನಡೆಸಬೇಕೆಂಬುದು ಶ್ರೀ ದೀಪಕರವರ ಆಶಯ. ಆದರಂತೆ ಅಕಾಡೆಮಿ ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು. ಇದಂತು ವೈಶಿಷ್ಟ್ಯ ಪೂರ್ಣ ಕಾರ್ಯಕ್ರಮ. ಅಕಾಡೆಮಿ ಮೊಟ್ಟ ಮೊದಲ ಬಾರಿಗೆ ಪ್ರಶಸ್ತಿ ಪ್ರದಾನ ಸಮಾರಂಭದ ಜೊತೆಗೆ ನಾಟಕೋತ್ಸವವನ್ನು ಏರ್ಪಡಿಸತ್ತು. ಶ್ರೀ ಬಿ. ಎಲ್. ಶಂಕರ್‌ರವರ ನೇತೃತ್ವದಲ್ಲಿ ಪರಮೇಶ್ವರಪ್ಪನವರು ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು. ಚಿಕ್ಕಮಗಳೂರಿನ ರಂಗ ತಂಡಗಳ ಪ್ರಮುಖರಾದ ಶ್ರೀ ಯಶವಂತ್, ಗಿರಿಜಾ ಶಂಕರ್. ಜ್ವಾಲನಪ್ಪ, ಶಿವಪ್ಪ, ಮಂಜುನಾಥ್ ಕಾಮತ್, ಡಾ|| ಕೃಷ್ಣೇಗೌಡ, ಶ್ರೀನಿವಾಸಶೆಟ್ಟರು, ಮುಂತಾದವರ ನೇತೃತ್ವದಲ್ಲಿ ನಡೆದ ಈ ಸಮಾರಂಭ ಜಿಲ್ಲೆಯ ಇತಿಹಾಸದಲ್ಲಿ ದಾಖಲಾಗುವ ಸಮಾರಂಭ. ಉತ್ಸವ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದವರು ಶ್ರೀ ಸಿ. ಪಿ. ಪರಮೇಶ್ವರಪ್ಪ ಹಾಗೂ ಶ್ರೀ ದೀಪಕ್ ಪ್ರತಿಯೊಂದು ಹಂತದಲ್ಲೂ ಉತ್ಸವವನ್ನು ನಿರ್ವಹಿಸಿದ ರೀತಿ ಇದೊಂದು ರಾಷ್ಟ್ರೀಯ ಉತ್ಸವವೇನೋ ಎಂಬಂತಿತ್ತು. ಪ್ರಶಸ್ತಿ ನಡೆಯಲು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಎಲ್ಲಾ ರಂಗಕರ್ಮಿಗಳಿಗೆ, ಕಲ್ಪನೆಗೂ ಮೀರಿದ ಸಮಾರಂಭ. ಎಲ್ಲಾ ಪ್ರಶಸ್ತಿ ವಿಜೇತರನ್ನು ಆರತಿ ಅಕ್ಷತೆಗಳ ಮೂಲಕ ಸಾಂಪ್ರದಾಯಿಕವಾಗಿ ಸ್ವಾಗತಿಸಿ ಮಲೆನಾಡ ಸಂಸ್ಕೃತಿ ಪ್ರತೀಕವಾಗಿ ಏಲಕ್ಕಿ, ಮೆಣಸು, ಏಲಕ್ಕಿ ಹಾರ, ಕೊಬ್ಬರಿ, ಕಾಫಿ, ಮುಂತಾದ ಪೊಟ್ಟಣಗಳೊಂದಿಗೆ ಅಕಾಡೆಮಿಯ ಗೌರವ ಪ್ರಶಸ್ತಿಗಳನ್ನು ನೀಡಿ ಗೌರವಿಸಿದ್ದು ಅತ್ಯಂತ ಸ್ಮರಣೀಯ ಕಾರ್ಯಕ್ರಮ.

ಇಂತಹ ಬೃಹತ್ ಕಾರ್ಯಕ್ರಮವನ್ನು ಸಂಘಟಿಸುವಲ್ಲಿ ಸುಮಾರು 15 ದಿನಗಳ ಕಾಲ ಸತತವಾಗಿ ದುಡಿದಿದ್ದು, ಶ್ರೀ ಪರಮೇಶ್ವರಪ್ಪ ಕಾರ್ಯಕ್ರಮದ ವೇಳೆಗೆ ಸುಸ್ತಾಗಿದ್ದರು. ಊಟದ ವ್ಯವಸ್ಥೆಯಿಂದ ಹಿಡಿದು ಸ್ವಾಗತ ಸಮಿತಿಯವರೆವಿಗೂ ಉಸ್ತುವಾರಿ ಅವರದ್ದೆ. ಈ ಕಾರ್ಯಕ್ರಮದ ಪ್ರಚಾರ ಮಾಡಲು ಹೆಚ್ಚು ಕಡಿಮೆ ಎಲ್ಲರ ಮನೆಗಳಿಗೂ ಪರಮೇಶ್ವರಪ್ಪ ಅಲೆದಿದ್ದರು. ಅಂದು ಏರ್ಪಡಿಸಿದ್ದ ಗ್ರಾಮೀಣ ರಂಗಭೂಮಿ ಕುರಿತ ವಿಚಾರ ಸಂಕಿರಣ ಒಂದು ರೀತಿಯ ರಂಗ ಸಮ್ಮಿಲನವಾಗಿತ್ತು. ರಾಜ್ಯದ ಪ್ರಮುಖ ರಂಗಕರ್ಮಿಗಳು ಈ ಸಂಕಿರಣಕ್ಕೆ ತಮ್ಮ ವಿಚಾರಗಳ ಮೂಲಕ ಕಳೆತಂದಿದ್ದರು. ಪ್ರಶಸ್ತಿ ಸಮಾರಂಭದಲ್ಲಿ ಸಾರ್ವಜನಿಕರು ಒತ್ತಾಯಿಸಿದ್ದು, ಶ್ರೀ ಸಿ.ಪಿ. ಪರಮೇಶ್ವರಪ್ಪನವರನ್ನು ಸನ್ಮಾನಿಸಲು, ಉಡುಪಿಯಲ್ಲಿ ಸಿ.ಪಿ. ಪರಮೇಶ್ವರಪ್ಪನವರಿಗೆ ಪ್ರಶಸ್ತಿ ನೀಡಿದಾಗ ಭಾಗವಹಿಸದಿದ್ದವರು ಇಂದಿನ ಸನ್ಮಾನದಲ್ಲಿ ನೋಡಿ ಆನಂದಿಸಿದರು. ಒಟ್ಟಾರೆ ಮರುಳಸಿದ್ದಪ್ಪನವರ ಅಧ್ಯಕ್ಷತೆ ಕೊನೆಯ ವರ್ಷದ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ. ಶ್ರೀ ಟಿ.ಎಲ್. ಶಂಕರ್, ದೀಪಕ್, ಹಾಗೂ ಸಿ.ಪಿ. ಪರಮೇಶ್ವರಪ್ಪನವರ ನೇತೃತ್ವದಲ್ಲಿ ಭರ್ಜರಿಯಾಗಿ ಆಯಿತು.

ನಂತರದ ದಿನಗಳಲ್ಲಿ ಪರಮೇಶ್ವರಪ್ಪ ಮತ್ತಷ್ಟು ಕ್ರಿಯಾಶೀಲವಾಗಿ ಹವ್ಯಾಸಿ ರಂಗಭೂಮಿಯ ಅಭಿವೃದ್ಧಿಗೆ ದುಡಿದರು.

ಶಿವಸಂಚಾರದ ಪ್ರಮುಖ ನಾಟಕಗಳಾದ *'ಶೋಕ ಚಕ್ರ'*, *'ಉರಿಲಿಂಗ ಪೆದ್ದಿ'*, *'ಮಹಾ ಬೆಳಕು'* ನಾಟಕಗಳು ನಿರೀಕ್ಷೆಗೂ ಮೀರಿ ಯಶಸ್ವಿಯಾದವು. ನಂತರದ ದಿನಗಳಲ್ಲಿ ಡಾ|| ತಿಪ್ಪೇಶಿ, *'ಮಹಿಪಥ ಕ್ಯಾಣನ ತಂಬ್ಗಿ'*, *'ಆಲ್ ದಿ ಬೆಸ್ಟ್'* ಮುಂತಾದ ನಾಟಕಗಳು ಸತತವಾಗಿ ಪ್ರದರ್ಶನಗೊಳ್ಳುವಲ್ಲಿ ಪರಮೇಶ್ವರಪ್ಪನವರ ಶ್ರಮ ಅಪಾರ. ಚಿಕ್ಕಮಗಳೂರಿನ ಜನತೆಗೆ ಹವ್ಯಾಸಿ ನಾಟಕಗಳ ಪರಿಚಯ ಹೊಸದೇನೂ ಅಲ್ಲ. ಯಶವಂತ, ಮೋಹನ್, ಡಾ|| ಕೃಷ್ಣೇಗೌಡ, ಜ್ವಾಲನಪ್ಪ, ಮುಂತಾದವರ ಆಸಕ್ತಿಯಿಂದ ಹೊಸಸಂವೇದನೆಯ ನಾಟಕಗಳು ಆಗಿಂದಾಗ್ಗೆ ಆಗುತ್ತಲೇ ಇರುತ್ತವೆ. ಇದರ ಮಧ್ಯೆ ಕೃಷ್ಣಮೂರ್ತಿ ಕವತಾರ ಅವರನ್ನು ಆಹ್ವಾನಿಸಿ ತಯಾರಿಸಿದ ಮಕ್ಕಳ ನಾಟಕ ಮತ್ತು ಹವ್ಯಾಸಿ ತಂಡದ ಕಲಾವಿದರೆಲ್ಲರೂ ಸೇರಿ ಮಾಡಿದ ನಾಟಕ, ಚಿಕ್ಕಮಗಳೂರಿನ ತುಂಬ ರಂಗಚಟುವಟಿಕೆ ತೀವ್ರವಾಗಲು ಕಾರಣವಾಯಿತು. ಕಲಾಸೇವಾ ಸಂಘ, ಶ್ರೀ ಸಿ.ಜಿ. ಕೃಷ್ಣಸ್ವಾಮಿ ಅಧ್ಯಕ್ಷರಾದಾಗ ಏರ್ಪಡಿಸಿದ್ದ *'ರಂಗ ಸಂವಾದ'* ಮತ್ತಷ್ಟು ರಂಗ ವಿಷಯಗಳನ್ನು ಚರ್ಚಿಸಲು ಕಾರಣವಾಯಿತು. ಡಾ|| ಕೃಷ್ಣೇಗೌಡರ ಆಶಾಕಿರಣ ಅಂತಹ ಮಕ್ಕಳ ಶಾಲೆಯ ವಿದ್ಯಾರ್ಥಿಗಳ *'ಕೆರೆಗೆ ಹಾರ'* ಜಾನಪದ ನಾಟಕದ ಪ್ರದರ್ಶನ, ಶ್ರೀ ಸುರೇಶ್ ದೀಕ್ಷಿತ್ ನಿರ್ದೇಶನದಲ್ಲಿ ತಯಾರಾಗಿತ್ತು. ಈ ನಾಟಕದ ಯಶಸ್ಸಿಗೆ ಶ್ರೀ ಸಿ.ಪಿ. ಪರಮೇಶ್ವರಪ್ಪನವರ ಶ್ರಮವೂ ಕೂಡ ಸೇರಿತ್ತು. ಕುವೆಂಪು ರಂಗಮಂದಿರದಲ್ಲಿ ಪ್ರದರ್ಶನವನ್ನೇರ್ಪಡಿಸಿದ್ದ ಸಿ.ಪಿ. ಪರಮೇಶ್ವರಪ್ಪ ಮಕ್ಕಳ ಪ್ರತಿಭೆಯಿಂದ ಮನಸೋತರು. ಇಂತಹ ಕಾರ್ಯದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿದ್ದಕ್ಕೆ ಧನ್ಯತೆಯನ್ನು ಅನುಭವಿಸಿದರು.

ಸಿ.ಪಿ. ಪರಮೇಶ್ವರಪ್ಪನವರು ಏರ್ಪಡಿಸಿದ್ದ, ಕರ್ನಾಟಕದ ಸುಪ್ರಸಿದ್ಧ ತಾರೆ ಸುಭದ್ರಮ್ಮ ಮನ್ಸೂರ್ ಅಭಿನಯಿಸಿದ್ದ 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಪ್ರದರ್ಶನ ಕಲಾಸಕ್ತರ ಪ್ರೀತಿಯನ್ನು ಗಳಿಸಿತು. ಕಂದಪದ್ಯ ಹಾಗೂ ವಚನಗಳ ವಿಶಿಷ್ಟ ರೀತಿಯ ಹಾಡುಗಾರಿಕೆಯ ಈ ಪೌರಾಣಿಕ ನಾಟಕ ಎಲ್ಲರಿಗೂ ವಿಶೇಷ ಅನುಭವ ನೀಡಿತು. ಹೀಗೆ ಸಿ.ಪಿ. ಪರಮೇಶ್ವರಪ್ಪನವರು ರಂಗಭೂಮಿಯ ವಿವಿಧ ಪ್ರಕಾರಗಳನ್ನು ಕರೆಸುವಲ್ಲಿ ಮತ್ತು ಅಂತಹ ತಂಡಗಳಿಗೆ ಪ್ರೋತ್ಸಾಹ ನೀಡುವುದರಲ್ಲಿ ಪೂರ್ಣವಾಗಿ ತೊಡಗಿಸಿಕೊಂಡರು.

ಸಿ.ಪಿ. ಪರಮೇಶ್ವರಪ್ಪ ಸದಾ ಒಂದಿಲ್ಲೊಂದು ಕಾರ್ಯಕ್ರಮ ಆಯೋಜನೆ ಮಾಡುತ್ತಲೆ ಇರುವ ಜಾಯಮಾನದವರು. ನಾಟಕೋತ್ಸವದ ಸಂದರ್ಭದಲ್ಲಿ ನಾವು ಶ್ರೀ ಬಿ.ಎಲ್. ಶಂಕರ್‌ರವರೊಂದಿಗೆ ಡಾ|| ಜಿ.ವಿ. ಅತ್ರಿ ಪ್ರತಿವರ್ಷ ನಡೆಸುವ ಸಂಗೀತ ಗಂಗಾ ಸಂಸ್ಥೆಯ ಕನ್ನಡ ಸಂಗೀತ ಸಮ್ಮೇಳನವನ್ನು ಏರ್ಪಡಿಸುವ ಕುರಿತು ಚರ್ಚಿಸುತ್ತಿದ್ದೆವು. ಪುನಃ ಸಿ.ಪಿ. ಪರಮೇಶ್ವರಪ್ಪನವರದು ಒಂದೆ ಮಾತು "ಸಾರ್ ಏನಾದ್ರೂ ಮಾಡಿ ಸಂಗೀತ ಸಮ್ಮೇಳನ ಚಿಕ್ಕಮಗಳೂರಿನಲ್ಲಿ ಮಾಡಿಸಿ" ಎಂದು ದುಂಬಾಲು ಬಿದ್ದರು. ಹಾಗೂ ಮಂಜುನಾಥ್ ಕಾಮತ್, ಮೋಹನ್, ಡಾ|| ಕೃಷ್ಣೇಗೌಡ, ಮುಂತಾದವರನ್ನು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ

ಪ್ರೇರೇಪಿಸಿದರು. ಬಿ.ಎಲ್. ಶಂಕರ್ ಸಿ.ಪಿ. ಪರಮೇಶ್ವರಪ್ಪನವರ ಸಲಹೆಗೆ ಮನ್ನಣೆ ನೀಡಿದರು. ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ 'ಕನ್ನಡ ಸಂಗೀತ ಸಮ್ಮೇಳನ' ಚಿಕ್ಕಮಗಳೂರಿನಲ್ಲಿ ನಡೆಯಲು ಕಾರಣರಾದರು.

ಕನ್ನಡ ಸಂಗೀತ ಸಮ್ಮೇಳನ ಇದೊಂದು ದೊಡ್ಡ ಕಾರ್ಯಕ್ರಮ, ನಾಡಿನ ಎಲ್ಲಾ ಕವಿಗಲು, ಹಾಡುಗಾರರು, ಪಕ್ಕವಾದ್ಯದವರು ಎಲ್ಲಾ ಸೇರಿ ನಡೆಸುವ ಈ ಉತ್ಸವಕ್ಕೆ ಸುಮಾರು ೭ ಲಕ್ಷ ರೂಪಾಯಿ ಅಂದಾಜು ವೆಚ್ಚ ಮಾಡಲಾಗುತ್ತು. ಹಣದ ಜವಾಬ್ದಾರಿ ಜೊತೆ ಸಮ್ಮೇಳನ ನಿರ್ವಹಿಸುವ ಕಾರ್ಯ, ಹೇಳಿ ಕೇಳಿ ಬಿ.ಎಲ್. ಶಂಕರ್ ಶಿಸ್ತಿಗೆ ಹೆಸರಾದರು ಪುನಃ ಈ ಸಮ್ಮೇಳನದ ಉಸ್ತುವಾರಿ ನೋಡಿಕೊಳ್ಳಲು ಶ್ರೀ ಸಿ.ಪಿ. ಪರಮೇಶ್ವರಪ್ಪನವರಿಗೆ ವಹಿಸಿದರು.

ಅತ್ಯಂತ ಯಶಸ್ವಿಯಾಗಿ ನಡೆದ ಈ ಸಮಾರಂಭ ಮುಂದೆ ಶಾಶ್ವತವಾಗಿ ಸುಗಮ ಸಂಗೀತ ಶಾಲೆಯೊಂದು ಪ್ರಾರಂಭವಾಗಲು ಕಾರಣವಾಯಿತು. ಈ ಉತ್ಸವದಲ್ಲಿ ಬಂದಿದ್ದ ಎಲ್ಲ ಸುಗಮ ಸಂಗೀತ ಗಾಯಕರು ಪ್ರತಿ ತಿಂಗಳು ಚಿಕ್ಕಮಗಳೂರಿಗೆ ಬಂದು ಸುಗಮ ಸಂಗೀತ ತರಗತಿಗಳನ್ನು ನಡೆಸಲು ಒಪ್ಪಿದ್ದು ಒಂದು ದೊಡ್ಡ ವಿಶೇಷ. ಸಮ್ಮೇಳನ ಮುಗಿದು ಮೂರು ವರ್ಷವಾಯಿತು. ಜಿ.ವಿ. ಅತ್ರಿ ಅಕಾಲಿಕ ಮರಣಕ್ಕೆ ತುತ್ತಾದರು. ಆದರೆ ಸಂಗೀತದ ತರಗತಿಗಳು ಯಶಸ್ವಿಯಾಗಿ ನಡೆಯುತ್ತಿವೆ. ಈ ಉತ್ಸವದ ಮೂಲಕ ಚಿಕ್ಕಮಗಳೂರಿನಲ್ಲಿ ಸಾಕಷ್ಟು ರಂಗ ಸಂಘಟಕರು ಸೃಷ್ಟಿಯಾದದ್ದು, ಸಿ.ಪಿ. ಪರಮೇಶ್ವರಪ್ಪ ತಾವೊಬ್ಬರೆ ಬೆಳೆಯದೆ ಇತರ ಯಶಸ್ವಿ ಸಂಘಟಕರನ್ನು ಬೆಳೆಸಲು ಕಾರಣರಾದರು.

ಚಿಕ್ಕಮಗಳೂರಿನ ತಾಲ್ಲೂಕು ಘಟಕದ ಪದಾಧಿಕಾರಿಗಲಾದ ಸಿ.ಪಿ. ಪರಮೇಶ್ವರಪ್ಪ ಮೊಟ್ಟಮೊದಲ ಬಾರಿಗೆ ತಾಲ್ಲೂಕು ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ಅದ್ದೂರಿಯಾಗಿ ನಡೆಸಿದರು. ಇದೊಂದು ಜಿಲ್ಲಾ ಉತ್ಸವವೇನೋ ಎಂಬಂತೆ ನಡೆಯಿತು. ಖ್ಯಾತ ವಿಮರ್ಶಕ ಪ್ರೊ ಎಲ್.ಎಸ್. ಶೇಷಗಿರಿರಾವ್ ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ|| ಎಚ್.ಎಸ್. ವೆಂಕಟೇಶಮೂರ್ತಿ, ಹೀಗೆ ರಾಜ್ಯದ ಸಾಹಿತ್ಯ ಕ್ಷೇತ್ರದ ಪ್ರಮುಖರು ಭಾಗವಹಿಸಿ ಸಮಾವೇಶದ ಮೌಲ್ಯಗಳನ್ನು ಹೆಚ್ಚಿಸಿದರು. ನನಗಂತೂ ಪ್ರತಿದಿನ ರಾತ್ರಿ ಚಿಕ್ಕಮಗಳೂರಿನಿಂದ ಕನಿಷ್ಠ ಎರಡು ದೂರವಾಣಿ ಕರೆಗಳಂತೂ, ಸಿ.ಪಿ. ಪರಮೇಶ್ವರಪ್ಪನವರಿಂದ ಹಾಗೂ ಮಂಜುನಾಥ್ ಕಾಮತ್‌ರವರಿದೆ ಇದ್ದೆ ಇರುತ್ತಿತ್ತು. ಬೆಂಗಳೂರಿನ ಸಾಹಿತಿಗಳ ದಂಡು ಚಿಕ್ಕಮಗಳೂರು ತಲುಪುವವರೆಗೆ 15 ದಿನ ಈ ಕಾಟ ಇದ್ದೇ ಇತ್ತು. ನಾನು ಕೆಲವು ಬಾರಿ ಬೇಸರಿಸಿದರೂ ಇವರಿಬ್ಬರೂ ಎಂದೂ ಬೇಸರಿಸುತ್ತಿರಲಿಲ್ಲ. ಸಮಾವೇಶ ಮುಗಿದು ಮರುದಿನವೆ ಭಾಗವಹಿಸಿದ ಎಲ್ಲ ಅತಿಥಿಗಳಿಗೆ ಸಹಕಾರ ನೀಡಿದವರಿಗೆ ಕೃತಜ್ಞತ ಪತ್ರ ರವಾನೆ. ಹೀಗೆ ಸಂಘಟನೆಯ ಎಲ್ಲಾ ಮುಖಗಳನ್ನು ಬಲ್ಲವರು ಸಿ.ಪಿ. ಪರಮೇಶ್ವರಪ್ಪನವರು.

ಸಿ.ಪಿ. ಪರಮೇಶ್ವರಪ್ಪನವರು ಮಹಾದಾಸೆ ಎಂದರೆ ರಂಗಭೂಮಿ, ಸಾಹಿತ್ಯ, ಸಂಗೀತ ಹಾಗೂ ನೃತ್ಯ ಎಲ್ಲಾ ಪ್ರಾಕಾರಗಳ ಹೊಸತನವನ್ನು ಚಿಕ್ಕಮಗಳೂರಿನ ಜನತೆಗೆ ಉಣಬಡಿಸುವುದು. ಎಲ್ಲಾ ಪ್ರಕಾರದ ಕಲಾವಿದರನ್ನು ಚಿಕ್ಕಮಗಳೂರಿಗೆ ಕರೆಸಿ ಸನ್ಮಾನಿಸುವುದು ಇನ್ನೂ ಹಲವು.

ಇದಲ್ಲದೆ ತಮ್ಮ ಕಲ್ಪನೆಯ ಕೂಸಾದ ತಮಗೆ ವ್ಯಕ್ತಿತ್ವವನ್ನು ರೂಪಿಸಲು ಅವಕಾಶ ಮಾಡಿಕೊಟ್ಟ 'ಕಲಾ ಸೇವಾ ಸಂಘ' ವನ್ನು ರಾಜ್ಯವ್ಯಾಪಿ ಸಂಘಟನೆಯನ್ನಾಗಿ ನಿರ್ಮಿಸುವುದು. ಈ ನಿಟ್ಟಿನಲ್ಲಿ ಈಗಾಗಲೆ ಬೆಳಕಿನ ಉಪಕರಣ, ಸಂಗೀತದ ತರಬೇತಿಗಾಗಿ ಕಿಬೋರ್ಡ್, ತಮಟೆ, ತಬಲ, ಅಲ್‌ಮೇರಗಳು, ಕಚೇರಿ ಉಪಕರಣಗಳು, ಮೂರು ಹಾರ್ಮೋನಿಯಂ, ಒಂದು ಲೆಗ್ ಹಾರ್ಮೋನಿಯಂ ಹೀಗೆ ಸಾಕಷ್ಟು ರಂಗ ಸಲಕರಣೆಗಳನ್ನು ಕಲಾ ಸೇವ ಸಂಘ ಹೊಂದಿದೆ. ಕಲಾ ಸೇವಾ ಸಂಘದಲ್ಲಿ ನಾಟಕ ವಿಭಾಗವಷ್ಟೆ ಅಲ್ಲದೆ ಸಂಗೀತ ವಿಭಾಗವನ್ನು, ತರಬೇತಿ ಹಾಗೂ ಪ್ರದರ್ಶನಗಳನ್ನು ನೀಡುವ ಸಲುವಾಗಿ ತೆರೆಯಲಾಗಿದೆ. ಪ್ರತಿ ತಿಂಗಳು ಕನಿಷ್ಠ ಎರಡು ಕಾರ್ಯಕ್ರಮಗಳನ್ನು ನಡೆಸಲೇಬೇಕೆಂಬ ಹಂಬಲ ಸಿ.ಪಿ. ಪರಮೇಶ್ವರಪ್ಪನವರದು. ಅವರ ಅಸೆ ಆಕಾಂಕ್ಷೆಗಳು ಈಡೇರಲಿ ಎಂದು ಹಾರೈಸೋಣ.



# ಶ್ರೀನಿವಾಸ ಜಿ ಕಪ್ಪಣ್ಣ

## ಹೂಲಿ ಶೇಖರ್

ಹವ್ಯಾಸಿ ಕನ್ನಡ ರಂಗಭೂಮಿಯಲ್ಲಿ ಕಪ್ಪಣ್ಣ ವಿಶಿಷ್ಟ ವ್ಯಕ್ತಿ. ತನ್ನ ಸ್ನೇಹಪರ ಮಾತುಗಳು, ಆಗಾಗ ನಗೆಬುಗ್ಗೆ ಚಿಮ್ಮಿಸುವ ಚಟಾಕಿಗಳು, ಸದಾ ಝುಳು ಝುಳಿಸುವ ರಂಗನಿಷ್ಠೆಯಿಂದಾಗಿ ಕಪ್ಪಣ್ಣ ಎಲ್ಲರಿಗೂ ಅಕ್ಕರೆಯ ಅಣ್ಣ. ಇಂದು ಕ್ಷೇತ್ರದಲ್ಲಿ ನಟರಾಗಿ ನಾಟಕಕಾರರಾಗಿ, ನಿರ್ದೇಶಕರಾಗಿ ರಾಜ್ಯ, ರಾಷ್ಟ್ರವ್ಯಾಪ್ತಿ ಹೆಸರು ಮಾಡಿರುವ ಬಹುತೇಕರಿಗೆ ಕಪ್ಪಣ್ಣ ಪ್ರಿಯರಾಗಲು ಇದೇ ಕಾರಣ. ಇಂದು ರಂಗಭೂಮಿಯಲ್ಲಿ ಕೆಲಸ ಮಾಡುವ ಅನೇಕ ಪ್ರತಿಭೆಗಳಿವೆ, ಆದರೆ ಬಹುತೇಕರಿಗೆ ರಂಗಶ್ರದ್ಧೆ ಇಲ್ಲದ್ದರಿಂದ ನಡುವೆಯೇ ಮಿಂಚಿ ಮಾಯವಾಗುವವರ ಸಂಖ್ಯೆಯೇ ಹೆಚ್ಚು. ಶ್ರದ್ಧೆ ಅನ್ನೋದು ಒಂದು ಕಸುಬಲ್ಲ. ಶ್ರದ್ಧೆ ವ್ಯಕ್ತಿಯ ಮನಸ್ಸಿನ ತನ್ಮಯತೆ. ಅದು ಒಳಗಿನಿಂದಲೇ ಹುಟ್ಟಬೇಕು. ಹಾಗೆ ಹುಟ್ಟಿದ್ದು ವ್ಯಕ್ತಿಯ ಬದುಕಿನ ಶೈಲಿಯನ್ನೇ ಬದಲಿಸುತ್ತದೆ. ಕಪ್ಪಣ್ಣ ಬೆಳೆದದ್ದೇ ಹಾಗೆ. ತನ್ಮಯತೆ ಮನಸ್ಸಿನ ಗುಣವಾದ್ದರಿಂದಲೇ ಅವರು ಅಷ್ಟೆಲ್ಲಾ ಸಾಧಿಸಲು ಸಾಧ್ಯವಾದದ್ದು.

ಕನ್ನಡದಲ್ಲಿ ನೂರಾರು ರಂಗಪ್ರತಿಭೆಗಳ ಹೆಸರು ಹೇಳಬಲ್ಲೆವು. ಹಾಗೇ ಹೇಳಿಯೂ ಅನೇಕರು ಹೊರಗುಳಿಯಲೂ ಬಲ್ಲರು. ಆದರೆ ರಂಗಪ್ರತಿಭೆಗಳಿಗೆ ಬೆಳಕು ಚೆಲ್ಲುವ, ಅವರಿಗೆ ಮಡಿಹಾಸುವ ಕೆಲಸವನ್ನೂ ಪ್ರೀತಿಸುವ ಜನ ಬೆರಳೆಣಿಕೆಯಷ್ಟು. ಬೆಂಗಳೂರಿನ ರಂಗಭೂಮಿಯ ಸಂಘಟನಾ ಕ್ಷೇತ್ರದಲ್ಲಿ ಈ ಹಿಂದೆ ಹೆಸರು ಮಾಡಿದ್ದ ಶ್ರೀ ವೇಣುಗೋಪಾಲರೆಡ್ಡಿ, ಪ್ರೊ|| ಬಿ.ಸಿ. ಮುಂತಾದವರು ಕಪ್ಪಣ್ಣನವರ ಸಂಘಟನಾ ಶಕ್ತಿಯನ್ನು ಜಾಗೃತಗೊಳಿಸಿದವರು. ಸಂಘಟನಾ ಕ್ಷೇತ್ರದಲ್ಲಿ ಎಲ್ಲಿಯವರೆಗೆ ವ್ಯಕ್ತಿ ಕ್ರಿಯಾಶೀಲನಾಗಿರುತ್ತಾನೋ ಅಲ್ಲಿಯವರೆಗೆ ಎಲ್ಲಾ ತಂಡಗಳೂ ಕ್ರಿಯಾಶೀಲವಾಗಿರುತ್ತವೆ. ಯಾಕೆಂದರೆ ತಂಡಗಳ ಕ್ರಿಯಾಶಕ್ತಿ ಸಂಘಟಕನಾಗಿರುತ್ತಾನೆ. ಈ ಕಾರಣದಿಂದಲೇ ಕಪ್ಪಣ್ಣನವರು ಇದ್ದಲ್ಲಿ ನಾಟಕಗಳು, ಕಪ್ಪಣ್ಣನವರು ಇದ್ದಲ್ಲಿ ತಂಡಗಳು ತುಂಬಿರುತ್ತವೆ. ಕಪ್ಪಣ್ಣ ಆಧುನಿಕ ರಂಗಭೂಮಿ ರಂಗಣ್ಣನಾಗಿರುವುದೇ ನಾವು ಒಪ್ಪುವ ವಾಸ್ತವ.

**ನಾಟಕಕ್ಕೆ ವಾಲಿದ ಶ್ರೀನಿವಾಸ...**

ಆರನೇ ಕ್ಲಾಸಿನ ಹುಡುಗ ಬಣ್ಣ ಹಚ್ಚಿದನೆಂದರೆ ಆ ಸಂದರ್ಭದಲ್ಲಿ ಹಿರಿಯರ ಒತ್ತಾಸೆ ಇತ್ತು ಅನ್ನುವುದು.

ಆರನೇ ಕ್ಲಾಸಿನ ಹುಡುಗ ಇಂದು ಬಣ್ಣ ಹಚ್ಚುವುದು ಅಪರೂಪವೇನಲ್ಲಾ. ಯಾಕೆಂದರೆ ಬೆಂಗಳೂರಲ್ಲಿ ಇಂದು ಬೇಸಿಗೆ ಬಂತೆಂದರೆ ಸಾಕು, ಬೋನು ಹಿಡಿದು ನಿಲ್ಲುವ ಹಾಗೆ ಅನೇಕ ಬೇಸಿಗೆ ಶಿಬಿರಗಳು ದಿಢೀರೆಂದು ಬಾಗಿಲು ತೆರೆಯುತ್ತವೆ. ನೂರಾರು ಮಕ್ಕಳು ಬಣ್ಣ ಹಚ್ಚಿಕೊಳ್ಳುತ್ತಾರೆ. ತಂದೆ ತಾಯಿಗಳು ಸಂಭ್ರಮಪಡುತ್ತಾರೆ. ಈ ಸಂಭ್ರಮಕ್ಕಾಗಿ ಅವರು

ಸಾಕಷ್ಟು ಹಣವನ್ನೂ ಚೆಲ್ಲಬಲ್ಲರು. ಯಾಕೆಂದರೆ ಆ ಮನೋಭಾವದ ಹಿಂದೆ ಒಂದು ಮಹಾತ್ವಾಕಾಂಕ್ಷೆಯಿದೆ. ರಂಗಭೂಮಿ ಅನ್ನುವುದು ಸಂಸ್ಕೃತಿಯ ಒಂದು ಭಾಗ ಅನ್ನುವ ನಂಬಿಕೆಯಿದೆ. ಇಂಥ ನಂಬಿಕೆಯನ್ನು ಇಲ್ಲಿ ಉತ್ತಿಬಿತ್ತಿದವರೇ ಕಪ್ಪಣ್ಣನಂಥ ಗೆಳೆಯರು.

ಕಪ್ಪಣ್ಣ ಮೊದಲ ಬಾರಿ ಬಣ್ಣ ಹಚ್ಚಿಕೊಂಡದ್ದೂ ಆರನೇ ಕ್ಲಾಸಿನಲ್ಲಿದ್ದಾಗ, ೧೨ನೇ ವಯಸ್ಸು ಜಗತ್ತನ್ನು ಹೊಸದಾಗಿ ನೋಡುವ ವಯಸ್ಸು. ಇಂಥ ವಯಸ್ಸಿನಲ್ಲೇ ಜಿ. ಶ್ರೀನಿವಾಸರು ಬಣ್ಣದ ಮೂಲಕ ಜಗತ್ತು ನೋಡಿದರು. ಅದರ ಬೆಡಗೇ ಅದ್ಭುತ. ಜಿ.ಪಿ. ರಾಜರತ್ನಂ ಅವರ "*ಧ್ರುವವಂದನೆ*" ಇವರಾಡಿದ ಮೊದಲ ನಾಟಕ. ನಾಟಕದಲ್ಲಿ ಇವರು ಕಂಡ ಹೊಸ ನೋಟ ಮತ್ತಷ್ಟು ಆ ಕಡೆ ಎಳೆಯಿತು. ನಾಟಕ ಅಂದರೆ ಎಂಥದೋ ಆಸಕ್ತಿ. ಏನೋ ಸೆಳೆತ. ರಂಗಭೂಮಿಯನ್ನು ಅಪ್ಪಿಕೊಂಡಿರುವ ಬಹುತೇಕರಿಗೆ ಬಾಲ್ಯದ ನಂಟೇ ಚಿಗುರೊಡೆಯುವ ಹಾಗೆ ಜಿ. ಶ್ರೀನಿವಾಸರ ಬಾಲ್ಯ ರಂಗಭೂಮಿಯನ್ನು ಬೆರಗುಗಣ್ಣುಗಳಿಂದ ನೋಡುವ, ರಂಗದಾಟದ ಬಯಲಿನಂತೆ ಕಳೆದು ಹೋಯಿತು. *'ಆಸ್ತಿ' 'ಲಂಬೋದರ', 'ಹಾರರ್ ಇನ್ ಡ್ರಾಕುಲಾ'* ಮುಂತಾದವುಗಳು ಆ ಸಮಯದಲ್ಲಿ ಇವರಲ್ಲಿ ರಂಗ ಕನಸುಗಳನ್ನು ಬಿತ್ತಿದ ನಾಟಕಗಳು.

ಕಾಲೇಜಿಗೆ ಬಂದಾಗ ಅದಕ್ಕೊಂದು ಹೊಸ ರೂಪ, ಹೊಸ ನೋಟ, ಚಿಗುರಿದ ವಯಸ್ಸಿನೊಂದಿಗೆ ಹದಗೊಳ್ಳುತ್ತಾ ಹೋದ ಮನಸ್ಸು. ಬಸವನಗುಡಿಯ ನ್ಯಾಷನಲ್ ಕಾಲೇಜು ಅದಕ್ಕೊಂದು ಆಖಾಡ. ಕುವೆಂಪು ಅವರ "*ಮಹಾರಾತ್ರಿ*" ನಾಟಕದಿಂದ ಪ್ರೌಢ ಆಸಕ್ತಿಯತ್ತ ಹೆಜ್ಜೆ. ನೀಳ ಮತ್ತು ಪುಷ್ಟದೇಹ ಅಭಿನಯಕ್ಕೆ ಹೇಳಿ ಮಾಡಿಸಿದ್ದು. ಶ್ರೀನಿವಾಸರಿಗಿದ್ದ ಒಲವೂ ಅದರತ್ತ "*ಮಹಾರಾತ್ರಿ*" ನಾಟಕದ ಚೆನ್ನನ ಪಾತ್ರ ಅವರಿಗೆ ಆತ್ಮವಿಶ್ವಾಸ ತುಂಬಿತು. ಮರುವರ್ಷವೇ *ಅಶ್ವಮೇಧ* ನಾಟಕದ ಪ್ರದರ್ಶನ. ಅಭಿನಯಕ್ಕೆ ಶ್ರೇಷ್ಠನಟ ಪ್ರಶಸ್ತಿ. ಅಲ್ಲಿಂದ ಮುಂದೆ ಅವರಿಗೆ ಬಿಡದ ನಾಟಕದ ಗುಂಗು. ಮುಂದೆ ಕಾಲೇಜಿನ ನಾಟಕಗಗಳಲ್ಲಿ ಇವರದೇ ಅಗ್ರಸೇವೆ. ಆ ವರ್ಷವೇ ನಾಣಿಯವರ ನ್ಯಾಷನಲ್ ಕಾಲೇಜ್ ಹಿಸ್ಟ್ರಿಯಾನಿಕ್ ಕ್ಲಬ್‌ನಲ್ಲಿ ಓಡಾಟದ ಸೇವೆ ಮುಂದಿನ ರಂಗ ದಿನಗಳಿಗೆ ನಿಲ್ಲದ ತಾಲೀಮು.

ಉಲ್ಲಾಳ್ ಪಾರಿತೋಷಕ ಆಗಿನ ಕಾಲದಲ್ಲಿ ದೇವಲೋಕದ ಪಾರಿಜಾತದ ಥರ. ಅದನ್ನು ಪಡೆಯಲು ನೂರಾರು ಜನ ನೂರಾರು ರೀತಿ ರಂಗಕಸರತ್ತು ಮಾಡುವ ಕಾಲ. ಹಲವರಿಗೆ ಆತ್ಮವಿಶ್ವಾಸ ತುಂಬುವ, ಕೆಲವರಿಗೆ ಮರಳಿ ಮರಳಿ ಹುಮ್ಮಸ್ಸು ತುಂಬುವ ಬೆಳ್ಳೀಬೆಟ್ಟದಂತಿತ್ತು ಅದು. ಶ್ರೀನಿವಾಸ ಅದರತ್ತ ಆಕರ್ಷಿತರಾದದ್ದು ಆಗಿನ ಕಾಲದಲ್ಲಿ ಸಹಜವೇ. ಇವರಾಡಿದ "*ಬೆಗ್ ಬಾರೋ.. ಆರ್ ಸ್ಟೀಲ್*" ನಾಟಕ ಉಲ್ಲಾಳ್ ಪಾರಿತೋಷಕದ ದ್ವಿತೀಯ ಬಹುಮಾನಕ್ಕೆ ಅರ್ಹ. ಅದರಲ್ಲಿ ಶ್ರೀನಿವಾಸರ ವೈಯಕ್ತಿಕ ಗೆಲುವಿನ ಪಾಲೇ ಹೆಚ್ಚು. ಉತ್ತಮ ನಟ ಪ್ರಶಸ್ತಿಯ ಗರಿ. ಈ ಸಂದರ್ಭದಲ್ಲಿ ಕೈಲಾಸಂ ಅವರ ನಾಟಕವೊಂದರ ಪ್ರದರ್ಶನ. ಅದರಲ್ಲಿ ಕಪ್ಪಣ್ಣ ಎಂಬ ಪಾತ್ರದ ಹೆಸರನ್ನು ಅನಾಮತ್ತಾಗಿ ಎತ್ತಿ ಇವರಿಗೆ ನಾಮಕರಣ ಮಾಡಿದವರು ನಾಣಿಯವರು. ಕಪ್ಪು ಮೋಡದ ಹಾಗೆ ಸಮೃದ್ಧ ಹೃದಯವಂತಿಕೆಯ ಕಪ್ಪು ಹುಡುಗನಿಗೆ ಸದಾಕಾಲ ಒಪ್ಪುವ ಹೆಸರು.

ಅಲ್ಲಿಂದ ಮುಂದೆ ಬೆಳೆದ ಹೆಸರಿನ ಸಾಲು, ಜಿ. ಶ್ರೀನಿವಾಸ ಕಪ್ಪಣ್ಣ ಎಂಬ ಅನ್ವರ್ಥಕ ನಾಮ. ಈಗೀಗ ಜಿ. ಶ್ರೀನಿವಾಸ ಎಂಬುದು ಅಧಿಕೃತ ದಾಖಲೆಗೆ ಮಾತ್ರ. ಕಪ್ಪಣ್ಣ ಎಂದರೆ

ಮಾತ್ರ ಪೂರ್ತಿ ಆಗುವ ಶ್ರೀನಿವಾಸರ ಪರಿಚಯ.

ರಂಗಭೂಮಿಯ ಸಮುದ್ರಕ್ಕೆ ಬಿದ್ದ ಹರೆಯದ ಕಪ್ಪಣ್ಣನಿಗೆ ದಂಡೆ ಕಾಣಲಿಲ್ಲ. ಅಂದರೆ ಓದಿನ ವಾಸ್ತವ ಅರಿವಿಗೇ ಬರಲಿಲ್ಲ. ನಟನೆಯಿಂದ ಲೈಟಿಂಗ್ ಮಾಡುವ, ಮೊಳೆ ಹೊಡೆಯುವ ಕೆಲಸಗಳಲ್ಲೂ ಚಿಗುರಿದ ಆಸಕ್ತಿ. ನಾಣಿ ಆಗ ಇವರಿಗೆ ಪರಮ ಗುರು. ಅವರಾಡಿದ ಮಾತನ್ನು ಚಾಚೂ ತಪ್ಪದ ಅಷ್ಟೇ ಪರಮಶಿಷ್ಯ ಕಪ್ಪಣ್ಣ. ಗುರುವಿನ ಮೂಲಕ ಇಷ್ಟಿಷ್ಟು ಬೆಳಕು ವಿದ್ಯೆ ಕಲಿತ ಶಿಷ್ಯನಿಗೆ ಒಮ್ಮೆ ಸ್ವತಂತ್ರ ಬೆಳಕು ಮಾಡುವ ಆಸೆ. ಗುರು ತಥಾಸ್ತು ಅಂದರು. ಅದರ ಮೊದಲ ಪ್ರಯೋಗ ತಮಿಳಿನ ಮೇಲಾಗಲಿ ಎಂಬಪ್ಪಣೆ ಸರಿ ಕಪ್ಪಣ್ಣಗೆ ದೊರೆತದ್ದು. *ಚದುರಂಗ* ಎಂಬ ತಮಿಳ್ ನಾಟಕ, ಅವರ ದುರಾದೃಷ್ಟ. ಕಪ್ಪಣ್ಣನ ಬೆಳಕು ಅಲ್ಲಿ ಯದ್ವಾತದ್ವಾ ತೋಪು. ಗುರುವಿನಿಂದ ಸಹಸ್ರನಾಮಾರ್ಚನೆ. ಗೆಳೆಯರಿಂದ ನೂರೆಂಟು ಬೈಗುಳ ಸೇವೆ. ದಿಢೀರನೆ ಇಳಿದ ಉತ್ಸಾಹ. ಇನ್ನು ಬಣ್ಣ ಹಚ್ಚಲಾರೆ, ಬೆಳಕು ಮಾಡಲಾರೆ ಎಂಬ ಸಂಕಲ್ಪ ಇವರಿಂದ. ಅದರ ಜೊತೆಗೆ ಏರಿದ ಛಲ. ತಾನು ಇಷ್ಟಪಟ್ಟು ನಟನೆಯನ್ನು ಬಲಿಗೊಟ್ಟಾದರೂ ಬೆಳಕಿನ ಕ್ಷೇತ್ರದಲ್ಲಿ ಯಶಗಳಿಸುವ ಸಂಕಲ್ಪ. ಬರೀ ಬೆಳಕಲ್ಲ, ಬ್ಯಾಕ್‌ಸ್ಟೇಜ್, ಕೆಲಸಕ್ಕೂ ಕೈಹಾಕು ಎಂದು ಗುರುವಿನ ಅಪ್ಪಣೆ. ಅಂದಿನಿಂದ ಬದಲಾದ ರಂಗ ಕೈಂಕರ್ಯ ಕಪ್ಪಣ್ಣ ನಟನೆ ತೊರೆದು ಹಿಂದಣ ಕೆಲಸಕ್ಕೇ ಹಿಡಿದ ಕಾರಣ, ಬೆಳಕು, ಪರದೆ, ಗೋಣಿತಾಟು, ಮೊಳೆ ಸುತ್ತಿಗೆ ಹಿಡಿದ ಕಪ್ಪಣ್ಣ ಈಗ ಸಂಪೂರ್ಣ ಶಸ್ತ್ರಸಜ್ಜಿತ.

೧೯೬೭ರಿಂದ ಎಲ್ಲಾ ತಂಡಗಳಿಗೆ ಲೈಟಿಂಗ್ ಮಾಡಿ ತಮಿಳು ನಾಟಕ ಕೊಂದ ಪಾಪ ಪರಿಹಾರ. ಸ್ವತಂತ್ರ ಲೈಟಿಂಗ್‌ನಲ್ಲಿ ಹಿಸ್ಟ್ರಿಯಾನಿಕ್ ಕ್ಲಬ್ ಇವರಿಗೆ ಪ್ರಯೋಗಶಾಲೆ. ಅಲ್ಲಿ ಅವರಿಗೆ ನಾಣಿಯವರ ಮಾರ್ಗದರ್ಶನ. ಅದಾಗಲೇ ಬಹುತೇಕ ತಂಡಗಳಿಗೆ ಇವರು ಬೆಳಕಿನ ಕಪ್ಪಣ್ಣ ಎಂದೇ ಪರಿಚಯ.

ಆದರೆ ಅಧಿಕೃತ ಬೆಳಕಣ್ಣನಾದದ್ದು ೧೯೬೯ರಲ್ಲಿ ಬಿ.ಸಿ. ನಿರ್ದೇಶನದ *ತುಘಲಕ್*, ಆಗ ನೀಡಿದ 'ರಂಗಾಘಾತ' ಹೊಸ ರೀತಿಯದು. ಬೆಂಗಳೂರೇ ವಿಸ್ಮಯಪಟ್ಟ ದಿನ. ಅಂಥದೊಂದು ಪ್ರಯೋಗಕ್ಕೆ ಕಪ್ಪಣ್ಣನವರೇ ಸ್ವತಂತ್ರ ಬೆಳಕು. ಪ್ರಮುಖ ಬೆಳಕು ವಿನ್ಯಾಸಕಾರ ಎಂಬ ಅಗ್ರ ಪಟ್ಟಾಭಿಷೇಕ. ಅಲ್ಲಿಂದ ಮುಂದೆ 'ಕಲಾಘೋಷಣೆ ಕನ್ನಡ ಕಲಾಸಾಹಿತ್ಯ ಸಂಘ', 'ಕಲಾಕುಂಜ' ಮುಂತಾದ ಪ್ರಮುಖ ತಂಡಗಳಿಗೆ ಪ್ರಕಾಶನ ವಿನ್ಯಾಸ. ನಾಟ್ಯಸಂಘ ಥೀಯೇಟರ್ಸ್‌ನಲ್ಲೂ ವಹಿಸಿಕೊಂಡ ಹತ್ತಾರು ಕೆಲಸ. ಅಷ್ಟರಲ್ಲೇ ಈ ಕ್ಷೇತ್ರದಲ್ಲೇ ಪಳಗಿಹೋದ ರಂಗ ಕಟ್ಟುವ ಮನಸ್ಸು, ಜತೆಗೆ ಕಳೆದುಹೋದ ನಟನೆ.

೧೯೭೦ರಲ್ಲಿ ಕಾರಂತರ *ಸ್ವರ್ಗಕ್ಕೆ ಮೂರೇ ಬಾಗಿಲು, ಇಸ್ಪೀಟು ರಾಜ, ಪಂಜರ ಶಾಲೆ*, ನಾಟಕಗಳಿಗೆ ಕೆಲಸ. ಆಮೇಲೆ ಬಿಡುವಿಲ್ಲದ ರಂಗ ದುಡಿತ, ಪ್ರಕಾಶನ ಕ್ಷೇತ್ರದಲ್ಲಿ ಅಪಾರ ಬೇಡಿಕೆ. ಬಿ.ಎಲ್.ಟಿ. ಇಂಗ್ಲೀಷ್ ತಂಡದಲ್ಲಿ ಕೆಲಸ. ೧೯೭೪ರಲ್ಲಿ ಅವರ ಸಿರಾನೋ ಕಲ್ಕತ್ತಾದಲ್ಲಿ ಪ್ರದರ್ಶನ. ಬೆಂಗಳೂರು ಸ್ಟೂಡೆಂಟ್ಸ್ ಕಲ್ಚರಲ್ ಅಸೋಸಿಯೇಷನ್‌ಗಾಗಿ *ಶಾಂತಲಾ* ನೃತ್ಯ ನಾಟಕಕ್ಕೆ ರಂಗವಿನ್ಯಾಸ ದೆಹಲಿ, ಮುಂಬಯಿ, ಫರೀದಾಬಾದ್, ಸಿಮ್ಲಾಗಳಲ್ಲಿ ಅದರ ಪ್ರದರ್ಶನ. ಅಲ್ಲಿಂದ ಮುಂದೆ ರಂಗಭೂಮಿಯಲ್ಲಿ ಕಪ್ಪಣ್ಣ ಊರಿದ ಗಟ್ಟಿ ಹೆಜ್ಜೆ.

'ನಾಟ್ಯ ಸಂಘ ಥಿಯೇಟರ್' ಅಪಾರ ಕನಸು ಹೊತ್ತು ಕ್ರೀಯಾಶೀಲವಾದ ತಂಡ. ಉಲ್ಲಾಳ ಪಾರಿತೋಷಕ, ಹವ್ಯಾಸಿ ತಂಡಗಳಿಗೆ ಡಾ. ರಾಜಕುಮಾರ್ ಪರಿಚಯ ಪಾರಿತೋಷಕ ಹಾಗೂ ಅಖಿಲಭಾರತ ಕನ್ನಡ ನಾಟಕೋತ್ಸವಗಳ ನಿರ್ವಹಣ ಜವಾಬ್ದಾರಿ ಅದರ ಹೆಗಲಿಗೆ. ಯಶಸ್ವಿ ಆಯೋಜನೆ. ಕಪ್ಪಣ್ಣ ಹಿಡಿದ ಗಟ್ಟಿ ಸೂತ್ರದ ದಾರ.

ಇದೇ ಸಂದರ್ಭದಲ್ಲಿ 'ನಟರಂಗ'ದ ಹುಟ್ಟು, ಸಿ.ಆರ್. ಸಿಂಹ, ಲೋಕೇಶ್, ಸಿ. ಅಶ್ವತ್ಥ್, ಎಂ.ಆರ್. ಚಿಂತಾಮಣಿ, ಎಂ.ಪಿ. ವೆಂಕಟರಾವ್ ನಟರಂಗಕ್ಕೆ ಹೆಗಲು ಹೊತ್ತವರು. ಕಪ್ಪಣ್ಣ ಸೂತ್ರಧಾರಿ. ತಂಡದ ಸಂಘಟನೆ, ನಾಟಕಗಳ ಪ್ರಕಾಶನ ವಿನ್ಯಾಸಗಳ ಜವಾಬ್ದಾರಿ. ನಟರಂಗದ ಎಲ್ಲಾ ನಾಟಕ ಪ್ರದರ್ಶನಗಳ ಹಿಂದೆ ಪಟ್ಟ ಪರಿಶ್ರಮ ಅಪಾರ. ಪ್ರತಿಯೊಂದರಲ್ಲಿ ಕುಸುರಿ ಕೆಲಸ. ಸಿ.ಆರ್. ಸಿಂಹ, ಬಿ.ವಿ. ಕಾರಂತ, ಜಯರಾಜ್, ರಣಜೀತ್‌ಕಪೂರ್, ಜಯತೀರ್ಥ ಜೋಶಿ, ಆರ್. ನಾಗೇಶ್, ಟಿ.ಎನ್. ನರಸಿಂಹನ್, ಟಿ.ಎನ್. ಸೀತರಾಂ, ಎಂ.ಎಸ್. ಸತ್ಯು, ನಂದಿತಾ, ಸೌಮ್ಯ, ಋಶಿಕ್ ಹೀಗೆ ಅನೇಕ ನಿರ್ದೇಶನಗಳು ನಟರಂಗದ ನಾಟಕಗಳಿಗೆ. ಆ ಎಲ್ಲಾ ನಾಟಕಗಳ ಸೂತ್ರಧಾರಿ ಕಪ್ಪಣ್ಣ. ಸ್ವತಃ ಇವರೂ ನಿರ್ದೇಶಿಸಿದ ನಾಟಕಗಳೂ ಉಂಟು. ಅವುಗಳಲ್ಲಿ *ಚಿಕ್ಕವೀರ ರಾಜೇಂದ್ರ, ಕುರುಡು ಕಾಂಚಾಣ, ಎಲ್ಲಾ ನನ್ಮಕ್ಕಳೇ*... ಮುಖ್ಯವಾದವು. ಬ್ಯಾಕ್ ಸ್ಟೇಜ್ ಅಲ್ಲದೆ ನಿರ್ದೇಶನದಲ್ಲೂ ಹದ ಹಾಕಿದ ಶ್ರೀನಿವಾಸ. 'ನಟರಂಗ'ದ *ಕಾಕನಕೋಟೆ, ತುಘಲಕ್, ಮಿಡ್‌ಸಮ್ಮರ್..., ಒಥೆಲೋ, ಮೃಚ್ಛಕಟಿಕ, ಸಕ್ರಾಂತಿ, ಸಿರಿಸಂಪಿಗೆ, ನಮ್ಮೊಳಗೊಬ್ಬ ನಾಜೂಕಯ್ಯ, ತಲೆದಂಡ,* ಮುಂತಾದ ಎಲ್ಲಾ ನಾಟಕಗಳಿಗೂ ಬೆಳಕು ವಿನ್ಯಾಸ ಮತ್ತು ಸಂಘಟನೆಯ ಜವಾಬ್ದಾರಿ. ಇದುವರೆಗೆ ಶ್ರೀನಿವಾಸ ೧೦೦೦ಕ್ಕೂ ಹೆಚ್ಚು ಕಾರ್ಯಕ್ರಮ ನಾಟಕಗಳಿಗೆ ಬೆಳಕು ಬೀರಿದ್ದಾರೆ.

ಕಪ್ಪಣ್ಣ ಕನ್ನಡ ರಂಗಭೂಮಿಯ ಬಹುದೊಡ್ಡ ಕಂಬ. ಅದು ಆಗಲೇ ಎಲ್ಲರ ಅರಿವಿಗೆ ಆಹ್ವಾನಗಳು, ಜವಾಬ್ದಾರಿಗಳು ಇವರ ಮುಂದೆ ಸಾಲು ಸಾಲು. ಅಷ್ಟೇ ಉತ್ಸಾಹದ ಸ್ವೀಕಾರ. ರಾಜ್ಯಮಟ್ಟದ, ರಾಷ್ಟ್ರಮಟ್ಟದ ಸಾಂಸ್ಕೃತಿಕ ಉತ್ಸವಗಳಲ್ಲಿ ಮೆರೆದ ಇವರ ಸಂಘಟನಾ ಚಾತುರ್ಯ.

೧೯೭೭ರಲ್ಲಿ ರಾಷ್ಟ್ರೀಯ ಬಹುಭಾಷಾ ನಾಟಕೋತ್ಸವ ದೆಹಲಿಯಲ್ಲಿ. ಅದರ ಮುಖ್ಯ ಸಂಘಟಕ ಶ್ರೀನಿವಾಸ. ಅಂಥ ಸಂಘಟನೆಗಳು ಇನ್ನೂ ಅನೇಕ. ಅಖಿಲ ಭಾರತ ರಂಗಭೂಮಿ ಸಂಕಿರಣ, ನಾಟಕೋತ್ಸವಗಳು ಎಲ್ಲಿಯೇ ಇರಲಿ, ಬೆಂಗಳೂರು, ಮುಂಬಯಿ, ಕಲ್ಕತ್ತಾ, ದೆಹಲಿ, ಮದ್ರಾಸ್ ಹೀಗೆ ಎಲ್ಲೆಂದರಲ್ಲಿ ಕಪ್ಪಣ್ಣ ಅಂತರ್ರಾಷ್ಟ್ರೀಯ ಉತ್ಸವಗಳಲ್ಲೂ ಇವರ ಪ್ರಾತಿನಿಧ್ಯ. ೧೯೮೧ ರಲ್ಲಿ ದಕ್ಷಿಣ ಕೊರಿಯದ ಸಿಯೋಲ್‌ನಲ್ಲಿ ನಡೆದ ಅಂತರ್ರಾಷ್ಟ್ರೀಯ ನಾಟಕೋತ್ಸವದಲ್ಲಿ ಭಾರತದ ಪ್ರತಿನಿಧಿ. ಜಪಾನ್, ಹಾಂಗ್‌ಕಾಂಗ್, ಮನಿಲಾ, ಮತ್ತು ಸಿಂಗಪೂರ್‌ಗಳಿಗೆ ರಂಗಪ್ರವಾಸ. ಆ ಮೂಲಕ ವಿಶ್ವಾಸಗೊಂಡ ರಂಗಾನುಭವ.

೧೯೮೩ರಲ್ಲಿ ಈಸ್ಟ್ ಬರ್ಲಿನ್‌ನಲ್ಲಿ ನಡೆದ ಅಂತರ್ರಾಷ್ಟ್ರೀಯ ರಂಗ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗಿ. ಅಲ್ಲಿ ಭಾರತದ ಪ್ರತಿನಿಧಿ. ವೆಸ್ಟ್‌ಬರ್ಲಿನ್, ಪ್ಯಾರೀಸ್, ರೋಮ್‌ಗಳಲ್ಲಿ ರಂಗಪರಿಚಯಾತ್ಮಕ ಪ್ರವಾಸ. ಅಲ್ಲಿ ಕನ್ನಡ ರಂಗಭೂಮಿಯ ಬಗ್ಗೆ ತಿಳುವಳಿಕೆ ಪ್ರಸಾರ. ಹೀಗೆ ಇವುಗಳದೇ ಒಂದು ದೊಡ್ಡಪಟ್ಟಿ. ಕಪ್ಪಣ್ಣನವರ ಭುಜ ಬಲಗಳಿಗೆ ಪರಾಕ್ರಮ ಕೀರ್ತಿ.

ಕಲ್ಕತ್ತಾದಲ್ಲಿ ೧೯೮೩ರಲ್ಲಿ ನಡೆದ ಭಾರತೀಯ ನೃತ್ಯ ಪರಂಪರೆ ಮತ್ತು ಆಧುನಿಕ ರಂಗಭೂಮಿ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತದ ಪ್ರತಿನಿಧಿ.

೧೯೮೫ರಲ್ಲಿ ಬೆಂಗಳೂರಲ್ಲಿ ನಡೆದ ೩ನೇ ಅಂತರ್ರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನೆ ಮತ್ತು ಮುಕ್ತಾಯ ಸಮಾರಂಭಗಳ ಸಮಿತಿ ಸಂಚಾಲಕ. ವಿಶ್ವ ಕನ್ನಡ ಸಮ್ಮೇಳನದ ಉನ್ನತ ಸಮಿತಿ ಸದಸ್ಯ. ರಷ್ಯಾ ತಂಡಗಳ ಕಾರ್ಯಕ್ರಮಗಳ ಸಂಯೋಜಕ, ಪೀಟರ್ ಬ್ರೂಕರ *ಮಹಾನ್ ಭಾರತ*ಬೆಂಗಳೂರಲ್ಲಿ ಪ್ರದರ್ಶನಗೊಂಡಾಗ ಅದರ ಮುಖ್ಯ ಸಂಯೋಜಕ ಏನಿಲ್ಲ, ಎಷ್ಟಿಲ್ಲ, ಕಪ್ಪಣ್ಣ ಮಡುಗಟ್ಟಿ ನಿಂತ ಮೋಡದ ಹಾಗೆ. ಯಾವುದೂ ಹುಸಿಯಲ್ಲ.

ಇವರ ಕ್ರಿಯಾಶೀಲತೆ ಇಷ್ಟಕ್ಕೆ ಮುಗಿಯುವುದಿಲ್ಲ. ಕ್ರೀಡಾಮೇಳಗಳಲ್ಲಿ ಸಾಂಸ್ಕೃತಿಕ ಸಮಾರಂಭಗಳ ಸಂಯೋಜಕನಾಗಿಯೂ ಪ್ರತಿಭೆಯ ಧಾರೆ. ಡೊಳ್ಳುಕುಣಿತ, ತಮಟೆ, ಕೋಲಾಟ ಹೀಗೆ ಸಾವಿರಾರು ಕಲಾವಿದರ ಆಯೋಜನೆ. ದಸರಾ ಮಹೋತ್ಸವಗಳಲ್ಲೂ ಇವರ ಶ್ರಮದ ಕುರುಹು.

ಸುವರ್ಣ ಸ್ವಾತಂತ್ರ್ಯೋತ್ಸವಕ್ಕಾಗಿ ೬೫೦ ಸರ್ಕಾರಿ ಶಾಲೆಯ ಮಕ್ಕಳಿಗೆ ತರಬೇತಿ ನೀಡಿ ವಂದೇ ಮಾತರಂ ರೂಪಕ ನಿರ್ಮಾಣ. ರಾಜು ಅನಂತಸ್ವಾಮಿ ಅವರ ಗಾಯನ ತಂಡದ ಬಳಕೆ, ೩೦,೦೦೦ ಪ್ರೇಕ್ಷಕರೆದುರು ಗಮನಾರ್ಹ ಪ್ರದರ್ಶನ. ದಿನದಿಂದ ದಿನಕ್ಕೆ ತನ್ನ ಕೃತ್ಯತ್ವ ಶಕ್ತಿ ಹಾಗೂ ಆತ್ಮಬಲದಿಂದಾಗಿ ವಿರಾಟನಾಗಿ ಬೆಳೆದ ಕಪ್ಪಣ್ಣ. ರಂಗಭೂಮಿಯಿಂದ ಹರವು ಹೆಚ್ಚಿಸಿಕೊಂಡ ವ್ಯಕ್ತಿತ್ವ.

ವಾರ್ತಾ ಇಲಾಖೆಯಲ್ಲಿ ನಾಟಕ ವಿಭಾಗದಲ್ಲಿ ತಮ್ಮದೇ ಆದ ರೀತಿಯ ಕೊಡುಗೆ. ಆ ಇಲಾಖೆಯ ನಾಟಕ ಶಾಖೆಗೊಂದು ಹೊಸ ರೂಪ. ರಾಜ್ಯದ ಪ್ರತಿ ತಾಲೂಕಿನಲ್ಲೂ ಇವರ ಸಂಸ್ಕೃತಿ ದರ್ಶನ, ರಾಜ್ಯದ ತುಂಬ ಹೆಣೆದುಕೊಂಡ ರಂಗ ಗೆಳೆಯರ ಸ್ನೇಹಬಲೆ. ಸ್ನೇಹಕ್ಕೆ ಸಣ್ಣವನಾಗಬಲ್ಲ ಗುಣ. ಹಾಗಾಗಿ ರಾಜ್ಯದ ಹೊರಗೂ ಕಪ್ಪಣ್ಣನವರಿಗೆ ಆತ್ಮೀಯರ ಬಲ ಅಪಾರ. ಕುಗ್ರಾಮದಲ್ಲೂ ನಾಟಕ ಆಡಿ ಬಂದ ಇವರಿಗೆ ದಕ್ಕಿದ ಅಪಾರ ಅನುಭವ. ಅದರ ಫಲ ಮುಂದಿನ ಪ್ರಯೋಗಗಳಲ್ಲಿ.

ನಾಟಕದ ಗೀಳು ಅಷ್ಟಕ್ಕೇ ನಿಲ್ಲುವುದಿಲ್ಲ; ಇವರು ದೂರದರ್ಶನದಲ್ಲೂ ಮೂಡಿಸಿದ ನಾಟಕದ ಛಾಪು. ೧೯೭೭ರಲ್ಲಿ ಹೈದರಾಬಾದ್ ಕೇಂದ್ರಕ್ಕೆ ಒಯ್ದು ಪಂಜರಶಾಲೆ. *ಕತ್ತೆ ಮತ್ತು ಧರ್ಮ* ಬೆಂಗಳೂರು ಕೇಂದ್ರಕ್ಕೆ ನಿರ್ದೇಶನ. ಹಾಗೇ *ನಮ್ಮೊಳಗೊಬ್ಬ ನಾಜೂಕಯ್ಯ, ಸರ್ವೇಜನಾ ಸುಖಿನೋಭವಂತು, ವಂದೇ ಮಾತರಂ, ಶೃತಿ* ಧಾರಾವಾಹಿ ನಿರ್ದೇಶಕ. *ಮಾಲ್ಗುಡಿ ಡೇಸ್, ಕನಸಿನೊಳಗಿನ ಕನ್ನಡಿ,* ಮುಂತಾದವುಗಳಲ್ಲಿ ಅಭಿನಯ. ಅದರಿಂದ ಇವರ ಮುಖದರ್ಶನ ಪುಟ್ಟಿ ಪೆಟ್ಟಿಗೆಯ ಬೆಳಕಿನಲ್ಲಿ ರಾಜಕುಮಾರ್ ಸೇರಿ ಹಲವು ಕಲಾವಿದರ ಸಂದರ್ಶನಗಳನ್ನು ದೂರದರ್ಶನಕ್ಕೆ ಮಾಡಿದ ಅನುಭವ.

ಆಕಾಶವಾಣಿಯೂ ಇವರನ್ನೂ ಬಿಟ್ಟಿಲ್ಲ. ಎಲ್ಲರ ಕೈಗೂ ಎಟುಕುವ ವ್ಯಕ್ತಿತ್ವ, ಹಾಗಾಗಿ ಅಲ್ಲೂ ಇವರ ಕೆಲಸ. ಜತೆಗೆ ಧ್ವನಿಸುರುಳಿ ಹೊರತರುವಲ್ಲೂ ಅಪಾರ ಪ್ರಯತ್ನ. *ಕೆಂಪುಸೂರ್ಯ ಕೈಲಾಸಂ ಗೀತೆಗಳು, ಅಭಿಷೇಕ, ಪ್ರಗತಿರಂಗ, ವಂದೇಮಾತರಂ..* ಹೀಗೆ ಹತ್ತಾರು. ಎಲ್ಲದರಲ್ಲೂ

ಭೇಷ್ ಕಪ್ಪಣ್ಣ. *ಶಾಸನಕೋಟಿ* ಸಿನಿಮಾ ಮಾಡುವಲ್ಲಿ ಅಪಾರಶ್ರಮ. ಕಾರ್ನಾಡರ *ಕಾಡು*ನಲ್ಲಿ ಅಭಿನಯ. ಹಾಗೇ *ಕಾನೂರು ಹೆಗ್ಗಡತಿ* ಬೆಳ್ಳಿಪರದೆಗೆ ಬರುವಲ್ಲೂ ಶ್ರಮ. ಒಟ್ಟಿಗೆ ಕಪ್ಪಣ್ಣ ಮುಟ್ಟದ ಸ್ಥಳವಿಲ್ಲ.

ಬೆಂಗಳೂರಿನ ಕುವೆಂಪು ಕಾಲಕ್ಷೇತ್ರ ಇಂದು ಎಲ್ಲಾ ರೀತಿಯಲ್ಲೂ ಸುಸಜ್ಜಿತ. ಹೊ. ಶ್ರೀನಿವಾಸಯ್ಯ ಭಾರದ್ವಾಜ ಮತ್ತು ಅಪ್ಪಾಜಿಯವರ ಜತೆಗೂಡಿ ಅದರ ಸಂಪೂರ್ಣ ವಿನ್ಯಾಸ. ರಂಗಭೂಮಿಗೊಂದು ಶಾಶ್ವತ ಕೊಡುಗೆ.

ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆದಾಗ ಇವರ ಪಾಲಿಗೆ ಬಹುದೊಡ್ಡ ಆಹ್ವಾನ ವೃತ್ತಿ ವ್ಯಾಸಿ ರಂಗಭೂಮಿಗಳ ಸಮಾನ ತುಡಿತಗಳಿಗೆ ಸ್ಪಂದಿಸಬೇಕಾದ ಅನಿವಾರ್ಯತೆ. ಗ್ರಾಮೀಣ ರಂಗಭೂಮಿ ಚೇತರಿಸಿಕೊಂಡದ್ದೇ ಇವರ ಕಾಲದಲ್ಲಿ. ಅಲ್ಲಿಂದ ಬಂದ ಅನೇಕ ಪ್ರತಿಭಾನ್ವಿತ ಗ್ರಾಮೀಣ ತಂಡಗಳು ನಗರದಲ್ಲೂ ಉಳಿಸಿದ ಗಟ್ಟಿ ಹೆಜ್ಜೆ. ಅದಕ್ಕೆ ಮೂಲ ಪ್ರೇರಣೆಯಾದ ಅಂದಿನ ಅಕಾಡೆಮಿಯ ಅಧ್ಯಕ್ಷೆ ಪದ್ಮಶ್ರೀ ಚಿಂದೋಡಿ ಲೀಲಾ, ಕಪ್ಪಣ್ಣನವರ ಎಲ್ಲಾ ಆಲೋಚನೆಗಳಿಗೆ ಪೂರಕ ಚಿಂತನೆ ಅವರಿಂದ. ಅದರಿಂದ ನಾಡಿನ ಹಳ್ಳಿಗೂ ಮುಟ್ಟಿದ ಅಕಾಡೆಮಿ ಕಾರ್ಯಕ್ರಮ. ಜತೆಗೆ ಕಪ್ಪಣ್ಣ ಅಲ್ಲಿಯೂ ಸಂದ ರಂಗವ್ಯಕ್ತಿ. ಅಕಾಡೆಮಿಯಲ್ಲಿ ಕಪ್ಪಣ್ಣ ಅಧಿಕಾರಿಯಾಗಿ ಕೆಲಸ ಮಾಡಿದ್ದಕ್ಕಿಂತ ಹೆಚ್ಚಾಗಿ ರಂಗ ಪರಿಚಾರಕನಾಗಿ ಕೆಲಸ ಮಾಡಿದ್ದೇ ಹೆಚ್ಚು. ಒಬ್ಬ ರಂಗಭೂಮಿಯ ಚಿಂತಕ ಏನು ಮಾಡಬಲ್ಲನೋ ಅದನ್ನೇ ಆತ ಮಾಡಿದ್ದು. ಹಳ್ಳಿಯಿಂದ ದಿಲ್ಲಿಯವರೆಗೆ ಪ್ರತಿಭಾವಂತರ ರಂಗಪಯಣ. ಅದಕ್ಕೆಲ್ಲ ಇವರೇ ಸೂತ್ರ. ಆಗ ಚಿಂದೋಡಿ ಲೀಲಾ ಅವರ ಬೆಂಬಲ ಎಲ್ಲಕ್ಕೂ. ಗ್ರಾಮೀಣ ರಂಗೋತ್ಸವ ಆಗ ತಾಲ್ಲೂಕಿನಲ್ಲಿ ಆರಂಭ ಮಾಡಿದ್ದೂ ದಿಲ್ಲಿಯಲ್ಲಿ. ನೂರಾರು ಹಳ್ಳಿಯ ನೂರಾರು ಕಲಾವಿದರಿಗೆ ಒಂದು ಅಪರೂಪದ ಅವಕಾಶ. ಕಪ್ಪಣ್ಣನವರ ಕಾರ್ಯಶ್ರದ್ಧೆಗೆ ಅಕಾಡೆಮಿ ಮತ್ತೊಂದು ಅಖಾಡ.

ಸದಾ ರಚನಾತ್ಮಕ ಚಿಂತನೆಯಲ್ಲೇ ಇರುವ ಶ್ರೀನಿವಾಸಜಿ ಅಪ್ಪಟ ಕೆಲಸಗಾರ. ಹಿಡಿದ ಕೆಲಸವನ್ನು ಹೇಳಿದ ಸಮಯಕ್ಕೆ ಮುಂಚೆ ಮುಗಿಸುವ ಜಾಯಮಾನ. ಹಾಗೆಂದೇ ಕಪ್ಪಣ್ಣ ಇಂದು ಎಲ್ಲರಿಗೂ ಬೇಕು. ಇವರ ಕಾರ್ಯಶೀಲತೆಯನ್ನು ಮೆಚ್ಚಿ ಅರಸಿಬಂದ ಮಾನ, ಸನ್ಮಾನಗಳಿಗೆ ಲೆಕ್ಕವಿಲ್ಲ. ಅದು ಸಹಜವೂ ಹೌದು. ಬೆಂಗಳೂರಿನ ಉದಯಭಾನು ಕಲಾ ಸಂಘದಿಂದ 'ಕಲಾಶಕ್ತಿ' ಬಿರುದು. ನಾಟಕ ಅಕಾಡೆಮಿ ಮತ್ತು ಯುವರಂಗ ಸಂಸ್ಥೆಗಳಿಂದ 'ಕೈಗಾರಿಕಾ ಕಲಾರತ್ನ' ಪ್ರಶಸ್ತಿ ರಂಗಗಂಗೋತ್ರಿ ತಂಡದವರಿಂದ 'ಕುವೆಂಪು ಪ್ರಶಸ್ತಿ' ರಮ್ಯ ಕಲ್ಯರ ಅಕಾಡೆಮಿಯಿಂದ, ನೇಪಥ್ಯ 'ಶಿಲ್ಪಿ' ಪ್ರಶಸ್ತಿ, ಹಾಗೂ ೧೯೯೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಇವೆಲ್ಲ ಸಾಧನೆಗೆ ಸಿಕ್ಕ ಗೌರವಗಳು. ಇವರಿಗೆ ೫೦ ತುಂಬಿದಾಗ ಅಭಿಮಾನಿಗಳ ಉಕ್ಕಿದ ಪ್ರೀತಿ. ಅದಕ್ಕಾಗಿ ಇವರಿಗೊಂದು ಅಭಿನಂದನಾ ಸಮಾರಂಭ ಆಯೋಜನೆ. ಆ ಸಂದರ್ಭದಲ್ಲಿ ಇವರ ಹೆಸರಲ್ಲೂ ಒಂದು ಪ್ರಶಸ್ತಿ ಸ್ಥಾಪನೆ 'ಕಪ್ಪಣ್ಣ ಪ್ರಶಸ್ತಿ'ಗೆ ಆರಂಭದ ಚಾಲನೆ.

ಕರ್ನಾಟಕ ವಾರ್ತಾ ಇಲಾಖೆಯಲ್ಲಿ ಕೆಲಸ ಮಾಡುವ ಕಪ್ಪಣ್ಣ ಅಲ್ಲಿನ ನಾಟಕಗಳಿಗೆ ಮೂಡಿಸಿದು ತಮ್ಮದೇ ಗತ್ತಿನ ಛಾಪು. ನಾಟಕ ವಿಭಾಗದ ಸಹಾಯ ನಿರ್ಮಾಪಕನಾಗಿ ಈಗ

ಸಂಗೀತ ಮತ್ತು ನಾಟಕ ಅಧಿಕಾರಿಯಾಗಿ ಸೇವೆ. ಆ ವಿಭಾಗದಲ್ಲಿ ಚುರುಕಿನ ಕೆಲಸ. ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ಸುಮಾರು ೫ ವರ್ಷಕಾಲ ಸೇವೆ. ಅಲ್ಲಿಂದ ಸಂಗೀತ, ನೃತ್ಯ ಅಕಾಡೆಮಿಗೆ ರಿಜಿಸ್ಟ್ರಾರ್ ಅಲ್ಲಿ ಅಲ್ಪಾವಧಿ ಮಾತ್ರ ಸೇವೆ.

ಸರಳ, ಸ್ನೇಹ ಜೀವಿಯಾದ ಕಪ್ಪಣ್ಣ ಭೋಜನ ಪ್ರಿಯರು, ಸ್ವಂತಕಲ್ಲ, ಇನ್ನೊಬ್ಬರನ್ನು ಕರೆದು ಉಣಿಸುವುದು ಸಂತೋಷ ಇವರಿಗೆ. ಹಾಗಾಗಿ ಆಗಾಗ ಇವರ ಮನೆಯಲ್ಲಿ ನಡೆಯುವ ಭೋಜನ ಸಮಾರಂಭಗಳು. ಅಲ್ಲಿಗೆ ಇಂಥವರೇ ಬರಬೇಕಿಂದಿಲ್ಲ. ನಾಟಕದ ಛಾಪು ಇದ್ದರಾಯಿತು. ಅಲ್ಲಿಯ ಭೋಜನಕ್ಕೂ ರಂಗರುಚಿ ಉಂಡು ಬಂದ ಬಾಯಿಗೆ ಯಾವಾಗಲೂ ಚಪ್ಪರಿಕೆ. ಇವರ ಪ್ರೀತಿ ಸ್ನೇಹಪರತೆಗೆ ಕಟ್ಟುಬಿದ್ದವರು ನೂರಾರು ಜನ. ಪತ್ರಿಕೆಗಳಲ್ಲೂ ಇವರ ಬಗ್ಗೆ ಗುಣಗಾನ. ಕಾರ್ನಾಡ, ಕಾರಂತ, ಕಂಬಾರ, ಡಾ|| ವಿಜಯಾರಂಥವರು ಬಾಯ್ತುಂಬ ಹೊಗಳಿದ ಅನೇಕ ಶಬ್ಧಗಳು. ಕಪ್ಪಣ್ಣ ಅಷ್ಟಕ್ಕೇ ಎತ್ತರಕ್ಕೇರುವುದಿಲ್ಲ. ತನಗಿಂತ ಅತ್ಯಂತ ಕಿರಿಯನಾದ ರಂಗಕರ್ಮಿ ಸಿಕ್ಕಾಗ ಹೊಳೆಯುವ ಅವರ ಕಣ್ಣುಗಳು ಭವಿಷ್ಯದಲ್ಲಿ ಅವರಿಟ್ಟ ನಂಬಿಕೆಗೆ ಸಾಕ್ಷಿ.

ಕಪ್ಪಣ್ಣ ಮಾತಾಡುವುದು ಕಡಿಮೆ, ಕಡಿಮೆ ಮಾತಿನಲ್ಲೇ ಎತ್ತರದ ಧ್ವನಿ. ಮಾತಿನ ಅರ್ಥ ವಿನ್ಯಾಸ.

ಪ್ರಶ್ನೆ : ಇವತ್ತು ಸಂಘಟನೆಯಲ್ಲಿ ತೊಡಗಿರೋರ ಸಂಖ್ಯೆ ಕಡಿಮೆಯಾಗ್ತಿದೆ. ಅದಕ್ಕೆ ಕಾರಣ ಏನು ?

ಕಪ್ಪಣ್ಣ : ಮೊದಲನೆಯದಾಗಿ ಸಂಘಟನೆಗೆ ಪ್ರೋತ್ಸಾಹವಿಲ್ಲ. ಅದು ಸರ್ಕಾರದಿಂದಲಾದ್ರು ಸರಿಯೆ, ಕಲಾವಿದರ ಕಡೆಯಿಂದಲಾದ್ರೂ ಸರಿಯೆ. ಸಂಘಟಕನನ್ನೂ ಅಸಡ್ಡೆಯಿಂದ ನೋಡ್ತಾ ಬಂದಿರೋದು ಈಗಿನ ಸ್ಥಿತಿಗೆ ಕಾರಣ.

ಪ್ರಶ್ನೆ : ಚಳುವಳಿ ಅನ್ನೋದು ಈ ಹಿಂದೆ ರಂಗ ತಂಡಗಳು ಹಿಡಿದಿರೋ ಅಸ್ತ್ರವಾಗಿತ್ತು. ಆದ್ರೆ ಇಂದು ನಾಟಕ ಆಡೋಕೆ ಕಷ್ಟ ಅನ್ನಿಸಿರುವಾಗ ಈ ಅಸ್ತ್ರತ್ಯಾಗ ಮಾಡಿದ್ದು ತಂಡಗಳ ಪಾಲಿಗೆ ಒಳ್ಳೆಯದೇ ?

ಕಪ್ಪಣ್ಣ : ಚಳುವಳಿ ಅನ್ನೋದು ಒಂದು ತಂಡವಲ್ಲ ಅಥವಾ ಒಂದು ತಂಡವನ್ನು ಕಟ್ಟುವ ಹಾಗೆ ಅದನ್ನು ಕಟ್ಟಬೇಕಾಗಿಲ್ಲ. ಕಾರಣ ಚಳುವಳಿ ಹುಟ್ಟೋದು ಅನ್ಯಾಯ ಎದುರಾದಾಗ. ಗೋಕಾಕ್ ಚಳುವಳಿ ಆ ಕಾಲದ ಒತ್ತಡಕ್ಕೆ ಅನಿವಾರ್ಯವಾಗಿ ಬಂತೇ ವಿನಹ ಇಂದೂ ಅದು ಪ್ರಸ್ತುತ ಅನ್ನಿಸೋದಿಲ್ಲ. ಒಂದು ತಂಡದ ನಿಲ್ಲುವ ಹಾಗೆ ಚಳುವಳಿ ನಿಲ್ಲಬೇಕಾಗಿಲ್ಲ- ಹಾಗಾಗಿ ತಂಡಕ್ಕೂ ಚಳುವಳಿಗೂ ಸಾಮ್ಯ ಬೇಡ.

ಪ್ರಶ್ನೆ : ಸಂಘಟನೆಯಲ್ಲಿ ನಟರ ಸಹಕಾರ ಯಾವ ರೀತಿ ಇರಬೇಕು ಅಂತೀರಿ ?

ಕಪ್ಪಣ್ಣ : ಅದನ್ನು ಅವರಿಂದ ನಿರೀಕ್ಷಿಸೋದೇ ತಪ್ಪು. ನಟರು ತಾರೆಗಳಾಗಲು ಬಂದವರು, ಅದೇ ಅವರ ಜೀವನದ ಪರಮ ಸತ್ಯ. ಆದ್ರೆ ಸಂಘಟಕ ಅದರಾಚೆ ಯೋಚಿಸ್ತಾನೆ. ಆತನಿಗೆ ಒಬ್ಬ ನಿರ್ದೇಶಕ ಮುಖ್ಯ ಅಲ್ಲ. ನಾಟಕ, ನಟಮುಖ್ಯ ಅಲ್ಲ. ರಂಗಭೂಮಿ ಮುಖ್ಯ ಆಗೋದು ಅವನಿಗೆ ಮಾತ್ರ. ಸಂಘಟಕನಿಗೆ ರಂಗಭೂಮಿಯಲ್ಲಿ ಮಿಂಚಲು

ಅವಕಾಶ ಇರೋದಿಲ್ಲ. ಆದ್ರೂ ಆತ ನಟರನ್ನು ಹುಡುಕಿ ತಂದು ನಿಲ್ಲಿಸ್ತಾನೆ. ಆತನಿಗೆ ಹೆಸರು ಮಾಡುವ ಭ್ರಮೆ ಇರೋದಿಲ್ಲ. ಆದ್ರೂ ಆತ ನಿರ್ದೇಶಕರನ್ನು ಕರೆತಂದು ನಾಟಕ ಆಡಿಸ್ತಾನೆ. ಅದಕ್ಕೆ ಕಾರಣ ಅಂದ್ರೆ ಅವನಲ್ಲಿರೋ ರಂಗಪ್ರೀತಿ. ಅದನ್ನೇ ಆತ ನಂಬಿರೋದು. ಆತ ಎಲ್ಲಿಯವರೆಗೆ ಈ ಪ್ರೀತಿಯನ್ನು ನಂಬಿರತಾನೋ ಅಲ್ಲಿಯವರೆಗೆ ರಂಗಭೂಮಿ ಸಲ್ಲುತ್ತದೆ.

ಪ್ರಶ್ನೆ : ರಂಗಭೂಮಿಯಲ್ಲಿ ಸಂಘಟಕನಿಗೆ ಪ್ರೋತ್ಸಾಹ ಇಲ್ಲದ್ದರಿಂದ್ಲೇ ಹೊಸಬರು ಈ ಕ್ಷೇತ್ರಕ್ಕೆ ಬರ್ತಾ ಇಲ್ಲ ಅನ್ನೋದಾದ್ರೆ ಇದರ ಭವಿಷ್ಯ ?

ಕಪ್ಪಣ್ಣ : ಏನೂ ಆಗೋದಿಲ್ಲ. ರಂಗಭೂಮಿ ಶಾಶ್ವತವಾದದ್ದು. ಅದು ಕೆಲವರನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತದೆ. ನನಗಿಂತ ಕಿರಿಯರು ನನ್ನ ಮುಂದೆ ಹೋದ್ರೆ ನನ್ಗೆ ತುಂಬಾ ಸಂತೋಷವಾಗುತ್ತದೆ. ಕಾರಣ ಸಂಘಟನೆ ನಿಂತ ನೀರಾದ್ರೆ.... ಹದಗೆಡೋದು ರಂಗಭೂಮಿ ಮಾತ್ರ ಅನ್ನೋದನ್ನ ಮರೀಬಾರ್ದು.

ಪ್ರಶ್ನೆ : ರಂಗ ಸಂಘಟಕರನ್ನು ಹುರಿದುಂಬಿಸೋ ಕಾರ್ಯಕ್ರಮಗಳು ಏನಾದ್ರೂ ಇವೆಯೇ?

ಕಪ್ಪಣ್ಣ : ನಟರಿಗಾಗಿ ಶಿಬಿರ, ನಾಟಕಕಾರ, ನಿರ್ದೇಶಕರಿಗಾಗಿ ಇರೋ ಶಿಬಿರಗಳನ್ನು ಕಂಡಿದ್ದೀವಿ. ಆದ್ರೆ ಸಂಘಟಕರಿಗೆ ಇಂಥ ಶಿಬಿರಗಳಿಂದ ಏನೂ ಪ್ರಯೋಜನ ಇಲ್ಲ. ಅವನಲ್ಲಿ ಹುಟ್ಟೋ ಕಾಳಜಿಯ ಅವನಿಗೆ ಪರಿಹಾರ ನೀಡುತ್ತೆ. ಕಾಳಜಿ ಇಲ್ಲದವ ಎಂದೂ ಸಂಘಟಕನಾಗಲಾರ. ಇಲ್ಲಿ ಒಂದು ಮಾತು ಹೇಳಲೇಬೇಕು. ಕಲಾವಿದ ಸ್ವಾರ್ಥಿ. ಆತ ತನ್ನ ಬಗ್ಗೆ ಮಾತ್ರ ಯೋಚಿಸ್ತಾನೆ. ಆದರೆ ಸಂಘಟಕ ಹಾಗಲ್ಲ; ಆತ ಒಂದು ತಂಡದ ಯಶಸ್ಸಿನ ಬಗ್ಗೆ ಈ ಸತ್ಯ ಸಂಘಟಕನಿಗೆ ತಿಳಿದಿರಬೇಕು. ಕಲಾವಿದ ಪರಕಾಯ ಪ್ರವೇಶ ಮಾಡಿ ಈಚೆ ಬಂದು ನಿಲ್ಲುತ್ತಾನೆ - ಅಷ್ಟೇ ಅವನ ಕೆಲಸ. ಆದ್ರೆ ಸಂಘಟಕ ಹಾಗೆ ಮಾಡೋಕ್ಕಾಗಲ್ಲ, ಆ ತಂಡವೇ ತನ್ನ ಕೊನೆತನಕದ ಕಾಯ ಎಂದು ತಿಳಿದರೆ ಮಾತ್ರ ಆತ ಗೆಲ್ಲಲು ಸಾಧ್ಯ.

ಪ್ರಶ್ನೆ : ನೀವು ರಾಜ್ಯದ ಹೊರಗೂ ಕೆಲಸ ಮಾಡಿ ಬಂದವರು. ಹಾಗಾಗಿ ಹೊರಗೆ ಕನ್ನಡ ರಂಗಭೂಮಿ ಬಗ್ಗೆ ಇರೋ ಅಭಿಪ್ರಾಯ ಏನು ?

ಕಪ್ಪಣ್ಣ : ಕನ್ನಡದಲ್ಲಿರೋ ರಂಗಭೂಮಿ ಸದ್ಯ ಬೇರೆಲ್ಲೂ ಇಲ್ಲ. ಇಲ್ಲಿ ಆಗೋವಷ್ಟು ಪ್ರಯೋಗಗಳು, ಪ್ರಯೋಗಗಳಲ್ಲಿ ಹೊಸತನ ಇನ್ನೆಲ್ಲೂ ಇಲ್ಲ. ಈ ಬಗ್ಗೆ ನಾವು ಹೆಮ್ಮೆ ಪಡಬೇಕು.

ಕಪ್ಪಣ್ಣ ರಂಗಭೂಮಿಯ ಬಗ್ಗೆ ಮಾತಾಡ್ತಾ ಕುಳಿತರೆ ಸಮಯವೇ ಹೋಗುವುದಿಲ್ಲ. ಅಷ್ಟೊಂದು ಗಾಢ ಅನುಭವ ಅವರದು. ಸದಾ ಹೊಸತನಕ್ಕೆ ಓಗೊಡುವ, ಅದಕ್ಕೆ ಮೈ ಮನಸ್ಸು ತೆರೆದಿಡುವ ಕಪ್ಪಣ್ಣ ಹಲವು ಶಿಷ್ಯರನ್ನೂ ತಯಾರು ಮಾಡಿದ ವ್ಯಕ್ತಿ. ಇವರು ಪರಿಚಯಿಸಿದ ನಟರು ತಾರೆಯರಾಗಿ ರಂಗಭೂಮಿಯ ಆಚೆ ಹೋದರು. ಅದಕ್ಕೆ ಸಂತಸಪಡುವ ಇವರು ಸಂಘಟನೆಯಲ್ಲಿ ತೊಡಗಿರುವ ತಮ್ಮ ಶಿಷ್ಯರನ್ನು ಕಂಡು ಸಮಾಧಾನಪಡುತ್ತಾರೆ. ಕಾರ್ಯನಿಷ್ಠೆ, ಅಪ್ಪಟ ರಂಗ ಪ್ರೀತಿ ಇದ್ದರೆ ಸಂಘಟನೆ ದೊಡ್ಡ ಸಮಸ್ಯೆಯಲ್ಲ ಅನ್ನುತ್ತಾರೆ ಶ್ರೀನಿವಾಸಜಿ ಕಪ್ಪಣ್ಣ.



# ಜೆ. ಲೋಕೇಶ್

ಹೂಲಿ ಶೇಖರ್

ಹವ್ಯಾಸಿ ರಂಗಭೂಮಿ ಹಲವು ಕ್ಷೇತ್ರಗಳಲ್ಲಿ ದುಡಿವ ಹಲವಾರು ಪ್ರತಿಭಾವಂತರನ್ನು ಕೈಮಾಡಿ ಕರೆದಿದೆ. ಆದರೆ ಕೆಲವರನ್ನೇ ಅದು ತನ್ನ ತೆಕ್ಕೆಗೆ ತಬ್ಬಿಕೊಂಡಿದೆ. ಅಂಥ ಅದೃಷ್ಟ ಇದ್ದದ್ದು ಕೆಲವರಿಗೆ ಮಾತ್ರ. ಆ ಕೆಲವರಲ್ಲಿ ಕೈಮಾಡಿ ತೋರಿಸಬಲ್ಲವರು ಬೆರಳೆಣಿಕೆಯಷ್ಟು. ಬೆಂಗಳೂರಿನ ಅಂಥ ಸೀಮಿತರಲ್ಲಿ ನಿಸ್ಸೀಮರಾದವರು ನಾಲ್ಕೈದು ಜನ. ಅವರಲ್ಲಿ ಪ್ರಮುಖವಾಗಿ ಕೇಳಿಬರುವ ಇನ್ನೊಂದು ಹೆಸರು ಜೆ. ಲೋಕೇಶ್ ಅದೂ ರಂಗಸಂಪದ ಲೋಕೇಶ ಅಂದರೇ ಪೂರ್ಣ.

ಬೆಂಗಳೂರಿನಲ್ಲಿ ಉಳ್ಳಾಲ ಪಾರಿತೋಷಕದ ಮೂಲಕ ರಂಗಭೂಮಿಗೆ ಬಂದವರು ಅನೇಕ. ಬಂದವರೆಲ್ಲಾ ಅಸಾಮಾನ್ಯರು. ಒಬ್ಬೊಬ್ಬರಿಗೂ ಒಂದೊಂದು ಪ್ರತಿಭೆ. ಒಂದು ಕಡೆ ಕಪ್ಪಣ್ಣ, ನಾಣಿ, ಸಿ.ಆರ್. ಸಿಂಹನಂಥವರು. ಇನ್ನೊಂದೆಡೆ ನಟ ಲೋಕೇಶ್, ಸೂರಿ, ಮೋಹನ್‌ರಾಂ, ಮೇಕಪ್ ರಾಮಕೃಷ್ಣ, ನಾಗಾಭರಣ ಇವರ ಜೊತೆಗೆ ಎದ್ದು ಬಂದವರು ಜೆ. ಲೋಕೇಶ್, ತಂದೆ ಜಯದೇವಯ್ಯ, ತಾಯಿ ಸಂಗೀತ ವಿದುಷಿ ಬಿ.ಎಸ್. ಚಂದ್ರಕಲಾ. ಕಲೆಯನ್ನು ಕಣ್ಣು ಕಿವಿಯಲ್ಲಿ ಆಸ್ವಾದಿಸುತ್ತಲೇ ಬಂದವರು. ಕಲೆ ಹುಟ್ಟಿದ್ದೇ ಕಲೆಗಾಗಿ. ಹಾಗೆ ತಾಯಿಯಿಂದ ಬಳುವಳಿಯಾಗಿ ಬಂದ ಕಲೆ... ನಾಟಕ ರೂಪದಲ್ಲಿ, ಲೋಕೇಶರ ರೂಪದಲ್ಲಿ, ಕಾಲೇಜಿನಲ್ಲಿಯ ಉಲ್ಲಾಳ್ ಶೀಲ್ಡ್ ಆಸಕ್ತಿಗೆ ತೀಡಿದ ನೆಪಮಾತ್ರ. ನೆಪಗಳು ಒಮ್ಮೊಮ್ಮೆ ಆಕಾಶವನ್ನೂ ಸೀಳಬಲ್ಲವು. ಹಾಗೆ ಉಳ್ಳಾಲ ಪಾರಿತೋಷಕದಿಂದ ಹಲವರ ಸ್ಥಾನ ಎತ್ತರದಲ್ಲಿ. ಹಲವರ ರಂಗಾಸಕ್ತಿಗೆ ಗರಿ ಬಿಚ್ಚಿದ ಹಕ್ಕಿ. ಜೆ. ಲೋಕೇಶ್ ಈ ಪಾರಿತೋಷಕದಿಂದ ಎದ್ದುಬಂದದ್ದೂ ಹಾಗೇ.... ರಂಗಭೂಮಿಯ ಆಕಾಶದಲ್ಲಿ ಗರಿಗೆದರಿ ಹಾರಿದ ಜಟಾಯುವಿನಂತೆ ಎಲ್ಲರ ಹಾಗೆ ಲೋಕೇಶರನ್ನು ಆಕರ್ಷಿಸಿದ್ದು ನಟನೆ. ಅದಕ್ಕೆ ಕಾರಣವೂ ಉಂಟು. ರಂಗಭೂಮಿಗೆ ಒಗ್ಗುವ ದೇಹದಾರ್ಢ್ಯ ಅದಕ್ಕೆ ಪೂರಕವಾದ ಧ್ವನಿ, ಇದಕ್ಕೆ ಕಳೆ ಕಟ್ಟಿದ ಪ್ರತಿಭೆ, ಎಲ್ಲಕ್ಕೂ ಮುಖ್ಯವಾದದ್ದು ರಂಗಕಾಳಜಿ. ರಂಗಭೂಮಿ ಬೇಡುವದೇ ಇದನ್ನು. ಅದು ಬೇಡಿದ ಎಲ್ಲವೂ ಇವರಲ್ಲಿ, ಹಾಗಾಗಿ ಲೋಕೇಶ ಮನಸ್ಸು ಮಾಡಿದ್ದೇ ತಡ ರಂಗಭೂಮಿ ಸಂಪೂರ್ಣ ಅವರನ್ನು ಸೆಳೆದುಕೊಂಡಿತು.

ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನಿಂದ ಹಲವು ಪ್ರತಿಭೆಗಳನ್ನು ನೀಡಿಕೆ. ಹಲವರು ಹಲವು ಕ್ಷೇತ್ರಗಳಲ್ಲಿ ನಾಮಾಂಕಿತರು. ಲೋಕೇಶರ ಓದು ಅಲ್ಲಿಯೇ. ಉಲ್ಲಾಳ್ ಪಾರಿತೋಷಕದ ಕಾಲವಾದ್ದರಿಂದ ಈ ಕಾಲೇಜಿನಲ್ಲೂ ರಂಗಹಬ್ಬ, ಹಬ್ಬದಲ್ಲಿ ಕುಣಿಯುವ ವಯಸ್ಸು. ಲೋಕೇಶರ ಪಾಲಿಗೆ ಕಾಲೇಜೊಂದು ರಂಗಸೃಷ್ಟಿಯ ಪ್ರಯೋಗಶಾಲೆ. ಅಲ್ಲಿ ಪ್ರೊ|| ಎಂ.ಎಸ್. ನಾಗರಾಜ ಮತ್ತು ರಾಚಪ್ಪ ಅವರ ಮಾರ್ಗದರ್ಶನ, ಪ್ರೋತ್ಸಾಹ. ಬೆಳೆವ ಸಸಿಗೆ ನಿಲ್ಲದ ನೀರಧಾರೆ. ಕಾಲೇಜು ಕಾಲದಲ್ಲಿ ನಟನಾಗಿ ಮೆರೆದಿದ್ದೇ ಹೆಚ್ಚು. ಮೈದುಂಬುವ ಮನಸ್ಸು ತುಂಬುವ ಪಾತ್ರ ಪೋಷಣೆ

ಇವರಿಂದ. ಅಲ್ಲಿಂದ ಮುಂದೆ ನಿಲ್ಲದ ರಂಗ ಖಯಾಲಿ. ಅದಕ್ಕಾಗಿ ಅಲ್ಲಿ ಇಲ್ಲಿ ಅವಕಾಶದ ಹುಡುಕಾಟ.

ಕಾಲೇಜಿನ ನಂತರ ಸಂಪೂರ್ಣ ರಂಗಕ್ಕೇ ಒಪ್ಪಿಕೊಂಡ ಮನಸ್ಸು. ಅದೇ ಕಾಲದಲ್ಲಿ ಶ್ರೀರಂಗರಿಂದ ನಾಟಕ ಶಿಬಿರ. ೧೯೭೦ರ ಸಮಯ. ನಾಟಕದ ಗುಂಗಿನಲ್ಲೇ ಇದ್ದ ಲೋಕೇಶರಿಗೆ ಇದೊಂದು ಸುವರ್ಣ ಅವಕಾಶ. ಆ ಶಿಬಿರದಲ್ಲಿ ಭಾಗಿಯಾದರು. ಅಲ್ಲಿ ಬಿ. ಜಯಶ್ರೀ, ನಟ ಲೋಕೇಶ್, ನಾಗಾಭರಣ ಭೇಟಿ. ಅವರೂ ಇವರೊಂದಿಗೆ ಶಿಬಿರಾರ್ಥಿಗಳು, ಹಲವು ದಿಗ್ಗಜರನ್ನು ಹೊರಹಾಕಿದ ಶಿಬಿರವದು. ಜೆ. ಲೋಕೇಶ್‌ಗೆ ಅದೊಂದು ಬಹುದೊಡ್ಡ ಗರಡೀಮನೆ. ಅಲ್ಲಿದ್ದವರು ಒಬ್ಬರಿಗಿಂತ ಒಬ್ಬರು ಪ್ರತಿಭಾವಂತರು. ನಟನೆಯಲ್ಲಿ, ಸಂಗೀತದಲ್ಲಿ ಒಬ್ಬರನ್ನೊಬ್ಬರು ಮೀರಿಸುವ ಛಲ. ಜೆ. ಲೋಕೇಶ್‌ಗೆ ನಟನೆ ಲೀಲಾಜಾಲ, ಶ್ರೀರಂಗರ ಮನಸ್ಸು ಗೆದ್ದರು. ಅದರ ಜೊತೆಗೆ ಸಹ ಶಿಬಿರಾರ್ಥಿಗಳ ಪ್ರೀತಿಯನ್ನು ಕೂಡ. ಅಲ್ಲಿಂದ ಆರಂಭವಾಯಿತು ರಂಗಾಶ್ವಮೇಧ. ಲೋಕೇಶ್ ರಂಗಭೂಮಿಗೆ ಪೂರ್ಣ ಅರ್ಪಿಸಿಕೊಂಡ ಕಾಲ ಅದು. ಶಿಬಿರದ ನಂತರ ಮೌನಿಯಾಗಲಿಲ್ಲ. ನಾಟಕದ ಕನಸು ಎದೆ ತುಂಬ.

ಎಂಥಾ ಅಚ್ಚರಿ, ಒಬ್ಬ ಉತ್ತಮ ನಟನಾದ ಲೋಕೇಶ್ ಅದನ್ನೇ ಮುಂದುವರಿಸಿದ್ದಾರೆ. ವ್ಯಕ್ತಿಗತವಾಗಿ ಅವರೀಗ ತಾರೆಯ ಹಾಗೆ. ಹಾಗೆಯೇನು? ಇಂದಿನ ಸಿನಿಮಾ, ಟಿವಿಗಳಲ್ಲಿ ಹಣ, ಹೆಸರಿನ ಕೈಗೊಂಬೆ ಆಗುತ್ತಿದ್ದ ಅನಿವಾರ್ಯತೆ. ಎಲ್ಲರೂ ಸಮರ್ಥ ನಟನೆಂದು ಹೊಗಳುತ್ತಿದ್ದ ಹೊತ್ತು. ಅಂಥದ್ದರಲ್ಲೇ ನಟನೆಯನ್ನು ಕಡೆಗಣಿಸಿದ ವ್ಯಕ್ತಿ. ಅದಕ್ಕೆ ಅವರದೇ ಆದ ಕಾರಣ. 'ನಟನಾಗಿದ್ದರೆ ಇಂದು ರಂಗಭೂಮಿಯಲ್ಲಿ ಕಳೆದುಹೋಗುತ್ತಿದ್ದೆ'. ಎಂಥಾ ಮಾತು, ಎಂಥ ನಟರಿಗೂ ಒಗ್ಗದ ದೃಢತೆ. ಮಿಂಚುವ, ಹೊಗಳಿಸಿಕೊಳ್ಳುವ, ತಾರೆಯಾಗುವ, ಹಣ ಬಾಚುವ ಆಸೆ ಯಾರಿಗಿರುವುದಿಲ್ಲ? ಆದರೆ ಇವೆಲ್ಲ ಬಂದಾಗ ದೂರ ತಳ್ಳಿ ನಾಟಕದಲ್ಲೇ ಉಳಿಯುವ ಎದೆಗಾರಿಕೆ ಯಾರಿಗೂ ಇಲ್ಲ. ಇದ್ದರೆ ಅದು ಜೆ. ಲೋಕೇಶ ಮತ್ತು ಅವರಂಥ ವ್ಯಕ್ತಿಗೆ. ನಟನೆಯನ್ನೇ ಮುಂದುವರಿಸಿದ್ದರೆ ಲೋಕೇಶ ಇಂದು ರಂಗಭೂಮಿಯಲ್ಲಿರುತ್ತಿದ್ದಿಲ್ಲ. ಎಂದೋ ಇಲ್ಲಿಂದ ಕಳೆದುಹೋಗುತ್ತಿದ್ದರು.

ಶ್ರೀರಂಗರ ಶಿಬಿರ ಇವರಿಗೆ ವೀಳ್ಯಕೊಟ್ಟಿತು. ಅದೇ ಸಂದರ್ಭದಲ್ಲೇ ಬಿ.ವಿ. ಕಾರಂತ, ಬಿ.ಎಂ. ಶಾ, ಪ್ರೇಮಾ ಕಾರಂತ, ಸಾಯಿ ಪರಂಜಪೆಯಂಥವರ ಒಡನಾಟ. ನಾಟಕ ಕುರಿತು ಚರ್ಚೆ, ಮಂಥನ, ಚಿಂತನ. ಬದಲಾದ ಇವರ ರಂಗ ದೃಷ್ಟಿ. ಇಲ್ಲಿ ಏನಾದರೂ ಮಾಡಬೇಕೆಂಬ ಛಲ. ಬರೀ ನಟನೆಯಿಂದ ರಂಗಭೂಮಿ ಕಟ್ಟಲಾಗುವುದಿಲ್ಲ ಎಂಬ ನಂಬಿಗೆ. ತಾನು ಕೇವಲ ನಟನೆಗೆ ಸೀಮಿತ ಅಲ್ಲ. ಅದರಾಚೆಯ ಕರ್ತವ್ಯವೂ ತನ್ನದು; ಮತ್ತಷ್ಟು ಚಿಂತನೆ.

೧ ॥ಆರ್. ಚಂದ್ರಶೇಖರ ಕೈಗೆತ್ತಿಕೊಂಡದ್ದು 'ತುಘಲಕ್', ಆಗ ಬಿ.ಸಿ. ಅಂದರೆ ರಂಗಭೂಮಿಯ ಭೀಷ್ಮ ಅವರ 'ತುಘಲಕ್' ಅಂದರೆ ಅದಕ್ಕೆ ಎದುರಾಳಿ ಅವರೇ. ಅಷ್ಟೊಂದು ಗಾಢತೆ ಅದರಲ್ಲಿ. ಲೋಕೇಶರ ಮನಸ್ಸು ಹಿಡಿದ ನಾಟಕ. ಅದರ ನಂತರ ಸತ್ತವರ ನೆರಳು,

ಜಸ್ಮಾ ಒಡನ್, ಸತ್ತವರ ನೆರಳು ಅಂದಿನ ರಂಗವೈಭವಕ್ಕೆ ಬಲವಾದ ಸಾಕ್ಷಿ. ಕಲಾಕ್ಷೇತ್ರದಲ್ಲಿ ಪ್ರೇಕ್ಷಕರಿಗೆ ಮುಂಗಡ ಟಿಕೇಟು ಮಾರಾಟ. ಎಲ್ಲೆಲ್ಲೂ ರಂಗ ಸಂಭ್ರಮ. ಈ ಸಂಭ್ರಮದಲ್ಲಿ ಹೆಚ್ಚು ಬೀಗಿದವರೇ ಲೋಕೇಶ್.

ಆಗ ಕನ್ನಡ ಸಾಹಿತ್ಯ ಕಲಾ ಸಂಘ ಎಂಬುದು ಅತ್ಯಂತ ಪ್ರತಿಷ್ಠಿತ ಕಲಾ ತಂಡ. ಇಂದಿನ ಬಹುತೇಕ ತಂಡಗಳಲ್ಲಿ ಹೆಸರುವಾಸಿಯಾದವರೆಲ್ಲರ ಪ್ರಯೋಗ ಶಾಲೆ. ಅಲ್ಲಿಯ ನಾಟಕಗಳಿಂದ ಹಲವರಿಗೆ ಹಲವು ರೀತಿಯ ಟ್ರೀಟ್ಮೆಂಟ್. ಬೆಂಗಳೂರಿನ ರಂಗ ತಂಡಗಳ ತಾಯಿಬೇರು. ಅಲ್ಲಿಂದ ಶಕ್ತಿ ಹೀರಿ ಬೆಳೆದ ತಂಡಗಳು ಅನೇಕ. ಲೋಕೇಶ್ ಅಷ್ಟರಲ್ಲಿ ನಟನೆಯನ್ನು ಬದಿಗಿಟ್ಟರು. ಅದಕ್ಕೆ ಕಾರಣ ನಾಟಕಕ್ಕೆ ಸಂಘಟನೆ ಎಂಬುದು ಅನಿವಾರ್ಯದ ಬಲ. ಅದರಲ್ಲೇ ದುಡಿಯುವ ಹಂಬಲ. ಅಂಥ ಸಂದರ್ಭದಲ್ಲೇ ಹುಟ್ಟಿಕೊಂಡದ್ದು "ಶಕಶೈಲೂಶರು ಲೋಕೇಶ್ ಅದರ ಸಂಚಾಲಕ, ತಂಡದ ಎಲ್ಲಾ ಜವಾಬ್ದಾರಿ ಇವರ ಹೆಗಲಿಗೆ. ಹೆಚ್ಚು ಅನುಕೂಲಗಳಿರದ ಕಾಲ. ಎಲ್ಲಕ್ಕೂ ಪರದಾಟ. ಆದರೂ ಸೈಕಲ್ ತುಳಿಯುವದರಲ್ಲೋ ಇವರಿಗೆ ಖುಶಿ. ಆ ಖುಶಿಯಿಂದಲೇ ಕಂಡ ಹಲವು ಪ್ರಯೋಗಗಳು.

1972-ಬಯಲು ರಂಗಭೂಮಿ ಮೂರ್ತಿಸಿದ ಸಮಯ. ರಂಗ ದಿಗ್ಗಜರಿಗೆ ಅದೊಂದು ಸ್ವಯಂವರ. ಅಲ್ಲಿ ಈಡಿಪಸ್ ನಾಟಕ. ಲೋಕೇಶರ ಪಾಲಿಗೆ ಅದೊಂದು ಸವಾಲು. ಭಾರೀ ಕಂಬಗಳನ್ನು ನಿಲ್ಲಿಸಿ ರೋಮ್‌ನ್ನೇ ಸೃಷ್ಟಿಸುವ ಹುಮ್ಮಸ್ಸು. ಇವರ ಆ ಹುಮ್ಮಸ್ಸಿಗೆ ಸಂದ ಯಶಸ್ಸು ಈಡಿಪಸ್ ಹಲವರಿಗೆ ರಂಗಗಾಯ ನೀಡಿದರೆ ಕೆಲವರಿಗೆ ರಂಗತೇಜ ನೀಡಿತು.

ಅದುವರೆಗೆ ಮೂಲ ತಂಡ 'ಕನ್ನಡ ಸಾಹಿತ್ಯ ಕಲಾ ಸಂಘ'ದ್ದೇ ಹಾರಾಟ. ಆದರೆ ಚಂಚಲ ರಂಗ ಮನಸ್ಸುಗಳು. ಕೆಲವರಿಗೆ ಟಿಸಿಲೊಡೆಯುವ ಆಸೆ. ಸಾಕಾರಗೊಂಡ ಅಂಥ ಆಸೆಗಳು. ಹಲವಾರು ತಂಡಗಳ ಉದಯ. ಅದು ಸಂಘಟಕರ ಚಿಂತನೆಯ ಫಲ. ಕೆಲವು ಕಾಲ ನಟರಲ್ಲಿ ಗೊಂದಲ. ಯಾರು ಯಾವ ತಂಡದಲ್ಲಿದ್ದಾರೆಂಬುದೇ ಅನುಮಾನ. ಸ್ವತಃ ಅವರಿಗವರಿಗೇ ಏಕಾಏಕೀ ಬದಲಾಗಿಹೋದ ರಂಗ ಚಿತ್ರಣ.

ಲೋಕೇಶರಿಗೆ ರೋಸಿತು. ಒಂದು ತಂತ್ರ ಇಲ್ಲದ ತಂಡ ಯಾತಕ್ಕೆ ಸ್ವಾಮೀ? ಎಂಬ ಪ್ರಶ್ನೆ. ಅದೇ ಆತ್ಮವಾಗಿರುವ ಹೊಸ ತಂಡದ ರಚನೆ. ಅದೇ "ರಂಗಸಂಪದ" ಏಕಚಿಂತನೆ, ತಂಡನಿಷ್ಠೆ, ನಂಬಿಕೆ ಇದ್ದವರ ಸಂಗಮ ಅಲ್ಲಿ. ಅವರೆಲ್ಲರ ನಂಬಿಕೆಯಿಂದ ಮುಂದೆ ಪ್ರಚ್ಛನ್ನವಾಗಿ ಬೆಳೆದ ತಂಡ. ಅದರ ಅಡಿಗಲ್ಲಾಗಿ ಲೋಕೇಶ್. ಒಬ್ಬ ನಟ ನಟನೆ ಮರೆತ. ಸಂಘಟನೆಯಲ್ಲಿ ಬೆರೆತ. ಅದರ ಫಲ ಒಂದು ಕ್ರಿಯಾಶೀಲ ತಂಡದ ಹುಟ್ಟು. ನಟನಾಗಿ ಎಂದೋ ಕಳೆದುಹೋಗಬಹುದಾಗಿದ್ದ ಲೋಕೇಶ ಸಂಘಟಕನಾಗಿ ಬೆಳೆದ ದೈತ್ಯದೇಹಿ.

ಇವರ ಜತೆ ಆರ್. ನಾಗೇಶ್, ಎಂ.ಸಿ. ಆನಂದ, ಕೇಶವರಾವ್, ಹರಿಕೃಷ್ಣ ಮುಂತಾದ ಸ್ನೇಹಿತರು ಜೋಡಿಸಿದ ಕೈಗಳು ಹಲವು ಸೋಲಿನ ರುಚಿಗಳ ನೆನಪನ್ನೇ ಮುಂದಿನ ಯಶಸ್ಸಿಗೆ ಮಾಡಿಕೊಂಡ ಪಾಠ. ಹಲವು ಪ್ರಸಂಗಗಳು ನೆನಪಾಗದೆ ಇರಲಿಲ್ಲ.

1969-ಆಗ ಲೋಕೇಶ್ 'ಶಕಶೈಲೂಷರು' ತಂಡದ ಸಂಚಾಲಕ. ವಯಸ್ಸಿನ ಜತೆ ಹುರುಪಿಗೂ ಏರುಜವ್ವನ. ಶ್ರೀರಂಗರ ಕೈಲಿ ನಾಟಕವೊಂದನ್ನು ಮಾಡಿಸುವ ಕನಸು. ಶ್ರೀರಂಗರೂ ಒಪ್ಪಿದರು.

ಸರಿ, ಲೋಕೇಶರ ಸೈಕಲ್ ಬೀದಿಗಿಳಿಯಿತು. ಆಗ ಶ್ರೀರಂಗರು ಆರಿಸಿಕೊಂಡ ನಾಟಕ 'ಸಂಧ್ಯಾಕಾಲ'. ಭಾರಿ ಉತ್ಸಾಹವೋ ಅಷ್ಟೇ ನಿರುತ್ಸಾಹ ನಾಟಕದ ದಿನ. ಯಾಕೆಂದರೆ ಭಾರಿಯಾಗಿ ತೋಫಾದ ಪ್ರದರ್ಶನ. ಪ್ರೇಕ್ಷಕರ ಗುಂಪಿನಿಂದ ಯಾರೋ ರಂಗಪ್ರೇಮಿ ಕೂಗಿದ. 'ಏನ್ ಕಣಯ್ಯ... ಶ್ರೀರಂಗರ್ನ ಹಾಕ್ಕೊಂಡು ಇಂಥಾ ಬುರುಡೇ ನಾಟಕ ಆಡ್ತಿದ್ದೀರಲ್ಲಯ್ಯ... ಹಣ ಮಾಡೋಕೆ ಇದೇ ಬೇಕಿತ್ತೇನಯ್ಯ...?' ಎಂಬ ಕೂಗು. ದಿಗಿಲುಗೊಂಡ ಸಂಘಟಕರು. ಲೋಕೇಶ ಪೆಚ್ಚಾದರು. ಅದರ ಜತೆ ಪ್ರಶ್ನೆಯೊಂದು ತಲೆಹೊಕ್ಕಿತು. ಪ್ರೇಕ್ಷಕ ಈಗ ಬುದ್ಧಿವಂತ. ಅವನೆದುರು ಗೋಲ್‌ಮಾಲ್ ಮಾಡುವುದು ಸಾಧ್ಯವೇ ? ಎಂದು. ಆಗಲೇ ನಿರ್ಧರಿಸಿದ್ದು, ಪ್ರೇಕ್ಷಕರನ್ನು ಮರೆತು ಮಾಡುವುದು ನಾಟಕವಾಗುವುದಿಲ್ಲ ಎಂದು. ಅದಕ್ಕಾಗೇ ರಂಗ ಸಂಪದಕ್ಕೊಂದು ನಿಷ್ಠೆಯ ಜತೆ ಒಂದು ತತ್ವ. ಆ ತತ್ವದಡಿಯಲ್ಲಿಯ ಅದರ ದುಡಿಮೆ, ಹಾಗಾಗಿ ಮುಂದೆ ರಂಗ ಸಂಪದ ಆಡಿದ ನಾಟಕಗಳು ಪ್ರೇಕ್ಷಕನ ತಲೆಗೆ ಕಸರತ್ತು ಕೊಡುವಂಥವು.

ಇಪ್ಪತ್ತೈದು ವರ್ಷಗಳ ಹಿಂದೆ ರಂಗ ಸಂಪದಕ್ಕಾಗಿ ಪ್ರಸನ್ನ '*ಕದಡಿದ ನೀರು*' ಮಾಡಿಸಿದ್ದು ಇನ್ನೂ ನೆನಪು. ಆದರೆ ಇತ್ತೀಚೆಗೆ ರಂಗ ಸಂಪದ ಅದೇ ನಾಟಕವನ್ನು ಅದೇ ತಂಡಕ್ಕೆ ಅದೇ ಕಲಾವಿದರಿಗೆ ಮಾಡಿಸಿದ ಸಂಭ್ರಮ. ಈ ಕಾಲು ಶತಮಾನದ ನಂತರ ಒಂದು ತಂಡ ನಿರ್ದೇಶಕ ಈ ನಾಟಕ ನೋಡಿದ ದೃಷ್ಟಿಯಲ್ಲಿ ಅನಂತ ವ್ಯತ್ಯಾಸ. ಕಾಲ ಹಾಗೇ ಇರುವುದಿಲ್ಲ, ಹೀಗೂ ಇರಲಾರದು. ಹೊಸ ಪ್ರೇಕ್ಷಕ ಬಯಸುವ ಬದಲಾವಣೆ ಅದು.

ಇಷ್ಟೊಂದು ದೀರ್ಘ ಅವಧಿಯಲ್ಲಿ ನಾಟಕ ಆಡಿಸುವುದಕ್ಕೂ ಸಾಕಷ್ಟು ಕಾರಣ. 'ಅರ್ಥ' ಕಾಲಾನು ಕಾಲಕ್ಕೆ ತನ್ನ ಮೌಲ್ಯ ಬದಲಾಯಿಸಿಕೊಳ್ಳುವುದಿಲ್ಲ. ಆದರೆ ಅದರ ರೂಪಾಂತರದಲ್ಲಿ ವ್ಯತ್ಯಾಸವಿದೆ. ನಾಟಕ ನೋಡಿದಾಗ ಹಾಗೆ ಅನ್ನಿಸಿದ್ದೂ ನಿಜ.

"*ಯಯಾತಿ*" ರಂಗ ಸಂಪದದ ಪ್ರಮುಖ ನಾಟಕ. ಲೋಕೇಶರ ಸಂಘಟನೆ ಅಲ್ಲಿ ಯಶಸ್ವಿ. ಹಾಗೆ ಮತ್ತೆ ಮತ್ತೆ ಹೊಸದಾಗಿ ರಂಗಕ್ಕೆ ಬಂದ ನಾಟಕಗಳು ಅನೇಕ. *ಸಂದರ್ಭ, ಸನ್ನಿವೇಶ, ಚೋಮ, ಬಿರುದೆಂಬರ ಗಂಡ, ಶೋಕಚಕ್ರ, ಜೈಸಿದ ನಾಯ್ಕ* ಹೀಗೆ ಇನ್ನು ಅನೇಕ. ಎಲ್ಲಕ್ಕೂ ರಂಗ ಸಂಚಾಲಕ ಲೋಕೇಶ ಅಚ್ಚುಕಟ್ಟು ಯಜಮಾನಿಕೆ ಎಂಬ ಪ್ರಶಂಸೆ. ಲೋಕೇಶ್ ಸಂಘಟನೆಯಲ್ಲಿ ಯಜಮಾನರಂತೆ. ಅದರಾಚೆ ಒಬ್ಬ ಅಪ್ಪಟ ಗೆಳೆಯ, ಅದು ಎಲ್ಲರಿಗೂ ಗೊತ್ತು. ಹಾಗಾಗಿ ಜಗಳ ಯಾವುದೋ, ಕೀಟಲೆ ಯಾವುದೋ ಅರ್ಥವಾಗುವುದಿಲ್ಲ. ಸಂಘಟಕನಿಗಿರಬೇಕಾದ ಎಲ್ಲಾ ಲಕ್ಷಣಗಳೂ ಅವರಲ್ಲಿ. ಮುಂದಾಲೋಚನೆ ಅವರಿಗಿರುವ ಮುಖ್ಯ ಗುಣ. ಅದೇ ರಂಗಸಂಪದದ ದಾರೀದೀಪ. ಆ ಕಾರಣಕ್ಕಾಗಿ, ಸದಸ್ಯರಲ್ಲಿ ಮಡುಗಟ್ಟಿದ ರಂಗಶಿಸ್ತು. ಒಂದು ತಂಡದ ಕೆಲಸ ಬರೀ ಒಂದು ನಾಟಕ ಮಾಡುವುದಲ್ಲ. ನಾಟಕ ಆಡುವುದರ ಜತೆಗೆ ಬದುಕಿನ ಶಿಸ್ತಿಗೆ ಒಗ್ಗಿಕೊಳ್ಳುವ ಛಲ. ತನ್ಮೂಲಕ ರಂಗ ಬದುಕಿಗೆ ಆದರ್ಶ ತರುವ ಬಯಕೆ. ಈ ಬಯಕೆಯ ಛಾಯೆ ಪ್ರತಿ ನಾಟಕದಲ್ಲಿ. ಹಾಗೆಂದೇ ರಂಗ ಸಂಪದ ನಾಟಕವಾಡುವುದೆಂದರೆ ಕುಣಿಯುವುದು ಪ್ರೇಕ್ಷಕರ ಮನ. ಅದರಿಂದ ಯಾವ ನಾಟಕಕ್ಕೂ ಪ್ರೇಕ್ಷಕರ ಸಮಸ್ಯೆಯಿಲ್ಲ. ನಟರ ಸಂಘಟನೆ, ನಾಟಕದ ತಾಲೀಮು ನಿರ್ದೇಶಕರೊಂದಿಗೆ ಅನನ್ಯ ಸಂಬಂಧ......! ಆಡುವ ನಾಟಕಕ್ಕೆ ಬೇಕಾದ ಅಗತ್ಯ ಪ್ರಚಾರ ಎಲ್ಲದರಲ್ಲೂ ಲೆಕ್ಕಾಚಾರ. ಗುರಿಮುಟ್ಟುವ ತವಕ. ಹಾಗಾಗಿ ಲೋಕೇಶ್ ಎಂದೆಂದೂ ಯಶಸ್ವಿ ಸಂಚಾಲಕ.

ಕೇವಲ ಅವರಿಗಿರುವ ಅನುಭವ ಒಂದೆರಡು ತಂಡಕ್ಕಲ್ಲ. ಅಷ್ಟರಿಂದಲೇ ಅವರು ತೃಪ್ತಿಪಟ್ಟವರಲ್ಲ ನಾಟಕಕ್ಕೆ ಸಂಬಂಧಿಸಿದ ಯಾವುದೇ ಆಯೋಜನೆ - ಪ್ರಾಯೋಜನೆಯಲ್ಲೂ ಅವರದು ಮುಂದಿನ ಹೆಜ್ಜೆ.

ವಿಶ್ವ ಕನ್ನಡ ಸಮ್ಮೇಳನ ನಡೆದಾಗ ಅಲ್ಲಿಯೂ ಲೋಕೇಶರ ರಂಗಸೇವೆ. ಅಲ್ಲಿಯ ರಂಗಮೇಳದ ಸಂಚಾಲಕ ಅವರು. ಯಶಸ್ವಿಯಾದ ರಂಗಪ್ರದರ್ಶನಗಳು, ಎರಡು ಅವಧಿಗೆ ಕರ್ನಾಟಕ ನಾಟಕ ಅಕಾಡೆಮಿಗೆ ಸದಸ್ಯ ತನ್ಮೂಲಕ. ಅನೇಕ ಜಿಲ್ಲೆಗಳಲ್ಲಿ ನಾಟಕೋತ್ಸವಗಳ ಆಯೋಜನೆ. ಆ ಉತ್ಸವಗಳಿಗೆ ಇವರದೇ ನೇತೃತ್ವ. ರಂಗಭೂಮಿಯ ಆಶಯಗಳು ತಾಲ್ಲೂಕು ಮಟ್ಟದಲ್ಲೂ ತಲುಪಲು ಹಮ್ಮಿಕೊಂಡ ಪ್ರಯತ್ನ.

ಬೆಂಗಳೂರಿನಲ್ಲಿ ರಂಗ ವಾತಾವರಣ ಕಲುಷಿತಗೊಂಡಾಗಲೆಲ್ಲ ಲೋಕೇಶರ ಪ್ರಯತ್ನ ಮಿತಿಮೀರಿದ್ದು ಎಲ್ಲರನ್ನೂ ಒಂದೆಡೆ ಸೇರಿಸುವ ಛಲ. ಎಲ್ಲರಿಗೂ ಅವರವರದೇ ಕಾರಣ. ಸ್ವತಂತ್ರವಾಗೇ ಬೆಳೆಯುವ ಹಂಬಲ. ಅದಕ್ಕೆ ಲೋಕೇಶರ ತಕರಾರಿಲ್ಲ. ಆದರೂ ರಂಗ ಕಲಾವಿದರು, ರಂಗಕರ್ಮಿಗಳು ಕ್ಷೇಮವಾಗಿರಬೇಕೆಂದರೆ ಬೇಕು ಅವರಿಗೊಂದು 'ಬ್ಯಾನರ್' ಎಂಬ ಹಂಬಲ. ಆ ಕಾರಣಕ್ಕೆ ಹುಟ್ಟಿಕೊಂಡದ್ದು 'ರಂಗಭೂಮಿ ಕ್ರಿಯಾ ಸಮಿತಿ.' ಲೋಕೇಶ ಅದರ ಸಂಚಾಲಕರು. ಈ ಕ್ರಿಯಾ ಸಮಿತಿಯಿಂದ ಹಲವು ಪತಿತೋದ್ಧಾರದ ಕೆಲಸಗಳು. ಸರಕಾರವು ರಂಗ ವಿರೋಧಿ ನಿಲುವು ತಾಳಿದಾಗ ರಂಗ ಕ್ರಿಯಾ ಸಮಿತಿಯಿಂದ ಪ್ರತಿರೋಧದ ಕೂಗು. ಈ ಕೂಗಿಗೆ ಬೆದರಿದ ಸರಕಾರದ ನಿಲುವುಗಳು. ಜಯದ ಹಬ್ಬ ಕ್ರಿಯಾಸಮಿತಿಗೆ. ಲೋಕೇಶರಿಗೆ ಇನ್ನಷ್ಟು ಹುಮ್ಮಸ್ಸು.

ರಂಗ ಚಳುವಳಿಯಲ್ಲಿ ಕೆಲಸ ಮಾಡಲು ಸರ್ಕಾರಿ ಸಂಸ್ಥೆಗಳಲ್ಲಿ ಸದಸ್ಯನಾಗಿರಬೇಕೆಂಬುದಿಲ್ಲ. ಅದಿಲ್ಲದಾಗೂ ಲೋಕೇಶ ಧಂಡಿಯಾಗಿ ಕೆಲಸ ಮಾಡಿದ್ದಿದೆ. ಅನೇಕ ಮಹಾ ನಗರಗಳಲ್ಲಿ ನಾಟಕೋತ್ಸವಗಳು, ರಂಗಗೋಷ್ಠಿಗಳ ಆಯೋಜನೆ, ತನ್ಮೂಲಕ ಕನ್ನಡ ರಂಗ ಚಳುವಳಿಯ ಗಾಲಿ ಉರುಳಿಸುವ ಇವರ ಯತ್ನ. ಗ್ರಾಮದಿಂದ ತಾಲ್ಲೂಕು, ತಾಲ್ಲೂಕಿನಿಂದ ಜಿಲ್ಲೆ, ಜಿಲ್ಲೆಯಿಂದ ರಾಜಧಾನಿಯವರೆಗೆ ಬಿಡದ ಇವರ ಪ್ರಾಮಾಣಿಕ ಯತ್ನ.

ಕನ್ನಡದಲ್ಲಿ ಹೊಸ ನಾಟಕಕಾರರು ಇಲ್ಲ ಎಂಬ ಕೊರಗು ಈಗಿನದಲ್ಲ. ಲೋಕೇಶರ ಗಮನ ಈ ಕೊರಗಿನತ್ತ; ಅದರ ಪರಿಣಾಮ 'ರಂಗ ಸಂಪದ ಪುರಸ್ಕಾರ' ಯೋಜನೆ ಕನ್ನಡ ನಾಟಕ ರಚನಾ ಸ್ಪರ್ಧೆಗಳ ಏರ್ಪಾಟು. ಅದರ ಪರಿಣಾಮ ಹೊಸ ನಾಟಕಕಾರರ ಉದಯ. ನಿಸರ್ಗಪ್ರಿಯ ಹೂಲಿ ಶೇಖರ, ಗೋಪಾಲ ವಾಜಪೇಯಿ, ಡಾ|| ಹೆಚ್.ಎಸ್. ವೆಂಕಟೇಶಮೂರ್ತಿ ಮುಂತಾದವರು ನಾಟಕ ರಚನೆಯಲ್ಲಿ ತೊಡಗಿಕೊಳ್ಳಲು ಕೊಟ್ಟ ಪ್ರೇರಣೆ ರಂಗಸಂಪದ ನಾಟಕ ರಂಗಕ್ಕೆ ಕೊಟ್ಟ ಬಹುದೊಡ್ಡ ಕಾಣಿಕೆ ಅಷ್ಟೇ ಅಲ್ಲ. ನಾಟಕ ಸಾಹಿತ್ಯ ಪ್ರಕಟಿಸುವಲ್ಲಿ ಇಂದಿನಂತೆ ಹಿಂದೆಯೂ ಪ್ರಕಾಶಕರ ಹಿಂಜರಿಕೆ. ಆದ್ದರಿಂದ ನಿಜವಾದ ಅನ್ಯಾಯ ರಂಗಭೂಮಿಗೆ ಅದನ್ನರಿತ ರಂಗಸಂಪದ ನಾಟಕ ಪ್ರಕಾಶನಕ್ಕೂ ಹಾಕಿದ ಕೈ. *ಸ್ವರ್ಗಸ್ಥ, ಹೆಜ್ಜೆಗಳು, ಮಹಾಚೈತ್ರ* ಮುಂತಾದವುಗಳ ಪ್ರಕಾಶನ ಈ ಎಲ್ಲದರ ಹಿಂದೆ ಲೋಕೇಶರೇ ಜೀವಾಳ.

ಬೆಂಗಳೂರಲ್ಲಿ ಸಾರ್ಕ್ ಶೃಂಗ ಸಭೆ-ಸಭೆಯೇನೋ ರಾಜಕೀಯ ಗಣ್ಯರದ್ದು. ಆದರೆ

ಸಾಂಸ್ಕೃತಿಕ ಗಣ್ಯರ ಮುಖ್ಯ ವಾಹಕರಾದದ್ದು ಲೋಕೇಶ್. ಹತ್ತು ರಂಗಮಂದಿರದಲ್ಲಿ ಏಕಕಾಲಕ್ಕೆ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖ್ಯ ಸಂಘಟಕರು ಲೋಕೇಶ್.

ಸುಮಾರು 50 ರಂಗ ನಾಟಕಗಳ ಯಶಸ್ಸು ರಂಗ ಸಂಪದದ ಬೆನ್ನಿಗೆ. ಈ ತಂಡದ ನಟರನ್ನು ಪರಿಚಯಿಸಿದ ಹಾಗೆ ನಾಟಕಕಾರರನ್ನೂ ಪರಿಚಯಿಸಿತು. ಅಷ್ಟೇ ಅಲ್ಲ, ಇಂದು ನಿರ್ದೇಶಕರನ್ನು ಅರಸಿ ಹೋಗುವ ತಂಡಗಳ ಸಂಖ್ಯೆ ಜಾಸ್ತಿ. ಆದರೆ ತನ್ನ ಸುತ್ತಾ ನಿರ್ದೇಶಕರು ಬೆಳೆಯುವಂತೆ ಮಾಡಿದ ತಂಡಗಳಲ್ಲಿ ರಂಗ ಸಂಪದವು ಒಂದು. ನಿರ್ದೇಶಕನ ಸುತ್ತಾ ತಂಡ ಬೆಳೆಯಲಿಲ್ಲ. ತಂಡದ ಸುತ್ತಾ ನಿರ್ದೇಶಕರು ಬೆಳೆದರು. ಅದೂ ಎಂಥವರು?... ಸಿಜಿಕೆ, ಪ್ರಸನ್ನ, ಆರ್. ನಾಗೇಶ, ನಾಗಾಭರಣ, ಹೆಚ್.ವಿ. ವೆಂಕಟಸುಬ್ಬಯ್ಯ, ಇನ್ನೂ ಅನೇಕರು. ಇವರೆಲ್ಲರ ನಾಟಕಗಳ ಮೂಲಕ ಬೆಳಕಿಗೆ ಬಂದ ನಟ-ನಟಿಯರಂತೂ ನೂರಾರು ಜನ. ಅವರಲ್ಲಿ ಉಮಾಶ್ರೀ, ವೈಜಯಂತಿ ಕಾಶಿ, ಕಲ್ಪನ, ಟಿ.ಎನ್. ಸೀತಾರಾಂ, ವಿಜಯಕಾಶಿ, ನಾಗೇಶ ಕಶ್ಯಪ್, ಮೈಕೋ ಚಂದ್ರು, ರಾಮಮೂರ್ತಿ, ರಂಗಸ್ವಾಮಿ ಮುಂತಾದವರು.

ನೇಪಥ್ಯ ಗಾರರಿಗೂ ಆಖಾಡವಾದ ರಂಗ ಸಂಪದ ಶಶಿಧರ ಅಡಪ, ಸುದೇಶಮಹಾನ್, ಚಡ್ಡಿ ನಾಗೇಶ, ಕಳ್ಳ ರಾಮಚಂದ್ರ, ಮೈಕೋ ರಮೇಶ, ಅಪ್ಪಯ್ಯ ಇನ್ನೂ ಅನೇಕರು, ಇವರೆಲ್ಲರಿಗೆ ರಂಗಸಂಪದವೇ ಗರಡೀಮನೆ.

*ಒಡಲಾಳ, ಮಹಾಚೈತ್ರ*ದಂಥ ಮಹತ್ತಾದ ನಾಟಕಗಳು ಇಂದಿಗೂ ಕನ್ನಡಿಗರ ಮನದಲ್ಲಿ. ಅವುಗಳ ಯಶಸ್ಸು ಲೋಕೇಶರ ಕಾರ್ಯಶೀಲತೆಗೆ ಸಾಕ್ಷಿ. ರಂಗಸಂಪದದ ಕಾರ್ಯ ತತ್ಪರತೆಗೆ ಅಪ್ಪಟ ಉದಾಹರಣೆ. ರಂಗಭೂಮಿಯೆಂದರೆ ಕೇವಲ ಚಟುವಟಿಕೆಯಿಂದ ಇದ್ದರೆ ಸಾಲದು. ಸಂಖ್ಯೆಗಿಂತ ಮುಖ್ಯ ಗುಣಾತ್ಮಕ ಸಾಧನೆ. ರಂಗ ಸಂಪದದ ಧ್ಯೇಯ ಅದು ಪಾಲನೆಯೂ ಹೌದು. ಅದು ಕಂಡ ಕನಸುಗಳು ಹತ್ತು. ರಂಗೇತಿಹಾಸದಲ್ಲಿ ಗಟ್ಟಿ ಹೆಜ್ಜೆ ಮೂಡಿಸುವ ಆಸೆ. ಅದಕ್ಕೆಂದೇ ಕಸಕ್ಕಿಂತ ತುಸು ಮೇಲು ಅನ್ನುವ ಗಾದೆಯ ಅನುಕರಣೆ ಮಾಡಿದ್ದಲ್ಲಿ ಮಹತ್ತರಗಳು. ಸಂಖ್ಯೆ ಮಹತ್ತರವಲ್ಲ. ಕನ್ನಡ ರಂಗಭೂಮಿಗೆ ಶ್ರೀಮಂತ ಕೊಡುಗೆ.

ಶ್ರೀರಂಗರಿಗೂ ಲೋಕೇಶರಿಗೂ ಮೊದಲಿಂದಲೂ ವಿಶಿಷ್ಟ ಸಂಬಂಧ. ಅವರ ಶಿಬಿರದಿಂದ ಬಂದ ಲೋಕೇಶರಿಗೆ ಶ್ರೀರಂಗರೆಂದರೆ ಅಪಾರ ಗೌರವ ಅದರ ಋಣಕ್ಕೆಂದೇ ಶ್ರೀರಂಗರ 75 ರ ಹುಟ್ಟು ಹಬ್ಬ ಆಚರಣೆ ರಂಗಸಂಪದದಿಂದ. ಅದೂ ರಾಷ್ಟ್ರಮಟ್ಟದಲ್ಲಿ, ನಾಟಕೋತ್ಸವ ವಿಚಾರ ಸಂಕಿರಣ, ಶ್ರೀರಂಗರ ನಾಟಕ ಪ್ರದರ್ಶನ ಹೀಗೆ ಇಮ್ಮಡಿಯಾಗಿ ಬೆಳೆಸಿದ ರಂಗಭೂಮಿಯ ಅರ್ಥವಂತಿಕೆ.

ಲೋಕೇಶರ ರಂಗಕಾಳಜಿ ವಿಶಿಷ್ಟ. ರಂಗಭೂಮಿಯ ವಿವಿಧ ಮಜಲುಗಳ ದಾಖಲೆಯಲ್ಲಿ ಆಸಕ್ತಿ. ಆ ಕಾರಣದಿಂದ ಕಿರುತೆರೆಗೊಂದು ಅಪರೂಪದ ಕಾರ್ಯಕ್ರಮ ಅರ್ಪಣೆ, 'ರಂಗ-ವಿಹಂಗಮ' ಎಂಬುದೊಂದು ಇವರು ಮಾಡಿದ ದೊಡ್ಡ ಸಾಧನೆ. ಆರ್. ನಾಗೇಶ್ ನಿರ್ದೇಶನದ ಈ ಟೆಲಿಫಿಲ್ಮ್ ಆಧುನಿಕ ರಂಗಭೂಮಿಯನ್ನೂ ಕಣ್ಣೆದುರಿಗೆ ಇಡುವ ಪ್ರಯತ್ನ. ಅದೊಂದು ಪ್ರಮುಖ ದಾಖಲೆ. ೧೯೯೦ರಲ್ಲಿ ಅತ್ಯುತ್ತಮ ಸಾಕ್ಷಿಚಿತ್ರ ಎಂದು 'ಆರ್ಯಭಟ'ದಿಂದ ಪ್ರಶಸ್ತಿಯ ಗರಿ. ಲೋಕೇಶರ ಬಹುಮುಖ ಪ್ರತಿಭೆಗೆ-ಕ್ರಿಯಾಶೀಲತೆಗೆ ಸಂದ ಗೌರವ.

ಲೋಕೇಶರನ್ನು ಕಂಡು ಕೇಳಿದ ಪ್ರಶ್ನೆಗಳಿಗೆ ಅವರ ಉತ್ತರಗಳೂ ಅಷ್ಟೇ. ಪ್ರಸಕ್ತ ನಮಗೆ ಬೇಕಾದ ದೂರಗಾಮಿ ಯೋಚನೆ. ಯೋಜನೆಗಳೆಲ್ಲ ಅವರ ಭಂಡಾರದಲ್ಲಿ.

ಪ್ರಶ್ನೆ : ಇಷ್ಟೆಲ್ಲ ಮಾಡಿದ ನೀವು ಇತ್ತೀಚಿನ ವರ್ಷಗಳಲ್ಲಿ ಹೊರಗೆ ಕಾಣುವುದೇ ಅಪರೂಪವಲ್ಲ?

ಲೋಕೇಶ : ಹೌದು, ರಂಗಭೂಮಿಗೆ ಒಂದು ವಿಶಿಷ್ಟ ಸ್ಥಾನ ಇದೆ. ಹೀಗೆ ಬಂದು ಹಾಗೆ ಹೋಗುವುದಲ್ಲಿ, ನನಗೆ ಕಾರ್ಯಕ್ರಮಗಳ ಸಂಖ್ಯೆಯಲ್ಲಿ ನಂಬಿಕೆಯಿಲ್ಲ. ಇಂದು ತತ್ವಬದ್ಧ ರಂಗಭೂಮಿ ಮಸುಕಾಗುತ್ತಿದೆ. ಸಮುದಾಯ ಒಂದನ್ನು ಬಿಟ್ಟರೆ ಯಾವ ತಂಡಕ್ಕೂ ರಂಗಬದ್ಧತೆಯಿಲ್ಲ ನಾಟಕ ಅನ್ನುವುದು ಕೆಲವರಿಗೆ ವ್ಯವಹಾರವಷ್ಟೆ, ಮಾಡಬೇಕು ಅನ್ನಿಸಿದಾಗ ಮೊದಲಿನ ಉತ್ಸಾಹದಲ್ಲೇ ನಾಟಕ ಮಾಡುತ್ತೇವೆ. ಬೇಡ ಅನ್ನಿಸಿದಾಗ ಸುಮ್ಮನಿರುತ್ತೇವೆ. ಆದರೂ ವರ್ಷಕ್ಕೆ ಮೂರು ನಾಟಕವಂತೂ ಇರುತ್ತವೆ.

ಪ್ರಶ್ನೆ : ನೀವು ಮಾಡಿದ ಬಹುತೇಕ ನಾಟಕಗಳಿಗೆ ಮಿತಿಮೀರಿದ ಖರ್ಚು ಮಾಡಿದ್ದೀರಿ. ಅದರ ಆರ್ಥಿಕ ಏಟೂ ನಿಮಗಿದೆ ಎಂದು ನನ್ನ ಭಾವನೆ.

ಲೋಕೇಶ : ನಾಟಕಕ್ಕೆ ಹಣ ಮುಖ್ಯ ಸಮಸ್ಯೆಯಲ್ಲ, ಅದೂ ರಂಗಸಂಪದಕ್ಕೆ ಹಣದ ಬಗ್ಗೆ ಕಾಳಜಿಯಿಲ್ಲ. ನಮ್ಮ ಸಮಸ್ಯೆ ಇರುವುದು ರಂಗಕಾಳಜಿಯುಳ್ಳ ನಟರ ಮತ್ತು ನಿರ್ದೇಶಕರ ಕೊರತೆ ಬಗ್ಗೆ. ಈಗಲೂ ರಂಗ ಸಂಪದ ಹಣ ಚೆಲ್ಲಲು ಸಿದ್ಧವಿದೆ. ಆದರೆ ನಾಟಕವೊಂದು ಬರೀ ಪ್ರಯೋಗಮಟ್ಟದಲ್ಲಿ ನಿಲ್ಲಲು ಸಾಧ್ಯವಿಲ್ಲ. ಅಥ ನಾಟಕಗಳನ್ನು ರಂಗ ಸಂಪದಕ್ಕೆ ಮಾಡಿಕೊಡಿ ಎಂದು ಹಲವು ನಿರ್ದೇಶಕರನ್ನು ಕೇಳುತ್ತಿದ್ದೇವೆ.

ಪ್ರಶ್ನೆ : ಇತ್ತೀಚೆಗೆ ರಂಗಭೂಮಿ ಗುಣಾತ್ಮಕತೆಯನ್ನು ಕಳೆದುಕೊಳ್ಳುತ್ತ ಜಡತೆಯತ್ತ ಸಾಗುತ್ತಿದೆ ಅನಿಸುತ್ತದೆ.

ಲೋಕೇಶ : ಅದಕ್ಕೆ ಕಾರಣವಿದೆ. ಪ್ರತಿಭಟನೆ ಅನ್ನೋದು ನಮ್ಮಲ್ಲಿದ್ದಾಗ ಒಳ್ಳೆಯ ನಾಟಕಗಳು ಬಂದವು. ನಿರ್ದೇಶಕರೂ ಬಂದರು. ಇವತ್ತು ಎಲ್ಲರೂ ಪರಿಸ್ಥಿತಿಯೊಂದಿಗೆ ರಾಜಿಯಾಗುತ್ತಿದ್ದಾರೆ. ಪ್ರತಿಭಟನಾ ಶಕ್ತಿ ಕಳೆದುಕೊಂಡದ್ದರಿಂದ ಹೊಸದಾಗಿ ಯೋಚಿಸಬಲ್ಲ ಶಕ್ತಿ ಕೂಡ ನಾಶವಾಗುತ್ತಿದೆ. ಅದರಿಂದ ಇಂದು ಅನೇಕ ನಟರು, ನಿರ್ದೇಶಕರು ಸಂಖ್ಯೆಯ ದೃಷ್ಟಿಯಿಂದ ಮಾತ್ರ ನಾಟಕ ಆಡುತ್ತಿದ್ದಾರೆ.

ಪ್ರಶ್ನೆ : ದೂರದರ್ಶನ ರಂಗಭೂಮಿಯ ಆಸಕ್ತಿಯನ್ನು ಕಡಿಮೆ ಮಾಡಿದೆಯೋ.

ಲೋಕೇಶ : ಇಲ್ಲಿ ಒಂದು ಮಾತನ್ನು ಹೇಳಲೇಬೇಕು. ರಂಗನಟರಿಗೆ ದೂರದರ್ಶನದ ರುಚಿ ತೋರಿಸಿದವರು ಬೇರೆ ಯಾರೂ ಅಲ್ಲ. ನಮ್ಮ ಕೆಲವು ತಂಡಗಳು ಹಣ ಮತ್ತು ಪ್ರಚಾರಕ್ಕಾಗಿ ಅಂಥ ಕೆಲಸ ಮಾಡಿಬಿಟ್ಟವು. ಅದರಿಂದ ರಂಗಭೂಮಿಯಲ್ಲಿ


ಹೊಸದನ್ನು ಯೋಚಿಸಬಲ್ಲವರ ಸಂಖ್ಯೆ ಕಡಿಮೆಯಾಯಿತು. ರಂಗಸಂಪದದ ನಟರಲ್ಲಿ ಕೆಲವರು ಹಾಗೆ ಕಳಚಿಕೊಂಡರು, ಅಂಥವರ ಸಂಖ್ಯೆ ಕಡಿಮೆ. ಹಾಗೆಂದೇ ರಂಗ ಸಂಪದದ ನಾಟಕವೆಂದರೆ ಇಂದಿಗೂ ಜನ ಥೇಟರಿಗೆ ಬರುತ್ತಾರೆ. ಏನಿದ್ದರೂ ನಾಟಕ ನಾಟಕವೇ. ಕೆಲವರು ರಂಗಭೂಮಿಗಾಗಿ ಹುಟ್ಟಿದವರಿದ್ದಾರೆ. ಅವರು ರಂಗಭೂಮಿಯನ್ನು ಬೆಳೆಸುತ್ತಾರೆ.

ಪ್ರಶ್ನೆ : ನಿಮಗಿರುವ ಸದ್ಯದ ಯೋಜನೆಯೇನು ?

ಲೋಕೇಶ : ಇನ್ನೊಂದು ಮಹತ್ತಾದ ಆಸೆಯಿದೆ. *ಸಂಕ್ರಾಂತಿ ತಲೆದಂಡ* ಹಾಗೂ *ಮಹಾಚೈತ್ರ* ಮೂರು ಶರಣರ ಮತ್ತು ಆಗಿನ ಸಮಾಜದ ಸ್ಥಿತಿಯನ್ನು ತೆರೆದಿಟ್ಟ ನಾಟಕಗಳು. ಈ ಮೂರೂ ನಾಟಕಗಳನ್ನು ಒಟ್ಟುಗೂಡಿಸಿ ಒಬ್ಬನೇ ನಿರ್ದೇಶಕನಿಂದ ಒಂದು ಮಹಾನ್ ನಾಟಕವನ್ನು ಪ್ರದರ್ಶಿಸಬೇಕು ಅನ್ನುವುದು. ಎಷ್ಟೇ ಲಕ್ಷ ಖರ್ಚಾಗಲಿ, ಎಷ್ಟೇ ಘಂಟೆಗಳ ನಾಟಕವಾಗಲಿ, ಅಂಥ ನಾಟಕ ಮಾಡಿಸಲು ನಿರ್ದೇಶಕರನ್ನು ಈಗ ರಂಗ ಸಂಪದ ಹುಡುಕುತ್ತಿದೆ.

ಲೋಕೇಶರ ಸಹಜಗುಣವದು. ಅವರ ಆಸೆ ಕೈಗೂಡಿದಲ್ಲಿ ರಂಗಭೂಮಿಗೆ ಮತ್ತೊಂದು ಮಹತ್ತರ ದಾಖಲೆ ಖಂಡಿತ. ಇಂಥ ಲೋಕೇಶ್‌ಗೆ ಸಂದ ಪ್ರಶಸ್ತಿಗಳೂ ಅನೇಕ. 1992 ರಲ್ಲಿ ನಾಟಕ ಅಕಾಡೆಮಿಯ ಪ್ರಶಸ್ತಿ, 1985ರಲ್ಲಿ ಕೆನಡಾದಲ್ಲಿ ಅಂತರ್‌ರಾಷ್ಟ್ರೀಯ ರಂಗ ಸಮ್ಮೇಳನ. 1986 ರಲ್ಲಿ ಯುವರಂಗ ಪ್ರಶಸ್ತಿ - ಹೀಗೆ ಒಂದಲ್ಲ ಹತ್ತಾರು.

ಹೊಸ ನಿರ್ದೇಶಕರ ಶೋಧನೆಯತ್ತ ಈಗ ಲೋಕೇಶರ ಕಣ್ಣು. ಒಂದು ದಾಖಲೆ ಮಾಡಬಲ್ಲ ನಾಟಕ ಮಾಡಿಸಲು ಅವರಿಂದ ಆಹ್ವಾನ. ರಂಗಸಂಪದದ ಸುತ್ತಾ ನಿರ್ದೇಶಕರು, ಆದರೆ ನಿರ್ದೇಶಕರ ಸುತ್ತಾ ಈ ತಂಡವಿಲ್ಲ ಎನ್ನುವ ಮಾತಿಗೆ ಮತ್ತಷ್ಟು ಪುರಾವೆ. ರಂಗ ಸಂಪದಕ್ಕೆ ನಾಟಕ ಮಾಡಿಸುವುದೆಂದರೆ ಅದೊಂದು ಸಾರ್ಥಕ ಪ್ರತಿಷ್ಠೆ, ರಂಗ ಸಂಪದದ ರಂಗಕಾಳಜಿಯೇ ಅಂಥದು. ಲೋಕೇಶ್ ಈಗ ತನ್ನ ಯೋಚನಾ ಸಾಧನೆಯತ್ತ ಮಗ್ನ.



# ಡಾ॥ ಗುರುರಾವ್ ಬಾಪಟ್

ವಿಲಿಯಮ್ ಸಾಗರ

ನಾಡಿನ ಹವ್ಯಾಸಿ ರಂಗಭೂಮಿ ಪರಂಪರೆಯಲ್ಲಿ ಸಾಗರದ 'ಉದಯ ಕಲಾವಿದರು' ಒಂದು ಪ್ರಮುಖ ಮೈಲಿಗಲ್ಲು. ಹವ್ಯಾಸಿ ರಂಗಭೂಮಿ ಇತಿಹಾಸಕ್ಕೆ ಇದು ನೀಡಿರುವ ಕೊಡುಗೆ ಅನನ್ಯ. ಕಳೆದ ಐವತ್ತೂ್ಮರು ವರ್ಷಗಳಿಂದ ಎನ್.ಆರ್. ಮಾಸೂರ್ ಅವರು ಈ ತಂಡದಲ್ಲಿ ತನ್ನನ್ನು ತಾನು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿದ್ದು ನಮ್ಮ ಹವ್ಯಾಸಿ ರಂಗಭೂಮಿ ದೃಷ್ಟಿಯಿಂದ ಬಹುದೊಡ್ಡ ಸಾಧನೆ ಮಾತ್ರವಲ್ಲ ಹೆಮ್ಮೆಯ ನಡೆಯೂ ಹೌದು. 'ಉದಯ ಕಲಾವಿದರು' (15-8-1948) ಬಳಗದ 'ಅಟ್ಟ' ಒಂದು ರೀತಿಯಲ್ಲಿ ಹವ್ಯಾಸಿ ರಂಗವಲಯದ ಚಿಂತಕರ ಚಾವಡಿಯೂ ಹೌದು. ಈ ಕಲಾವಿರು ಪ್ರತಿನಿತ್ಯ ಒಟ್ಟಿಗೆ ಸೇರುವ ಈ ತಾಣವೆ "ಅಟ್ಟ" (ಇದೇ ರೀತಿಯ ಒಂದು 'ಅಟ್ಟ' ಮನೋಹರ ಗ್ರಂಥಮಾಲೆ, ಧಾರಾವಾಡದಲ್ಲಿದೆ). ರಂಗಾಸಕ್ತಿಯ ಯಾವುದೇ ವ್ಯಕ್ತಿ ಈ ಅಟ್ಟವನ್ನು ನೋಡಿದರೆ ಪುಳುಕಿತನಾಗುತ್ತಾನೆ.ಲಾಗಾಯ್ತಿನಿಂದ ಜೋಡಿಸಿಟ್ಟಿರುವ ಹಲವಾರು ಸ್ಕ್ರೀನ್ ಸೈಡ್‌ವಿಂಗ್ಸ್‌ಗಳು, ಹರಿದಲ್ಲಿ ಹಾಕಿರುವ ತೇಪೆ ಬ್ಯಾಂಡೇಜುಗಳ ಪರದೆಗಳು, ಹುರಿಹಗ್ಗ ದಾರಗಳ ಪಿಂಡಿ, ಸೇರಿಸಿಟ್ಟಿರುವ ಹಳೆ ರೀಪು ಹಲಗೆಗಳು, ಅರ್ಧ ಶತಮಾನವನ್ನೇ ಕಂಡಿರುವ ಸುತ್ತಿಗೆ, ತುಕ್ಕುಹಿಡಿದಿರುವ ಇಕ್ಕಳ, ಪಂಚೆ, ಟೋಪಿ, ಪೇಟಗಳ ಟ್ರಂಕುಗಳು, ಗಡ್ಡ, ಮೀಸೆ, ಟೋಪನ್ ಪೆಟ್ಟಿಗೆಗಳು, ವಾಕಿಂಗ್ ಸ್ಟಿಕ್ ಕೊಡೆಗಳು, ಸ್ಪೀಕರ್ ಮೈಕುಗಳು, ನಾಟಕದ ಗಂಟೆ, ಪೊಲೀಸ್ ಡ್ರೆಸ್‌ಗಳು ಒಂದೇ ಎರಡೇ-ಇವೆಲ್ಲಾ ಈ ರಂಗತಂಡದ ಜೀವದ್ರವ್ಯಗಳು. ಈ ಎಲ್ಲಾ ರಂಗ ಸಾಮಗ್ರಿಗಳ ಹಿಂದೆ ದಿವಂಗತ ಮಾಸೂರ್ ಅವರ ಶಿಸ್ತು ಶ್ರದ್ಧೆ ಕಾಳಜಿ ಕಳಕಳಿಗಳಿವೆ. ಈ ಎಲ್ಲಾ ವಸ್ತುಗಳ ಸಂಗಡ ಈ ತಂಡಕ್ಕೆ ಒಂದು ರೀತಿಯ ಭಾವಾನಾತ್ಮಕ ಸಂಬಂಧವಿದ್ದು ಈ ತಂತುಗಳೆ 'ಉದಯ' ಕಲಾವಿದರನ್ನು ಅರ್ಧ ಶತಮಾನವನ್ನು ದಾಟಿಸಿದ್ದು.

ರಂಗಪ್ರವರ್ತಕ ಎನ್.ಆರ್. ಮಾಸೂರ್ ಅವರ ಈ ಸಂಸ್ಥೆಯು ತನ್ನೊಳಗೆ ರೂಪಿಸಿಕೊಂಡು ಹೊರತಂದಿರುವ ನಮ್ಮ ಸಂದರ್ಭದ ಸಮರ್ಥ ರಂಗಕರ್ಮಿ, ರಂಗ ಸಂಘಟಕ, ನಿರ್ದೇಶಕರಲ್ಲಿ ಡಾ॥ ಗುರುರಾವ್ ಬಾಪಟ್ ಒಬ್ಬರು. ಕಳೆದ ಮೂವತ್ತೈದು ವರ್ಷಗಳಿಂದ ರಂಗಕ್ರಿಯೆಯಲ್ಲಿ ತನ್ನನ್ನು ತಾನು ತೀವ್ರವಾಗಿ ತೊಡಗಿಸಿಕೊಂಡಿರುವ ವ್ಯಕ್ತಿ. ಸಾಗರದ ಎಲ್.ಬಿ. ಮತ್ತು ಎಸ್.ಬಿ.ಎಸ್. ಪದವಿ ಕಾಲೇಜಿನಲ್ಲಿ ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾಗಿರುವ ಬಾಪಟ್ ಇಂಗ್ಲೀಷ್ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿರುವಂತೆ ಕನ್ನಡ ಸಾಹಿತ್ಯದಲ್ಲೂ ಒಳ್ಳೆಯ ಪರಿಶ್ರಮವಿದೆ. ನಾಟಕ ಮತ್ತು ಕಾವ್ಯವನ್ನು ಕಲಿಸುವಲ್ಲಿ ಇವರಿಗಿರುವ ಅನುಭವಜನ್ಯ ಸಂಭ್ರಮಗಳಿಗೆ ವಿದ್ಯಾರ್ಥಿಗಳು ಹಾತೊರೆಯುತ್ತಿರುತ್ತಾರೆ. ಕಲಿಯುವ ಹಾಗೂ ಕಲಿಸುವ ಪ್ರಕ್ರಿಯೆ, ಈ ಐವತ್ತೂ್ಮರರ ತರುಣನಿಗೆ ಹಸ್ತಗತ. ರಂಗಭೂಮಿ ಬಾಪಟ್‌ರ ಪ್ರಮುಖ ಹವ್ಯಾಸಕ್ಷೇತ್ರ. ಶಾಲಾ ಬಾಲಕನಿದ್ದಾಗಲೆ 'ಜೀವನ ಜೋಕಾಲಿ'ಯಲ್ಲಿ ಮಾಣಿಯ ಪಾತ್ರ. ಮುಂದೆ ಉದಯ ಕಲಾವಿದರು ಅಟ್ಟಕ್ಕೆ

ಏರಿದಂದಿನಿಂದ ಅದಕ್ಕೊಂದು ಅಧಿಕೃತ ರೂಪ ದೊರೆಯಿತು. ದುಡಿಸಿಕೊಂಡಿದ್ದ ರಂಗಶಕ್ತಿ ಹಾಗೂ ರಂಗಾಸಕ್ತಿಗಳಿಂದಾಗಿ ಮಾಸೂರ್ ನಂತರ ಅಟ್ಟದ ಪಟ್ಟ ಬಾಪಟ್ ಹೆಗಲಿಗೆ ಸಹಜವಾಗಿಯೇ ಬಂತು.

ಹೊಸಗಾಳಿ ಮಾಸೂರ್‌ರವರ ಕಾಲದಲ್ಲಿ ಈ ರಂಗ ತಂಡ ಆಡಿರುವ ನಾಟಕಗಳೆಲ್ಲಾ *ಹಯವದನ*ಹೊರತು ಮತ್ತೆಲ್ಲವೂ ಶ್ರೀರಂಗರವರದೆ. ಶ್ರೀರಂಗ, ಮಾಸೂರ್ ಹಾಗೂ ಉದಯ ಕಲಾವಿದರು ನಮ್ಮ ಹವ್ಯಾಸಿ ರಂಗ ಪರಂಪರೆಯ ಅಪರೂಪ ತ್ರಿಕೋನದ ಮೂರು ಬಿಂದುಗಳು. ಶ್ರೀರಂಗರ ನಾಟಕಗಳಿಗಾಗಿಯೇ ಈ ಮಾಸೂರ್, ಈ ಉದಯ ಕಲಾವಿದರು ಎನ್ನುವ ಸರಳ ಮಾತಿನ ಮಟ್ಟಕ್ಕೂ ಇವರು ಶ್ರೀರಂಗರ ನಾಟಕಗಳನ್ನು ಮೈಗೂಡಿಸಿಕೊಂಡಿದ್ದರು. ಶ್ರೀರಂಗರ ನಾಟಕಗಳನ್ನು ಉದಯ ಕಲಾವಿದರು ಉಂಡಷ್ಟು ಮತ್ಯಾರು ಉಂಡಿಲ್ಲ, ಉಣಿಸಿಲ್ಲ. ಒಂದು ರಂಗ ತಂಡ ಈ ರೀತಿಯಾಗಿ ತನ್ನನ್ನು ತಾನು ಒಬ್ಬ ನಾಟಕಕಾರನಿಗೆ ಒಪ್ಪಿಸಿಕೊಂಡಿದ್ದು ಬಹುಶಃ ಕನ್ನಡ ರಂಗಭೂಮಿಯಲ್ಲಿಯೇ ಏಕೆ ಭಾರತದ ರಂಗಭೂಮಿಯ ಇತಿಹಾಸದಲ್ಲಿಯೇ ಗುರುತಿಸಬೇಕಾದ ಸಂಗತಿ. ಶ್ರೀರಂಗರ ಹೊಸ ನಾಟಕಗಳ ಹಸ್ತಪ್ರತಿಗಳು ಉದಯ ಕಲಾವಿದರಿಗೆ ಬಂದ ಮೇಲೆಯೇ ಅದು ಮುದ್ರಣಕ್ಕೆ ಹೋಗುತ್ತಿತ್ತು. ಈ ಪರಂಪರೆಯ ರಂಗ ತಂಡದ ಚುಕ್ಕಾಣಿ ಬಾಪಟ್‌ರವರ ಕೈಗೆ ಬಂದ ಮೇಲೆ ಅಟ್ಟದಲ್ಲಿ ಹೊಸ ಗಾಳಿ ಬೀಸಲಾರಂಭಿಸಿತು. ಬೆಕ್ಟ್, ಷೇಕ್ಸ್‌ಪಿಯರ್, ಕಾರ್ನಾಡ್, ಕಂಬಾರ, ಚಂಪಾ, ಶಿವಪ್ರಕಾಶ, ಕೈಲಾಸಂ ಇಂತವರ ನಾಟಕಗಳನ್ನೆಲ್ಲಾ ಬಾಪಟ್ ಅಟ್ಟಕ್ಕೆ ಹತ್ತಿಸಿದರು. ಹೊಸಹೊಸ ನಾಟಕಗಳು ಬಂದ ಹಾಗೆಯೇ ಹೊಸಹೊಸ ನಟವರ್ಗ, ಹೊಸಹೊಸ ರಂಗಾಸಕ್ತರು ಉದಯ ಕಲಾವಿದರು ಪರಿಧಿಗೆ ಬಂದರು. ಬಾಪಟ್‌ರ ಈ ಒಂದು ಹೊಸ ಪ್ರಯತ್ನ ಅಂದು ತಿಳಿದಷ್ಟು ಸುಲಭವಾಗಿರಲಿಲ್ಲ. ಆದರೆ ಮುಂದೆ ಈ ಪ್ರಯತ್ನಕ್ಕೆ ಗರಿ ಮೂಡಿದವು. ಅವರೆಗಿನ ಸಿದ್ಧ ನಿರ್ದೇಶನ, ಸಿದ್ಧ ವಿನ್ಯಾಸ, ಸಿದ್ಧ ನಿಲುವುಗಳು ಬಾವಿಗೆ ಸರಿದು ಹೊಸಹೊಸ ಪ್ರಯೋಗಗಳ ನಾಟಕಗಳು ಈ ಅಟ್ಟದಿಂದ ಬರಲಾರಂಭಿಸಿದವು. ಶಿವಪ್ರಕಾಶರ "*ಮಾರನಾಯಕ*" (ಮ್ಯಾಕ್‌ಬೆತ್‌ನಾಟಕದ ರೂಪಾಂತರ) ನಾಟಕವನ್ನು ಸಾಗರದ ವರದಾ ನದಿಯ ದಡದ ಮೇಲೆ ನದಿಯ ಹಿನ್ನೆಲೆಯಲ್ಲಿ, ಹೊಳೆ ದಂಡೆಯ ಮೆಟ್ಟಿಲುಗಳನ್ನು ಉಪಯೋಗಿಸಿಕೊಂಡೇ, ಅಲ್ಲಿ ಬೆಳೆದು ನಿಂತಿದ್ದ ಮರಗಳ ಮಧ್ಯದಲ್ಲಿಯೇ ಬಾಪಟ್ ಈ ನಾಟಕವನ್ನು ಕೊಟ್ಟಾಗ ಅದು ಎಂದಿನ ಶ್ರೀರಂಗರ ಅಭಿಮಾನಿ ಪ್ರೇಕ್ಷಕರ ಮೈ ಮನಸ್ಸುಗಳನ್ನು ತಟ್ಟಿತು. ಈ ರೀತಿಯ ಹೊಸಹೊಸ ಆಯಾಮಗಳನ್ನು ಸಾಧ್ಯತೆಗಳ ಹುಡುಕಾಟದಲ್ಲಿಯೇ ತೊಡಗಿರುತ್ತಾರೆ. ಇದೇ ರೀತಿಯ ಇನ್ನೊಂದು ಪ್ರಯೋಗ ಹೊನ್ನಾಳಿಯ ತುಂಗಭದ್ರ ನದಿಯ ದಡದ ಮೇಲೆ ಹಾಳುಬಿದ್ದ ಕೋಟೆಯ ಭಾಗವನ್ನೇ ರಂಗಸ್ಥಳವನ್ನಾಗಿ ಮಾರ್ಪಡಿಸಿ ನೀಡಿದ ನಾಟಕ ಮತ್ತೊಂದು ರೀತಿಯ ಅನುಭವವನ್ನು ನೀಡಿತು. ಬ್ರೆಕ್ಟನ '*ಥ್ರಿಪೆನ್ನಿ ಆಪೆರಾ*' ಇವರ ಕೈಯಲ್ಲಿ '*ಮೂರುಕಾಸಿನ ಆಟ*' ವಾಗಿ ಬ್ರೆಕ್ಟನ ಪರಿಕಲ್ಪನೆಗೆ ಪಕ್ಕಾ ದೇಶಿ ಸ್ಪರ್ಶ ನೀಡಿ ಅದನ್ನು ಬಹು ಸರಳ ಹಾಗೂ ಅರ್ಥಪೂರ್ಣವಾದ ಸಂಗೀತ ಮತ್ತು ಪ್ರೌಢ ಕಲಾವಂತಿಕೆಯೊಡನೆ ನೀಡಿದ್ದು ಬಾಪಟರ ಯಶಸ್ವಿ ಪ್ರಯೋಗಗಳಲ್ಲಿ ಒಂದು. ಈ ನಾಟಕ ಹಲವು ಬೇರೆ ಬೇರೆ ಭಾಷಾಂತರ, ಬೇರೆ ಬೇರೆಯವರ ನಿರ್ದೇಶನದಲ್ಲಿ ಬಂದಿದ್ದರೂ ಬಾಪಟರ ಈ ಪ್ರಯೋಗ ಒಂದು ರೀತಿಯಲ್ಲಿ ಬಹು ವಿಶಿಷ್ಟವಾಗಿತ್ತು. ಇದೇ ರೀತಿ ಲಂಕೇಶರ '*ಸಂಕ್ರಾಂತಿ*' ಗೂ ತಮ್ಮದೇ ಆದ ಹೊಸ ಸ್ಪರ್ಶವನ್ನು ನೀಡಿದ್ದರು. ಇಂತಹ ಹಲವು ರಂಗ

ಪ್ರದರ್ಶನಗಳು ಬಾಪಟರನ್ನು ನಾಡಿನ ಸಮರ್ಥ ನಿರ್ದೇಶಕರುಗಳಲ್ಲಿ ಒಬ್ಬರನ್ನಾಗಿ ಮಾಡಿದೆ.

ಮಾಸೂರು, ಉದಯ ಕಲಾವಿದರು, ಬಾಪಟ್ ಇವರುಗಳು ರಾಜಧಾನಿ ಪತ್ರಿಕೆಗಳಲ್ಲಿ ಮಿಂಚಿದವರಲ್ಲ. ಇವರ್‍ಯಾರು ಪ್ರಚಾರದ ಹಿಂದೆ ಹೋಗಲೇ ಇಲ್ಲ. ಇದು ಇವರೆಲ್ಲರ ಒಲವೂ ಹೌದು, ಬಲಹೀನತೆಯೂ ಹೌದು. ಐವತ್ತು ವರ್ಷಗಳನ್ನು ಕಂಡಿರುವ ಮತ್ಯಾವುದೇ ಒಂದು ದೊಡ್ಡ ನಗರದ ರಂಗ ತಂಡವಾಗಿದ್ದರೆ ಪತ್ರಿಕೆಯವರು ಕೊಡುತ್ತಿದ್ದ ಪ್ರಚಾರದ ವೈಖರಿಯೇ ಬೇರೆಯಾಗಿರುತ್ತಿತ್ತು. ಈ ದೃಷ್ಟಿಯಿಂದ ಇಂತಹ ಒಂದು ದೀರ್ಘ ಇತಿಹಾಸವಿರುವ ರಂಗತಂಡಕ್ಕೆ ದೊಡ್ಡ ಪತ್ರಿಕೆಗಳಿಂದ ದೊರೆತ ನ್ಯಾಯ ಏನೂ ಅಲ್ಲ. ತೀರಾ ಇತ್ತೀಚಿಗಿನವರೆಗೆ ನಾಟಕಗಳೆಂದರೆ ರಾಜಧಾನಿಯ ನಾಟಕಗಳೆ ಸರಿ ಎನ್ನುವ ದಾಟಿಯ ಚಿಂತನೆಗಳಿಂದಾಗಿ ಸಾಗರದಂತಹ ಊರಿನ ರಂಗಕ್ರಿಯೆಗಳು ದೊಡ್ಡ ದೊಡ್ಡ ಸ್ತರಗಳಿಗೆ ತಲುಪುತ್ತಲೇ ಇರಲಿಲ್ಲ. ಉದಯ ಕಲಾವಿದರಿಗಾಗಲಿ, ಬಾಪಟರಿಗಾಗಲಿ ರಂಗ ಸ್ಥಾವರ ಶಕ್ತಿಗಿಂತಲೂ ರಂಗಜಂಗಮ ಶಕ್ತಿಯ ಕಡೆಗೆ ಒಲವು ಬಲವಾಗಿರುವುದು ಬಹುಶಃ ಇದಕ್ಕೆ ಕಾರಣವಾಗಿರಬಹುದು.

*ಜನರತ್ತ ರಂಗಭೂಮಿ:* ಸುಮಾರು 1955ರಲ್ಲಿಯೇ ಉದಯ ಕಲಾವಿದರು ಭಾರತ ಸರ್ಕಾರದ ನಾಟಕ ವಿಭಾಗದಲ್ಲಿ ಅಧಿಕೃತ ಮನ್ನಣೆಯನ್ನು ಪಡೆದಮೇಲೆ ಸುಮಾರು ಮೂರು ಸಾವಿರಕ್ಕೂ ಹೆಚ್ಚಿನ ಪ್ರಚಾರ ನಾಟಕಗಳನ್ನು ನಾಡಿನಾದ್ಯಂತ ಆಡಿದ್ದಾರೆ. ಈ ಹಿನ್ನೆಲೆಯಲ್ಲಿಯೇ 'ಉದಯ ಕಲಾವಿದರು' ಚಿನ್ನದ ಹಬ್ಬಕ್ಕಾಗಿ 'ಜನರತ್ತ ರಂಗಭೂಮಿ' ಎನ್ನುವ ಧ್ಯೇಯ ದೋರಣೆಯೊಡನೆ ಹಲವಾರು ಬೀದಿನಾಟಕಗಳನ್ನು ಆಡಿಸಿದರು. ಸಪ್ದರ್ ಹಶ್ಮಿಯವರ ಬೀದಿ ನಾಟಕ *'ಹೆಣ್ಣು'*, ಚುನಾವಣೆಯ ಸಮಯದಲ್ಲಿ ಡಾ|| ವಿಜಯಾರವರ *'ಕೇಳ್ರಪ್ಪೋ ಕೇಳಿ '*, ಪೊಲೀಸ್ ಇಲಾಖೆಗಾಗಿ 'ಜೋಕೆ' ಈ ಎಲ್ಲಾ ನಾಟಕಗಳು ಬೀದಿಗಿಳಿದಿವೆ. ಅಷ್ಟೇನೂ ಬೆಳಕಿಗೆ ಬಾರದ ನಾಟಕಗಾರ ಗಜಾನನ ಶರ್ಮಾ ಅವರ ಕೃತಿ *'ಬೆಳ್ಳಿ ಬೆಳಕಿನ ಹಿಂದೆ'* ಈ ನಾಟಕದ ಗುಣ ಗ್ರಹಿಸಿ ಬಾಪಟ್ ಅದಕ್ಕೆ ಸೂಕ್ತ ಪ್ರರೂಪವನ್ನೂ ನೀಡಿ ಒಂದು ಅತ್ಯುತ್ತಮ ರಂಗ ಪ್ರಯೋಗವನ್ನು ಕೊಟ್ಟು ಅದನ್ನು ಜನಪ್ರಿಯಗೊಳಿಸಿದರು. ಸಾಗರ ಪ್ರಾಂತ್ಯದಲ್ಲುಂಟಾದ ಮುಳುಗಡೆ ಸಮಸ್ಯೆಯು ಕಾಡಿದ ರೀತಿಯನ್ನು ಬಹು ಸ್ಪಷ್ಟವಾಗಿ ಸೆರೆಹಿಡಿದ ಈ ನಾಟಕವು ಹೊಸ ನಾಟಕಕಾರನೊಬ್ಬನಿಗೆ ಬಲ ನೀಡಿತು. ಉದಯೋನ್ಮುಖ ನಾಟಕಕಾರರ ಕೃತಿಗಳು ಪ್ರತಿಷ್ಠಿತ ನಿರ್ದೇಶಕರ ಕಣ್ಣಿಗೆ ಬೀಳುವುದು ಸ್ವಲ್ಪ ಕಷ್ಟವೆನ್ನುವ ಕಾಲದಲ್ಲಿ ಬಾಪಟ್ ಅಂಥವರ ಕೃತಿಗಳನ್ನು ಕೈಗೆತ್ತಿಕೊಳ್ಳುತ್ತಾರೆ. ತಮ್ಮ ತಂಡದ ಒಂದಿಬ್ಬರಿಂದ ನಾಟಕವನ್ನು ಬರೆಸಿ ಒಳ್ಳೆಯ ಪ್ರದರ್ಶನಗಳನ್ನು ನೀಡಿರುವ ಉದಾಹರಣೆಗಳಿವೆ. *'ಬೆಳ್ಳಿ ಬೆಳಕಿನ ಹಿಂದೆ'* ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದಲ್ಲಿ ಪ್ರದರ್ಶಿಸಿದಾಗ ಬಂದ ಪ್ರತಿಕ್ರಿಯೆ, ಗ್ರಾಮೀಣ ಪರಿಸರ ಹಾಗೂ ನಗರ ಪರಿಸರದ ಪ್ರೇಕ್ಷಕರ ನಡುವಿನ ಭಿನ್ನತೆಯನ್ನು ಸ್ಪಷ್ಟಪಡಿಸಿದಲ್ಲದೆ ರಂಗಭೂಮಿ ಆಯಾಯ ಪ್ರದೇಶದ ಸಾಂಸ್ಕೃತಿಕ ಬದುಕಿನೊಳಗೆ ಇಳಿದಾಗ ಮಾತ್ರ ಅದು ನಿಜವಾಗಲೂ ಬೆಳೆಯಲು ಸಾಧ್ಯ ಎಂಬ ಬಾಪಟರ ನಿಲುವಿಗೆ ಬಲ ಬಂದಂತಾಯಿತು. ಪ್ರಾದೇಶಿಕ ರಂಗ ತಂಡಗಳು ಆಯಾಯ ಪ್ರದೇಶದ ಸಾಂಸ್ಕೃತಿಕ ನೀರು ಗಾಳಿ ಮಣ್ಣಿನಲ್ಲಿ ಅಡಗಿರುವ ಜೀವ ತಂತುಗಳಿಗೆ ಸ್ಪಂದಿಸುವುದು ಇವರಿಗೆ ಅರ್ಥಪೂರ್ಣ. ಹೊರಗಡೆಯಿಂದ ಬಂದ ಸರಕುಗಳನ್ನು ಯಥಾವತ್ತಾಗಿ ಪ್ರೇಮಿನಲ್ಲಿ ಕೊಡುವ ಪ್ರಯತ್ನದ ಬಗ್ಗೆ ಬಾಪಟರಿಗೆ ಬಲವಾದ ಬಿನ್ನಾಭಿಪ್ರಾಯವಿದೆ. ಗೋಲ್ಡಿಂಗ್‌ನ *'ಲಾರ್ಡ್ ಆಪ್‌ಪ್ಲೈಸ್ '* ನಿಂದ ಪ್ರೇರಿತ ಇವರ ನಾಟಕ ಈ ದಿಸೆಯಲ್ಲಿ ಬಹು ವಿಶಿಷ್ಟ ಮಕ್ಕಳ ನಾಟಕ. ದೊಡ್ಡವರಿಗಾಗಿ ಮಕ್ಕಳು

ಅಭಿನಯಿಸಿದ ಈ ನಾಟಕ ಅಪರೂಪ ಪ್ರಯೋಗಗಳಲ್ಲಿ ಒಂದು.

*ರಂಗಜಂಗಮ :* ಪ್ರತಿಯೊಬ್ಬ ಸಮರ್ಥ ರಂಗಕರ್ಮಿಯ ಹಾಗೆ ಬಾಪಟ್ ತಾನು ಹೋದಲೆಲ್ಲಾ ರಂಗಕಾಳಜಿಗಳನ್ನು ಹೊತ್ತುಕೊಂಡು ಹೋಗುವುದು ಇವರ ಜಾಯಮಾನ. ಉನ್ನತ ಶಿಕ್ಷಣದ ಸಂದರ್ಭಗಳಲ್ಲಿ ಧಾರವಾಡ ಹಾಗೂ ಮೈಸೂರಿನಲ್ಲಿ ಬಾಪಟ್ ಅಲ್ಲಿಯ ರಂಗಾಪೇಕ್ಷೆಗಳಿಗೆ ತೀವ್ರವಾಗಿ ಸ್ಪಂದಿಸುತ್ತಿದ್ದರು. ದೆಹಲಿ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿರುವಾಗ (1988-90) ಅಲ್ಲಿಯ ಕ್ಯಾಂಪಸ್‌ನಲ್ಲಿ ಕನ್ನಡ ಹಾಗೂ ಹಿಂದಿ ನಾಟಕಗಳನ್ನು ಆಡಿಸುತ್ತಿರುವಾಗಲೇ ಹಶ್ಮಿಯವರೊಡನೆ ಬೀದಿ ನಾಟಕದಲ್ಲಿ ಭಾಗವಹಿಸುತ್ತಿದ್ದರು. ಕೆಲಕಾಲ ಶಿವಮೊಗ್ಗ ಡಿ.ವಿ.ಎಸ್. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಶಿವಮೊಗ್ಗದ ರಂಗಾಸಕ್ತರನ್ನು ಒಂದುಗೂಡಿಸಿ ಪ್ರಸಿದ್ಧ 'ಅಭಿನಯ' ತಂಡವನ್ನು ಹುಟ್ಟುಹಾಕುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಲ್ಲಿ *'ಎಲ್ಲಿಗೆ'* ನಾಟಕದಲ್ಲಿ ಪ್ರಧಾನ ಪಾತ್ರವಹಿಸಿ ಮುಂದೆ *'ಹಯವದನ', 'ತುಘಲಕ್'* ನಾಟಕಗಳನ್ನು ಯಶಸ್ವಿಯಾಗಿ ನಿರ್ದೇಶಿಸಿದರು. ಅಲ್ಲಿಂದಲೇ ಶಿವಮೊಗ್ಗದಲ್ಲಿ ಹೊಸ ಅಲೆಗಳ ನಾಟಕಗಳು ಬರಲಾರಂಭಿಸಿದವು. ಸಾಗರಕ್ಕೆ ಬಂದ ಮೇಲೆ "ಅಭಿರುಚಿ" (74-78) ಎಂಬ ವಿಶಿಷ್ಟ ರಂಗ ತಂಡವನ್ನು ಹುಟ್ಟು ಹಾಕುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸುಮಾರು 300 ಸದಸ್ಯರನ್ನು ಹೊಂದಿದ್ದ ಈ ರಂಗಸಂಸ್ಥೆಯ ಸದಸ್ಯರಿಗೆ ವರ್ಷಕ್ಕೆ ನಾಲ್ಕೈದು ರಂಗ ಪ್ರಯೋಗಗಳನ್ನು ನೀಡುವ ಜವಾಬ್ದಾರಿಯನ್ನು ಹೊತ್ತು *'ಎಲ್ಲಿಗೆ', 'ನಾಯಕ', 'ಸಂಕ್ರಾಂತಿ', 'ಜೂಲಿಯಸ್ ಸೀಸರ್ ', 'ಸಾಯೋ ಆಟ',* ಮುಂತಾದ ನಾಟಕಗಳನ್ನು ಬಹು ಸಮರ್ಥವಾಗಿ ನಿರ್ದೇಶಿಸಿದರು. ಆಗ 'ಅಭಿರುಚಿ'ಯು ಶ್ರೀರಂಗರ ನಾಟಕಗಳನ್ನು ಹೊರತು ಮತ್ತುಳಿದ ಪ್ರಸಿದ್ಧ ನಾಟಕಕಾರರ ಕೃತಿಗಳನ್ನು ರಂಗದ ಮೇಲೆ ತಂದಿತು. ತನ್ನ ಕಾಲೇಜಿಗಾಗಿ ನಾಟಕಗಳನ್ನು, ನಾಟಕ ಶಿಬಿರಗಳನ್ನು ಹಮ್ಮಿಕೊಂಡಿದ್ದು ಹಲವು ಇವೆ. ಇಂತಹ ಹಲವು ರಂಗಕಾಳಜಿಗಳೊಡನೆ ಸದಾ ಒಡನಾಟ ಇವರದು.

ಬಾಪಟ್, 'ಉದಯ ಕಲಾವಿದರು' ತಂಡವನ್ನು ಬಹು ವಿಶಿಷ್ಟವಾಗಿ ನಡೆಸುತ್ತಿರುವುದು ಗಮನಾರ್ಹ. ಈಗ ಇವರ ಅಟ್ಟದಲ್ಲಿ ಸಮರ್ಥವಾಗಿ ನಾಟಕ ನಿರ್ದೇಶಿಸಲು ಆರೇಳು ಜನ ರಂಗ ಕರ್ಮಿಗಳನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸಿದ್ದಾರೆ. ಬಾಪಟ್ ಸೇರಿದಂತೆ ಇವರ್ಯಾರು ನಾಟಕ ಶಾಲೆ ಕಾಲೇಜುಗಳಿಂದ ಬಂದವರಲ್ಲ. ಇವರೆಲ್ಲ ಬಾಪಟ್ ಗರಡಿಯವರು. 'ಅಟ್ಟ'ವೇ ಇವರ ನಾಟಕಶಾಲೆ. ಇಂಥವರಿಗೆಲ್ಲಾ ಪ್ರೇರಣೆ ಪ್ರೋತ್ಸಾಹ ನೀಡಿ, ಸಂಗಡ ತಮ್ಮ ಅನುಭವದೊಡನೆ ಅವರ ಹೆಗಲ ಮೇಲೆ ಜವಾಬ್ದಾರಿಯ ನೊಗವನ್ನು ಇಡುತ್ತಾರೆ. ಇಂಥವರ ನಾಟಕಗಳಲ್ಲಿ ತಾನೂ ಒಂದಾಗಿ ಕೆಲಸ ಮಾಡುವ ನಾಯಕತ್ವ ಇವರದು. ಇದು ತಿಳಿದಷ್ಟು ಸುಲಭವಲ್ಲ, ಹಾಗೂ ಇದು ಎಲ್ಲಾ ಕಡೆ ದೊರೆಯುವ ವಸ್ತುವೂ ಅಲ್ಲ. ಬಾಪಟ್ ಒಬ್ಬ ತಂಡದ ವ್ಯಕ್ತಿಯೇ ಹೊರತು ಒಂಟಿ ಸಲಗವಲ್ಲ. ಒಬ್ಬನೆ ನಿಂತು ಎಂತಹ ಕೆಲಸಗಳನ್ನಾದರೂ ಮಾಡುವ ಸಾಮರ್ಥ್ಯವಿದ್ದರೂ ಎಲ್ಲರೊಡನೆ ಸೇರಿಕೊಂಡೆ ಆ ಕೆಲಸವನ್ನು ಮಾಡಿ ಆ ಕೆಲಸಕ್ಕೆ ಗೌರವ ಸಲ್ಲಿಸುತ್ತಾರೆ. ಸಂಘ ಸಂಸ್ಥೆಗಳು ನಾಲ್ಕಾರು ಕಾಲ ಬದುಕುಳಿಯಬೇಕಾದರೆ ಇಂತಹ ನಾಯಕತ್ವ ಬೇಕಾಗುತ್ತದೆ. ತನಗೆ ಸಲ್ಲುವ ಗೌರವದಲ್ಲಿ ತಂಡದವರಿಗೆ ಸಮಪಾಲು. ಉದಯ ಕಲಾವಿದರನ್ನು ಮಾಸೂರ್ ಅವರು ಒಂದು ರೀತಿಯಲ್ಲಿ ಸಂಘಟಿಸಿದರೆ ಬಾಪಟ್ ಮತ್ತೊಂದು ರೀತಿಯಲ್ಲಿ. ಇವರಿಬ್ಬರ ಮನೋಧರ್ಮ

ಬೇರೆ ಬೇರೆಯಾಗಿದ್ದರೂ ರಂಗಕಾಳಜಿ ಒಂದೇ. ಈ ರಂಗತಂಡಕ್ಕೆ ಯಾವ ಪ್ರಭಾವಳಿಯಿಲ್ಲದಿದ್ದರೂ ರಂಗ ಕಳಕಳಿ ಹಾಗೂ ಸಾಂಘಿಕ ಭದ್ರತೆಯೇ ಇವರ ಇಡುಗಂಟು. ಈ ಇಡುಗಂಟಿನ ಬಡ್ಡಿ ಈ ಸಂಸ್ಥೆಯನ್ನು ಈ ಸ್ತರದಲ್ಲಿ ನಿಲ್ಲಿಸಿದೆ.

ಇತ್ತೀಚಿಗಿನ ವರ್ಷಗಳಲ್ಲಿ ಕ್ರಿಯಾಶೀಲತೆಯುಳ್ಳ ರಂಗ ತಂಡಗಳು ಕಡಿಮೆಯಾಗುತ್ತಿರುವ ನಮ್ಮ ಸಂದರ್ಭದಲ್ಲಿ ನಾಟಕಕ್ಕೆ ಪ್ರೋತ್ಸಾಹದ ಕೊರತೆ ಅನ್ನುವದಕ್ಕಿಂತಲೂ ಸಮರ್ಥ ರಂಗ ಸಂಘಟಕರ ಕೊರತೆಯೇ ಕಾರಣವೇನೋ ಅನಿಸುತ್ತೆ. ಸಂಘಟನಾ ಶಕ್ತಿ ಎಲ್ಲರ ಹಿತ್ತಲಲ್ಲಿ ಬೆಳೆಯಬಹುದಾದ ಹೀರೆಕಾಯಿಯಲ್ಲ. ಅನೇಕ ಸಾಹಿತಿಗಳು, ಕಲಾವಿದರು, ಶಿಕ್ಷಣ ತಜ್ಞರು ಸಂಘಟನೆ ಹಾಗೂ ಆಡಳಿತಕ್ಕೆ ಬಂದಾಗ ತುಂಬ ಬಳಲಿರುವ ಉದಾಹರಣೆಗಳು ನಮ್ಮಲ್ಲಿ ಬಹಳ ಇವೆ. ತಮ್ಮ ಎಲ್ಲಾ ಗಾಢ ಬರವಣಿಗೆ, ನಾಡುನುಡಿ, ನೆಲಜಲ ಚಿಂತನೆ ಹಾಗೂ ರಂಗ ಕಲಾವಂತಿಕೆಯ ಸಂಗಡ ಬಹು ವಿಶಿಷ್ಟ ಸಂಘಟನಾ ಶಕ್ತಿಯನ್ನು ಮೈಗೂಡಿಸಿಕೊಂಡಿರುವವರು ಬಹಳ ಅಪರೂಪ. ದೀರ್ಘಾವಧಿ ಯೋಜನೆಗಳ ನೆಲದ ಮೇಲೆ ಓಡಾಡಲು ಸಮರ್ಥ ಸಂಘಟನಾ ಶಕ್ತಿ ನಮ್ಮ ರಂಗಭೂಮಿಗೆ ತೀರಾ ತುರ್ತಾಗಿ ಬೇಕಾಗಿದೆ. ಇಲ್ಲಿ ಬಾಪಟ್ ಮುಖ್ಯರಾಗುತ್ತಾರೆ. ಬಹಳ ರಂಗ ಕರ್ಮಿಗಳು ತಮ್ಮ ರಂಗ ಬದುಕಿನ ಹುಡುಕಾಟದಲ್ಲಿ ಕಳೆದುಹೋಗಿ ಹುಡುಕಿರುವುದನ್ನು ಗಟ್ಟಿಯಾಗಿ ನಿಲ್ಲಿಸಲು ಕಾಯಕದಲ್ಲಿ ತೊಡಗಿಸಿಕೊಂಡಿದ್ದು ಬಹಳ ಕಡಿಮೆ. ಉದಯ ಕಲಾವಿದರು ಸಂಸ್ಥೆಯನ್ನು ಅರ್ಥಪೂರ್ಣವಾಗಿ ನಿಲ್ಲಿಸುವ ಎಲ್ಲಾ ಸಾಧ್ಯತೆಗಳ ಬಗ್ಗೆ ಬಾಪಟ್ ಸದಾ ತೊಡಗಿಸಿಕೊಳ್ಳುತ್ತಾರೆ. ಒಂದು ಕಾಲದಲ್ಲಿ, ಆಗಿನ ಗತಿಸ್ಥಿತಿಯಂತೆ ಮಾಸೂರ್ ಅವರು ಯಜಮಾನನಾಗಿ ಅವಿಭಕ್ತ ಕುಟುಂಬದ ಹಾಗೆ ಈ ರಂಗ ತಂಡವನ್ನು ಬಹು ಎಚ್ಚರದಿಂದ ನಡೆಸಿಕೊಂಡು ಬಂದಿದ್ದರು. ಈಗ ಕಾಲ ಬದಲಾಗಿದೆ. ಅಷ್ಟರಲ್ಲಿ ಹೊಸಗಾಳಿ ಬೀಸುತ್ತಿದೆ. ಸಮಾನ ಮನಸ್ಕರು ಇದ್ದಾರೆ. ಈ ಚಿಕ್ಕ ಅಟ್ಟದಲ್ಲಿ ಇಬ್ಬರು ಪಿಹೆಚ್.ಡಿ. ಹೊಂದಿದವರು ಇದ್ದಾರೆ. ಶಾಲೆ ಕಾಲೇಜಿನ ಅಧ್ಯಾಪಕರು, ಪ್ರಾಂಶುಪಾಲರು ಇದ್ದಾರೆ. ಇತರೆ ಸಂಘಸಂಸ್ಥೆಗಳ ಪದಾಧಿಕಾರಿಗಳು ಇದ್ದಾರೆ, ಸಾಹಿತಿ ವಕೀಲರು ಇದ್ದಾರೆ, ಇವರೆಲ್ಲರ ಸಂಗಡ ರೈತ ಮಕ್ಕಳು ಇದ್ದಾರೆ. ಆಟೋ ಓಡಿಸುವ, ಅಂಗಡಿ ಹೋಟೆಲ್‌ನವರು, ರಾಜಕಾರಣಿಗಳು ಹೀಗೆ ಅಟ್ಟದ ಎಲ್ಲಾ ವರ್ಗ, ವೃತ್ತಿ, ಲಿಂಗಧರ್ಮ, ಕುಲಗೋತ್ರದ ಪ್ರತಿಯೊಬ್ಬರಿಗೂ ಅವರವರ ಎತ್ತರಕ್ಕೆ ಸ್ಪಂದಿಸುವ ಬಾಪಟ್ ಮುಖ್ಯವಾಗಿ ಹಿಂದುಳಿದವರಿಗೆ ಸ್ಪಂದಿಸುವ ಇವರ ಮನೋಧರ್ಮ ತುಂಬ ಮುಖ್ಯವಾಗುತ್ತದೆ.

ರಂಗಭೂಮಿ, ಪ್ರೇಕ್ಷಕ ಸಂಬಂಧವನ್ನು ಮಂಥನಕ್ಕೆ ಒಳಪಡಿಸುವಾಗ ಹದಗೆಡುತ್ತಿರುವ ಒಟ್ಟಾರೆ ಸಾಮಾಜಿಕ ಸಂಬಂಧಗಳು ಗೋಚರವಾಗುತ್ತಿರುವುದು ಸ್ಪಷ್ಟ. ಇವುಗಳನ್ನು ಸುಧಾರಿಸುವಲ್ಲಿ ಕಲಾವಿದ ತನ್ನ ಮಾಧ್ಯಮದ ಎಲ್ಲಾ ಸಾಧ್ಯತೆಗಳನ್ನು ಹಲವು ರೀತಿಯಲ್ಲಿ ದುಡಿಸಿಕೊಳ್ಳುತ್ತಿರುವ ನಮ್ಮ ಸಂದರ್ಭದ ನುರಿತ ರಂಗ ನಿರ್ದೇಶಕರುಗಳಲ್ಲಿ ಬಾಪಟ್ ಒಬ್ಬರಾಗಿ ನಾಟಕ ನಿರ್ದೇಶನ, ನಾಟಕ ರಚನೆ, ವಿಮರ್ಶೆ, ಸಂಘಟನೆ ಹಾಗೂ ಶೈಕ್ಷಣಿಕ ಕಾಳಜಿಗಳೊಂದಿಗೆ ತೋರಿಸುವ ಕ್ರಿಯಾಶೀಲತೆ ಬಹು ಅರ್ಥಪೂರ್ಣ. ರಂಗಭೂಮಿ ಹಾಗೂ ಪ್ರೇಕ್ಷಕರ ಮಧ್ಯೆ ಆಪ್ತ ಒಡನಾಟವನ್ನುಂಟುಮಾಡುವುದರಲ್ಲಿ ಒಂದು ಹೆಜ್ಜೆ ಮುಂದಿರುತ್ತಾರೆ. ಬೇರೆ ಎಲ್ಲಾ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚಾಗಿ ನಾಟಕವು ಜನಪರವಾಗಬಲ್ಲ, ಆಗಬೇಕಾಗಿರುವುದು ಇವರ ಕಾಳಜಿಗಳಲ್ಲಿ

ಒಂದು. ಸಂವಹನ ಮಾಧ್ಯಮವಾಗಿ ನಾಟಕದ ಸಾಧ್ಯತೆಗಳ ಬಗ್ಗೆ ಇವರ ಅನೇಕ ಲೇಖನಗಳು ಬಹಳ ಮುಖ್ಯವಾಗುತ್ತದೆ. ಬಾಪಟ್‌ರವರದು ಚುರುಕುಮತಿ. ನಿಶ್ಚಿತವಾದ ಒಳನೋಟಗಳನ್ನು ಆ ಕ್ಷಣವೇ ಕೊಡುವುದನ್ನು ನೋಡುವುದೇ ಚೆನ್ನ. ಸಾಹಿತ್ಯ ಕೃತಿಯೊಂದನ್ನು ರಂಗ. ಕೃತಿಯಾಗಿ ಮೈಗೂಡಿಸುವಾಗ ಮೇಲೇಳುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಇವರ ರೀತಿ ಅನನ್ಯ. ಅಟ್ಟದಲ್ಲಿ ಚಿಕ್ಕವನೊಬ್ಬನು ಆ ಬಗ್ಗೆ ಏನಾದರೂ ಹೇಳಿದರೆ ಕೇಳುವಷ್ಟು ತಾಳ್ಮೆ ಪ್ರೀತಿ ಬಾಪಟರಿಗಿದೆ. ಇವರು ರಂಗಕರ್ಮಿಯಾಗಿ ತನ್ನ ಕಲಾವಂತಿಕೆಯಿಂದ ನೀಡುವ ನಾಟಕದ ಆಳ ವ್ಯಾಪ್ತಿ, ಪ್ರಭಾವಗಳನ್ನು ಹೆಚ್ಚಿಸುವುದರ ಸಂಗಡ ಆ ಕೃತಿಯನ್ನು ಪ್ರಸಕ್ತ ಫ್ರೇಮಿನೊಳಗಿಟ್ಟು ಬೇರೊಂದು ರೀತಿಯಲ್ಲಿ ಓದಬಲ್ಲ ವ್ಯಕ್ತಿ. ತುರ್ತು ಪರಿಸ್ಥಿತಿ *ಜೂಲಿಯಸ್ ಸೀಸರ್* ನಾಟಕವನ್ನು ರಂಗದ ಮೇಲೆ ಅರ್ಥೈಸಿದ ರೀತಿ ಬಹು ಸಕಾಲಿಕವಾಗಿತ್ತು. ಸದ್ಯ ಪ್ರದರ್ಶನವಾಗುತ್ತಿರುವ ಕೈಲಾಸಂರವರ *"ನಂಕಂಪ್ನಿ"* ಆಧಾರಿತ *"Drama must ವಾಕ್"* ಅಥವಾ *"ನಾಟಕ ನಡೀಲೆಬೇಕು"*. ನಾಟಕ ಬಾಪಟರ ವಿಡಂಬನೆಯ ಪರಿ ಹಾಗೂ ಹೊಸ ಪ್ರಯತ್ನವನ್ನು ತೋರಿಸುತ್ತದೆ. ಸಾಂಸ್ಕೃತಿಕ ಹಿನ್ನಲೆಯಲ್ಲಿ ಜನ ಸಂಸ್ಕೃತಿ, ಜನಪ್ರಿಯ ಸಂಸ್ಕೃತಿಯನ್ನು ಸುಶಿಕ್ಷಿತ ವರ್ಗ ಅನುಮಾನದ ಕಣ್ಣಿನಿಂದಲೇ ನೋಡುತ್ತಾ ಬಂದಿದೆ. ಅದನ್ನು ಕೀಳು ಅಭಿರುಚಿಯ ಉದಾಹರಣೆ ಎಂದೇ ಪರಿಗಣಿಸುತ್ತಾ ಬಂದಿದೆ. ಇಡಿ ಸಮುದಾಯಕ್ಕೆ ಯಾವದು ಒಳ್ಳೆಯದು ಎಂದು ತೀರ್ಮಾನ ಮಾಡುವ ಹಕ್ಕು ತನಗೆ ಮಾತ್ರ ಇದೆಯೆಂದು ತಿಳಿಯುವ ಸುಶಿಕ್ಷಿತ ವರ್ಗ ತನಗೆ ಅರಿವಿಲ್ಲದಂತೆ ಸಾಂಸ್ಕೃತಿಕ ಯಜಮಾನಿಕೆಯನ್ನು ನಡೆಸುತ್ತದೆ. ಇಂತಹ ಒಂದು ಯಜಮಾನಿಕೆಯನ್ನು ಪ್ರಶ್ನಿಸುವ ಒಂದು ಗಂಭೀರ ಪ್ರಯತ್ನ ಬಾಪಟ್ ಈ ನಾಟಕದಲ್ಲಿ ಮಾಡಿದ್ದಾರೆ. ಕೈಲಾಸಂ ದೃಷ್ಟಿಕೋನವನ್ನು ತಲೆ ಕೆಳಗೆ ಮಾಡಿ ಲೇವಡಿ ಮಾಡುವ ಸುಶಿಕ್ಷಿತ ವರ್ಗವನ್ನೇ ಇಲ್ಲಿ ವಿಡಂಬನೆಗೆ ಗುರಿಮಾಡಿದ್ದಾರೆ. ಸಾಂಸ್ಕೃತಿಕ ಯಜಮಾನಿಕೆ ಕೂಡ ಶೋಷಣೆಯ ಒಂದು ಸೂಕ್ಷ್ಮ ವಿಧಾನವೆಂದು ಬಾಪಟರ ಗಟ್ಟಿಯಾದ ನಂಬಿಕೆ.

*ಯಕ್ಷಗಾನ :* ಬಾಪಟರಿಗೆ ಯಕ್ಷಗಾನದ ಗೀಳು ಲಾಗಾಯ್ತಿನಿಂದಲೇ ಅಂಟಿಕೊಂಡು ಬಂದಿದೆ. ಇವರು ಯಕ್ಷಗಾನದ ಒಳ್ಳೆಯ ಪ್ರೇಕ್ಷಕ ಅನ್ನುವುದಕ್ಕಿಂತಲೂ ಅದರ ಒಳ್ಳೆಯ ವಿದ್ಯಾರ್ಥಿಯಾಗಿ ಅದನ್ನು ಅಧ್ಯಯನ ಮಾಡಿದ್ದಾರೆ. ಪ್ರಾದೇಶಿಕ ರಂಗಭೂಮಿಯಾದ ಯಕ್ಷಗಾನ ನಾಟಕದ ರಂಗಭೂಮಿಗೆ ಸಮಾನಾಂತರವಾಗಿ ಹೋಗುತ್ತಿದ್ದು ಪರಸ್ಪರ ಕೊಟ್ಟುಕೊಳ್ಳುವಿಕೆಯ ಪ್ರಕ್ರಿಯೆಯನ್ನು ಅಧಿಕೃತವಾಗಿ ಅಧ್ಯಯನ ಮಾಡಿದ್ದಾರೆ. ಇವರ *Performance and Meaning : A Semiotic Study of Yakshagana"* ಎಂಬ ಮಹಾ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ. ಪದವಿ ನೀಡಿ ಗೌರವಿಸಿದೆ. ಈ ಕೃತಿಯನ್ನು ಗ್ರಂಥರೂಪದಲ್ಲಿ ಕು.ಶಿ. ಹರಿದಾಸಭಟ್ಟರು (ಆರ್.ಆರ್.ಸಿ. ಉಡುಪಿ) ಪ್ರಕಟಿಸಿದ್ದಾರೆ. ಸಂಜ್ಞಾಶಾಸ್ತ್ರದ ಸಿದ್ಧಾಂತವನ್ನು ಯಕ್ಷಗಾನದಂತಹ ಕಲೆ ಹಲವಾರು ಮಾಧ್ಯಮಗಳನ್ನು ಸಂವಹನಕ್ಕಾಗಿ ಬಳಸುತ್ತದೆ (ಭಾಷೆ, [ಬರೆದ ಆಡಿದ] ಸಂಗೀತನೃತ್ಯ, ವೇಷ ಭೂಷಣ ಇತ್ಯಾದಿ) ಇವೆಲ್ಲವೂ ಒಂದಾಗಿ ಅರ್ಥ ಹುಟ್ಟುವ ಪರಿ ಹೇಗೆ ಎಂಬುವುದನ್ನು ಇಲ್ಲಿ ವಿಶ್ಲೇಷಿಸಿದ್ದಾರೆ. ಪಾತ್ರಗಳ ವರ್ಗೀಕರಣ, ವೇಷ ಭೂಷಣ, ಲಿಖಿತ ಪಠ್ಯ, ಅಲಿಖಿತ ಪರಂಪರೆಯ ಸಂಬಂಧದಲ್ಲಿ ಬಾಪಟ್ ನೀಡಿರುವ ಹೊಳವುಗಳ ಈ ಕೃತಿ

ಯಕ್ಷಗಾನ ಕ್ಷೇತ್ರದಲ್ಲಿ ಬಹು ಮುಖ್ಯವಾದ ಆಕರ ಗ್ರಂಥವಾಗಿ ಉಳಿಯುತ್ತದೆ. ಯಕ್ಷಗಾನದ ಪಾರಂಪರಿಕ ವ್ಯವಸ್ಥೆ ಹಾಗೂ ಸ್ಥಾಪಿತ ಮೌಲ್ಯಗಳ ವಿವಿಧ ದನಿಗಳ ನಡುವೆ ಪ್ರವೇಶ ಮಾಡಿರುವ ಅನಧಿಕೃತ ದನಿಗಳ ವಿಶ್ಲೇಷಣೆ ಈ ಕೃತಿಯಲ್ಲಿ ದಾಖಲಾಗಿಸಿದೆ. ಪೌರಾಣಿಕ ಪ್ರಸಂಗಗಳ ಪುನರ್ ವಿಶ್ಲೇಷಣೆ, ಹೊಸ ಪ್ರಸಂಗಗಳು, ತುಳು ಯಕ್ಷಗಾನ ಮುಂತಾದುವುಗಳನ್ನು ಶೋಧಿತ ಸಂಪ್ರದಾಯದ ಉದಾಹರಣೆಯಾಗಿ ನೋಡಿದ್ದು, ಇಂದು ಕಾಣುವ ಬದಲಾವಣೆಗಳನ್ನು ಒಟ್ಟಾರೆ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳಿಂದ ಬೇರ್ಪಡಿಸಿ ನೋಡಲು ಆಗುವುದಿಲ್ಲವೆಂಬ ಅರಿವು ಮೂಡಿಸಿದ್ದಾರೆ. ಬಹಳ ಮುಖ್ಯವಾಗಿ ಈ ಗ್ರಂಥದಲ್ಲಿ ಯಕ್ಷಗಾನವು ಒಂದು ಸಾಂಕೇತಿಕ ವ್ಯವಸ್ಥೆಯಾಗಿ ನೋಡುವ ಮೂಲಕ ಈ ಕಲೆಯನ್ನು ಉಳಿಸಿ ಬೆಳಸಿಕೊಂಡು ಬಂದ ಸಮಾಜದಲ್ಲಿ ಅದು ಹೇಗೆ ಅತ್ಯಂತ ಆಳವಾದ ಅರ್ಥಗಳನ್ನು ಹೊಮ್ಮಿಸುತ್ತದೆ ಎಂಬುವುದನ್ನು ಬಹು ಸ್ಪಷ್ಟವಾಗಿ ವಿಶ್ಲೇಷಿಸಿದ್ದಾರೆ.

ರಂಗಭೂಮಿ ಹಾಗೂ ವಿಮರ್ಶಾ ಕ್ಷೇತ್ರದಲ್ಲಿ ಸದಾ ಬಾಪಟರ ಹಲವಾರು ವಿಮರ್ಶಾ ಲೇಖನಗಳು ಬಂದಿವೆ. ರಾಷ್ಟ್ರೀಯ ರಂಗಭೂಮಿ ನಿಯತಕಾಲಿಕಗಳಲ್ಲಿ ಇವರ ಹಲವಾರು ಇಂಗ್ಲೀಷ್ ಲೇಖನಗಳು ಬಂದಿರುವುದಲ್ಲದೆ ಸಾಹಿತ್ಯ ಸಿದ್ಧಾಂತಗಳಲ್ಲಿ ನಮ್ಮ ಸಂದರ್ಭದ ಮುಖ್ಯ ವಿಮರ್ಶಕರಲ್ಲಿ ಒಬ್ಬರಾಗಿದ್ದಾರೆ. ಸಂರಚನಾವಾದ ಹಾಗೂ ಸಂಜ್ಞಾಶಾಸ್ತ್ರದಲ್ಲಿ ಅಧಿಕಾರಯುತವಾಗಿ ಬರೆದಿರುವ ಅನೇಕ ಲೇಖನಗಳು, ಮಾಡಿರುವ ಅನೇಕ ಉಪನ್ಯಾಸಗಳು ಇವೆ. ಇವರು ಬರೆದು ಆಡಿಸಿರುವ ಹಲವಾರು ನಾಟಕಗಳಿದ್ದರೂ ಒಂದೂ ಮುದ್ರಣ ಕಾಣದಿರುವುದು ವ್ಯಸನಕರ. *'ಬೇಟೆ,* *"ಭಯಾರಣ್ಯ"* (ಮಕ್ಕಳ ನಾಟಕ), *"ಅಲ್ಲಾವುದ್ದೀನ್‌ನ ಅದ್ಭುತ ದೀಪ"* (ಮಕ್ಕಳ ನಾಟಕ) ಇವು ಈಗಾಗಲೆ ಪ್ರಕಟಣೆಗೊಳ್ಳಬೇಕಾಗಿತ್ತು. *ಸಾಕ್ಷ್ಯ* ಸಾಹಿತ್ಯ ಅಕಾಡೆಮಿಗಾಗಿ *'ಇಪ್ಪತ್ತನೆ ಶತಮಾನದ ನಾಟಕ'* ಎಂಬ ಕೃತಿಯನ್ನು ಸಿದ್ಧಮಾಡುತ್ತಿದ್ದಾರೆ. ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕಲಾವಿದರಿಗೆಲ್ಲಾ ಬೌದ್ಧಿಕ, ತಾತ್ವಿಕ ಚಿಂತನೆಯು ತುಂಬ ಅಗತ್ಯ ಎಂದು ತೀವ್ರವಾಗಿ ನಂಬಿರುವ ಬಾಪಟ್ ಉದಯ ಕಲಾವಿದರ ಅಟ್ಟದಲ್ಲಿ ಪ್ರತಿ ತಿಂಗಳಿಗೊಮ್ಮೆ 'ಅಟ್ಟದಲ್ಲಿ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ಅದರಲ್ಲಿ ಪ್ರಸಕ್ತ ರಾಜಕೀಯ, ಸಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಇಂತಹ ಹತ್ತು ಹಲವು ವಿಷಯಗಳ ಮೇಲೆ ವಿಚಾರಗೋಷ್ಠಿ, ಉಪನ್ಯಾಸ ಚರ್ಚೆಗಳನ್ನು ಹಮ್ಮಿಕೊಂಡಿದ್ದಾರೆ. ಇವುಗಳೆಲ್ಲಾ ಉದಯ ಕಲಾವಿದರನ್ನು ಎಚ್ಚರದಲ್ಲಿಡುತ್ತಿವೆ.

ಉದಯ ಕಲಾವಿದರು ತಮ್ಮ ಐವತ್ತನೇ ವರ್ಷದ ಹಬ್ಬ (ಸಪ್ಟೆಂಬರ್ 1998) ವನ್ನು ಹೊನ್ನ ಹರುಷವನ್ನಾಗಿ ಮಾಡಿರುವುದು ಹವ್ಯಾಸಿ ರಂಗಭೂಮಿ ಇತಿಹಾಸದಲ್ಲಿ ಗುರುತಿಸಬೇಕಾದ ಸಂಗತಿ. ಈ ಸಂಬಂಧದ ಉದಯ ಕಲಾವಿದರು ಬಾಪಟ್‌ರವರ ನೇತೃತ್ವದಲ್ಲಿ ಮಾಡಿರುವ ಪ್ರಾಮಾಣಿಕ ಪ್ರಯತ್ನಗಳು ಹತ್ತಾರು ಇವೆ. ಶಾಲಾ ಮಕ್ಕಳಿಗೆ ತರಪೇತಿ ನೀಡಿ ಮಕ್ಕಳ ನಾಟಕೋತ್ಸವ ಏರ್ಪಡಿಸಿ ಆರೇಳು ಶಾಲೆಗಳು ಏರ್ಪಡಿಸಿದ ನಾಟಕಗಳನ್ನು ಸುಮಾರು ಹದಿನೈದು ಸಾವಿರ ಮಕ್ಕಳು ನೋಡಿದ್ದು ಚಿಕ್ಕ ಸಂಗತಿಯಲ್ಲ. ನಾಟಕ ಶಿಬಿರಗಳನ್ನು ಮಾಡಿದ್ದು, ಹಳೆಯ ರಂಗ ಗೀತೆಗಳನ್ನು ಸ್ಮರಿಸಿ ಚಪ್ಪರಿಸಿದ್ದು, ಕರ್ನಾಟಕದ ಎಲ್ಲಾ ರಂಗನಿರ್ದೇಶಕರನ್ನು ಸೇರಿಸಿ ವಿಚಾರಗೋಷ್ಠಿ ಏರ್ಪಡಿಸಿದ್ದು ಹೀಗೆ ಇಡೀ ಒಂದು ವರ್ಷ ಬಾಪಟ್ ತಮ್ಮ ಗೆಳೆಯರ ಗುಂಪನ್ನು ಕ್ರಿಯಾತ್ಮಕವಾಗಿ ದುಡಿಸಿಕೊಂಡಿದ್ದು ಹೆಮ್ಮೆಯ ಸಂಗತಿ. ಇವೆಲ್ಲವನ್ನು ದಾಖಲಿಸುವ ಹೊನ್ನಹರುಷ ಎಂಬ ಸುವರ್ಣ

ಸಂಚಿಕೆ ಹೊರಬಂದಿದೆ. ಮಾಸೂರರ ಕಾಲದಲ್ಲಿ ಬೆಳ್ಳಿಹಬ್ಬ, ಬಾಪಟರ ಕಾಲದಲ್ಲಿ ಚಿನ್ನದ ಹಬ್ಬ.

ಅಟ್ಟದ ಮೂಲಕ ಸದ್ಯ ಹಮ್ಮಿಕೊಳ್ಳಬೇಕೆಂದಿರುವ ಯೋಜನೆ "ಮನೆ, ಮನೆಯಲ್ಲಿ ನಾಟಕ". 'ಜನರತ್ತ ರಂಗಭೂಮಿ' ಇದು ಮತ್ತೊಂದು ಹೆಜ್ಜೆ. ಇದಕ್ಕಾಗಿಯೇ ಪ್ರತ್ಯೇಕ ನಾಟಕಗಳನ್ನು ಬರೆದು ಬಳಗದ ಕಲಾವಿದರಿಂದ ಆಡಿಸುವ ಆತುರದಲ್ಲಿದ್ದಾರೆ. ಈ ಪ್ರಯೋಗ ಸಹಾ ಸಾಧ್ಯ-ಕಾರಣ ಅಟ್ಟದ ಮಿತ್ರರು ಹಾಗಿದ್ದಾರೆ. ಇವರೆಲ್ಲರ ವಿಶ್ವಾಸದ ಹೊಂದಾಣಿಕೆಯೇ ಈ ತಂಡದ ಆಸ್ತಿ. ಇವರ ಎಲ್ಲಾ ಪ್ರಯೋಗಗಳು ಸಾಮೂಹಿಕ ಧಾಟಿಯಲ್ಲಿಯ ರೂಪಗೊಳ್ಳುತ್ತವೆ. ಬಾಪಟ್‌ರವರದೆ ಆಗಲಿ, ಒಟ್ಟಾರೆ ಉದಯ ಕಲಾವಿದರ ನಾಟಕಗಳೆಲ್ಲವು ಕಡಿಮೆ ಖರ್ಚಿನವು. ಇದರ ಮೂಲಪಾಠ ಮಾಸೂರ್ ಅವರದು. ಉದಯ ಕಲಾವಿದರ ಎಲ್ಲಾ ರಂಗಕರ್ಮಿಗಳಲ್ಲಿ ಈ ಆರ್ಥಿಕ ಎಚ್ಚರ ಸದಾ ಇದ್ದೇ ಇರುತ್ತದೆ. ಸಂಸ್ಥೆಯ ಹಣಕಾಸಿನ ವಹಿವಾಟು ಲಾಗಾಯ್ತಿನ ಸದಸ್ಯರುಗಳಾದ ಜಿ. ಹಾಲಪ್ಪ, ಎಂ.ಪಿ. ಲಕ್ಷ್ಮೀನಾರಾಯಣ ಅಂಥವರ ಕೈಗಳಲ್ಲಿ ಇರುವುದರಿಂದ ಸಂಸ್ಥೆಯ ಖರ್ಚುಗಳ ಮೇಲೆ ತುಂಬ ಹಿಡಿತ ಇದ್ದೇ ಇರುತ್ತದೆ.

ಅಷ್ಟೇನೂ ಎತ್ತರವಲ್ಲದ ಚುರುಕುಗಣ್ಣಿನ, ಸದಾ ಎಲೆ ಅಡಿಕೆ ಮೆಲ್ಲುವ ಈ ವ್ಯಕ್ತಿ ಸದಾ ಹುಡುಕಾಟದ ಹುಡುಗನಂತೆಯೇ ಇರುತ್ತಾರೆ. ಸದಾ ಒಂದಲ್ಲ ಒಂದು ಕಾಳಜಿಯ ಹಿಂದೆ ಓಡಾಡುವ, ಇತರರನ್ನು ಓಡಾಡಿಸುವ ಕಿಂದರಿ ಜೋಗಿ, ಇವರು. ಎಲ್ಲಾ ಚಟುವಟಿಕೆಗಳಿಗೆ ಇವರ ಕುಟುಂಬ ಹಿನ್ನೆಲೆ ಸಹ ಬಹು ಪೂರಕ. ತಂದೆ ದಿವಂಗತ ದತ್ತೋಬರಾವ್ ಬಾಪಟ್ ನಾಟಕಾಭಿಮಾನಿಗಳು. 'ಉದಯ ಕಲಾವಿದರು' ಸಂಸ್ಥೆಯ ಬಾಲ್ಯ ಸ್ವರೂಪವಾಗಿದ್ದ 'ಕಿರಿಯರ ತಂಡ'ದ ಸ್ಥಾಪಕ ಸದಸ್ಯನಾಗಿದ್ದು ಮುಂದೆ ಅದು 'ಉದಯ ಕಲಾವಿದರು' ಆದಾಗ ಅದರ ಸಕ್ರಿಯ ಸದಸ್ಯರಾಗಿದ್ದವರು ಧರ್ಮ, ಹಾಗೂ ಸಾಮಾಜಿಕ ವಿಷಯಗಳಲ್ಲಿ ಬಹು ಮುಕ್ತ ಯೋಚನೆಗಳನ್ನು ಇಟ್ಟುಕೊಂಡಿರುವ ಇವರ ತಾಯಿ ಶ್ರೀಮತಿ ಸುಲೋಚನಾ ಬಾಪಟ ಸಹಾ ರಂಗಾಸಕ್ತರು. ಲಾಗಾಯ್ತಿನ ಪ್ರಿಂಟಿಂಗ್ ಪ್ರೆಸ್ಸಿನ ಸಂಗಡ ಹೊಸ 'ಮುದ್ರಾ ಆಫ್‌ಸೆಟ್' ಮುದ್ರಣದ ವ್ಯವಹಾರವನ್ನೂ ಬಹು ಸಮರ್ಥವಾಗಿ ರೂಢಿಸಿಕೊಂಡು ಬರುತ್ತಿರುವ ಇವರ ಶ್ರೀಮತಿ ಮಾಧೂರಿ ಬಾಪಟ್, ತಂದೆಯ ರಂಗ ಹವ್ಯಾಸಗಳಿಗೆ ಸ್ಪಂದಿಸುವ ಮಕ್ಕಳಾದ ಚೈತನ್ಯ (ಕಂಪ್ಯೂಟರ್ ಇಂಜಿನಿಯರ್) ಮಯೂರ್ (ಸಿ.ಎ. ವಿದ್ಯಾರ್ಥಿ) ಇವರೆಲ್ಲರೂ ಡಾ|| ಗುರುರಾವ್ ಬಾಪಟ್ ಅವರನ್ನು ಇಷ್ಟೊಂದು ಜೀವಂತಿಕೆಯಲ್ಲಿಟ್ಟಿದ್ದಾರೆ.

ಪ್ರಚಾರ ಹಾಗೂ ಪ್ರಶಸ್ತಿಗಳ ಹಿಂದೆ ಎಂದೂ ಹೋಗದ ಈ ವ್ಯಕ್ತಿಗೆ 'ಅಳಸಿಂಗ ಪ್ರಶಸ್ತಿ' ಹಾಗೂ ನಾಟಕ ಅಕಾಡೆಮಿ ಪ್ರಶಸ್ತಿಗಳು ಬಂದಾಗ ಬಾಪಟ್ ಬಲ್ಲವರಿಗೆಲ್ಲ ತುಂಬ ಸಂಭ್ರಮದ ಸಂಗತಿ ಆಯಿತು.



# ಪಿ. ಹುಸೇನಪ್ಪನವರು

ಮುರಡಯ್ಯಸ್ವಾಮಿ

ಕನ್ನಡ ವೃತ್ತಿರಂಗಭೂಮಿಗೆ ರಾಯಚೂರು ಜಿಲ್ಲೆಯ ಕೊಡುಗೆ ಅಪಾರ. ಕಲಿಯುಗದ ಪರಶುರಾಮನೆಂದು ಖ್ಯಾತಿ ಪಡೆದು *ಭೂಕೈಲಾಸ* ನಾಟಕದ ರಾವಣನಾಗಿ, *ದಶಾವತಾರ* ನಾಟಕದಲ್ಲಿ ಬಲಿ ಚಕ್ರವರ್ತಿಯಾಗಿ, ಗುಬ್ಬಿ ಕಂಪನಿಯ ಸುವರ್ಣಯುಗದ ಸಿಂಹಪಾಲು ಪಡೆದು ನಾಲ್ಕು ದಶಕಗಳ ಕಾಲ ರಂಗವೈಭೋಗ ಮೆರೆಸಿದ ಮಹಾ ನಟ ಮೃಡದೇವ ಗವಾಯಿಗಳು ಹಾಗೂ ಪಂಡಿತ ಸಿದ್ರಾಮ ಜಂಬಲದಿನ್ನಿಯವರು ಜನಿಸಿದ ಈ ಜಿಲ್ಲೆಯಲ್ಲಿ ಗುರುತಿಸಬಹುದಾದ ಮತ್ತೊಬ್ಬ ರಂಗ ಸಾಧನಕನೆಂದರೆ, ಅವರು ಹುಸೇನಪ್ಪನವರು. ಪ್ರಾರಂಭದಲ್ಲಿ ನಟನಾಗಿ ವೃತ್ತಿ ನಾಟಕಗಳಲ್ಲಿ ಸೇವೆ ಸಲ್ಲಿಸಿ, ನಂತರ ರಂಗ ಸಂಘಟಕನಾಗಿ, ನೇಪಥ್ಯ ಕಲಾವಿದನಾಗಿ ಹೆಚ್ಚಿನ ರಂಗ ಸೇವೆ ಸಲ್ಲಿಸಿರುವರು, ರಂಗ ಸಂಘಟನೆಗೆ ತಮ್ಮನ್ನು ಹೆಚ್ಚು ಹೆಚ್ಚು ತೊಡಗಿಸಿಕೊಂಡು ಅದಕ್ಕೆ ಪೂರವಕವಾಗಿ ರಂಗ ಸಜ್ಜಿಕೆ ಪ್ರಾರಂಭಿಸಿ, ರಂಗ ಭೂಮಿಗಾಗಿ ತಮ್ಮ ಬದುಕನ್ನು ಸವೆಸುತ್ತಾ ಹವ್ಯಾಸಿ ರಂಗಭೂಮಿಯಲ್ಲಿ ಹಲವು ಮೈಲಿಗಲ್ಲನ್ನು ನೆಟ್ಟಿರುವರು.

ಬಾಲ್ಯಾವಸ್ಥೆಯಿಂದ ಮೂಡಿದ ರಂಗಾಸಕ್ತಿಗೆ ವಂಶಪಾರಂಪರ್ಯವಾದ ಪೂರ್ವಿಕರ ಯಾವ ಹಿನ್ನೆಲೆಯ ಒತ್ತಾಸೆ ಇಲ್ಲದೆ ಪ್ರಾರಂಭದಲ್ಲಿ ಗುರುವಿಲ್ಲದ ವಿದ್ಯೆಯಾಗಿ ಕೇವಲ ಆಸಕ್ತಿ, ಸಂಗಡಿಗರ ಸಹವಾಸದಿಂದ, ಅಕಸ್ಮಾತ್ ರಂಗಭೂಮಿಗೆ ಬಂದು ತಮ್ಮೀ ಬದುಕಿನ ಪ್ರತಿ ನಿಮಿಷವನ್ನು ಅದಕ್ಕಾಗಿ ಭರಿಸಿದರು. ಹವ್ಯಾಸದಿಂದ ಕಲಿತ ದಾಸರ ಹಾಡುಗಳು ವೃತ್ತಿ ರಂಗಭೂಮಿಯ ಹಾಡುಗಳಿಗೆ ಪೂರಕವಾದವು. ವೃತ್ತಿ ರಂಗಭೂಮಿಯ ಅಸ್ತಂಗತ ಅವಸ್ಥೆಯಲ್ಲಿ ಅದರ ಜೊತೆಗಿದ್ದು ಅದರ ಸಿಹಿ ಕಹಿಯನ್ನುಂಡು ಅದರ ಅನುಭವನ್ನು ಹವ್ಯಾಸಿ ರಂಗಭೂಮಿಗೆ ಉಣ ಬಡಿಸಿದರು ತಮ್ಮದೇ ಆದ ನಿರೂಪಣಾ ಶೈಲಿ, ಸದಾ ಚಟುವಟಿಕೆಯಿಂದಿರುವಿಕೆಯನ್ನು ಮೈಗೂಡಿಸಿಕೊಂಡು ಬೆಳೆದರು.

ಹೊಸ ನೀರು ಬಂದು ಹಳೇ ನೀರು ಕೊಚ್ಚಿಕೊಂಡು ಹೋದಂತೆ ಚಲನಚಿತ್ರಗಳು ಬಂದು ವೃತ್ತಿ ಕಂಪನಿಗಳು ಒಂದೊಂದಾಗಿ ಆರ್ಥಿಕ ಸಂಕಷ್ಟ ಅನುಭವಿಸುತ್ತಾ ಮುಸುಕಾದವು. ವೃತ್ತಿ ರಂಗಭೂಮಿಯ ಸುವರ್ಣಯುಗವೆಂದು ಕರೆಯುವ ಐವತ್ತು-ಅರವತ್ತರ ದಶಕದಲ್ಲಿ ಸುಮಾರು ನೂರಾ ಇಪ್ಪತ್ತರಿಂದ ನೂರಾ ಮೂವತ್ತು ವೃತ್ತಿ ಕಂಪನಿಗಳಿದ್ದವು. ಆದರೆ ೨೧ನೆಯ ಶತಮಾನದ ಈ ಸಂದರ್ಭದಲ್ಲಿ ಕೇವಲ ಕೈ ಬೆರಳೆಣಿಕೆಯಷ್ಟು ವೃತ್ತಿ ಕಂಪನಿಗಳು ಉಳಿದುಕೊಂಡು ಬದುಕಿಗಾಗಿ ಹೋರಾಟ ನಡೆಸಿವೆ. ವೃತ್ತಿ ರಂಗಭೂಮಿಯ ಇಳಿಕೆಯ ಕಾಲದಲ್ಲಿ ಅಂದರೆ ಎಪ್ಪತ್ತು-ಎಂಬತ್ತರ ದಶಕದಲ್ಲಿ ಹುಸೇನಪ್ಪನವರು ನೂರಾರು ಹಳ್ಳಿಗಳಲ್ಲಿ ಹವ್ಯಾಸಿಗರನ್ನು ಸಂಘಟಿಸಿ ಹಲವು ಮಹತ್ವ ಪೂರ್ಣ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳ ಸಾವಿರಾರು ಪ್ರಯೋಗಗಳನ್ನು ಪ್ರಯೋಗಿಸಿದ್ದಾರೆ.

ಒಂದು ರೀತಿಯಲ್ಲಿ ವ್ಯವಸ್ಥೆ (System) ಒಂದನ್ನು ಕಳೆದುಕೊಂಡರೆ ಅದು ತಾನೇ ತಾನಾಗಿ, ತಕ್ಷಣವೇ ಅಥವಾ ಸ್ವಲ್ಪ ತಡವಾಗಿಯಾದರೂ ಸರಿ, ತನ್ನೊಳಗೊಂಡು ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತದೆ. ಇದು ಸಹಜ ಸೃಷ್ಟಿಯ ನಿಯಮ. ಅದೇ ರೀತಿ ವೃತ್ತಿ ರಂಗಭೂಮಿಯ ಅಸ್ತಿತ್ವದ ಏಳವಳಿಕೆಗಳನ್ನು ನಾವು ಹವ್ಯಾಸಿ ರಂಗಭೂಮಿಯಲ್ಲಿ ಕಾಣುತ್ತೇವೆ. ಇಂತಹ ಪ್ರಕ್ರಿಯೆ ಹುಟ್ಟಿಕೊಳ್ಳುವಲ್ಲಿ ಸ್ಥಳೀಯವಾಗಿ ಹುಸೇನಪ್ಪನಂತಹ ನೇಪಥ್ಯ ಕಲಾವಿದರು ಹುಟ್ಟು ಹಾಕುತ್ತಾರೆಂಬುದು ಕಟುಸತ್ಯ. ಆದ್ದರಿಂದ ಅವರ ಸಂಘಟನಾ ಚಾತುರ್ಯವನ್ನು ಅವರ ಪರಿಶ್ರಮವನ್ನು ಪರಿಗಣಿಸಬೇಕಾದುದು ರಂಗಭೂಮಿ ಬಗೆಗಿನ ಕಳಕಳಿ ಇರುವ ಪ್ರತಿಯೊಬ್ಬರ ಕರ್ತವ್ಯ.

ಹುಸೇನಪ್ಪನವರು ರಂಗ ಕಲಾವಿದರಾಗಿ ಮನಮುಟ್ಟುವ ಅಭಿನಯವನ್ನು ನೀಡಿದರು ಅವರ ಸೇವೆ ಅಷ್ಟಕ್ಕೇ ಸೀಮಿತವಾಗಿಲ್ಲ. ಅವರು ರಂಗ ಸಂಘಟನೆಯಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡವರು ರಂಗ ಸಜ್ಜಿಕೆ, ನಿರ್ದೇಶನ, ಉಡುಪು ವಿನ್ಯಾಸ, ಹಿನ್ನಲೆ ಗಾಯನ, ಪ್ರಚಾರ, ಹಲವಾರು ರೀತಿಯಲ್ಲಿ ನೇಪಥ್ಯದಲ್ಲಿದ್ದುಕೊಂಡೇ ತಮ್ಮ ಅಮೂಲ್ಯ ಸೇವೆ ಸಲ್ಲಿಸಿರುವ ಬಹು ಮುಖ ಪ್ರತಿಭೆಯ ರಂಗ ಕಲಾವಿದರೆಂದರೆ ತಪ್ಪಿಲ್ಲ. ರಂಗಭೂಮಿಯ ಅನೇಕ ರೀತಿಯ ಸೇವೆಗೆ ಸಿದ್ಧ ಪರಿಣತಿಯನ್ನು ಪಡೆದು ಸದಾ ಒಂದಿಲ್ಲೊಂದು ವಿಭಾಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಎಲ್ಲರಿಗೂ ಬೇಕಾದ ಚಿರಪರಿಚಿತ ವ್ಯಕ್ತಿತ್ವ ಇವರದು. ರಂಗ ಚಟುವಟಿಕೆಗಾಗಿ ಹಗಲಿರುಳು ನಿದ್ರೆ, ಊಟ ಬಿಟ್ಟು ದುಡಿಯುತ್ತಾರೆ. ಸ್ಫುರದ್ರೂಪಿಯಾದ ಇವರು ಅಷ್ಟೇ ಸಹೃದಯಿಗಳು, ಪ್ರೀತಿ ವಾತ್ಸಲ್ಯ ತುಂಬಿಕೊಂಡು ಮಾತನಾಡುತ್ತ ಕಲಾ ವೃಂದಕ್ಕೆಲ್ಲಾ ಮಾದರಿಯಾಗಿ ಸಹ ಕಲಾವಿದರ ಹೃದಯಕ್ಕೆ ಹತ್ತಿರದವರಾಗಿರುವ ಇವರು ಬಹುಶಃ ಅವರ ಈ ಗುಣ ಸ್ವಭಾವವೇ ಕಲಾ ಪೋಷಕರ ಅಪಾರ ಸಹಕಾರ ಪಡೆಯಲು ಕಾರಣವಿರಬಹುದು. ಆದ್ದರಿಂದ ಅವರೊಬ್ಬ ಉತ್ತಮ ರಂಗ ಸಂಘಟಕರಾಗಿ ಬೆಳೆದು ನಿಂತಿರುವರೆಂದರೆ ತಪ್ಪಿಲ್ಲ.

ಹುಸೇನಪ್ಪನವರನ್ನು ಅವರ ರಂಗ ಸೇವೆಯ ದೃಷ್ಟಿಯಿಂದ ಎರಡು ದೃಷ್ಟಿಕೋನಗಳಿಂದ ನೋಡಬೇಕಾಗುತ್ತದೆ. ಒಂದು ಅವರ ರಂಗ ನಿರ್ದೇಶನ ಮತ್ತೊಂದು ರಂಗ ಸಂಘಟನೆ. ಇವೆರಡು ಕೂಡ ರಂಗ ಚಟುವಟಿಕೆಯಲ್ಲಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಏಕೆಂದರೆ ಒಬ್ಬ ನಿರ್ದೇಶಕನಿಗೆ ಉತ್ತಮ ಸಂಘಟನಾ ಗುಣವಿರಬೇಕಾಗುತ್ತದೆ. ಕೆಲವೊಮ್ಮೆ ನಿರ್ದೇಶಕನ ಉತ್ತಮ ನಿರ್ದೇಶನದ ಯಶಸ್ಸು ಅವನನ್ನು ಒಳ್ಳೆ ಸಂಘಟಕನನ್ನಾಗಿಸಬಹುದು. ಆದರೆ ಹುಸೇನಪ್ಪನವರು ಉತ್ತಮ ನಿರ್ದೇಶಕರೂ ಹೌದು ಮತ್ತು ಒಬ್ಬ ಉತ್ತಮ ರಂಗ ಸಂಘಟಕರೂ ಹೌದು. ಅವರು ನಿರ್ದೇಶಿಸಿ ಸಂಘಟಿಸಿದ ಪೌರಾಣಿಕ ನಾಟಕಗಳನ್ನು ನೋಡಿದಾಗ ಅವರೊಳಗೊಬ್ಬ ಅದೆಂತಹ ಉತ್ತಮ ನಿರ್ದೇಶಕನಿದ್ದಾನೆ ಎನ್ನುವಷ್ಟು ಆಶ್ಚರ್ಯ ಮೂಡುತ್ತದೆ. ಬಹುಶಃ ಅದು ಅವರ ಗುರು ಕೊಟ್ಟ ಕಾಣಿಕೆಯೇ ಸರಿ. ಏಕೆಂದರೆ ಅವರ ಗುರು ವಾದಿರಾಜ ಗವಾಯಿಗಳ ನಿರ್ದೇಶನದ ಸಂಗೀತ ಪ್ರಧಾನವಾದ *ರಕ್ತರಾತ್ರಿ* ನಾಟಕವನ್ನು ನೋಡಿದಾಗ ಅವರು ನಿರ್ದೇಶಿಸುವ ವಿಶಿಷ್ಟ ಶೈಲಿಗೆ ಅವರೇ ಸಾಟಿಯಾಗುತ್ತಾರೆ. ನೋಡುಗರಿಗೆ ತಾವು ತಮ್ಮೂರಲ್ಲಿ *ರಕ್ತರಾತ್ರಿ* ನಾಟಕ ಮಾಡಬೇಕು ಎನ್ನುವ ಮನಸ್ಸನ್ನು ಹವ್ಯಾಸಿ ಕಲಾವಿದರಲ್ಲಿ ಮೂಡಿಸುತ್ತದೆ. ಅದಕ್ಕೂ ಹಿಂದೆ

ಹೋದರೆ ಮೃಡದೇವ ಗವಾಯಿಗಳು ತಮ್ಮ ನಾಟಕ ಕಂಪನಿಗಾಗಿ ಎಷ್ಟೋ ಜನಸಾಮಾನ್ಯರನ್ನು ಪಳಗಿಸಿ ಉತ್ತಮ ಕಲಾವಿದರನ್ನಾಗಿ ಮಾಡಿ ಬೆಳೆಸಿದ ಉದಾಹರಣೆಗಳು ಬಹಳ ಸಿಗುತ್ತವೆ. ಅದೇ ರೀತಿ ಹುಸೇನಪ್ಪನವರು ಹಳ್ಳಿ ಹಳ್ಳಿಗಳಲ್ಲಿನ ಒರಟು ಜನರಿಗೆ ನಾಟಕ ಕಲಿಸಿ ಯಶಸ್ವಿ ಪ್ರಯೋಗಗಳನ್ನು ಮಾಡಿಸಿದ್ದಾರೆ.

ಹುಸೇನಪ್ಪನವರು ಸಂಘಟಿಸಿ ನಿರ್ದೇಶಿಸಿದ ಪೌರಾಣಿಕ ನಾಟಕಗಳಾದ *ರಕ್ತರಾತ್ರಿ, ಹೇಮರೆಡ್ಡಿ ಮಲ್ಲಮ್ಮ, ಚಿತ್ರಾಂಗದ, ಕುರುಕ್ಷೇತ್ರ, ಸತ್ಯ ಹರಿಶ್ಚಂದ್ರ* ಮೊದಲಾದ ನಾಟಕಗಳು ಮೌಲ್ಯಯುತ ನಾಟಕಗಳಾಗಿದ್ದು ಈ ಕಥಾ ವಸ್ತುಗಳು ಭಾರತೀಯ ಸಾಂಸ್ಕೃತಿಕ ಪರಂಪರೆಯ ದ್ಯೋತಕವಾದ ಐತಿಹಾಸಿಕ ಮಾಹಿತಿಯನ್ನು ನೀಡುತ್ತವೆ. ಈ ಪೌರಾಣಿಕ ನಾಟಕಗಳು ಸಂಗೀತ ಪ್ರಧಾನ ನಾಟಕಗಳಾಗಿದ್ದು ಅದರಲ್ಲೂ ರಂಗ ಭೂಮಿಯ ಭೀಷ್ಮನೆಂದು ಖ್ಯಾತರಾದ ಕಂದಗಲ್ಲ ಹನುಮಂತರಾರು ರಚಿಸಿದ *ರಕ್ತ ರಾತ್ರಿ* ನಾಟಕವು ಸಂಗೀತ ಪ್ರಧಾನವಾಗಿದ್ದು ಅದರದೇ ಆದ ಲಯಬದ್ಧ ಸಂಭಾಷಣೆಯ ಮೂಲಕ ಸೆಳೆಯುವ ಪೌರಾಣಿಕ ನಾಟಕವಾಗಿದ್ದು ನಾಟ್ಯ ರಸಿಕರ ಮನವನ್ನು ಅದ್ಯಾವುದೋ ಅವ್ಯಕ್ತ ಲೋಕಕ್ಕೆ ಕರೆದೊಯ್ಯುತ್ತದೆ. ಇಂತಹ ಪೌರಾಣಿಕ ನಾಟಕಗಳಿಗೆ ಅಲ್ಲಿನ ಪಾತ್ರಗಳಿಗೆ ಇರುವ ಇಮೇಜನ್ನು ಉಳಿಸಿಕೊಂಡು ಹೋಗಬೇಕಾದರೆ ಇಂದಿನ ದಿನಗಳಲ್ಲಿ ಬಹಳ ಕಷ್ಟವೆನ್ನಿಸುತ್ತದೆ. ಅಂತಹದರಲ್ಲಿ ಹುಸೇನಪ್ಪನವರು ಈ ಮುಳ್ಳಿನ ದಾರಿಯಲ್ಲಿಯೂ ಯಶಸ್ವಿಯಾಗಿ ಸಾಗಬಲ್ಲರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಗುಲ್ಬರ್ಗಾ ಆಕಾಶವಾಣಿ, ಬೆಂಗಳೂರು ದೂರದರ್ಶನ, ಹೈದರಾಬಾದ್ ದೂರದರ್ಶನಗಳಿಗಾಗಿ *ರಕ್ತರಾತ್ರಿ* ನಾಟಕ ಸಿದ್ಧಪಡಿಸಿ ಪ್ರದರ್ಶಿಸಿದ್ದಾರೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನಡೆಸಿದ ಸ್ಪರ್ಧೆಗಳಲ್ಲಿ ತಂಡಗಳನ್ನು ಸಂಘಟಿಸಿ, ಸ್ಪರ್ಧಿಸಿ, ಪ್ರೇಕ್ಷಕರ ಮನ ಮೆಚ್ಚಿಸಿದ್ದಾರೆ. ಹಲವಾರು ಉತ್ತರ ಹಾಗೂ ಮೈಸೂರು ಕರ್ನಾಟಕದ ಭಾಗಗಳಲ್ಲಿನ ನಾಟಕೋತ್ಸವಗಳಲ್ಲಿ ಭಾಗವಹಿಸುವಲ್ಲಿ ಶ್ರಮಿಸಿದ್ದಾರೆ. ರಂಗಭೂಮಿ ನನ್ನನ್ನು ಬೆಳೆಸುತ್ತಿದೆ. ಅದೇ ನನ್ನ ಬದುಕಿನ ಉಸಿರು ಎಂದೇಳುವ ಹುಸೇನಪ್ಪನವರು ತನಗೆ ಸಹಕಾರಿಗಳಾದ ಕಲಾವಿದರು, ಪ್ರೋತ್ಸಾಹ ನೀಡಿ ಬೆಳೆಸುತ್ತಿರುವ ಕಲಾಪೋಷಕರು, ಪ್ರೇಕ್ಷಕರಿಗೆ ನಾನು ಚಿರಋಣಿ ಎಂದು ಮನತುಂಬಿ ಹೇಳುತ್ತಾರೆ.

### *ರಂಗಭೂಮಿಗೆ ಹೆಜ್ಜೆ :*

ಹುಸೇನಪ್ಪನವರು ನರಸಮ್ಮ ದುರ್ಗಪ್ಪ ದಂಪತಿಗಳ ಮಗನಾಗಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪುಲಮೇಶ್ವರ ದಿನ್ನಿ ಎಂಬ ಹಳ್ಳಿಯಲ್ಲಿ ೧೯೪೩, ಜೂನ್ ಮೊದಲ ವಾರದಲ್ಲಿ ಜನಿಸಿದರು. ಶಾಲೆ ಇಲ್ಲದ ಊರಾದ ಪುಲಮೇಶ್ವರ ದಿನ್ನಿಯ ಕೃಷಿಕರಾಗಿದ್ದ ತಂದೆ ತಾಯಿಗಳು, ಒರಟಾದ ಸಾಮಾಜಿಕ ಪರಿಸರದಲ್ಲಿ ಸ್ವಂತ ಊರಿಂದ ಎರಡು ಕಿ.ಮೀ. ದೂರದ ಹೆಡಗಿನಾಳ ಗ್ರಾಮಕ್ಕೆ ಕಾಲುನಡುಗೆಯಲ್ಲಿ ಹೋಗಿ, ಬಂದು, ಐದನೇ ತರಗತಿವರೆಗೆ ವಿದ್ಯಾರ್ಜನೆ ಮಾಡಿದರು. ತದನಂತರದಲ್ಲಿ ಅವರ ಸೋದರತ್ತೆ ಶ್ರೀಮತಿ ನರಸಮ್ಮ ಹನ್ನೊಂದು ವಯಸ್ಸಿನ ಸೋದರಳಿಯ ಹುಸೇನಪ್ಪನನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಿ ಕಂಪ್ಲಿಗೆ ಕರೆದುಕೊಂಡು ಹೋದರು. ಕಂಪ್ಲಿಯ ಸೋದರತ್ತೆಯ ಮನೆಯಲ್ಲಿ ಓದನ್ನು ಮುಂದಿನ ಬಾಲ್ಯ ದಿನಗಳನ್ನು ಕಳೆದ ಹುಸೇನಪ್ಪನವರು ತಮ್ಮ ಹದಿನಾರನೇ ವಯಸ್ಸಿನಲ್ಲಿ *"ಹೆಜ್ಜೆ ತಪ್ಪಿದ ಹೆಣ್ಣು"* ಸಾಮಾಜಿಕ

ನಾಟಕವನ್ನು ಕಂಪ್ಲಿಯ ಕೋಟೆ ಪ್ರದೇಶದ ಹವ್ಯಾಸಿ ತರುಣರು ಕಲಿಯತೊಡಗಿದ್ದರು. ಈ ನಾಟಕದ ಖಳನಾಯಕನ ಪಾತ್ರವನ್ನು ಯಾರೂ ಮಾಡಲೊಪ್ಪದ ಕಾರಣದಿಂದಾಗಿ ಸದಾ ದಾಸರ ಪದಗಳನ್ನು, ದೇವರ ನಾಮಗಳನ್ನು ಗುನುಗುತ್ತಿರುತ್ತಿದ್ದ ಬಾಲಕ ಹುಸೇನಪ್ಪನ ಪರಿಚಯವಿದ್ದ ತರುಣನೋರ್ವನು ಈ ಪಾತ್ರಕ್ಕೆ ಹುಸೇನಪ್ಪನವರನ್ನು ಒಪ್ಪಿಸಿ ಕರೆತಂದನು. ನಾಟಕದ ತಾಲೀಮು ದಿನಂಪ್ರತಿ ನಡೆದಿತ್ತು. ಅದೇ ವಠಾರದಲ್ಲಿ ವೆಂಕೋಬಾಚಾರ್ಯ ಎನ್ನುವ ಹಿರಿಯರು, ವಾದಿರಾಜ ಗವಾಯಿಗಳನ್ನು ಕರೆಸಿರಿ, ಅವರು ಚಲೋ ನಾಟಕ ಕಲಸ್ತಾರಂತ ಹೇಳಿದರು. ಆಗ ತರುಣರು ವಾದಿರಾಜ ಗವಾಯಿಗಳನ್ನು ಭೇಟಿ ಮಾಡಿ ನಾಟಕ ಕಲಿಸಲು ಕೇಳಿಕೊಂಡಾಗ.

"ನಿಮಗೆ ನಾಟಕ ಕಲಿಸ್ಬೇಕಂದ್ರೆ ನಾಟಕದ ಹಾಡುಗಳನ್ನು ಹಿನ್ನೆಲೆ ಗಾಯಕರಿಂದ ಹಾಡಿಸುವೆನು. ನಿಮ್ಮಿಂದ ನನ್ನ ಹಾಡುಗಳನ್ನು ಹಾಡಲಾಗುವುದಿಲ್ಲ. ನಾನು ಹೇಳಿದ ಪ್ರಕಾರ ಸಂಭಾಷಣೆ ಹೇಳಬೇಕು, ತಪ್ಪಿದರೆ ನನ್ನದೇ ಆದ ರೀತಿಯಲ್ಲಿ ತಿದ್ದುತ್ತೇನೆ. ಅದನ್ನು ಸಹಿಸಿಕೊಳ್ಳಬೇಕು" ಎಂದು ವಾದಿರಾಜ ಗವಾಯಿಗಳು ತರುಣರಿಗೆ ಮನಮುಟ್ಟುವಂತೆ ಹೇಳಿದರು. ಎಲ್ಲಾ ತರುಣ ಕಲಾವಿದರು ಮೌನವಾಗಿ ಗವಾಯಿಗಳ ಕರಾರಿಗೆ ಒಪ್ಪಿಗೆ ಸೂಚಿಸಿದರು. ಆಗ ಹುಸೇನಪ್ಪನವರು "ನಾನು ಹಿನ್ನೆಲೆ ಹಾಡುಗಳನ್ನು ಹಾಡ್ತೀನಿ, ಪರೀಕ್ಷೆ ಮಾಡಿ ನೋಡಿ" ನಿಮಗೆ ತೃಪ್ತಿ ಕಂಡರೆ ನನ್ನಿಂದ ಹಾಡಿಸಿ. ಎಂದು ವಿನಮ್ರವಾಗಿ ಕೇಳಿದರು.

ಆದರೆ ವಾದಿರಾಜ ಗವಾಯಿಗಳು ಮೊದಲು ಒಪ್ಪಲಿಲ್ಲವಾದರೂ ಎಲ್ಲಾ ತರುಣ ಕಲಾವಿದರು ಒತ್ತಾಯಪಡಿಸಿದಾಗ ಒಪ್ಪಿಗೆ ನೀಡಿದರು. ಹುಸೇನಪ್ಪನವರು ದಾಸರ ಹಾಡೊಂದನ್ನು ವಾದಿರಾಜ ಗವಾಯಿಗಳ ಮನ ಸೂರೆಗೊಳಿಸಿ ಹಾಡಿದರು. ಆ ಕ್ಷಣದಿಂದ ಅವರೀರ್ವರು ಪರಸ್ಪರ ತಮಗರಿವಿಲ್ಲದೇಯೇ ಗುರು ಶಿಷ್ಯರಾದರು. ವಾದಿರಾಜ ಗವಾಯಿಗಳು ಹುಸೇನಪ್ಪನವರ ಒಳಗಿದ್ದ ಕಲಾವಿದನನ್ನು ಗುರುತಿಸಿ "**ಭೇಷ್, ಹಾಡ್ತೀಯ ಹಾಡು, ದೇವರು ನಿನಗೆ ದೇಣಿಗೆ ಕೊಟ್ಟಾನು, ನಿನ್ನ ಹುಂಬತನ ಬಿಡು, ಸಾಧನೆ ಮಾಡು**" ಎಂದೇಳಿ ಬೆನ್ನು ತಟ್ಟಿ ಹುರಿದುಂಬಿಸಿದರು. "*ಹೆಜ್ಜೆ ತಪ್ಪಿದ ಹೆಣ್ಣು* "ಮೊದಲ ನಾಟಕಕ್ಕೆ ತರುಣ ಹುಸೇನಪ್ಪ ಎಲ್ಲಾ ಹಾಡುಗಳಿಗೆ ಹಿನ್ನೆಲೆ ಒದಗಿಸಿದ. ವಾದಿರಾಜ ಗವಾಯಿಗಳ ನಿರ್ದೇಶನ, ಸಂಗೀತ ಸಂಯೋಜನೆ, ಹಿನ್ನೆಲೆ ಹಾಡಿನ ಜೊತೆಗೆ ಹುಸೇನಪ್ಪ ನಿರ್ವಹಿಸಿದ ಖಳನಾಯಕ ಪಾತ್ರವೂ ಪ್ರೇಕ್ಷಕರ ಅಚ್ಚುಮೆಚ್ಚನ್ನು ಗಳಿಸಿತು. ಮುಂದೆ ವಾದಿರಾಜ ಗವಾಯಿಗಳು ಸ್ವತಃ ತಾವೇ ಸ್ಥಾಪಿಸಿದ್ದ ನಟರಾಜ ನಾಟ್ಯ ಸಂಘದ ಸದಸ್ಯತ್ವವನ್ನು ಹುಸೇನಪ್ಪನವರಿಗೆ ನೀಡಿದರು. ನಟರಾಜ ನಾಟ್ಯ ಸಂಘದ ವತಿಯಿಂದ ಆಡುವ ನಾಟಕಗಳಲ್ಲಿ ಸತತವಾಗಿ ಪಾತ್ರ ಕೊಡುತ್ತಿದ್ದರು. ಆದರೆ ನಿರ್ವಹಿಸಿದ ಪಾತ್ರಕ್ಕಾಗಿ ಬಡ ಕಲಾವಿದನಾದ ಹುಸೇನಪ್ಪನವರಿಂದ ಮಾತ್ರ ಪಟ್ಟಿ ತೆಗೆದುಕೊಳ್ಳುತ್ತಿರಲಿಲ್ಲ. ಈ ಸಂಘದ ಅಡಿಯಲ್ಲಿ ಕಲಾವಿದನಾಗಿ ಹುಸೇನಪ್ಪನವರು ಸುಮಾರು ಐದು ವರ್ಷಗಳವರೆಗೆ ಸೇವೆ ಸಲ್ಲಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಹುಸೇನಪ್ಪನವರಿಗೆ ರಂಗಭೂಮಿಗಾಗಿ ಪೂರ್ವ ತರಬೇತಿಯೂ ಇಲ್ಲಿಯೇ ಆಯಿತು. ಜೊತೆಗೆ ವಾದಿರಾಜ ಗವಾಯಿಗಳು ಮಾರ್ಗದರ್ಶಿಗಳಾಗಿ ಅಲ್ಲಲ್ಲಿ ಪ್ರಯೋಗಿಸುವ ವೃತ್ತಿ ಕಂಪನಿಗಳಿಗೆ ಹಾಗೂ ಹವ್ಯಾಸಿಗರು ಆಡುವ ನಾಟಕಗಳಿಗೆ ಕರೆದುಕೊಂಡು ಹೋಗಿ ಪಾತ್ರ ಮಾಡಿಸುತ್ತಿದ್ದರು. ಹೀಗೆ ಈ ಜೋಡಿ ಸತತವಾಗಿ ಹತ್ತಾರು ವರ್ಷ ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಸೇವೆ ಸಲ್ಲಿಸಿತು.

ವೃತ್ತಿ ರಂಗ ಕಂಪನಿಗಳಾದ ಕುಕನೂರ ರೆಹೆಮಾನವ್ವನ ಮಗ ಬಾಬಣ್ಣನ ಕಂಪನಿ, ಚಿಂದೋಡಿ ವೀರಪ್ಪನವರ ಕೆ.ಬಿ.ಆರ್. ಡ್ರಾಮ ಕಂಪನಿ, ಮದಿರೆ ಮರಿಸ್ವಾಮಿಯವರ ಶ್ರೀ ಮದುಕೇಶ್ವರ ನಾಟ್ಯ ಸಂಘ, ಮದಿರಿ, ರಾಮರಾವ ದೇಸಾಯಿಯವರ ಕಂಪನಿ ಹಾಗೂ ತಾವೇ ಸ್ವತಃ ಕಟ್ಟಿದ ಭುವನೇಶ್ವರಿ ನಾಟಕ ಸಂಘ, ಸಿಂಧನೂರು. ಹೀಗೆ ಹಲವಾರು ವೃತ್ತಿ ಕಂಪನಿಗಳಲ್ಲಿ ಕಲಾವಿದರಾಗಿ ದುಡಿದು ೧೯೭೫, ೭೬ ರಿಂದ ರಂಗ ಸಂಘಟನೆಗೆ ಹೆಚ್ಚಿನ ಒತ್ತನ್ನು ಕೊಟ್ಟು, ನೇಪಥ್ಯ ಕಲಾವಿದನಾಗಿ ಸೇವೆ ಸಲ್ಲಿಸುತ್ತಿರುವ ಹುಸೇನಪ್ಪನವರ ಸೇವೆಯ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಯಾವುದೇ ವೃತ್ತಿ ಕಂಪನಿಗಳಿಲ್ಲದಿದ್ದಾಗ ಹವ್ಯಾಸಿಗರು ಕರೆದಲ್ಲಿಗೆ, ಅವೂ ಇಲ್ಲದಿದ್ದಲ್ಲಿ ಸ್ವತಃ ಹವ್ಯಾಸಿ ಕಲಾವಿದರನ್ನು ಕರೆಸಿ ನಾಟಕ ಕೊಡಿಸುತ್ತಿದ್ದರು. ಹೀಗೇ ರಂಗಭೂಮಿಯ ನಂಟು ಹುಸೇನಪ್ಪನವರ ಬದುಕಿಗೆ ಆಧಾರವಾಗಿತ್ತು. ಬಣ್ಣ ಹಚ್ಚಿದರೆ ಊಟ ಇಲ್ಲದಿದ್ದರೆ ಉಪವಾಸ ಈ ಒಂದು ಸಾಲಿನ ವಾಕ್ಯವು ರಂಗಭೂಮಿಯ ಬಹುತೇಕ ಕಲಾವಿದರಿಗೆ ಅನ್ವಯವಾಗುವ ಸಾರ್ವತ್ರಿಕವಾದ ಉಕ್ತಿಯಾಗಿದೆ. ಅದು ಹುಸೇನಪ್ಪನವರನ್ನು ಹೊರತಾಗಿರಲಿಲ್ಲ.

*ವೃತ್ತಿ ಕಂಪನಿಗಳಲ್ಲಿ :*

ಹುಸೇನಪ್ಪನವರು ಮೊಟ್ಟ ಮೊದಲು ೧೯೭೩, ೭೪ ರಲ್ಲಿ ಚಿಂದೋಡಿ ವೀರಪ್ಪನವರ ಕೆ.ಬಿ.ಆರ್. ಡ್ರಾಮ ಕಂಪನಿ ಸೇರಿದ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾರೆ. ಕೆ.ಬಿ.ಆರ್. ಡ್ರಾಮ ಕಂಪನಿ ಸಿಂಧನೂರಿನಲ್ಲಿ ಕ್ಯಾಂಪ್ ಹಾಕಿತ್ತು. ಅದು "ಹಳ್ಳಿ ಹುಡ್ಗಿ" ಸಾಮಾಜಿಕ ನಾಟಕ ಪ್ರಯೋಗಿಸುತ್ತಿತ್ತು. ಚಿಂದೋಡಿ ವೀರಪ್ಪನವರು ಥೇಟರ ಹೊರಗೆ ಕುರ್ಚಿ ಹಾಕಿಕೊಂಡು ಕುಳಿತ್ತಿದ್ದರು ಹುಸೇನಪ್ಪನವರು ಅವರ ಬಳಿ ಹೋಗಿ "ನಿಮ್ಮ ನಾಟಕ" ಕಂಪನೀಲಿ ನನ್ನ ಸೇರಿಸಿಕೊಳ್ರಿ, ನಾಟಕದಲ್ಲಿ ಪಾತ್ರ ಮಾಡ್ತೀನಿ ಅಂತ ಕೇಳಿದರು.

ಆಗ ಏನ್ ಪಾತ್ರ ಮಾಡ್ತೀಯಾ ಎಂದರು ಚಿಂದೋಡಿ ವೀರಪ್ಪನವರು.

ಆಗ ಸಣ್ಣಪುಟ್ಟ ಪಾತ್ರ ಮಾಡ್ತೀನಿ, ಹಾಡು ಹಾಡ್ತೀನಿ ಅಂದ್ರು ಹುಸೇನಪ್ಪನವರು, ಆಗ ವೀರಪ್ಪನವರು ಕಂಪನಿಯ ಹಾರ್ಮೋನಿಯಂ ಮಾಸ್ತರರಾದ ದುಗ್ಗಪ್ಪನನ್ನು ಕರೆದು, ಇವರೇನೋ ಹಾಡ್ತಾರಂತೆ ನೋಡು ಎಂದರು.

ದುಗ್ಗಪ್ಪನವರ ಎದುರು ಹುಸೇನಪ್ಪನವರು ಶಾರದ ಸ್ತೋತ್ರವೊಂದನ್ನು "ಅಭೋಗಿ ಕಾನಡಾ ರಾಗದಲ್ಲಿ" ಹಾಡಿದರು. ದುಗ್ಗಪ್ಪನವರಿಗೆ ಹುಸೇನಪ್ಪನವರು ಹಾಡಿದ ರೀತಿ ಇಷ್ಟವಾಯಿತು. ಸುಶ್ರಾವ್ಯವಾಗಿ ಹಾಡಿದ ಹುಸೇನಪ್ಪನವರನ್ನು ತಮ್ಮ ನಾಟಕ ಕಂಪನಿಗೆ ಸರಿದೂಗುತ್ತಾರೆಂಬ ಭರವಸೆಯಿಂದ ದುಗ್ಗಪ್ಪನವರು ಚಿಂದೋಡಿ ವೀರಪ್ಪನವರಿಗೆ, "ಮಾಲೀಕರೇ ಇವನನ್ನು ಬಿಡೋದು ಬೇಡ" ಎಂದೇಳಿದರು. ಆಗ ವೀರಪ್ಪನವರು ನಾಟಕದಾಗ ಪಾತ್ರ ಮಾಡ್ತೀನಿ ಅಂತಿಯಾ, ಯಾವುದಾದರೂ ನಾಟಕದ ಮಾತು ಹೇಳು ನೋಡೋಣ ಎಂದರು. ಆಗ ಹುಸೇನಪ್ಪನವರು ಸರಿ ಮಾಲೀಕರೇ ಕಂದಗಲ್ ಹನುಮಂತರಾಯರ ರಕ್ತ ರಾತ್ರಿಯ ಅಶೋತ್ಥಾಮನ ಪಾತ್ರದ ಡೈಲಾಗ್ ಹೇಳ್ತೀನಿ ಎಂದು ಶುರು ಹಚ್ಚಿಕೊಂಡರು. "ಓ ಅಗಸ್ತ್ಯ ನಕ್ಷತ್ರ ಕಡಲು ಕುಡಿದಿಟ್ಟ ದಿವ್ಯಾತ್ಮ

ನೀನು" ಎಂದು ಅತ್ಯಂತ ಆವೇಶ ಭರಿತ ಧ್ವನಿಯಲ್ಲಿ, ಸನ್ನಿವೇಶ ಭರಿತನಾಗಿ ಮಾತುಗಳಿಗೆ ಜೀವ ತುಂಬಿ ಹೇಳಿದರು. ವೀರಪ್ಪನವರು ಸಂತಸಗೊಂಡು ೫ ರೂಪಾಯಿಗಳನ್ನು ಹುಸೇನಪ್ಪನವರ ಜೇಬಿನಲ್ಲಿಟ್ಟರು ಮತ್ತು ದಿನಕ್ಕೆರಡು ಊಟಕೊಟ್ಟು ಪ್ರತಿ ದಿನ ಐದು ರೂಪಾಯಿ ಪಗಾರ ತಗೊಂಡು ಹೋಗು, ಎಂದು ವ್ಯವಹಾರದ ಮಾತನಾಡಿದರು. ಹುಸೇನಪ್ಪನವರಿಗೆ ಎಲ್ಲಿಲ್ಲದ ಸಂತಸವಾಯಿತು. ಹ್ಞೂಗುಟ್ಟಿ ತಲೆ ಅಲ್ಲಾಡಿಸಿದರು. ತಕ್ಷಣ ಈ ವಿಷಯವನ್ನು ತಿಳಿಸಿ ಹುಸೇನಪ್ಪನವರು ವಾದಿರಾಜ ಗವಾಯಿಗಳಿಗೆ ಟಪಾಲು ಬರೆದರು, ಟಪಾಲು ಮುಟ್ಟಿದ ದಿನವೇ ವಾದಿರಾಜರು ಸಿಂಧನೂರಿಗೆ ಬಂದು ಚಿಂದೋಡಿ ವೀರಪ್ಪನವರನ್ನು ಕಂಡು ಶಿಷ್ಯ ಹುಸೇನಪ್ಪನವರನ್ನು ಕುರಿತು, ವೀರಪ್ಪನವರೇ ನಾನು ಮೂರ್ತಿಯಾನ್ನಾಗಿ ಕೆತ್ತಲಿಲ್ಲ, ನನ್ನ ನಾಟಕ ಗುರು ಯೋಗಾ ನರಸಿಂಹ ಮೂರ್ತಿಯವರ ಹತ್ತಿರ ಕಳಿಸಬೇಕೆಂದಿದ್ದೆ. ಆದರೆ ಅದು ಆಗಲಿಲ್ಲ ಈಗ ನೀವು ಆ ಕೆಲಸ ಮಾಡಬೇಕೆಂದು ಹೇಳಿದರು.

ಹುಸೇನಪ್ಪನವರು ಒಂದುವರೆ ವರ್ಷ ವೀರಪ್ಪನವರ ಕಂಪನಿಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದರು. ಅಷ್ಟರಲ್ಲಿ ಅವರ ಅಜ್ಜಿ ನಾಟಕ ಕಂಪನಿ ಸಹವಾಸ ಬೇಡ ಎಂದೇಳಿ ಹತ್ತೂ ಕರೆದು ಕಂಪನಿಯಿಂದ ಬಿಡಿಸಿಕೊಂಡು ಹೋದರು. ಹುಸೇನಪ್ಪನವರು ಬಹಳಷ್ಟು ದಿನ ಹಳ್ಳಿಯಲ್ಲಿಯೂ ನಿಲ್ಲಲಿಲ್ಲ ಮತ್ತೇ ಕಂಪ್ಲಿಗೆ ಹೊರಟರು, ನಂತರ ಕುಕನೂರು ರೆಹಮಾನವ್ವನ ಮಗ ಬಾಬಣ್ಣನ ಕಂಪನಿ ಬಳ್ಳಾರಿ ಹತ್ತಿರ ರಾಂಪುರ ಎಂಬಲ್ಲಿ ಕ್ಯಾಂಪ್ ಹಾಕಿತ್ತು. ಆಗ ಕಂಪ್ಲಿಯಲ್ಲಿದ್ದ ಹುಸೇನಪ್ಪನವರನ್ನು ವಾದಿರಾಜ ಗವಾಯಿಗಳು "ಬಾಬಣ್ಣನ ಕಂಪನಿ ಬಹಳ ತೊಂದರೆಯಲ್ಲಿದೆ" ಅಲ್ಲಿಗೆ ಹೋಗೋಣ ಬಾ ಎಂದು ಬಾಬಣ್ಣನ ಕಂಪನಿಗೆ ಕರೆದುಕೊಂಡು ಹೋದರು.

ಬಾಬಣ್ಣನ ಕಂಪನಿಯಲ್ಲಿ ವಾದಿರಾಜರು ಹಾರ್ಮೋನಿಯಂ ಬಾರಿಸುತ್ತಿದ್ದರು, ಹುಸೇನಪ್ಪನವರು ಪಾತ್ರ ನಿರ್ವಹಿಸುತ್ತಿದ್ದರು, ಸಾಮಾಜಿಕ ನಾಟಕಗಳನ್ನು ಎರಡು ದಿನಕೊಂದರಂತೆ ಬದಲಾಯಿಸುತ್ತಿದ್ದರು, ಆಗ ಕಂಪನಿಗೆ ಕಷ್ಟದ ಕಾಲ ಎಲ್ಲರ ತುತ್ತಿನ ಚೀಲ ತುಂಬಲು ಬಹಳ ತ್ರಾಸ ಪಡುತ್ತಿದ್ದರು, ಕಂಪನಿ ಬಹಳ ದುಸ್ಥಿತಿಗೆ ಬಂತು ಬಳ್ಳಾರಿಯಿಂದ ಸಿರಿಗೇರಿಗೆ, ಸಿರಿಗೇರಿಯಿಂದ ಕುಕನೂರ, ಕುಕನೂರನಿಂದ ಹುಬ್ಬಳ್ಳಿ ಕ್ಯಾಂಪ್ ಮಾಡಲಾಯಿತು, ಅಲ್ಲಿಂದ ಬಾಗಲಕೋಟೆ, ಇಲಕಲ್, ಹುನಗುಂದ, ಕುಷ್ಟಗಿ, ಗಂಗಾವತಿ ಕ್ಯಾಂಪ್ ಮಾಡಿಕೊಂಡು ಹೊಸಪೇಟೆ ಕ್ಯಾಂಪ್‌ಗೆ ಬಾಬಣ್ಣನ ಕಂಪನಿ ಬಂದಾತು. ಕುಕನೂರ ಬಾಬಣ್ಣನ ಕಂಪನಿಯಲ್ಲಿ ಬಾಬಣ್ಣ, ಹುಸೇನಪ್ಪ, ಬಾಬಣ್ಣನ ಪತ್ನಿ ಅಂಬುಜಮ್ಮ, ಕುಕನೂರು ಲಲಿತಮ್ಮ, ಕುಕನೂರು ಮಂಜುಳ ಇನ್ನೂ ಅನೇಕ ಪಾತ್ರದಾರಿಗಳಿದ್ದರು. ಶೆಟ್ರಸಂಗ್ಯ, ಗೌಡ್ತಿ ಗದ್ದ, ಹಾಗೂ ಗೌಡ್ರ ಗದ್ದ ನಾಟಕಗಳನ್ನು ಹಾಡಲಾಗುತ್ತಿತ್ತು. ಹುಸೇನಪ್ಪನವರು ಗೌಡ್ಲ ಗದ್ದದ ನಾಟಕದ ಬಸವರಾಜ ಗೌಡನ ಪಾತ್ರ ಮಾಡುತ್ತಿದ್ದರು. ಜೊತೆಗೆ ನಾಟಕ ಪ್ರಚಾರ, ಉಡುಪು ವಿನ್ಯಾಸ, ಹಿನ್ನಲೆಗಾಯನಗಳ ಕಡೆಗೆ ಒತ್ತುಕೊಡುತ್ತಿದ್ದರು ಕಂಪನಿಯ ಹೆಚ್ಚಿನ ನೇಪಥ್ಯದ ಕೆಲಸಗಳನ್ನು ಖುದ್ದು ವಹಿಸಿಕೊಂಡಿದ್ದರು. ಈ ಕಂಪನಿ ಬಂದಾಗುವರೆಗೂ ತಮ್ಮ ನೇಪಥ್ಯದ ಸೇವೆಯನ್ನು ಹೆಚ್ಚಿನ ರೀತಿಯಲ್ಲಿ ಸಲ್ಲಿಸಿರುವರು.

ಬಾಬಣ್ಣ ಕಂಪನಿ ಬಂದಾದ ನಂತರ ರಾಮರಾವ್ ದೇಸಾಯಿಯವರ ನಾಟಕ ಕಂಪನಿಯಲ್ಲಿ ಕಲಾವಿದರಾಗಿ ಹಾಗೂ ಎಂದಿನ ತಮ್ಮ ಸಹಜ ನೇಪಥ್ಯದ ಕೆಲಸಗಳನ್ನು ವಹಿಸಿಕೊಂಡು ಒಂದು ವರ್ಷ ಕಾಲ ದುಡಿದರು. ಈ ಕಂಪನಿಯಲ್ಲಿ *ರೌಡಿ ರಾಮಚಾರಿ, ಗೌಡ್ರ ಗದ್ಲ* ನಾಟಕಗಳು ಬಹಳ ಹೆಸರು ಮಾಡಿದ್ದವು. *ಗೌಡ್ರ ಗದ್ಲ* ನಾಟಕದಲ್ಲಿ ಬಸವರಾಜ ಗೌಡನ ಪಾತ್ರವನ್ನು ಸ್ವತಃ ರಾಮರಾವ್ ದೇಸಾಯಿಯವರೇ ನಿರ್ವಹಿಸುತ್ತಿದ್ದರಿಂದ ಈ ಕಂಪನಿಯಲ್ಲಿ ಹುಸೇನಪ್ಪನವರು ಹೆಚ್ಚು ಹೆಚ್ಚು ನೇಪಥ್ಯದ ಚಟುವಟಿಕೆಗಳಿಗೆ ಮೀಸಲಾಗಿದ್ದರು. ನಾಟಕ ಪ್ರಚಾರ, ನಾಟಕದ ಎಲ್ಲಾ ಕಲಾವಿದರಿಗೂ ಪಾತ್ರ ವಿಂಗಡನೆ, ನಿರ್ದೇಶನ, ನಾಟಕ ಪ್ರಾರಂಭಗೊಳ್ಳಲು ಅವಶ್ಯ ಬೇಕಾದ ಪೂರ್ವ ತಯಾರಿಗಳಾದ ಬೆಳಕು ವ್ಯವಸ್ಥೆ, ಮೈಕ್ ಹೊಂದಾಣಿಕೆ ಮಾಡುವುದು, ಉಡುಪು ವಿನ್ಯಾಸ ಹೀಗೆ ಪ್ರತಿ ನಿತ್ಯವೂ ನೇಪಥ್ಯದ ಜವಾಬ್ದಾರಿಯನ್ನು ಹೆಚ್ಚು ಹೆಚ್ಚಾಗಿ ವಹಿಸಿಕೊಂಡಿದ್ದರು.

ರಾಮರಾವ್ ದೇಸಾಯಿ ಅವರ ಕಂಪನಿಯಲ್ಲಿ ರಾಮರಾವ್ ದೇಸಾಯಿ, ಹುಸೇನಪ್ಪ, ಚಿಲಕರಾಗಿ ಹನುಮಂತಪ್ಪ, ಇಲಕಲ್ ರಾಯಪ್ಪ, ಪುಷ್ಪ, ಜಯಮ್ಮ, ಡ್ಯಾನ್ಸರ್ ಜ್ಯೋತಿ, ಮುಂತಾದವರು ಪಾತ್ರ ವರ್ಗದಲ್ಲಿದ್ದರು.

*ಹಂಪಿಯಲ್ಲಿ ರಿಹರ್ಸಲ್ :*

ರಂಗ ಭೂಮಿಯಲ್ಲಿ ಸಂಗೀತ ಸಂಯೋಜಕನಾಗಿ, ನಿರ್ದೇಶಕನಾಗಿ ಸೇವೆ ಸಲ್ಲಿಸಿ ಖ್ಯಾತರಾದ ಮದಿರೆ ಮರಿಸ್ವಾಮಿಯವರು ೧೯೭೫ರಲ್ಲಿ ಶ್ರೀಮಧುಕೇಶ್ವರ ನಾಟ್ಯ ಸಂಘ, ಮದಿರಿ ಎಂಬ ನಾಟ್ಯ ಸಂಘವನ್ನು ಕಟ್ಟಿದರು. ಹುಸೇನಪ್ಪನವರು ಮದಿರೆ ಮರಿಸ್ವಾಮಿಯವರ ಜೊತೆಗಿದ್ದು ಎಲ್ಲಾ ರೀತಿಯ ಸಹಕಾರ ನೀಡಿದರು. ಎನ್. ಬಸವರಾಜರ ನಾಟಕ ಕಂಪನಿಯಲ್ಲಿದ್ದ ನಾಲ್ಕು ಜನ ಪಾತ್ರಧಾರಿಗಳಾದ ಹಂಬಳಿ ಲಿಂಗನಗೌಡ, ಹಂಬಳಿ ದ್ಯಾವನಗೌಡ, ಕುಕನೂರು ಮಂಜುಳ, ಕುಕನೂರು ಲಲಿತಮ್ಮ (ಈ ನಾಲ್ಕು ಜನ ಪಾತ್ರಧಾರಿಗಳು *ರೈತರ ಮಕ್ಕಳು* ಸಿನಿಮಾದಲ್ಲಿ ಪಾತ್ರ ನಿರ್ವಹಿಸಿದ್ದರು.) ಈ ನಾಲ್ಕು ಜನ ಕಲಾವಿದರನ್ನು ಸಿರಿಗೇರಿ ನಾಗನಗೌಡ್ರು ಕರೆದುಕೊಂಡು ಬಂದಿದ್ದರು. ಅಲ್ಲದೆ ಯಂಕಂಚಿ ಚೆಟ್ಟಪ್ಪ (ಕಲಿಯುಗದ ಕುಡುಕ, ತಾಳಿಕೋಟೆ ರಾಜಣ್ಣನ ತಂದೆ) ದಾವಣಗೇರಿ ಕಾಸಿಬಾಯಿ (ಚೆಟ್ಟೆಪ್ಪನ ಮಗಳು) ಇಷ್ಟು ಜನ ಪಾತ್ರವರ್ಗವನ್ನು ಕೂಡಿಸಿಕೊಂಡು ಹಂಪಿಯಲ್ಲಿ ಒಂದು ತಿಂಗಳ ಕಾಲ ರಿಹರ್ಸಲ್ ಮಾಡಿ ಸಾಮಾಜಿಕ ನಾಟಕಗಳಾದ *ಬಸ್ ಕಂಡಕ್ಟರ್* ಹಾಗೂ *ದೇವರಿಗೂ ಸೂಳೇ ಬೇಕೆ?* ನಾಟಕಗಳನ್ನು ಕೊಡಿಸಲಾಯಿತು.

ಹಂಪಿಯಲ್ಲಿ ರಿಹರ್ಸಲ್ ಮುಗಿಸಿಕೊಂಡ ಮಧುಕೇಶ್ವರ ನಾಟ್ಯ ಸಂಘ ಮೊದಲ ಕ್ಯಾಂಪ್‌ನ್ನು ಹುಬ್ಬಳ್ಳಿಯ ಗಜಾನನ ಥಿಯೇಟರಲ್ಲಿ ಎರಡು ತಿಂಗಳ ಕಾಲ ತಿಂಗಳಿಗೊಂದರಂತೆ ನಾಟಕ ಪ್ರಯೋಗಿಸಿ ನಂತರ ಬಾಗಲಕೋಟೆಯಲ್ಲಿ ಎರಡು ತಿಂಗಳ ಕ್ಯಾಂಪ್ ಮಾಡಿ, ಹೊಸಪೇಟೆಯಲ್ಲಿ ಒಂದುವರೆ ತಿಂಗಳು ನಡೆಸಿ ಅಪಾರ ಆರ್ಥಿಕ ನಷ್ಟವನ್ನು ಉಂಡು ಕಂಪನಿ ಬಂದಾಯಿತು.

ರಂಗ ಸಂಘಟನೆಗೆ ಒತ್ತು

ಮದುರೇ ಮರಿಸ್ವಾಮಿಯರ ಮಧುಕೇಶ್ವರ ನಾಟ್ಯ ಸಂಘ ಹೊಸಪೇಟೆಯಲ್ಲಿ ಬಂದಾದ ಮೇಲೆ ಹುಸೇನಪ್ಪನವರು ಪುಲಮೇಶ್ವರ ದಿನ್ನಿಗೆ ವಾಪಾಸಾದರು. ಇದೇ ಅವಕಾಶವನ್ನು ಕಾದು

ಕುಳಿತಿದ್ದ ತಂದೆ ದುರ್ಗಪ್ಪ, ತಾಯಿ ನರಸಮ್ಮನವರು ಸಿಂಧನೂರಿನ ನರಸಮ್ಮ ಪಕೀರಪ್ಪ ದಂಪತಿಗಳ ಮಗಳಾದ ಪಾರ್ವತಿ ಎಂಬುವವರನ್ನು ಹುಸೇನಪ್ಪನವರಿಗೆ ಬಾಳ ಸಂಗಾತಿಯನ್ನಾಗಿ ತಂದರು.

ವಿವಾಹವಾಗಿ ಬಾಳ ಸಂಗಾತಿ ಬಂದ ನಂತರ ಹುಸೇನಪ್ಪನವರು ಸಿಂಧನೂರನ್ನು ತಮ್ಮ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡರು. ಸಿಂಧನೂರಿನಲ್ಲಿ ಆಗ ರಂಗಸಜ್ಜಿಕೆ ಇರಲಿಲ್ಲ. ಮೊಟ್ಟಮೊದಲು ಇಲಕಲ್‌ನ ದೊತ್ರೆ ಪೇಂಟರ್ ಎಂಬುವರು ರಂಗ ಸಜ್ಜಿಕೆಯನ್ನು ಪ್ರಾರಂಭಿಸಿದ್ದರು. ಹುಸೇನಪ್ಪನವರು ಅವರ ಶೆಡ್ಡಿಗೆ ಹಾರ್ಮೋನಿಯಂ ಬಾರಿಸಲು ಹೋಗುತ್ತಿದ್ದರು. ಕೆಲ ಕಾರಣಗಳಿಂದ ರಂಗಸಜ್ಜಿಕೆಯನ್ನು ನಿಭಾಯಿಸಲಾಗಲಾರದೆ ದೊತ್ರೆ ಪೇಂಟರ್‌ರವರು ಹುಸೇನಪ್ಪನವರಿಗೆ ರಂಗಸಜ್ಜಿಕೆಯನ್ನು ವಹಿಸಿಕೊಟ್ಟು ಹೋದರು. ಆ ರಂಗ ಸಜ್ಜಿಕೆಯ ಜವಾಬ್ದಾರಿಯನ್ನು ಹುಸೇನಪ್ಪನವರು ಇ.ಜೆ. ಹೊಸ್ಸಳ್ಳಿಯ ಹಿರಿಯ ಹವ್ಯಾಸಿ ಕಲಾವಿದರಾದ ಶ್ರೀ ಗುರುಬಸ್ಸಯ್ಯ ಸ್ವಾಮಿ ಇವರೊಡಗೂಡಿ ನಟರಾಜ ಡ್ರಾಮ ಸೀನರಿ (ರಂಗಸಜ್ಜಿಕೆ) ಎಂಬ ಹೆಸರಿನೊಡನೆ ಪ್ರಾರಂಭಿಸಿದರು. ವಿವಾಹವಾದ ನಂತರ ಅಂದರೆ ೧೯೭೫ ರಿಂದ ಹುಸೇನಪ್ಪನವರು ಹೆಚ್ಚೂ ಕಡಿಮೆ ಇಲ್ಲಿಯವರೆಗೂ ಸುಮಾರು ೨೮ ವರ್ಷಗಳವರೆಗೂ ನೇಪಥ್ಯ ಕಲಾವಿದರಾಗಿ ರಂಗಭೂಮಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಿಂಧನೂರಲ್ಲಿ ಮೊಟ್ಟ ಮೊದಲು ರಂಗಸಜ್ಜಿಕೆ ಪ್ರಾರಂಭಿಸಿ ಹವ್ಯಾಸಿ ರಂಗಭೂಮಿಯ ರಚನಾತ್ಮಕ ಕೆಲಸ ಪ್ರಾರಂಭಿಸಿದರು. ಇ.ಜೆ. ಹೊಸ್ಸಳ್ಳಿಯ ಗುರುಬಸ್ಸಯ್ಯನವರು ಹೊಲ ಮನೆಗಳನ್ನು ಹೊಂದಿದ್ದ ಉತ್ತಮ ಸ್ಥಿತಿವಂತರಾಗಿದ್ದರಿಂದ ರಂಗಸಜ್ಜಿಕೆಯ ಸಂಪೂರ್ಣ ಜವಾಬ್ದಾರಿಯನ್ನು ಎರಡು ವರ್ಷದಲ್ಲಿಯೇ ಹುಸೇನಪ್ಪನವರ ಕೈಗೆ ಒಪ್ಪಿಸಿದರು. ಸಿಂಧನೂರಿನಲ್ಲಿ ಹುಸೇನಪ್ಪನವರ ನಂತರ ಒಂದೊಂದಾಗಿ ಎರಡು ಮೂರು ರಂಗಸಜ್ಜಿಕೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಶಿವಣ್ಣ ಮಾನೆ, ಸಂಗಪ್ಪ ಜಾಧವ, ಕೆಮಣ್ಣ ರಾಠೋಡ, ಹಾಗೂ ಬಸನಗೌಡ ಬೂತಲದಿನ್ನಿ ಅವರು ಪ್ರಮುಖರು.

ಸಂಸಾರ ಮತ್ತು ರಂಗಸಜ್ಜಿಕೆ ಎರಡು ಜವಾಬ್ದಾರಿಗಳು ಒಂದೇ ಸಲಕ್ಕೆ ಹುಸೇನಪ್ಪನವರ ಹೆಗಲಿಗೇರಿದವು. ಈ ಮೊದಲು ಅತ್ಯಂತ ಸ್ವತಂತ್ರವಾದ ಬದುಕನ್ನು ಅನುಭವಿಸಿದ್ದರು. ಆಸಕ್ತಿಗಾಗಿ, ಮನೋರಂಜನೆಗಾಗಿ ಬಣ್ಣ ಹಚ್ಚುತ್ತಿದ್ದ ಆ ದಿನಗಳು ಮುಗಿದುಹೋದವು. ಸಂಸಾರ ಸಾಗಿಸಬೇಕಾದ ಅನಿವಾರ್ಯತೆ, ರಂಗಸಜ್ಜಿಕೆಯ ಮೇಲುಸ್ತುವಾರಿ ಒಂದು ರೀತಿಯ ವ್ಯವಹಾರಿಕ ಶಿಸ್ತನ್ನು ಅವರಲ್ಲಿ ಮೂಡಿಸಿದವು.

ಸಿಂಧನೂರು ತಾಲೂಕಾ ಸುತ್ತಮುತ್ತಲು ಸುಮಾರು ೨೮೫ ಹಳ್ಳಿಗಳಿದ್ದು ಒಂದಿಲ್ಲೊಂದು ಹಳ್ಳಿಗಳಲ್ಲಿ ಸ್ಥಳೀಯ ಯುವಕರು ಪೌರಾಣಿಕ ನಾಟಕವಾಗಲಿ, ಸಾಮಾಜಿಕ ನಾಟಕವಾಗಲಿ, ಒಂದಿಲ್ಲೊಂದು ನಾಟಕ ಕಟ್ಟುತ್ತಿದ್ದರು. ಅವಶ್ಯಕವಾಗಿ ಅವರ ನಾಟಕ ಪ್ರಯೋಗಗೊಳ್ಳಲು ಬೇಕಾದ ರಂಗಸಜ್ಜಿಕೆಗಾಗಿ ಹುಸೇನಪ್ಪನವರ ನಟರಾಜ ಡ್ರಾಮ ಸೀನರಿಸ್ ಪಡೆಯಲು ಬರುತ್ತಿದ್ದರು. ಇದೇ ರೀತಿಯಾಗಿ ಯಥಾಪ್ರಥಾರವಾಗಿ ರಂಗಸಜ್ಜಿಕೆ ಎಡೆಬಿಡದೆ ದುಡಿಯುತ್ತಿತ್ತು. ಜೊತೆಗೆ ಹುಸೇನಪ್ಪನವರು ರಂಗ ತರಬೇತಿಯನ್ನು, ನಿರ್ದೇಶನವನ್ನು ನೀಡುತ್ತಾ ಬೇಕಾದ ಇತರ ಸೌಲಭ್ಯ ಸಹಕಾರವನ್ನು ಹಳ್ಳಿಗಳ ಹವ್ಯಾಸಿ ಯುವಕರಿಗೆ ನೀಡುತ್ತಿದ್ದರು.

ಹವ್ಯಾಸಿಗರು ಯಾವುದೇ ನಾಟಕ ಪ್ರಯೋಗಿಸಲಿ, ಆ ನಾಟಕಕ್ಕೆ ಹಳ್ಳಿಗಳ ಹವ್ಯಾಸಿಗರು ಇಚ್ಛಿಸಿದರೆ ಅವರಾಡುವ ಪೌರಾಣಿಕ ಅಥವಾ ಸಾಮಾಜಿಕ ನಾಟಕದ ಪಾತ್ರಕ್ಕೆ ತಕ್ಕಂತೆ ಪ್ರಸಿದ್ಧ ರಂಗನಟ ನಟಿಯರನ್ನು ಕರೆದುತರುವ ಜವಾಬ್ದಾರಿಯನ್ನು ಹುಸೇನಪ್ಪನವರು ವಹಿಸಿಕೊಳ್ಳುತ್ತಿದ್ದರು. ಹಾಗೆನ್ನುವುದಕ್ಕಿಂತ ಇವರು ಸೂಕ್ತ ವ್ಯಕ್ತಿಯೆಂದು ಹವ್ಯಾಸಿಗರೇ ಇವರಿಗೆ ಆ ಜವಾಬ್ದಾರಿಯನ್ನು ನೀಡುತ್ತಿದ್ದರು. ಅವರಿಟ್ಟುಕೊಂಡ ಭರವಸೆಯನ್ನು ಹುಸೇನಪ್ಪನವರು ಹುಸಿ ಮಾಡುತ್ತಿರಲಿಲ್ಲ. ಏಕೆಂದರೆ ರಂಗಭೂಮಿಯ ಯಾವ ಪ್ರಸಿದ್ಧ ನಟ ವರ್ಗವಾಗಲಿ ಸ್ತ್ರೀ ಪಾತ್ರಧಾರಿಗಳೇ ಆಗಲಿ ಎಲ್ಲರೂ ಒಂದಿಲ್ಲೊಂದು ವೃತ್ತಿ ಕಂಪನಿಗಳಲ್ಲಿ ಅಥವಾ ಹವ್ಯಾಸಿಗರು ಪ್ರಯೋಗಿಸುವ ನಾಟಕಗಳಲ್ಲಿ ಹುಸೇನಪ್ಪನವರೊಡಗೂಡಿ ದುಡಿದವರೇ ಆಗಿರುತ್ತಿದ್ದರು. ಮತ್ತು ತಮ್ಮ ವೃತ್ತಿಯನ್ನು ಕಲಾ ಸೇವೆಗಾಗಿ ಬಳಸುತ್ತಿದ್ದ ಹುಸೇನಪ್ಪನವರ ಬಗ್ಗೆ ಎಲ್ಲರಿಗೂ ಅಭಿಮಾನ. ಇವರು ಇಲ್ಲಿ ಇಂತಹ ನಾಟಕ ಕೂಡಿಸೀನಿ. ಅಲ್ಲಿಗೆ ಬಂದುಬಿಡಿ ಎಂದರೆ ಸಾಕು, ಆ ನಾಟಕಕ್ಕೆ ಆ ಕಲಾವಿದರು ಬಂದುಬಿಡುತ್ತಿದ್ದರು. ಈ ದೊಡ್ಡ ಜವಾಬ್ದಾರಿಯನ್ನು ನಿಭಾಯಿಸಿ ನಾಟಕ ಕಳೆ ಕಟ್ಟುವಂತೆ ಮಾಡಿ ಯಶಸ್ವಿ ಪ್ರಯೋಗಕ್ಕೆ ಕಾರಣೀಭೂತರಾಗುತ್ತಿದ್ದರು. ತಮ್ಮ ನೇಪಥ್ಯ ಸೇವೆಗಾಗಿಯಾಗಲಿ, ರಂಗ ಸಜ್ಜಿಕೆಗಾಗಿಯಾಗಲಿ ಹಣ ನಿಗದಿಪಡಿಸುತ್ತಿರಲಿಲ್ಲ. ನಾಟಕ ಮುಗಿದ ಮೇಲೆ ಕಲೆಕ್ಷನ್‌ನಲ್ಲಿ ಕೊಟ್ಟಷ್ಟನ್ನು ಪಡೆದು ತೃಪ್ತಿಪಡುತ್ತಿದ್ದರು. ಅಂದರೆ ನಾಟಕ ಭರ್ಜರಿ ಕಲೆಕ್ಷನ್ ಮಾಡಿದ್ದರೆ ಕಲಾ ಪೋಷಕರಾದ ಹವ್ಯಾಸಿ ಕಲಾವಿದರು ಸಂತೋಷದಿಂದ ಹೆಚ್ಚಿಗೆ ಎಂಬಂತೆ ಹಣ ನೀಡುತ್ತಿದ್ದರು. ಕಲೆಕ್ಷನ್ ಕಡಿಮೆಯಾಯಿತೆಂದರೆ ಹುಸೇನಪ್ಪನವರು ಕಡಿಮೆ ಹಣ ಪಡೆಯುತ್ತಿದ್ದರು ಮತ್ತು ನಾಟಕಕ್ಕೆ ಕಲಾವಿದರಾಗಿ ಬಂದ ಇತರ ಸ್ತ್ರೀ ಕಲಾವಿದರಿಗೂ ಹಣಕಾಸಿನ ವಿಷಯದಲ್ಲಿ ಖಿದ್ದು ಹುಸೇನಪ್ಪನವರು ಇದೇ ರೀತಿಯಾಗಿ ಉಳಿದ ಕಲಾವಿದರಿಗೂ ಹಣ ಕೊಡಿಸುತ್ತಿದ್ದರು. ಈ ಸಹಕಾರ ಮನೋಭಾವನೆಯಿಂದಾಗಿ ರಂಗಸಜ್ಜಿಕೆಯ ಸೇವೆ ಜೊತೆಗೆ ಅವರ ನೇಪಥ್ಯದ ಸೇವೆ ಹೀಗೆ ೨೮ ವರ್ಷಗಳಿಂದ ನಿರಂತರವಾಗಿ ಆತಂಕವಿಲ್ಲದೆ ಸಾಗಿದೆ. ಆದರೆ ಅವರು ಒಟ್ಟು ರಂಗಭೂಮಿಯಲ್ಲಿ ೪೮ ವರ್ಷಗಳ ಅನುಭವದಲ್ಲಿ ಆರ್ಥಿಕವಾಗಿ ಸದೃಢಗೊಳ್ಳಲಿಲ್ಲ. ಕಾರಣ ಇಷ್ಟೇ-ಅವರು ರಂಗಭೂಮಿ ಬೆಳವಣಿಗೆಗಾಗಿ ತಮ್ಮ ಬದುಕನ್ನು ಸವೆಸಿದರು. ಆದರೆ ರಂಗಭೂಮಿಯನ್ನು ಒಂದು ವ್ಯವಹಾರವೆಂಬಂತೆ ಮಾಡಿಕೊಂಡಿದ್ದರೆ ಅವರು ಇವತ್ತು ಒಂದು ಸ್ವಂತ ಮನೆ ಮಾಡಿಕೊಳ್ಳಬಹುದಿತ್ತು. ಹುಸೇನಪ್ಪ ಮತ್ತು ಅವರ ಹೆಂಡತಿ ಅವರಿಗಿರುವ ೫ ಹೆಣ್ಣು ಮಕ್ಕಳು ೧ ಗಂಡು ಮಗ ಸೇರಿ ದಿನದ ಊಟ, ಬಟ್ಟೆ, ಇತರ ಖರ್ಚಿಗಾಗಿ ಬೇಕಾದ ಹಣ ರಂಗಭೂಮಿಯಿಂದ ಸಿಗುತ್ತಿತ್ತು. ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮಾಡಲಾಗಲಿಲ್ಲ. ಸಹಾಯಾರ್ಥ ನಾಟಕಗಳನ್ನು ಏರ್ಪಡಿಸಿ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ಹುಸೇನಪ್ಪನವರ ಅಭಿಮಾನಿಗಳೇ ಮಾಡಿಸಿದ್ದಾರೆ. ಒಟ್ಟಾರೆ ನಾಟಕಗಳ ಸಂಘಟನೆಯ ಕೆಲಸ ನಿರಂತರ ರೂಪಿಸಿಕೊಂಡು ಬಂದ ಹುಸೇನಪ್ಪನವರು ೧೯೭೭ರಷ್ಟು ಹೊತ್ತಿಗೆ ರಂಗ ಸಂಘಟನೆಯ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಭುವನೇಶ್ವರ ನಾಟಕ ಕಂಪನಿ ಸ್ಥಾಪಿಸಿದರು.

***ಭುವನೇಶ್ವರಿ ನಾಟಕ ಸಂಘ ಸ್ಥಾಪನೆ :***

ಹುಸೇನಪ್ಪನವರು ರಂಗ ಸಂಘಟನೆಯ ಕಾರ್ಯದಲ್ಲಿ ತಮ್ಮನ್ನು ಇನ್ನೂ ಹೆಚ್ಚು ಹೆಚ್ಚು ತೊಡಗಿಸಿಕೊಂಡರು. ಸುಪ್ರಸಿದ್ಧ ರಂಗನಟರನ್ನು, ಸ್ತ್ರೀ ಪಾತ್ರಧಾರಿಗಳನ್ನು, ಸಂಗೀತ ವೃಂದವನ್ನು ಸೇರಿಸಿ ಭುವನೇಶ್ವರಿ ನಾಟ್ಯ ಸಂಘವನ್ನು ಹುಟ್ಟುಹಾಕಿದರು. ಈ ಕಂಪನಿಯಲ್ಲಿ ಮಾಲೀಕ

ಹುಸೇನಪ್ಪನವರು, ಮಹ್ಮದ ಅಲಿ ಹುಬ್ಬಿ, ಕೀರ್ತಪ್ಪ ಇಲಕಲ್, ಅಬ್ಬಾಸ ಅಲಿ, ಅಗಸನೂರ ವೀರಭದ್ರಗೌಡ, ಧುತ್ತರಗಿ ಸರೋಜಮ್ಮ, ರಕ್ಕಸಗಿ ಶಂಕ್ರಯ್ಯ, ಮದರಿ ಮರಿಸ್ವಾಮಿ, ಸಿರಿಗೇರಿ ನಾಗನಗೌಡ, ಬೆಳಗಲ್ ಈರಣ್ಣ, ಹಳ್ಳಿಗನೂರು ವೀರಭದ್ರಪ್ಪ, ಪುಷ್ಪಮಾಲಾ ಹಾಗೂ ಮನ್ನೂರು ಸುಭದ್ರಮ್ಮ, ಆದವಾನಿ ವೀಣಾ, ಗೂಡೂರು ಪ್ರಮೀಳಾ, ಹೊಸಪೇಟೆ ಮದುರಾ ಮುಂತಾದ ರಂಗಭೂಮಿಯ ಪ್ರಸಿದ್ಧ ನಟ ನಟಿಯರಿದ್ದರು.

ಇವರನ್ನೆಲ್ಲಾ ಹುಸೇನಪ್ಪನವರು ಸಂಘಟಿಸಿ ಸಮನ್ವಯಗೊಳಿಸಿ ರಂಗಭೂಮಿಯ ಸೇವೆಗೆ ತೊಡಗಿಸಿದರು. ಈ ಭುವನೇಶ್ವರಿ ನಾಟಕ ಸಂಘದಲ್ಲಿ *ರಕ್ತರಾತ್ರಿ, ಕುರುಕ್ಷೇತ್ರ, ಚಿತ್ರಾಂಗದೆ, ಜಗಜ್ಯೋತಿ ಬಸವೇಶ್ವರ, ಸತ್ಯ ಹರಿಶ್ಚಂದ್ರ, ಹೇಮರೆಡ್ಡಿ ಮಲ್ಲಮ್ಮ*, ಪಿ.ಬಿ. ಧುತ್ತರಗಿಯವರ *ಇಲಕಲ್ ಸೀರೆ*, ಸಾಳುಂಕೆಯವರ *ವರ ನೋಡಿ ಹೆಣ್ಣು ಕೊಡು, ದಾರಿದೀಪ* ನಾಟಕಗಳನ್ನು ಕೂಡಿಸಿ ಪ್ರಯೋಗಿಸಲಾಯಿತು. ಇವುಗಳಲ್ಲಿ *ರಕ್ತರಾತ್ರಿ, ಹೇಮರೆಡ್ಡಿ ಮಲ್ಲಮ್ಮ* ಪೌರಾಣಿಕ ನಾಟಕಗಳನ್ನು ಹೆಚ್ಚು ಕಡೆ ಪ್ರಯೋಗಿಸಲಾಗುತ್ತಿತ್ತು. ಕಂಪನಿ ವತಿಯಿಂದ *ರಕ್ತರಾತ್ರಿ* ನಾಟಕವು ಪ್ರತಿ ಹಳ್ಳಿಯಲ್ಲಿ, ತಾಲೂಕು ಕೇಂದ್ರದಲ್ಲಿ, ಪ್ರಸಿದ್ಧ ಜಾತ್ರೆಗಳಾದ ಅಂಬಾಜಾತ್ರೆ, ನೀರಮಾನ್ವಿ ಜಾತ್ರೆ, ಗುಡುಗುಂಟಿ ಅಮರೇಶ್ವರ, ಬಾದಾಮಿ ಬನಶಂಕರಿ ಜಾತ್ರೆ, ಮಸ್ಕಿ, ಕಲ್ಲೂರುಜಾತ್ರೆ, ಗಬ್ಬೂರು ಜಾತ್ರೆ, ಹಾಗೂ ಹೋಬಳಿಗಳಾದ ಕಾರಟಗಿ, ಮಸ್ಕಿ, ತುರವಿಹಾಳ, ಮುಕ್ಕುಂದ, ಜವಳಗೇರಾ, ಗೋರೇಬಾಳ, ಸಾಲಗುಂದಾ, ಹೀಗೆ ಹಲವಾರು ಕಡೆ ಹೋದಲೆಲ್ಲಾ ಪ್ರಯೋಗಿಸಲಾಗುತ್ತಿತ್ತು.

ಹುಸೇನಪ್ಪನವರ ಭುವನೇಶ್ವರಿ ನಾಟಕ ಸಂಘವು ಜಾತ್ರೆ ಉತ್ಸವಗಳಲ್ಲಿ ಪ್ರಸಿದ್ಧ ರಂಗನಟ ಎಲಿವಾಳ ಸಿದ್ಧಯ್ಯನವರನ್ನು *ರಕ್ತರಾತ್ರಿ*ಯ ಅಶ್ವತ್ಥಾಮನ ಪಾತ್ರಕ್ಕಾಗಿ ಕರೆಸಿ, ಪ್ರಚಾರ ಮಾಡಿ ನಾಟಕವನ್ನು ಪ್ರಯೋಗಿಸಲಾಗುತ್ತಿತ್ತು. ಎಲಿವಾಳ ಸಿದ್ಧಯ್ಯನವರು *ರಕ್ತರಾತ್ರಿ* ನಾಟಕದಲ್ಲಿ ಅಶ್ವತ್ಥಾಮನ ಪಾತ್ರ, *ಹೇಮರೆಡ್ಡಿ ಮಲ್ಲಮ್ಮ* ನನಾಟಕದಲ್ಲಿ ಭರಮರೆಡ್ಡಿ ಪಾತ್ರ ಮಾಡುತ್ತಾರೆಂದರೆ ಜನ ಕಿಕ್ಕಿರುದು ತುಂಬುತ್ತಿತ್ತು. ಹಂದಿಗನೂರು ಸಿದ್ರಾಮಪ್ಪನವರ ಮರಣದ ನಂತರ ಅವರನ್ನು ಮರೆಸಿದ ಮಹಾನಟನಾಗಿ ಮೃಡದೇವ ಗವಾಯಿಗಳು ರಂಗಭೂಮಿಯಲ್ಲಿ ಪ್ರಭಾವಶಾಲಿ ನಟನಾಗಿ ಬೆಳೆದರು. ಮೃಡದೇವಾ ಗವಾಯಿಗಳು ಎಲೆವಾಳ ಸಿದ್ಧಯ್ಯನವರು ಸಮಕಾಲೀನರಾದ ರಂಗಭೂಮಿ ಖ್ಯಾತನಾಮರಾದರೂ ಮೃಡದೇವ ಗವಾಯಿಗಳು ಸ್ವಂತ ಕಂಪನಿ ಕಟ್ಟಿಕೊಂಡು ಛಲಬಿಡದೆ ಮೂರು ಸಲ ಮತ್ತೆ ಮತ್ತೆ ನಾಟಕ ಕಂಪನಿಯನ್ನು ಕಟ್ಟಿದರು. ಅವರ ಗುರಿ ಒಂದೇ ನಾಟಕರಂಗದಲ್ಲಿ ಮೆರಿಬೇಕು, ಸದಾಕಾಲ ಜನಮನದಲ್ಲಿ ಅಚ್ಚಳಿಯದೇ ಉಳಿಯಬೇಕು. ಅವರೊಬ್ಬ ಕಂಪನಿಯ ಮಾಲೀಕರಾಗಿ, ಗಾಯಕರಾಗಿ, ಮಹಾನಟನಾಗಿ ಮೆರೆದರು. ಅದೇ ರೀತಿ ಎಲೆವಾಳ ಸಿದ್ಧಯ್ಯನವರು ಬೇರೆ ಬೇರೆ ವೃತ್ತಿ, ಹವ್ಯಾಸಿ ಕಂಪನಿಗಳಲ್ಲಿ ದುಡಿಯುತ್ತಾ ಒಂದು ರೀತಿಯ ಸ್ವತಂತ್ರ ಹಕ್ಕಿಯಂತೆ ಇದ್ದರು. ಹಾಗಾಗಿಯೇ ಅವರು *ಕೃಷ್ಣಗಾರುಡಿ* ಮೊದಲಾದ ಸಿನಿಮಾಗಳಲ್ಲಿ ಪಾತ್ರ ನಿರ್ವಹಿಸಿದರು. ಆದರೆ ಮೃಡದೇವ ಗವಾಯಿಗಳು ಮಾಲೀಕರಾಗಿ ನಾಟಕ ಕಂಪನಿಯ ದೊಡ್ಡ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ರಂಗಭೂಮಿಯಲ್ಲೇ ದುಡಿದರು ನಂತರ ಎಲೆವಾಳ ಸಿದ್ಧಯ್ಯನವರು ಆಹ್ವಾನವಿತ್ತ ಕಂಪನಿಗಳಿಗೆ, ಹಳ್ಳಿಯ ಹವ್ಯಾಸಿಗರು ಆಹ್ವಾನಿಸಿದಲ್ಲಿಗೆ ಹೋಗಿ ಪಾತ್ರ ಮಾಡಿ ಬರುತ್ತಿದ್ದರು. ಆದರೆ ಅವರು ಒಂದು ಕಂಪನಿಗಾಗಿ ದುಡಿಯಲಿಲ್ಲ, ಒಂಬು ಕಡೆ ನಿಲ್ಲಲಿಲ್ಲ. ಇವತ್ತು ಇಲ್ಲಿ, ನಾಳೆ ಎಲ್ಲೋ ಎನ್ನುವ ರೀತಿಯಲ್ಲಿ ಇದ್ದರು.

ಹವ್ಯಾಸಿಗರು ಎಲೆವಾಳ ಸಿದ್ಧಯ್ಯನವರನ್ನು ಕರೆಸಿ ನಾಟಕ ಪ್ರಯೋಗಿಸಿ ಹಣ ಸಂಪಾದಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಮೃಡದೇವ ಗವಾಯಿಗಳ ಮರಣದ ನಂತರ ಸುಮಾರು ೧೫ ವರ್ಷಗಳ ಕಾಲ ರಂಗಭೂಮಿಯಲ್ಲಿ ಎಲಿವಾಳ ಸಿದ್ಧಯ್ಯನವರು ಮಿನಗುವ ನಕ್ಷತ್ರವಾಗಿದ್ದರು. ಅವರನ್ನು ಅಶ್ವತ್ಥಾಮನ ಪಾತ್ರದಲ್ಲಿ ಜನರು ಎಷ್ಟು ಸಲ ನೋಡಿದರೂ ಮತ್ತೆ ಆ ನಾಟಕದಲ್ಲಿ ಅವರು ಪಾತ್ರ ಮಾಡುತ್ತಿದ್ದಾರೆಂದರೆ ಜನರು ಗುಂಪುಗುಂಪಾಗಿ ಬರುತ್ತಿದ್ದರು. ಎಲೆವಾಳ ಸಿದ್ಧಯ್ಯನವರನ್ನು ನಾಟಕಕ್ಕೆ ಕರೆಸುವುದೆಂದರೆ ಹಣವನ್ನು ಸೂರೆ ಹೊಡೆಯುವುದೇ ಆಗಿತ್ತು. ಹೀಗೆ ಹುಸೇನಪ್ಪನವರು ತಾವು ಸ್ಥಾಪಿಸಿದ ಭುವನೇಶ್ವರಿ ನಾಟಕ ಕಂಪನಿ ಸಾಕಷ್ಟು ಪೌರಾಣಿಕ ನಾಟಕಗಳನ್ನು ಪ್ರಯೋಗಿಸುತ್ತಾ ಪ್ರೇಕ್ಷಕರ ಮನಸ್ಸಿಗೆ ಮುದ ನೀಡುತ್ತಿದ್ದರು. ಜಾತ್ರೆ ಉತ್ಸವವಿದ್ದಲ್ಲಿ ಹುಸೇನಪ್ಪನವರ ನಾಟಕ ಕಂಪನಿ ಇದ್ದೇ ಇರುತ್ತಿತ್ತು ಮತ್ತು ಆ ನಾಟಕ *ರಕ್ತರಾತ್ರಿ*ಯೇ ಆಗಿರುತ್ತಿತ್ತು. ಅಶ್ವತ್ಥಾಮನ ಪಾತ್ರದಲ್ಲಿ ಎಲೆವಾಳ ಸಿದ್ಧಯ್ಯನವರು ಇದ್ದೇ ಇರುತ್ತಾರೆ ಎಂಬ ಮಾತು ಜನಮನದಲ್ಲಿ ತುಂಬಿಹೋಗಿತ್ತು.

ಹುಸೇನಪ್ಪನವರ ಭುವನೇಶ್ವರಿ ನಾಟಕ ಕಂಪನಿಯು *ರಕ್ತರಾತ್ರಿ* ನಾಟಕಕ್ಕಾಗಿ ಎಲೆವಾಳ ಸಿದ್ಧಯ್ಯನವರನ್ನು ಕರೆಸಿ ಅಂಬಾಜಾತ್ರೆ, ಬನಶಂಕರಿ ಜಾತ್ರೆ, ಗುರುಗುಂಟೆ ಅಮರೇಶ್ವರ, ಗಬ್ಬೂರ, ಮಸ್ಕಿ, ಜವಳಗೇರಾ, ಮುಕ್ಕುಂದು, ಕಾರಟಗಿ, ಬಳ್ಳಾರಿ, ಸಿರುಗುಪ್ಪಾ, ತೆಕ್ಕಲಕೋಟೆ, ಸಾಲಗುಂದಾ, ರೌಡಕುಂದ, ತಿಡಿಗೋಳ, ನಿಡಿಗೋಳ, ಕಂಪ್ಲಿ, ಹೊಸಕೋಟೆ, ಆದವಾನಿ, ಹೀಗೆ ಎಲ್ಲೆಂದರಲ್ಲಿ ಉತ್ತರ ಕರ್ನಾಟಕದ ಸುತ್ತ ನಾಲ್ಕು ದಿಕ್ಕಿಗೂ ದೊಡ್ಡ ದೊಡ್ಡ ಜಾತ್ರೆ ಉತ್ಸವಗಳಲ್ಲಿ ಸತತವಾಗಿ ಸುಮಾರು ಐದು ವರ್ಷಗಳ ಕಾಲ ಹುಸೇನಪ್ಪನವರು ತಮ್ಮ ಕಂಪನಿಯ ಮೂಲಕ ನಾಟಕಗಳನ್ನು ಸಂಘಟಿಸಿ ಪ್ರಯೋಗಿಸಿದ್ದಾರೆ.

ಬರುಬರುತ್ತಾ ಹುಸೇನಪ್ಪನವರ ಈ ಕಂಪನಿಯು ಪ್ರಾರಂಭದಲ್ಲಿದ್ದ ತಮ್ಮ ಹುಮ್ಮಸ್ಸನ್ನು ಕಳೆದುಕೊಂಡಿತು. ಈ ಕಂಪನಿಯಲ್ಲಿದ್ದ ಹೆಸರಾಂತ ನಟ ನಟಿ ವರ್ಗಕ್ಕೆ ಬಹಳ ಬೇಡಿಕೆ ಇದ್ದುದರಿಂದ ಅವರು ಆಂಧ್ರ ಪ್ರದೇಶದ ಗಡಿ ಭಾಗಗಳಿಗೂ ಬಳ್ಳಾರಿ, ರಾಯಚೂರು, ಹರಿಹರ, ದಾವಣಗೆರೆ , ಹುಬ್ಬಳ್ಳಿ, ಬಿಜಾಪುರಗಳವರೆಗೂ ಅವರನ್ನು ಹವ್ಯಾಸಿಗರು ತಾವಾಡುವ ನಾಟಕಗಳಿಗೆ ಆಹ್ವಾನಿಸುತ್ತಿದ್ದರಿಂದ ಹುಸೇನಪ್ಪನವರು ಕಂಪನಿಗೆ ಬೆನ್ನು ತೋರಿಸಿದರು. ಹುಸೇನಪ್ಪ ಪ್ರಯೋಗಿಸುತ್ತಿದ್ದ ನಾಟಕಗಳಿಗೆ ಒಬ್ಬೊಬ್ಬ ನಟ ಅಥವಾ ನಟಿ ಕೈಕೊಟ್ಟಾಗ ನಾಟಕಗಳು ಯಶಸ್ವಿಯಾಗಿ ಪ್ರಯೋಗಗೊಳ್ಳುವಲ್ಲಿ ಸೋಲುತ್ತಿದ್ದವು. ಕಾರಣ ಕಂಪನಿಯು ಅಪಾರ ಆರ್ಥಿಕ ನಷ್ಟವನ್ನು ಅನುಭವಿಸಿತು. ಇದರಿಂದ ಹುಸೇನಪ್ಪನವರು ಬಹಳ ತೊಂದರೆ ಅನುಭವಿಸಿ ಕಂಪನಿ ನಿಲ್ಲಿಸಿದರು. ಆದರೆ ಅವರು ಸೋಲಲಿಲ್ಲ. ಛಲ ಬಿಡದ ತ್ರಿವಿಕ್ರಮನಂತೆ ರಂಗ ಚಟುವಟಿಕೆಯನ್ನು ಮುಂದುವರೆಸಿದರು ಮತ್ತು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಿಂಧನೂರ ತಾಲ್ಲೂಕು ಕೇಂದ್ರದಲ್ಲಿಯೇ ಇರುವ ಹವ್ಯಾಸಿ ಕಲಾವಿದರನ್ನ ಕೂಡಿಸಿಕೊಂಡು ಅದೇ ಭುವನೇಶ್ವರಿ ನಾಟ್ಯ ಸಂಘವನ್ನು ಪುನಃ ಸ್ಥಾಪಿಸಿ ಕಂಪನಿಗೆ ಮರು ಜೀವ ತುಂಬಿದರು.

*ಭುವನೇಶ್ವರಿ ನಾಟಕ ಸಂಘದ ಪುನರ್ ಸ್ಥಾಪನೆ :*

೧೯೮೦ರಲ್ಲಿ ಹುಸೇನಪ್ಪನವರು ಬಹಳಷ್ಟು ಕಷ್ಟನಷ್ಟಗಳನ್ನು ಅನುಭವಿಸಿ ಸಿಂಧನೂರ ತಾಲ್ಲೂಕು ಕೇಂದ್ರದಲ್ಲಿಯೇ ಇದ್ದ ಹವ್ಯಾಸಿಗರನ್ನು ಕೂಡಿಸಿಕೊಂಡು ಭುವನೇಶ್ವರಿ ನಾಟ್ಯ

ಸಂಘವನ್ನು ಪುನರ್ ಸ್ಥಾಪಿಸಿದರು. ಸುಮಾರು ೪ ವರ್ಷಗಳ ಕಾಲ ಸತತವಾಗಿ ಈ ಕಂಪನಿಯನ್ನು ಮುನ್ನಡೆಸಿದರು. ಈ ಕಂಪನಿಯಲ್ಲಿದ್ದ ಮುಖ್ಯ ಪಾತ್ರಧಾರಿಗಳೆಂದರೆ ಹುಸೇನಪ್ಪನವರು, ಗುರುಬಸ್ಸಯ್ಯ ಸ್ವಾಮಿ ಇ.ಜೆ.ಹೊಸ್ಸಳ್ಳಿ, ಇಸ್ಮಾಯಿಲ್ ಸಾಬ, ಜಾನಿಸಾಬ ಕಂಡಕ್ಟರ್, ಎಂ. ಗಂಗಣ್ಣ ಜವಳಗೇರಾ, ಲಿಂಗನಗೌಡ ಪೊಲೀಸ್ ಪಾಟೀಲ, ಶಿವಯ್ಯಸ್ವಾಮಿ ಗೋರೇಬಾಳ, ಎನ್. ಚಂದ್ರಪ್ಪಗೌಡ ಗೊರೇಬಾಳ, ಚನ್ನನಗೌಡ ನಂದಿಹಳ್ಳಿ, ಸಣ್ಣರೆಡ್ಯಪ್ಪ ಜವಳಗೇರಾ, ಬಸ್ಸಯ್ಯಸ್ವಾಮಿ ಜವಳಗೇರಾ, ಭೀರಪ್ಪ ಶಂಭೋಜಿ, ಡಾ|| ಪ್ರಭು ಅಮರಾಪೂರ, ಹಾಗೂ ಮೀನಾಕ್ಷಿ, ಜಯಶ್ರೀ, ಬಳ್ಳಾರಿ ಜಯ, ರಾಧಾ ಸಿಗ್ಗಾವಿ, ಪ್ರೇಮ, ಮೊದಲಾದವರನ್ನು ಸೇರಿಸಿಕೊಂಡು ಈ ಕಂಪನಿಯು *ರಕ್ತರಾತ್ರಿ, ಹೇಮರಡ್ಡಿ ಮಲ್ಲಮ್ಮ, ಗೌಡ್ರ ಗದ್ಲ, ಮಂಗಳ ನಸ್ಸತ್ತಿಗೆ, ಆಶಾಲತಾ,* ಮೊದಲಾದ ನಾಟಕಗಳನ್ನು ಕೂಡಿಸಿಕೊಂಡು ಸತತವಾಗಿ ನಾಲ್ಕು ವರ್ಷಗಳವರೆಗೂ ಉತ್ತರ ಕರ್ನಾಟಕದ ಹಲವಾರು ಊರುಗಳಲ್ಲಿ ಮುಖ್ಯವಾಗಿ ತಾಲ್ಲೂಕು ಕೇಂದ್ರ ಮತ್ತು ಹೋಬಳಿಗಳಲ್ಲಿ ನಾಟಕಗಳನ್ನು ಪ್ರಯೋಗಿಸುತ್ತಾ ಈ ಕಂಪನಿ ವತಿಯಿಂದ ಗುಲ್ಬರ್ಗಾ ಆಕಾಶವಾಣಿ, ಬೆಂಗಳೂರು ದೂರದರ್ಶನ, ಹೈದರಾಬಾದ್ ದೂರದರ್ಶನಗಳಿಗಾಗಿ *ರಕ್ತರಾತ್ರಿ* ನಾಟಕವನ್ನು ಸಿದ್ಧಪಡಿಸಿ ಪ್ರಯೋಗಿಸಲಾಯಿತು. ಈ ಕಂಪನಿಯ ತಂಡದಿಂದ ಹಡಗಲಿಯ ನಾಟಕೋತ್ಸವ, ಬೆಂಗಳೂರಿನ ನಾಟಕೋತ್ಸವಗಳಲ್ಲಿ *ಇಲಕಲ್ ಸೀರೆ,* ನಾಟಕವನ್ನು ಪ್ರಯೋಗಿಸಿ ಕಲಾಭಿಮಾನಿಗಳ ಮೆಚ್ಚುಗೆ ಗಳಿಸಿತು. ೧೯೯೧ರ ವರೆಗೂ ಹುಸೇನಪ್ಪನವರು ಈ ಕಂಪನಿಯನ್ನು ಕಟ್ಟಿಕೊಂಡು ತಮ್ಮ ರಂಗ ಚಟುವಟಿಕೆಯನ್ನು ರಚನಾತ್ಮಕವಾಗಿ ಕೈಗೊಂಡರು.

ನಂತರ ಈ ಕಂಪನಿಯಲ್ಲಿದ್ದ ಹವ್ಯಾಸಿಗರು ಕೆಲ ವ್ಯಯಕ್ತಿಕ ಕಾರಣಗಳಿಗಾಗಿ ಕಂಪನಿಯನ್ನು ತೊರೆದರು (ಕೆಲವರು ಸರಕಾರಿ ನೌಕರಿ ಸೇರಿದರು, ಕೆಲವರು ಬೇರೆ ವೃತ್ತಿಯಲ್ಲಿ ತೊಡಗಿದರು) ಆದ್ದರಿಂದ ಪುನರ್ ಸ್ಥಾಪನೆಗೊಂಡಿದ್ದ ನಾಟಕ ಕಂಪನಿಯ ಚಟುವಟಿಕೆಗಳು ಕ್ಷೀಣಿಸತೊಡಗಿದವು ಆದರೆ ಹುಸೇನಪ್ಪನವರು ಧೃತಿಗೆಡಲಿಲ್ಲ. ಬದಲಾಗಿ ಸಿಂಧನೂರು ತಾಲ್ಲೂಕಿನಲ್ಲಿ ನಾಟಕ ಕ್ಷೇತ್ರ ಬೆಳೆಯಲು ಪ್ರೋತ್ಸಾಹ ನೀಡುತ್ತಿರುವ ಐದು ಹೋಬಳಿಗಳಾದ ಜವಳಗೇರಾ, ಮುಕ್ಕುಂದಾ, ಗೊರೇಬಾಳ ಸಾಲಗುಂದಾಗಳಲ್ಲಿ ಆಯಾ ಹೋಬಳಿಯ ಹವ್ಯಾಸಿ ಕಲಾವಿದರು ಹಾಗೂ ಕಲಾಪೋಷಕರ ಸಹಕಾರದೊಂದಿಗೆ ಸ್ಥಳಿಯವಾಗಿ ಆಯಾ ಹೋಬಳಿಗಳಿಗೊಂದರಂತೆ (ಮುಕ್ಕುಂದ, ಸಾಲಗುಂದಾ ಇವೆರಡನ್ನು ಸೇರಿಸಿ ಒಂದು ತಂಡ) ನಾಲ್ಕು ನಾಟಕ ತಂಡಗಳನ್ನು ಕಟ್ಟಿದರು ಮತ್ತು ಆಯಾ ಹೋಬಳಿಯ ಪ್ರತಿ ತಂಡದಿಂದ ಸುತ್ತಮುತ್ತಲ ಹಳ್ಳಿಗಳಲ್ಲಿ ನಾಟಕಗಳನ್ನು ಪ್ರಯೋಗಿಸತೊಡಗಿದರು. ಸದಾ ಒಂದಿಲ್ಲೊಂದು ಹೋಬಳಿಯ ಹಳ್ಳಿಗಳಲ್ಲಿ ಒಂದಾದರೂ ನಾಟಕ ಪ್ರಯೋಗಗೊಳ್ಳುತ್ತಿತ್ತು. ಆ ನಾಟಕಗಳಿಗೆ ವಿಶೇಷವಾಗಿ ಅವಶ್ಯಕತೆ ಬಿದ್ದರೆ ಬಳ್ಳಾರಿ, ಕೂಡ್ಲಿಗೆ, ದಾವಣಗೆರೆ, ಹುಬ್ಬಳ್ಳಿಗಳಿಂದ ಸ್ತ್ರೀ ಪಾತ್ರಧಾರಿಗಳನ್ನು ಕರೆಸಿ ಪ್ರಯೋಗಿಸುತ್ತಿದ್ದರು. ಅವಶ್ಯವೆನಿಸಿದರೆ ಸಿನಿಮಾ ನಟಿಯರನ್ನು ಕರೆಸಿ ನಾಟಕ ಪ್ರಯೋಗಿಸುತ್ತಿದ್ದರು. ಸಿನಿಮಾ ನಟ ನಟಿಯರಾದ ಉಮಾಶ್ರೀ, ವಿನಯಾ ಪ್ರಸಾದ್, ಸುಂದರರಾಜ್, ಶೃತಿ, ಪ್ರಮೀಳಾ ಜೋಷಾಯಿ, ಧೀರೇಂದ್ರ ಗೋಪಾಲ್, ಸುಧೀರ್ ಮುಂತಾದವರನ್ನು ಕರೆಸಿ ನಾಟಕಗಳಿಗೆ ಹೊಸತನದ ಮೆರಗನ್ನು ತರುತ್ತಿದ್ದರು.

ಜವಳಗೇರಾ, ಮುಕ್ಕುಂದ, ಗೋರೇಬಾಳ, ಸಾಲಗುಂದಾ ನಾಲ್ಕು ಹೋಬಳಿಗಳಲ್ಲಿ ಸ್ಥಳೀಯವಾಗಿ ನಾಟಕಗಳನ್ನು ಪ್ರಯೋಗಿಸುತ್ತಾ ನಾಟಕ ಕ್ಷೇತ್ರವನ್ನು ಜೀವಂತಗೊಳಿಸಿದರು. ನೂರಾರು ಕಲಾವಿದರನ್ನು, ಸಂಗೀತಗಾರರನ್ನು, ಗಾಯಕರನ್ನು, ನಿರ್ದೇಶಕರನ್ನು ಬೆಳೆಸಿದರು. ಈ ತಂಡಗಳೆಲ್ಲಾ ಶ್ರೀ ಭುವನೇಶ್ವರಿ ನಾಟ್ಯ ಸಂಘ ಎಂಬ ಹೆಸರಿನಿಂದಲೇ ಪ್ರಯೋಗಗೊಳ್ಳುತ್ತಿದ್ದವು. ಒಂದು ನಾಟಕ ಪ್ರಯೋಗಗೊಳ್ಳಬೇಕಾದರೆ ಅದಕ್ಕೆ ಬೇಕಾದ ಪೂರ್ಣ ತಯಾರಿ, ಪಾತ್ರವರ್ಗ, ತಾಲೀಮು, ನಟಿಯರನ್ನು ಬುಕ್ ಮಾಡುವುದು, ಸಂಗೀತ ಸಂಯೋಜನೆ, ರಂಗಸಜ್ಜಿಕೆ ಹೀಗೆ ಎಲ್ಲವನ್ನು ಸಮನ್ವಯಗೊಳಿಸಿ ಕೆಲಸವನ್ನು ಹಗಲು ರಾತ್ರಿ ಎನ್ನದೆ ಹುಸೇನಪ್ಪನವರು ನಿರ್ವಹಿಸುತ್ತಿದ್ದರು. ಈಗಲೂ ಸುಭದ್ರಮ್ಮ ಮುನ್ನೂರು, ಪದ್ಮಾ ಕೂಡ್ಲಿಗಿ, ಮದರಿ ಮರಿಸ್ವಾಮಿಯವರನ್ನು, ಬಾಬಣ್ಣ ಹಾಗೂ ದಿವಂಗತ ಸಿರಿಗೆರೆ ನಾಗನಗೌಡರನ್ನು ಸೇರಿಸಿಕೊಂಡಿರುತ್ತಿದ್ದರು. ಹೀಗೆ ಹುಸೇನಪ್ಪನವರು ತಮ್ಮ ಮಿತ್ರವರ್ಗವನ್ನು ಬಿಡದೆ ತಾನು ಸಂಘಟಿಸಿದ ಎಲ್ಲಾ ನಾಟಕಗಳಿಗೂ ಕರೆಸಿ ಪ್ರಯೋಗಿಸುತ್ತಿದ್ದರು.

ತನ್ನ ರಂಗ ಚಟುವಟಿಕೆಗಳಿಗೆ ಸದಾ ಸಹಾಯ ನೀಡುತ್ತಿರುವ ಕಲಾವಿದರು, ಕಲಾಪೋಷಕರು ಆದ ಗೋರೇಬಾಳ ಚಂದ್ರಪ್ಪ, ಜವಳಗೇರಾ ಗಂಗಣ್ಣ, ವೆಂಕಣ್ಣ ಜೋಷಿ, ವಿರುಪಾಕ್ಷರೆಡ್ಡಿ ದಳಪತಿ ಮುಕ್ಕುಂದ ಇವರೆಲ್ಲಾ ಹುಸೇನಪ್ಪನವರು ಸಂಘಟಿಸಿದ ಪ್ರತಿ ಹೋಬಳಿಯ ಪ್ರಮುಖರು, ಹುಸೇನಪ್ಪನವರು ಇವರ ಸಹಾಯ ಸಹಕಾರ ತೆಗೆದುಕೊಂಡು ಇನ್ನೂ ರಂಗ ಚಟುವಟಿಕೆಗಳಲ್ಲಿ ಜೀವಂತಿಕೆಯನ್ನು ಇಟ್ಟುಕೊಂಡಿದ್ದಾರೆ.

ಹುಸೇನಪ್ಪನವರು ೧೯೯೯ರಲ್ಲಿ ಮೃಡದೇವಗವಾಯಿ ಕಲಾಕಿರಣ ಬಳಗ ಎಂಬ ಹೆಸರಲ್ಲಿ ತಾಲ್ಲೂಕು ಮಟ್ಟದ ಕಲಾವಿದರ ಸಂಘವನ್ನು ಸ್ಥಾಪಿಸಿದರು. ಈ ಸಂಘದಡಿಯಲ್ಲಿ ಹಲವಾರು ಹವ್ಯಾಸಿ ಕಲಾವಿದರನ್ನು ಸಂಘಟಿಸಿ ಹಲವಾರು ನಾಟಕಗಳನ್ನು, ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಇತ್ತೀಚಿಗೆ ಜವಳಗೇರಾ, ಮುಕ್ಕುಂದ, ಹೋಬಳಿಗಳಲ್ಲಿ ಪ್ರಯೋಗಿಸುವ ನಾಟಕಗಳನ್ನು ಗವಾಯಿಗಳ ಸ್ಮರಣೆಗಾಗಿ ಅವರ ಹೆಸರಲ್ಲೇ ನಾಟಕಗಳನ್ನು ಪ್ರಯೋಗಿಸುತ್ತಾರೆ. ಈ ಪ್ರಯೋಗಗಳ ರೂವಾರಿಗಳಾಗಿ ಹುಸೇನಪ್ಪ, ಎಂ. ಗಂಗಣ್ಣ, ವಿರುಪಾಕ್ಷರೆಡ್ಡಿ ದಳಪತಿ, ಮೊದಲಾದವರ ಕಳಕಳಿ ಎದ್ದು ಕಾಣುತ್ತದೆ.

*ಸಂಗೀತ ಸೇವೆ :*

ಸಾರ್ವತ್ರಿಕವಾಗಿ ನೋಡಿದರೆ ಸಂಗೀತದ ತವರು ಮನೆಯು ರಂಗಭೂಮಿ, ಬಹುಶಃ ಅದಕ್ಕಾಗಿಯೇ ಮೃಡದೇವ ಗವಾಯಿಗಳು ಬಹು ದೊಡ್ಡ ಸಂಗೀತ ಸಾಧಕರಾಗಿದ್ದು ರಂಗಭೂಮಿಯಲ್ಲಿ ಬಹು ಎತ್ತರಕ್ಕೆ ಬೆಳೆದರು. ಬಹುಶಃ ರಂಗಭೂಮಿ ಮತ್ತು ಸಂಗೀತ ಕ್ಷೇತ್ರದ ನಡುವಿರುವ ನಂಟು ಅದಕ್ಕೆ ಕಾರಣವಿರಬಹುದು, ಅದೇ ರೀತಿ ಹುಸೇನಪ್ಪನವರು ಗಾಯಕರಾಗಿ ರಂಗಭೂಮಿಯನ್ನು ಪ್ರೇವೇಶಿಸಿ, ನಟರಾಗಿ ಸೇವೆ ಸಲ್ಲಿಸಿ, ಕೊನೆಯಲ್ಲಿ ರಂಗ ಸಂಘಟಕನಾಗಿ ನೇಪಥ್ಯದ ಅಮೂಲ್ಯ ಸೇವೆ ಸಲ್ಲಿಸಿ, ಸಂಗೀತ ಕ್ಷೇತ್ರಕ್ಕೂ ತಮ್ಮ ನೇಪಥ್ಯದ ಸೇವೆಯನ್ನು ಮುಂದುವರಿಸಿದರು. ೧೯೭೭ರಲ್ಲಿ ಮೊಟ್ಟ ಮೊದಲು ಪಂಚಾಕ್ಷರ ಗವಾಯಿ ಸಂಗೀತ ಪಾಠಶಾಲೆಯನ್ನು ಸಿಂಧನೂರಿನಲ್ಲಿ ಸ್ಥಾಪಿಸಿದರು. ಈ ಸಂಗೀತ ಪಾಠಶಾಲೆಗೆ ಪೂಜ್ಯ ಪುಟ್ಟರಾಜ ಗವಾಯಿಗಳ ಶಿಷ್ಯರಾದ ಬಸವರಾಜ ಗೋನಾಳರು ಸಂಗೀತ ಶಿಕ್ಷಕನಾಗಿ ನಾಲ್ಕು ವರ್ಷ ಸೇವೆ ಸಲ್ಲಿಸಿದರು. ಇವರು ಸುಮಾರು ಮೂರನಾಲ್ಕುನೂರು ವಿದ್ಯಾರ್ಥಿಗಳಿಗೆ ಸಂಗೀತಭ್ಯಾಸ ಮಾಡಿಸಿದ್ದಾರೆ. ಅವರಿಗೆ ಆಕಾಶವಾಣಿ ಧಾರವಾಡದಲ್ಲಿ ಕೆಲಸ

ಸಿಕ್ಕ ನಂತರ ಅವರು ತೆರಳಿದರು. ನಂತರ ಹುಸೇನಪ್ಪನವರು ತೆರವಾದ ಸಂಗೀತ ಶಿಕ್ಷಕರ ಸ್ಥಾನಕ್ಕೆ ಜಗರ್‌ಕಲ್ ಸಿದ್ಧವೀರಯ್ಯ ಗವಾಯಿಗಳನ್ನು ನೇಮಿಸಿದರು. ಎರಡು ವರ್ಷದ ನಂತರ ಜಗರ್‌ಕಲ್ ಸಿದ್ಧವೀರಯ್ಯನವರು ಕೆಲ ಕಾರಣಗಳಿಂದ ಸಂಗೀತ ಪಾಠಶಾಲೆಯನ್ನು ಬಿಟ್ಟುಹೋದ ನಂತರ ಹುಸೇನಪ್ಪನವರು ಮಲ್ಕಾಪೂರ ದೊಡ್ಡಬಸವಾರ್ಯ ಗವಾಯಿಗಳಿಂದ ಸಂಗೀತ ಸೇವೆಗೆ ಏರ್ಪಾಟು ಮಾಡಿದರು. ಅಪಾರ ಪರಿಶ್ರಮದಿಂದ ಸಂಗೀತ ಪಾಠಶಾಲೆಯನ್ನು ಎಂಟು ವರ್ಷಗಳವರೆಗೆ ನಡೆಸಿಕೊಂಡು ಬಂದರು. ಈ ಎಂಟು ವರ್ಷಗಳ ಅವಧಿಯಲ್ಲಿಯೇ ಪ್ರತಿ ವರ್ಷವೂ ಪಂಡಿತ ಪಂಚಾಕ್ಷರ ಗವಾಯಿಗಳ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮವನ್ನು ಪೂಜ್ಯ ಪುಟ್ಟರಾಜ ಗವಾಯಿಗಳ ನೇತೃತ್ವದಲ್ಲಿ ಸಂಘಟಿಸಿರುವರು.

ಈ ಪುಣ್ಯ ಸ್ಮರಣೋತ್ಸವದ ಸಂಗೀತ ಕಾರ್ಯಕ್ರಮಕ್ಕೆ ಪ್ರತಿ ಸಲವು ಪೂಜ್ಯ ಪುಟ್ಟರಾಜ ಗವಾಯಿಗಳು, ಶ್ರೀಪಾದ ಹೆಗಡೆ, ರಘುನಾಥ ನಾಕೋಡ, ಪಂಡಿತ್ ಜೆಸ್ಸ್‌ರಾಜ್, ಸಂಗೀತ ಸಾಮ್ರಾಟ ರಾಜಗುರು ಗುರ ಸ್ವಾಮಿ ಕಲ್ಕೇರಿ, ಮದ್ರಾಸ್ ನಾಗಮುನಿ, ಮದಿರಿ ಮರಿಸ್ವಾಮಿ, ಮದಿರಿ ವೀರಯ್ಯ, ಸಿರಿಗೇರಿ ನಾಗನಗೌಡ, ಸರಳಾದೇವಿ, ವೆಂಕಟೇಶ ಕುಮಾರ, ಕುಮಾರದಾಸ, ವಂದಲಿ ವಿರುಪಾಕ್ಷಯ್ಯ, ಮುಂತಾದ ಪ್ರಸಿದ್ಧ ಸಂಗೀತ ಕಲಾವಿದರು ಸಂಗೀತ ಸೇವೆ ಸಲ್ಲಿಸಿರುವರು.

ಇಂತಹ ಒಂದು ಮೌಲ್ಯಯುತ ಪರಂಪರೆಯನ್ನು ಸಿಂಧನೂರಿನಲ್ಲಿ ಹಾಕಿಕೊಟ್ಟ ಹುಸೇನಪ್ಪನವರು, ಇವತ್ತು ಗಾನಯೋಗಿ ನಾದತರಂಗ, ಮೃಡದೇವ ಗವಾಯಿ ಕಲಾ ಕಿರಣ ಬಳಗದಂತ, ಈ ಎರಡು ಕಲಾಸಂಘಗಳನ್ನು, ಆಕಾಶವಾಣಿ ಕಲಾವಿದರಾದ ದೇವೇಂದ್ರಕುಮಾರ ಪತ್ತಾರ, ಎನ್. ಚಂದ್ರಪ್ಪ ಗೊರೇಬಾಳ, ಎಸ್. ಶರಣೇಗೌಡ, ವೆಂಕಣ್ಣಾಚಾರ್ಯ ಜೋಷಿ, ಎಂ. ಗಂಗಣ್ಣ ಜವಳಗೇರಾ, ವಿರುಪಾಕ್ಷರೆಡ್ಡಿ ದಳಪತಿ ಮುಕ್ಕುಂದ, ವೀರಯ್ಯ ಸ್ವಾಮಿ ಆರ್.ಡಿ.ಸಿ.ಸಿ. ಬ್ಯಾಂಕ್, ಡಾ|| ಪ್ರಭು ಅಮರಾಪೂರ, ಬೂತಲದಿನ್ನಿ ಬಸನಗೌಡ, ಬಿ. ಬಸವರಾಜ, ವೀರೇಶ ಸಾಲಿಮಠ, ಲಕ್ಷ್ಮಣ ಸಮುದಾಯ, ವೀರನಗೌಡ ಗುಮಗೇರಿ, ನಿರುಪಾದಯ್ಯಸ್ವಾಮಿ, ಶರಭಣ್ಣ, ಶಾಂತವೀರಯ್ಯ ಹಾಗೂ ಇತರ ಕಲಾವಿದರ, ಕಲಾಪೋಷಕರ ಸಹಕಾರದಿಂದ ಹುಟ್ಟುಹಾಕಿ ತಮ್ಮ ಜವಾಬ್ದಾರಿಯನ್ನು ಇನ್ನೂ ಹೆಚ್ಚಿಸಿಕೊಂಡಿದ್ದಾರೆ.

ಹುಸೇನಪ್ಪನವರು ರಂಗಭೂಮಿಗೆ ಅಗತ್ಯವಾದ ಎಲ್ಲಾ ವಿಭಾಗಗಳಲ್ಲೂ ಸಿದ್ಧ ಪರಿಣತಿಯನ್ನು ಪಡೆದು, ೪೦ ವರ್ಷಗಳಿಂದ ವೃತ್ತಿ, ಹವ್ಯಾಸಿ ರಂಗಭೂಮಿಯಲ್ಲಿ ಎಲೆ ಮರೆಯ ಕಾಯಿಯಂತೆ ಸೇವೆ ಸಲ್ಲಿಸಿದರೂ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಯಾವುದೇ ಪ್ರಶಸ್ತಿ, ಸನ್ಮಾನ ನೀಡಿ ಗೌರವಿಸಿಲ್ಲ. ಈ ಬಗ್ಗೆ ಅವರನ್ನು ಕೇಳಿದರೆ ಇದುವರೆಗೂ ಫಲಾಪೇಕ್ಷೆ ಇಲ್ಲದೇ ದುಡಿದಿದ್ದೇನೆ. ಈಗ ಹೃದಯಾಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿದ್ದೇನೆ. ಈಗಲಾದರೂ ಸಂಬಂಧಪಟ್ಟವರು ನನ್ನ ಸೇವೆಯನ್ನು ಪರಿಗಣಿಸಿದರೆ ಅದೇ ನನ್ನ ಪರಿಶ್ರಮಕ್ಕೆ ಸಂದ ಗೌರವ, ಎಂದೇಳಿದ ಹುಸೇನಪ್ಪನವರ ಮೊಗದಲ್ಲಿ ಧನ್ಯತಾ ಭಾವ ತುಂಬಿಕೊಂಡಿತ್ತು.

# ಶ್ರೀಮತಿ ಲೂಸಿ ಪಿರೇರಾ



ಐ.ಕೆ. ಬೋಳುವಾರ್

ಆಗ ೧೯೭೮ನೆಯ ಇಸವಿ. ಇಡೀ ದೇಶದ ಜನರ ಕಣ್ಣು ಚಿಕ್ಕಮಗಳೂರಿನಲ್ಲಿ, ತುರ್ತು ಪರಿಸ್ಥಿತಿಯ ನಂತರ ನಡೆದ ಮಹಾಚುನಾವಣೆಯ ರಾಯ್‌ಬರೇಲಿಯ ಸೋಲಿನ ಬಳಿಕ ಇಂದಿರಾ ಗಾಂಧಿ ಚಿಕ್ಕಮಗಳೂರಿನಲ್ಲಿ ಮತ್ತೆ ಕಣಕ್ಕಿಳಿದಿದ್ದರು. ರಾಷ್ಟ್ರೀಯ, ಅಂತರ್‍ರಾಷ್ಟ್ರೀಯ ಪತ್ರಕರ್ತರುಗಳು, ಬಿಬಿಸಿ ಮುಂತಾದ ಟಿವಿ ಮಾಧ್ಯಮದವರು ಅಲ್ಲಿ ಬೀಡು ಬಿಟ್ಟಿದ್ದರು. ಅಂದಿನ ಕಾಂಗ್ರೆಸ್ಸಿಗರಿಗೋ ಇಂದಿರಾರನ್ನು ಶತಾಯಗತಾಯ ಗೆಲ್ಲಿಸಬೇಕೆಂಬ ಛಲ. ಉಳಿದವರಿಗೆ ತದ್ವಿರುದ್ಧ ಹಠ.

ಲೂಸಿ ಮತ್ತು ಆಕೆಯ ಸಂಗಾತಿ ಶ್ರೀಧರ್ ಮತ್ತಿತರ ಗೆಳೆಯರದ್ದು ಎರಡನೆಯ ಗುಂಪು.

ಮಂಗಳೂರಿನಲ್ಲಿ ಎಡಪಂಥೀಯ ಧೋರಣೆಯೊಂದಿಗೆ ಕಾರ್ಮಿಕರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಶ್ರೀಧರ್ ಮತ್ತು ಲೂಸಿಗೆ ಚಿಕ್ಕಮಗಳೂರಿನಲ್ಲಿ ಯುದ್ಧ ಮಾಡುವ ಹಮ್ಮಸ್ಸು. ಅದಕ್ಕೆಂದೇ ಏಳೆಂಟು ಮಂದಿಯ ಪಡೆಯನ್ನು ಕಟ್ಟಿದರು. ಆ ಮರಿ ಸೈನ್ಯಕ್ಕೆ ಪ್ರಯಾಣದ ವೆಚ್ಚವನ್ನೂ ಭರಿಸಲಾರದಷ್ಟು ಆರ್ಥಿಕ ಮುಗ್ಗಟ್ಟು.

ಅಂತಹ ಸಂದರ್ಭದಲ್ಲಿ ಅವರು ಆರಿಸಿಕೊಂಡ ಆಯುಧ - ಬೀದಿನಾಟಕ.

ಚಿಕ್ಕಮಗಳೂರಿನ ಗಲ್ಲಿ ಗಲ್ಲಿಯಲ್ಲಿ ಮಂಗಳೂರಿನ ಯುವತಂಡದ ಬೀದಿನಾಟಕ. ಸೂತ್ರಧಾರಿಯ ಪಾತ್ರ ನಿರ್ವಹಣೆ 26 ರ ಹರೆಯದ ಲೂಸಿಯ ಪಾಲಿಗೆ. ಜನರ ನೂಕುನುಗ್ಗಲಿನ ಮಧ್ಯೆ, ಪೊಲೀಸರ ಕಾವಲಿನ ಜತೆಗೆ ಲೂಸಿ ತುರ್ತುಪರಿಸ್ಥಿತಿಯ ಇಂದಿರಾವತಾರ ಎತ್ತಿ ಆರ್ಭಟಿಸಿದರು. ತಂಡದ ನಂತರದ ಪ್ರದರ್ಶನಗಳಿಗೆ ಜನರದ್ದೇ ರಕ್ಷಣೆ. ಜನಸಾಮಾನ್ಯರ ಅದ್ಭುತ ಪ್ರತಿಕ್ರಿಯೆ ನೋಡಿ ನಾಟಕ ತಂಡಕ್ಕೆ ಪರಮ ಆಶ್ಚರ್ಯ.

ಇಂದಿರಾ ರಾಜಕೀಯದಲ್ಲಿ ಗೆದ್ದರು, ಅದೇ ಕಾಲಕ್ಕೆ ಜನರ ಮಾಧ್ಯಮವಾಗಿ ಬೀದಿನಾಟಕ ಗಟ್ಟಿಗೊಂಡಿತು.

ಮಂಗಳೂರಿಗೆ ವಾಪಸಾಗುತ್ತಿದ್ದಂತೆ, ಲೂಸಿ, ಶ್ರೀಧರ್ ಮತ್ತವರ ಗೆಳೆಯರಿಗೆ ರಂಗ ತಂಡ ಕಟ್ಟುವ ಹಂಬಲ ಮೂರ್ತರೂಪ ಪಡೆಯಿತು. 1980 ರಲ್ಲಿ ತಂಡಕ್ಕೆ ಅಭಿವ್ಯಕ್ತ ಎಂಬ ನಾಮಕರಣ, ಶ್ರೀಧರ್ ಮೊದಲ ರಂಗನಾಟಕ ಬಕ್ ನಿರ್ದೇಶಿಸಿದರು.

ಶ್ರೀಮತಿ ಲೂಸಿ ಪಿರೇರಾ ವೃತ್ತಿಯಲ್ಲಿ ಶಾಲಾ ಶಿಕ್ಷಕಿ. ಮಂಗಳೂರಿನಿಂದ ಸುಮಾರು 30 ಕಿಲೋಮೀಟರ್ ದೂರದ ಕುಗ್ರಾಮದಲ್ಲಿದ್ದ ಪ್ರಾಥಮಿಕ ಶಾಲೆಯೊಂದರಲ್ಲಿ ಸುಮಾರು 20 ವರ್ಷಗಳ ಶಾಲಾ ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವುದರೊಂದಿಗೆ ನಾಟಕವನ್ನೂ ಕಲಿಸಿದರು.

ತಾನು ಅಧ್ಯಕ್ಷೆಯಾಗಿದ್ದ 'ಸೆಸ್ಕಾ' [ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಿಯಾ ಕೇಂದ್ರ]ದ ನಿರ್ದೇಶಕರಾದ ಶ್ರೀಧರ್ ಹಾಗೂ ರಾಜಶೇಖರ್ ಇವರುಗಳ ಸಹಾಯದಿಂದ ತನ್ನ ಶಾಲೆ ಮಾತ್ರವಲ್ಲದೆ ಆಸುಪಾಸಿನ ಇತರ ಶಾಲೆಗಳಲ್ಲಿಯೂ ರಂಗತರಬೇತಿ ಶಿಬಿರಗಳನ್ನು ಏರ್ಪಡಿಸಿದರು. ಮಕ್ಕಳಿಗೆ ಕೈಗೊಂಬೆಗಳನ್ನು ಮಾಡಿ ನಾಟಕ ಆಡಿಸಿ ಪಾಠದತ್ತ ಮಕ್ಕಳನ್ನು ಸೆಳೆದರು. ಸಾಮಾಜಿಕ ಕಳಕಳಿಯಿರುವ ಲೂಸಿಗೆ ಶಾಲೆ ಮಾತ್ರ ತನ್ನ ಕಾರ್ಯಕ್ಷೇತ್ರವಲ್ಲ ಆ ಊರಿನ ಗ್ರಾಮಸ್ಥರ ನೋವುನಲಿವುಗಳಿಗೆ ಸ್ಪಂದಿಸಿ, ಅವರ ದೈನಂದಿನ ಜನಜೀವನದಲ್ಲಿ ಭಾಗಿಯಾಗಿ ಲೂಸಿ ಮನೆಮಾತಾದರು.

ಹಳ್ಳಿ ಶಾಲೆಯ ಕೆಲಸದ ಭಾರ ಲೂಸಿಗೆ ಲೆಕ್ಕವೇ ಅಲ್ಲ. ಅಷ್ಟು ದೂರದಿಂದ ಪಾಠ ಮುಗಿಸಿ ಮಂಗಳೂರಿನ ವೆಲೆನ್ಸಿಯಾದಲ್ಲಿರುವ ತನ್ನ ಮನೆಗೆ ತಲುಪುವುದೂ, ಇಲ್ಲಿ ನಾಟಕದ ತಾಲೀಮಿಗಾಗಿ ತಂಡದ ಇತರ ಸದಸ್ಯರು ಸೇರುವುದೂ ಒಂದೇ ಸಮಯ. ತಾನು ಗಂಟಲಾರಿಸಿಕೊಳ್ಳುವುದು ಮತ್ತು ಬಂದು ಸೇರಿದ ಇಪ್ಪತ್ತು, ಇಪ್ಪತ್ತೈದು ಮಂದಿಯ ಗಂಟಲಾರಿಸುವುದು ಲೂಸಿ ಮನೆ ಸೇರಿದ ಮೇಲಿನ ಮೊದಲ ಕೆಲಸ. ಆಮೇಲೆ ಬಟ್ಟೆ ಬದಲಾಯಿಸಿ. ರಂಗತಾಲೀಮಿನಲ್ಲಿ ಭಾಗವಹಿಸುವಿಕೆ. ಒಮ್ಮೊಮ್ಮೆ ಹತ್ತು ಗಂಟೆಯವರೆಗೂ ಪ್ರಾಕ್ಟೀಸು. ಅದಾದ ಮೇಲೆ ವಿರಾಮವೇನೂ ಇಲ್ಲ, ತಮ್ಮ ಮನೆಗಳಿಗೆ ಹೋಗಲು ತಡವಾಗಿ ಉಳಿದುಕೊಳ್ಳುವ ಸದಸ್ಯರಿಗೆ ತಮ್ಮೊಂದಿಗೇ ಊಟ ತಯಾರಿಸಿ, ಬಡಿಸಿ ಅವರುಗಳಿಗೆಲ್ಲ ಮಲಗಲು ವ್ಯವಸ್ಥೆಗೊಳಿಸಿ ನಂತರವೇ ತನ್ನ ಊಟ. ನಾಟಕ ತಾಲೀಮು ಇಲ್ಲದಾಗಲೂ ಲೂಸಿಗೆ ವಿರಾಮವಿಲ್ಲ, ಸಾಮಾಜಿಕ ಕಾರ್ಯಕರ್ತರುಗಳಿಗೆ, ರಂಗಕರ್ಮಿಗಳಿಗೆ ಶ್ರೀಧರ್ ಲೂಸಿಯ ಮನೆ, ಮನೆಯಲ್ಲ ಅದೊಂದು ಕಾಶಿ, ಛತ್ರ. ಪ್ರತಿದಿನವೂ ಹಾಸಿಗೆ ಸೇರಿದಾಗ ರಾತ್ರಿ 12 ಗಂಟೆಗೆ ಕಡಿಮೆಯಿಲ್ಲ ಮರುದಿನ ಎಂದಿನಂತೆ ಬೆಳಿಗ್ಗೆ 5 ಗಂಟೆಗೆ ಎದ್ದು, 8 ಗಂಟೆಯ ಹೊತ್ತಿಗೆ ತನ್ನ ಹಳ್ಳಿ ಶಾಲೆಗೆ ಲೂಸಿಯ ದೌಡು.

ಅಭಿವ್ಯಕ್ತದ ಗೆಳೆಯರೇ ತನ್ನ ಬಂಧುಬಳಗ, ಶಾಲೆಯ ಮಕ್ಕಳೇ ತನ್ನ ಮಕ್ಕಳೆಂದು ಭಾವಿಸುವ ಲೂಸಿಗೆ ರಂಗಭೂಮಿಯೇ ಉಸಿರು, ಜೀವಾಳ, ನಾಟಕಗಳಲ್ಲಿ ತನಗೆ ಒದಗುವ ಪಾತ್ರಗಳನ್ನು ಅರ್ಥೈಸಿಕೊಂಡು ಅಭಿನಯಿಸಬಲ್ಲ ನಟಿಯರಲ್ಲಿ ಇವರೂ ಒಬ್ಬರು.

ಕುರುಡು ಕುಬೇರ ನಾಟಕದ ದರಿದ್ರಲಕ್ಷ್ಮಿ, ಬಕ್‌ದ ಕುಂತಿ, ರಥಮುಸಲದ ಮಲ್ಲಿಗೆ, ಕೋಮಲ ಗಾಂಧಾರದ ಗಾಂಧಾರಿ, ಮಾಲಿಯಲ್ಲಿ ಅಜ್ಜಿ, ಚೋಮದ ಬೆಳ್ಳಿ, ಮಾರನಾಯಕದ ಲೇಡಿ ಮ್ಯಾಕ್‌ಬೆತ್ ಮಂಗಳೆ, ಬೇಲಿ ಮತ್ತು ಹೊಲದ ಅತ್ತೆ ಹೀಗೆ ವೈವಿಧ್ಯಮಯ ಪಾತ್ರಗಳಿಗೆ ತಮ್ಮನ್ನು ಒಡ್ಡಿಕೊಂಡರು. ಕಲ್ಕಿ, ಗೋವಿಂದಣ್ಣ ಬಂದ ಮೇಲೆ, ಉಳ್ಳವರ ನೆರಳು, ಅಧ್ವಾನಪುರ, ಕೊಂಬಿನವರು, ಸಾಕ್ಷಾತ್ಕಾರ, ಗ್ರಾಮಚಾವಡಿ, ಒಥೆಲೊ ಮುಂತಾದ ಹತ್ತು ಹಲವು ನಾಟಕಗಳಲ್ಲಿ ಅಭಿನಯಿಸಿದರು. ಎಲ್ಲದರಲ್ಲೂ ಜೊಳ್ಳು ಕಡಿಮೆ ಕಾಳೇ ಹೆಚ್ಚು.

ಅಭಿವ್ಯಕ್ತ ಏರ್ಪಡಿಸಿದ ನಾಟಕೋತ್ಸವದ ಸಂದರ್ಭಗಳಲ್ಲಂತೂ ಶ್ರೀಧರ್‌ರಂತೆ ಲೂಸಿಗೂ ಟೆನ್‌ಶನ್ನಿನ ಪರಮಾವಧಿ. ಶ್ರೀಧರ್, ರಾಜಶೇಖರ್ ಮತ್ತಿತರ ಗೆಳೆಯರ ಪರಿಪೂರ ತಂಡದ

ನಾಟಕ ಪ್ರದರ್ಶನವನ್ನು ಸಾಂಗವಾಗಿ ನಡೆಸಲು ಓಡಾಡುತ್ತಿದ್ದರೆ, ತಮ್ಮ ಮನೆಯಲ್ಲಿಯೇ ತಯಾರಾಗುವ ತಂಡದ ಊಟ, ಉಪಹಾರದ ಬಗ್ಗೆ ಲೂಸಿಗೆ ಅತೀವ ಕಾಳಜಿ. ತಂಡ ಸಂಜೆ ಪ್ರದರ್ಶನ ಮುಗಿಸಿ ಊಟ ಮಾಡಿ ತಮ್ಮ ಊರಿಗೆ ಹೋದ ಮೇಲೂ ಆ ಒತ್ತಡ ಇಳಿಯಲು ಸಾಕಷ್ಟು ಸಮಯ ಬೇಕು. ಮರುದಿನ ಮತ್ತೆ ಹೊಸ ತಂಡ ಮಂಗಳೂರಿನಲ್ಲಿ ಬಂದಿಳಿದಾಗ ಮತ್ತದೇ ಒತ್ತಡ.

ನಾಟಕಗಳಲ್ಲಿ ಅಭಿನಯಿಸಲು ನಟಿಯರ ಕೊರತೆಯಿರುವುದು ಎಲ್ಲ ಕಡೆಯೂ ಸಾಮಾನ್ಯ. ವಾಸ್ತವವಾಗಿ ಪ್ರತಿಭೆಗಳಿಗೆ ಕೊರತೆಯಿಲ್ಲ. ಬಹುತೇಕ ಹೆತ್ತವರು ಮತ್ತು ಮನೆಯ ಗಂಡಸರು ತಮ್ಮ ಅಳುಕು, ಆತಂಕಗಳಿಂದ ತಮ್ಮ ಮನೆಯ ಹೆಣ್ಮಕ್ಕಳನ್ನು ನಾಟಕಗಳಲ್ಲಿ ಭಾಗವಹಿಸಲು ಆಸ್ಪದ ಕೊಡುವುದಿಲ್ಲ. ಈ ವಿಚಾರವನ್ನು ಚೆನ್ನಾಗಿ ಬಲ್ಲ ಲೂಸಿ ಸ್ವತಃ ಜವಾಬ್ದಾರಿ ಹೊತ್ತು, ಪ್ರತಿದಿನವೂ ರಂಗತಾಲೀಮಿನ ಬಳಿಕ ಆಯಾ ನಟಿಯರನ್ನು ಮನೆಯತನಕ ತಲುಪಿಸಿ. ಆ ಮನೆಯವರ ವಿಶ್ವಾಸ ಗಳಿಸಿಕೊಂಡು, ಇಡೀ ಮನೆಯವರನ್ನೇ ತಂಡದಲ್ಲಿ ತೊಡಗಿಸಿಕೊಳ್ಳುವವರೆಗೂ ಸಂಬಂಧ ಬೆಳೆಸಿಕೊಳ್ಳುವ ಕಲೆ ಸಿದ್ಧಿಸಿಕೊಂಡಿದ್ದಾರೆ.

ಹವ್ಯಾಸೀ ರಂಗಭೂಮಿ ನಟಿಯರ ಕೊರತೆಯನ್ನು ಅನುಭವಿಸುತ್ತಿರುವಾಗ, ಅಭಿನಯ ಮಾತ್ರವಲ್ಲದೆ ರಂಗದ ನೇಪಥ್ಯದಲ್ಲಿಯೂ ಪೂರ್ಣವಾಗಿ ತೊಡಗಿಸಿಕೊಳ್ಳುವ ಶ್ರೀಮತಿ ಲೂಸಿ ಇಂದಿಗೂ ರಂಗಪ್ರದರ್ಶನದ ಪೂರ್ವಸಿದ್ಧತೆಗಾಗಿ ಮತ್ತು ಪ್ರದರ್ಶನಾ ನಂತರದ ಕೆಲಸ ಮಾಡುವ ರೀತಿ ಅನನ್ಯವಾದುದು. ರಂಗಸಾಮಗ್ರಿಗಳ ಸಿದ್ಧತೆ, ಉಡುಪುಗಳ ಜೋಡಣೆಯಿಂದ ಹಿಡಿದು, ಪ್ರದರ್ಶನದ ನಂತರದ ಕೊನೆಯ ಕ್ಷಣದವರೆಗೆ ಅಂದರೆ, ರಂಗಸಾಮಗ್ರಿಗಳನ್ನು ಸಾಗಾಟ ಮಾಡಬರುವ ವಾಹನಕ್ಕೆ ಸಾಮಗ್ರಿಗಳನ್ನು ಏರಿಸುವುದೂ ಸೇರಿ ಎಲ್ಲಾ ಕೆಲಸಗಳಲ್ಲಿಯೂ ಕೈಜೋಡಿಸುತ್ತಾರೆ.

ನಾಟಕಗಳಲ್ಲಿ ಮಾತ್ರವಲ್ಲದೆ ವಿಡಿಯೋ ಕಥಾಚಿತ್ರ, ದೂರದರ್ಶನದ ಕಿರುಚಿತ್ರ ಹಾಗೂ ಧಾರಾವಾಹಿಗಳಲ್ಲಿಯೂ ಪ್ರಧಾನ ಪಾತ್ರಗಳ ನಿರ್ವಹಣೆ ಮಾಡಿದ್ದಾರೆ. ಆಕಾಶವಾಣಿಯ ಕಲಾವಿದೆಯಾಗಿ ಹಲವಾರು ರೇಡಿಯೋ ನಾಟಕಗಳಲ್ಲಿ ಪಾತ್ರ ನಿರ್ವಹಣೆ ಮಾಡಿದ ಅನುಭವವಿದೆ. ರಾಜ್ಯಮಟ್ಟದ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಅಭಿನಯಕ್ಕಾಗಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸಾಮಾಜಿಕ ಸೇವೆಯಲ್ಲಿಯೂ ಆಸಕ್ತಿ ಹೊಂದಿರುವ ಈಕೆ ಹಲವಾರು ಮಹಿಳಾ ಸಂಘಟನೆಗಳ ಜತೆ ಸೇರಿ ಕಾರ್ಯವೆಸಗಿದ್ದಾರೆ. ಮಹಿಳೆಯರನ್ನು ಒಗ್ಗೂಡಿಸಿ ಸಂಘ ಸ್ಥಾಪಿಸಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ಹಲವು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಸುಮಾರು 25 ವರ್ಷಗಳಿಂದ ಸತತವಾಗಿ ಇಂದಿಗೂ ಕ್ರಿಯಾಶೀಲವಾಗಿರುವ ಶ್ರೀಮತಿ ಲೂಸಿ ಪಿರೇರಾ ಹವ್ಯಾಸೀ ರಂಗಭೂಮಿಯ ಅಮೂಲ್ಯ ಆಸ್ತಿ.